# ದಿಕ್ರ್‌ಗಳು

ಪ್ರವಾದಿ(ﷺ)ರವರ ವಚನಗಳಿಂದ

بسم الله الرحمن الرحيم

**ಪರಮ ದಯಾಮಯನೂ ಕರುಣಾಮಯಿಯೂ**
**ಆದ ಅಲ್ಲಾಹನ ನಾಮದಿಂದ**

# الْأَذْكَارُ

## من كلام سيد الأبرار صلى الله عليه وسلم

# ದಿಕ್ರ್‌ಗಳು

## ಪ್ರವಾದಿ(ﷺ)ರವರ ವಚನಗಳಿಂದ

ಮುಹಮ್ಮದ್ ಹಂಝಾ ಪುತ್ತೂರು

ಪ್ರಕಾಶಕರು:
ಮನ್‌ಹಜ್ ಅಲ್‌ಅಂಬಿಯಾ ಕಾಲ್ & ಗೈಡೆನ್ಸ್ ಸೆಂಟರ್
ಕುವೈತ್

ALL RIGHTS RESERVED © جميع الحقوق محفوظة

no part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the publisher

Title : Dikrgalu Pravadi(ﷺ)ravara Vachanagalinda
Author : Muhammad Hamza Puttur
Copies : 2000

Typesetting & DTP :

IMAGE PUBLICATIONS
imageputtur@hotmail.com

---

PUBLISHERS:

Manhaj-Al-Ambiya
Call & Guidance Centre
Kuwait
*email: al.ambiya@gmail.com*
*dawathu-salafiyya@hotmail.com*

---

SPONSORS:

جمعية إحياء التراث الإسلامي الكويت

**REVIVAL OF ISLAMIC HERITAGE SOCIETY**
**KUWAIT**

# كلمة الناشر

بسم الله الرحمن الرحيم

الحمد لله وحده ، والصلاة والسلام على من لا نبي بعده ، أما بعد:

فإن ذكر الله تعالى عز وجل من العبادات الميسورة التي لا عناء فيها ولا تعب ، وتتأتى للعبد في معظم أحواله ، ومع سهولتها ويسرها هي عظيمة الأجر وجليلة القدر ، وليس هذا فحسب بل إن الذكر يفتح على القلب أنواعا من الفضائل وجملة من الطاعات ، كما أن دوام ذكر الرب تعالى يوجب الأمان من نسيانه الذي هو سبب شقاء العبد في معاشه ومعاده .

ومنها أنه يرضي الرحمن جل وعلا ، ويجلب للقلب الفرح والسرور كما أنه يطرد الشيطان ويقمعه ويكسره ويزيل الهم والغم عن القلب ، ومن فوائد الذكر أنه يورث القلب المراقبة والإنابة ، ويزيل الوحشة بين العبد وبين ربه تبارك وتعالى ، وغير هذا من الفوائد كثير حتى قال ابن القيم رحمه الله في الوابل الصيب : وفي الذكر أكثر من مائة فائدة . فهو مفتاح لكل خير يناله العبد في الدنيا والآخرة فمتى أعطى الله العبد هذا المفتاح فقد أراد أن يفتح له ، ومتى أضله بقي باب الخير مرتجا دونه .

فهذا كتاب جامع للأذكار جمعه الأخ محمد حمزة بن إبراهيم البوتوري من الأخبار التي صحت عن النبي صلى الله عليه وآله وسلم وتتناول حياة المسلم من كل جوانبها ، ونسأل الله أن يجعله في ميزان حسنات المؤلف وأن ينفع بها المسلمين وأن يضاعف الأجر لكل من سعى في نشرها وإيصالها إلى من يستفيد منها إنه سبحانه جواد كريم .

وصلى الله على نبينا محمد وآله وصحبه وسلم

الناشرون

# ಪ್ರಕಾಶಕರ ಮಾತು

بِسْمِ اللَّهِ الرَّحْمَٰنِ الرَّحِيمِ

ದಿಕ್ರ್ ಅಥವಾ ದೇವಸ್ಮರಣೆಯು ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿದೆ. ಇಸ್ಲಾಮ್ ಇದಕ್ಕೆ ಅತ್ಯಂತ ಪ್ರಾಧಾನ್ಯತೆಯನ್ನು ನೀಡಿದೆ. ಆದರೆ ದುರದೃಷ್ಟವಶಾತ್ ಮನುಷ್ಯ ಜೀವನವು ಇಂದು ಯಾಂತ್ರೀಕರಣಗೊಂಡಿರುವುದರಿಂದ ಜನರಿಗೆ ಅಲ್ಲಾಹನನ್ನು ಸ್ಮರಿಸಲು ಸಮಯವಿಲ್ಲದಂತಹ ಸನ್ನಿವೇಶದ ಉದ್ಭವಿಸಿದೆ. ಇಸ್ಲಾಮ್ ಧರ್ಮವನ್ನು ತನ್ನ ಕರಾಳ ಬಾಹುಗಳಿಂದ ಅದಮಿ ಹಿಡಿದಿಟ್ಟಿರುವ ಪುರೋಹಿತಶಾಹಿಯು ಪ್ರವಾದಿ(ﷺ) ರವರ ಅನುಗ್ರಹೀತ ನಾಲಗೆಯಿಂದ ಉಚ್ಚರಿಸಲ್ಪಟ್ಟ ಅತ್ಯಂತ ಪುಣ್ಯವಿರುವ ಅಧಿಕೃತ ದಿಕ್ರ್‌ಗಳಿಗೆ ಬದಲಾಗಿ ಸೂಫಿಗಳಿಂದ ರಚಿಸಲ್ಪಟ್ಟ ಮತ್ತು ತರೀಕತ್‌ವಾದಿಗಳು ಕೃತಕವಾಗಿ ನಿರ್ಮಿಸಿದ, ಅರ್ಥತಾತ್ಪರ್ಯಗಳೊಂದೂ ಇಲ್ಲದಂತಹ ಅನಿಸ್ಲಾಮಿಕ ದಿಕ್ರ್‌ಗಳೆಡೆಗೆ ಮತ್ತು ಅದೇ ರೀತಿ ಆಧುನಿಕ ಸಂಗೀತೋಪಕರಣಗಳಿಂದ ನುಡಿಸಲ್ಪಡುವ ಪೈಶಾಚಿ ದಿಕ್ರ್‌ಗಳೆಡೆಗೆ ಮುಗ್ಧ ಜನಸಾಮಾನ್ಯರನ್ನು ಮುನ್ನಡೆಸುತ್ತಿರುವುದು ಮತ್ತು ಅಜ್ಞಾನಿ ಯುವ ಸಮೂಹವು ಅದರೆಡೆಗೆ ಆಕರ್ಷಿತರಾಗುತ್ತಿರುವುದು ಮುಸ್ಲಿಮರ ಅಧುಪತನಕ್ಕೆ ಕಾರಣವಾಗಿದೆ.

ಮುಸ್ಲಿಮ್ ಪುರೋಹಿತಶಾಹಿಯ ಹಸ್ತಕ್ಷೇಪದಿಂದಾಗಿ ಮಲಿನಗೊಂಡಿರುವ ದಿಕ್ರ್‌ಗಳಿಂದ ಪ್ರವಾದಿ(ﷺ)ರಿಂದ ವರದಿಯಾದ ಅಧಿಕೃತ ದಿಕ್ರ್‌ಗಳನ್ನು ಬೇರ್ಪಡಿಸಿ ಅವುಗಳನ್ನು ಸಮುದಾಯಕ್ಕೆ ಕಲಿಸಿಕೊಡುವ ಈ ಕೃತಿಯನ್ನು ಪ್ರಕಟಿಸುವ ಮಹಾನ್ ಕಾರ್ಯದಲ್ಲಿ ನಮಗೆ ಸೌತ್ ಕರ್ನಾಟಕ ಸಲಫೀ ಮೂವ್‌ಮೆಂಟ್(ರಿ), ಮಂಗಳೂರು ಸೂಕ್ತ ನಿರ್ದೇಶನ, ಸಹಾಯ ಸಹಕಾರ ನೀಡಿದೆ. ದಕ್ಷಿಣ ಕರ್ನಾಟಕ ಮತ್ತು ಕರ್ನಾಟಕ ರಾಜ್ಯದ ಇತರ ಭಾಗಗಳಲ್ಲಿ ಅಹ್ಲು ಸುನ್ನತ್ ವಲ್ ಜಮಾಅತ್‌ನ ನೈಜ ಆಶಯಾದರ್ಶಗಳನ್ನು ಜನರ ಮುಂದಿಡುವಲ್ಲಿ ಮತ್ತು ಶಿರ್ಕ್ ಹಾಗೂ ನೂತನವಾದದ ಪ್ರಚಾರಕರ ವಿರುದ್ಧದ ಹೋರಾಟದಲ್ಲಿ ಮಂಚೂಣಿಯಲ್ಲಿರುವ ಸೌತ್ ಕರ್ನಾಟಕ ಸಲಫೀ ಮೂವ್‌ಮೆಂಟ್(ರಿ), ಮಂಗಳೂರು ಇದರ ಸಲಫೀ ದಾವಾ ಚಟುವಟಿಕೆಗಳಿಗೆ ಅನುಕೂಲವಾಗಲೆಂದು ಈ ಕಿರು ಕೃತಿಯನ್ನು ನಾವು ಕನ್ನಡ ಓದುಗರ ಮುಂದಿಡುತ್ತಿದ್ದೇವೆ.

ನಮ್ಮೆಲ್ಲರ ಸಾಮೂಹಿಕ ಪ್ರಯತ್ನದಿಂದ ಹೊರಬಂದ ಈ ಕೃತಿಯನ್ನು ನಮ್ಮೆಲ್ಲರಿಂದಲೂ ಒಂದು ಉತ್ತಮ ಸತ್ಕರ್ಮವಾಗಿ ಸ್ವೀಕರಿಸಬೇಕೆಂದು ಮತ್ತು ಭವಿಷ್ಯದಲ್ಲಿ ಇಂತಹ ಅಸಂಖ್ಯ ಕೃತಿಗಳನ್ನು ಪ್ರಕಟಿಸುವ ಸೌಭಾಗ್ಯವನ್ನು ನಮಗೆ ಕರುಣಿಸಬೇಕೆಂದೂ ಸರ್ವಲೋಕಗಳ ಅಧಿಪತಿಯಾದ ಅಲ್ಲಾಹನೊಂದಿಗೆ ನಾವು ವಿಧೇಯವಾಗಿ ಬೇಡುತ್ತಿದ್ದೇವೆ. ಅಲ್ಲಾಹು ಎಲ್ಲವನ್ನೂ ಆಲಿಸುವವನೂ, ಉತ್ತರಿಸುವವನೂ ಆಗಿದ್ದಾನೆ.

–ಪ್ರಕಾಶಕರು

# ಒಳಪುಟಗಳಲ್ಲಿ


ಪ್ರಕಾಶಕರ ಮಾತು 6

ಮುನ್ನುಡಿ 12

1. ದಿಕ್ರ್‌ನ ಶ್ರೇಷ್ಠತೆಗಳು 27
2. ಪ್ರಾರ್ಥನೆ (ದುಆ)ಯ ಶ್ರೇಷ್ಠತೆಗಳು 35
3. ಪ್ರಾರ್ಥನೆಯ ಶರತ್ತುಗಳು ಮತ್ತು ಶಿಷ್ಟಾಚಾರಗಳು 36
4. ಇಸ್ತಿಗ್ಫಾರ್‌ನ ಶ್ರೇಷ್ಠತೆಗಳು 41
5. ತಸ್ಬೀಹ್, ತಹ್ಮೀದ್, ತಹ್ಲೀಲ್ ಮತ್ತು ತಕ್ಬೀರ್‌ನ ಶ್ರೇಷ್ಠತೆಗಳು 42
6. ದಿಕ್ರ್‌ಗಳನ್ನು ಎಣಿಸುವುದು 45
7. ನಿದ್ದೆಯಿಂದ ಎದ್ದೇಳುವಾಗ 45
8. ಉಡುಪು ಧರಿಸುವಾಗ 49
9. ಹೊಸ ಉಡುಪು ಧರಿಸುವಾಗ 50
10. ಇತರರು ಹೊಸ ಉಡುಪು ಧರಿಸಿರುವುದನ್ನು ಕಂಡಾಗ 50
11. ಮನೆಯಿಂದ ಹೊರಡುವಾಗ 51
12. ಮನೆಯನ್ನು ಪ್ರವೇಶಿಸುವಾಗ 52
13. ರಾತ್ರಿ ಮನೆಯಿಂದ ಹೊರಬಂದರೆ 54
14. ಮಲಮೂತ್ರ ವಿಸರ್ಜನಾ ಸ್ಥಳವನ್ನು ಪ್ರವೇಶಿಸುವಾಗ 56
15. ಮಲಮೂತ್ರ ವಿಸರ್ಜನಾ ಸ್ಥಳದಿಂದ ಹೊರಬರುವಾಗ 57
16. ವುದೂ ಮಾಡಲು ಪ್ರಾರಂಭಿಸುವಾಗ 58
17. ವುದೂ ಪೂರ್ತೀಕರಿಸಿದ ನಂತರ 58
18. ಮಸೀದಿಯೆಡೆಗೆ ಹೊರಡುವಾಗ 59
19. ಮಸೀದಿಯನ್ನು ಪ್ರವೇಶಿಸುವಾಗ 61
20. ಮಸೀದಿಯೊಳಗಿರುವಾಗ 63
21. ಮಸೀದಿಯಿಂದ ಹೊರಬರುವಾಗ 66
22. ಅದಾನ್ ಆಲಿಸುವಾಗ 67
23. ಅದಾನ್ ಮುಗಿದ ನಂತರ 68

24. ದುಆಉಲ್ ಇಸ್ತಿಫ್ತಾಹ್ 70
25. ತಅವ್ವುದ್ 76
26. ರುಕೂಅ್‌ನಲ್ಲಿ 77
27. ಇಅ್ತಿದಾಲ್‌ನಲ್ಲಿ 79
28. ಸುಜೂದ್‌ನಲ್ಲಿ 81
29. ಎರಡು ಸುಜೂದ್‌ಗಳ ಮಧ್ಯೆ 84
30. ತಶಹ್ಹುದ್‌ನಲ್ಲಿ 85
31. ತಶಹ್ಹುದ್‌ನ ನಂತರ ಪ್ರವಾದಿ(ﷺ)ರವರ ಮೇಲೆ ಸಲಾತ್ 87
32. ತಶಹ್ಹುದ್‌ನ ನಂತರ ಸಲಾಮ್‌ಗೆ ಮುಂಚಿತವಾಗಿ 89
33. ಸಲಾಮ್ ಹೇಳಿದ ನಂತರ 94
34. ಸುಜೂದು ತ್ತಿಲಾವಃ 99
35. ಫಜ್ರ್ ನಮಾಝ್‌ನ ನಂತರ 101
36. ಬೆಳಗ್ಗೆ ಮತ್ತು ಸಂಜೆ 101
37. ವಿತ್ರ್‌ನ ಕುನೂತ್ 110
38. ವಿತ್ರ್‌ನ ನಂತರ 111
39. ಮಲಗುವಾಗ 111
40. ರಾತ್ರಿ ನಿದ್ದೆಯಿಂದ ಎಚ್ಚೆತ್ತರೆ 120
41. ರಾತ್ರಿ ಅತ್ತಿತ್ತ ಹೊರಳಾಡಿದರೆ 120
42. ಒಳ್ಳೆಯ ಅಥವಾ ಕೆಟ್ಟ ಕನಸನ್ನು ಕಂಡರೆ 121
43. ರಾತ್ರಿಯ ಕೊನೆಯ ಹಂತದಲ್ಲಿ 122
44. ಅಲ್ ಅಸ್ಮಾಉಲ್ ಹುಸ್ನಾ 124
45. ಕುರ್‌ಆನ್ ಪಾರಾಯಣ 125
46. ಪ್ರವಾದಿ(ﷺ)ರವರ ಮೇಲೆ ಸಲಾತ್ 129
47. ದುಆಉಲ್ ಇಸ್ತಿಖಾರಃ 131
48. ದುಃಖ, ವ್ಯಥೆ, ತೊಂದರೆಗಳು ಎದುರಾದಾಗ 132
49. ಸಾಲದಿಂದ ಮುಕ್ತನಾಗಲು 135
50. ಭಯವುಂಟಾದರೆ 135
51. ಶತ್ರುಗಳನ್ನು ಭಯಪಟ್ಟರೆ 135

52. ಶೈತಾನನನ್ನು ಭಯಪಟ್ಟರೆ ಅಥವಾ ಪೈಶಾಚಿಕ ದುರ್ಬೋಧನೆ ಗಳುಂಟಾದರೆ 136
53. ಆಪತ್ತು ಸಂಭವಿಸಿದರೆ 139
54. ಮಕ್ಕಳನ್ನು ಅಲ್ಲಾಹನ ಸಂರಕ್ಷಣೆಯಲ್ಲಿಡುವುದು 140
55. ರೋಗದಿಂದ ಬಳಲಿದಾಗ 141
56. ರೋಗಿಯನ್ನು ಸಂದರ್ಶಿಸುವಾಗ 142
57. ರೋಗಿಗಾಗಿ ಮಂತ್ರಿಸುವುದು 144
58. ಮರಣಾಸನ್ನನಾದಾಗ 146
59. ಮರಣಾಸನ್ನನಾದ ವ್ಯಕ್ತಿಗೆ 148
60. ಮೃತ ವ್ಯಕ್ತಿಯ ಕಣ್ಣುಗಳನ್ನು ಮುಚ್ಚುವಾಗ 148
61. ಮೃತ ವ್ಯಕ್ತಿಯನ್ನು ಸಂದರ್ಶಿಸುವಾಗ 149
62. ಮರಣ ವಾರ್ತೆಯನ್ನು ಶ್ರವಿಸಿದಾಗ 150
63. ತಅ್‌ಝಿಯಃ 150
64. ಜನಾಝ ನಮಾಝ್‌ನಲ್ಲಿ 151
65. ಮೃತದೇಹವನ್ನು ಗೋರಿಯೊಳಗಡೆ ಇಡುವಾಗ 154
66. ದಫನದ ನಂತರ 154
67. ಗೋರಿ ಸಂದರ್ಶಿಸುವಾಗ 155
68. ಶುಕ್ರವಾರದಂದು 156
69. ಗ್ರಹಣ ವೇಳೆಯಲ್ಲಿ 158
70. ಮಳೆನೀರಿಗಾಗಿ 159
71. ಮಳೆ ಸುರಿಯುವಾಗ 160
72. ಮಳೆ ಸುರಿದು ನಿಂತ ನಂತರ 161
73. ಅತಿವೃಷ್ಟಿಯಿಂದಾಗಿ ನಾಶನಷ್ಟಗಳನ್ನು ಭಯಪಟ್ಟರೆ 161
74. ಜೋರಾಗಿ ಗಾಳಿ ಬೀಸಿದಾಗ 161
75. ಗುಡುಗಿನ ಶಬ್ಧವನ್ನು ಆಲಿಸಿದಾಗ 164
76. ಚಂದ್ರದರ್ಶನವಾದಾಗ 164
77. ಉಪವಾಸವಿರುವಾಗ ಯಾರಾದರೂ ಅಸಭ್ಯವಾಗಿ ವರ್ತಿಸಿದರೆ 164
78. ಉಪವಾಸ ತೊರೆಯುವಾಗ 165
79. ಈ ರಾತ್ರಿ ಲೈಲತುಲ್ ಕದ್ರ್ ಆಗಿರಬಹುದೆಂದು ಭಾಸವಾದರೆ 166

80. ತಲ್ಬಿಯಃ 166
81. ರುಕ್ನುಲ್ ಯಮಾನೀ ಮತ್ತು ಹಜರುಲ್ ಅಸ್ವದ್‌ನ ಮಧ್ಯೆ 167
82. ಸಫಾ ಮತ್ತು ಮರ್ವಾಗಳ ಮೇಲೆ 167
83. ಜಮರಾತ್‌ಗೆ ಕಲ್ಲೆಸೆಯುವಾಗ 168
84. ಪ್ರಾಣಿಯನ್ನು ಕೊಯ್ಯುವಾಗ 168
85. ಯುದ್ಧಕ್ಕೆ ಹೊರಡುವಾಗ 169
86. ಯುದ್ಧ ಮಾಡುತ್ತಿರುವಾಗ 170
87. ಯಾತ್ರೆಗೆ ಹೊರಡುವಾಗ ತಾನು ಅಗಲಿ ಹೋಗುವವರಿಗಾಗಿ 170
88. ಯಾತ್ರೆಗಾಗಿ ಬೀಳ್ಕೊಡುವಾಗ 171
89. ವಾಹನವು ಮೇಲೇರುತ್ತಾ ಸಾಗುವಾಗ 171
90. ವಾಹನದಲ್ಲಿ ಆಸೀನನಾದ ನಂತರ 172
91. ವಾಹನವು ಇಳಿಮುಖವಾಗಿ ಸಾಗುವಾಗ 174
92. ಯಾತ್ರೆಯಲ್ಲಿ ಹಳ್ಳಿಯನ್ನು ಅಥವಾ ಪಟ್ಟಣವನ್ನು ಪ್ರವೇಶಿಸುವಾಗ 174
93. ಯಾತ್ರೆ ಮಧ್ಯೆ ಮನೆಯೊಂದನ್ನು ಅಥವಾ ವಸತಿಗೃಹವನ್ನು ಪ್ರವೇಶಿಸುವಾಗ 175
94. ಯಾತ್ರೆಯಿಂದ ಹಿಂದಿರುಗುವಾಗ 175
95. ಪೇಟೆಯನ್ನು ಪ್ರವೇಶಿಸುವಾಗ 177
96. ಅನ್ನ ಪಾನೀಯಗಳನ್ನು ಸೇವಿಸುವಾಗ 177
97. ಆರಂಭದಲ್ಲಿ ಬಿಸ್ಮಿಲ್ಲಾಹ್ ಹೇಳಲು ಮರೆತರೆ 179
98. ಆಹಾರವು ಇಷ್ಟಪಡದಿದ್ದರೆ 179
99. ಅನ್ನ ಪಾನೀಯಗಳನ್ನು ಸೇವಿಸಿದ ನಂತರ 179
100. ತನಗೆ ಆಹಾರ ಅಥವಾ ಪಾನೀಯವನ್ನು ನೀಡಿದವರಿಗಾಗಿ 181
101. ಆಥಿತೇಯನಿಗಾಗಿ 181
102. ಸಲಾಮ್ ಹೇಳುವುದು 182
103. ಸಲಾಮ್‌ಗೆ ಪ್ರತಿಯಾಗಿ ಸಲಾಮ್ ಹೇಳುವುದು 183
104. ಮುಸ್ಲಿಮೇತರರು ಸಲಾಮ್ ಹೇಳಿದರೆ 184
105. ಸೀನಿದರೆ 184
106. ಯಾರಾದರೂ ಸೀನಿದ ನಂತರ ಅಲ್ಲಾಹನನ್ನು ಸ್ತುತಿಸಿದರೆ 184
107. ಸೀನಿದವನು ಇದನ್ನು ಆಲಿಸಿದರೆ 185

108. ಆಕಳಿಸಿದರೆ 185
109. ನೂತನ ವಧುವರರಿಗಾಗಿ 186
110. ಮೊದಲ ರಾತ್ರಿಯಲ್ಲಿ 186
111. ಸಂಭೋಗಿಸುವಾಗ 187
112. ಕತ್ತೆ ಅರಚುವುದನ್ನು ಆಲಿಸಿದರೆ 187
113. ನಾಯಿ ಬೊಗಳುವುದನ್ನು ಆಲಿಸಿದರೆ 187
114. ಕೋಳಿ ಕೂಗುವುದನ್ನು ಆಲಿಸಿದರೆ 188
115. ಕೋಪಗೊಂಡಾಗ 188
116. ಪರೀಕ್ಷಿಸಲ್ಪಟ್ಟವನನ್ನು ಕಂಡರೆ 189
117. ದನ್ಯವಾದ ಸಲ್ಲಿಸುವುದು 189
118. ಓರ್ವ ವ್ಯಕ್ತಿಯ ಮುಖಸ್ತುತಿ ಮಾಡಬಯಸಿದರೆ 189
119. ತನ್ನ ಮುಖಸ್ತುತಿ ಮಾಡಲ್ಪಟ್ಟರೆ 190
120. ಅಲ್ಲಾಹನಿಗೋಸ್ಕರ ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಯಾರಾದರೂ ಹೇಳಿದರೆ 190
121. ಸಾಲವನ್ನು ಹಿಂದಿರುಗಿಸುವಾಗ 191
122. ಅವಧಿಪೂರ್ವ ಫಲವನ್ನು ದರ್ಶಿಸಿದಾಗ 191
123. ಸಭೆಯಲ್ಲಿ ಕುಳಿತಿರುವಾಗ 192
124. ಸಭೆಯಿಂದ ಎದ್ದೇಳುವಾಗ 192
125. ತನಗೆ ಇಷ್ಟವಾಗಿರುವುದನ್ನು ಕಂಡರೆ ಅಥವಾ ಆಲಿಸಿದರೆ 192
126. ತನಗೆ ಇಷ್ಟವಿಲ್ಲದ್ದನ್ನು ಕಂಡರೆ ಅಥವಾ ಆಲಿಸಿದರೆ 193
127. ಅದ್ಭುತವಾದುದನ್ನು ಕಂಡರೆ ಅಥವಾ ಆಲಿಸಿದರೆ 193
128. ಶಿರ್ಕ್‌ನ್ನು ಭಯಪಟ್ಟರೆ 193
129. ಎಲ್ಲಾ ವೇಳೆಗಳಲ್ಲೂ ಹೇಳಬಹುದಾದ ಪ್ರಾರ್ಥನೆಗಳು 194
ಈ ಪುಸ್ತಕವನ್ನು ರಚಿಸಲು ಅವಲಂಬಿಸಿದ ಹದೀಸ್ ಗ್ರಂಥಗಳು 201

# ಮುನ್ನುಡಿ

بسم الله الرحمن الرحيم

إن الحمد لله نحمده ونستعينه ونستغفره ونعوذ بالله من شرور أنفسنا ومن سيئات أعمالنا من يهده الله فلا مضل له ومن يضلل فلا هادي له وأشهد أن لا إله إلا الله وحده لا شريك له وأشهد أن محمدا عبده ورسوله،

أما بعد:

ಮನುಷ್ಯನ ದೈನಂದಿನ ಆಗುಹೋಗುಗಳಲ್ಲಿ ದಿಕ್ರ್ (ದೇವಸ್ಮರಣೆ) ಅತಿ ಮಹತ್ವವಾದ ಪಾತ್ರವನ್ನು ವಹಿಸುತ್ತದೆ. ದೈನಂದಿನ ಕಾರ್ಯಕಲಾಪಗಳಿಂದ ಮಡುಗಟ್ಟಿದ ಮನವನ್ನು ಚೈತನ್ಯೀಕರಿಸಲು ದಿಕ್ರ್‌ಗಿಂತಲೂ ಮಿಗಿಲಾದ ಔಷಧಿಯಿಲ್ಲ. ದಿಕ್ರ್ ಬಳಲಿದ ಆತ್ಮಕ್ಕೆ ಶಾಂತಿಯನ್ನು ನೀಡುವುದರೊಂದಿಗೆ ಮನುಷ್ಯನನ್ನು ಆಂತರಿಕವಾಗಿಯೂ ಬಾಹ್ಯವಾಗಿಯೂ ಶುದ್ಧೀಕರಿಸುತ್ತದೆ.

ದಿಕ್ರ್ ಎಂಬುದರ ಭಾಷಿಕ ಅರ್ಥವು ನೆನಪು, ಸ್ಮರಣೆ, ಪ್ರಸ್ತಾಪ ಇತ್ಯಾದಿಗಳಾಗಿವೆ. ಪಾರಿಭಾಷಿಕವಾಗಿ ಇದರ ಅರ್ಥವು ವಿಶಾಲವಾಗಿದೆ. ತಸ್ಬೀಹ್, ತಕ್ಬೀರ್, ತಹ್ಲೀಲ್, ಪ್ರಾರ್ಥನೆ, ಕುರ್‌ಆನ್, ನಮಾಝ್ ಮುಂತಾದವುಗಳೆಲ್ಲವನ್ನೂ ಇದರಲ್ಲಿ ಸೇರುತ್ತವೆ.

ದಿಕ್ರ್‌ಗೆ ಇಸ್ಲಾಮ್ ಅತ್ಯಂತ ಪ್ರಾಮುಖ್ಯತೆಯನ್ನು ನೀಡಿದೆ. ತನ್ನನ್ನು ಸದಾ ಸ್ಮರಿಸುತ್ತಿರಬೇಕೆಂಬುದು ಅಲ್ಲಾಹನ ಬಯಕೆಯಾಗಿದೆ ಹಾಗೂ ಈ ಬಗ್ಗೆ ಅವನು ತನ್ನ ದಾಸರಿಗೆ ಆದೇಶವನ್ನೂ ನೀಡಿದ್ದಾನೆ. ತನ್ನ ಆದೇಶಕ್ಕನುಸಾರವಾಗಿ ತನ್ನನ್ನು ಸ್ಮರಿಸುತ್ತಾ ಜೀವಿಸುವವನಿಗೆ ಅತ್ಯುನ್ನತವಾದ ಪ್ರತಿಫಲವನ್ನು ನೀಡುವ ವಾಗ್ದಾನವನ್ನೂ ಮಾಡಿದ್ದಾನೆ.

ಅಲ್ಲಾಹು ಹೇಳಿದ್ದಾನೆ:

﴿ وَلَذِكْرُ ٱللَّهِ أَكْبَرُ ﴾

**“ಅಲ್ಲಾಹನ ಸ್ಮರಣೆಯು ಅತಿಮಹತ್ವವಾದುದಾಗಿದೆ.”**[1]

﴿ فَٱذْكُرُونِىٓ أَذْكُرْكُمْ وَٱشْكُرُوا۟ لِى وَلَا تَكْفُرُونِ ١٥٢ ﴾

**“ಆದ್ದರಿಂದ ನೀವು ನನ್ನನ್ನು ಸ್ಮರಿಸಿರಿ, ನಾನು ನಿಮ್ಮನ್ನು ಸ್ಮರಿಸುವೆನು. ನನಗೆ ಕೃತಜ್ಞತೆ**

---
**1** ಕುರ್‌ಆನ್ 29/45

ಸಲ್ಲಿಸಿರಿ. ನನ್ನೊಂದಿಗೆ ಕೃತಘ್ನತೆಯನ್ನು ತೋರಿಸದಿರಿ."[2]

﴿ يَٰٓأَيُّهَا ٱلَّذِينَ ءَامَنُواْ ٱذۡكُرُواْ ٱللَّهَ ذِكۡرٗا كَثِيرٗا ﴿٤١﴾ وَسَبِّحُوهُ بُكۡرَةٗ وَأَصِيلًا ﴿٤٢﴾ ﴾

"ಓ ವಿಶ್ವಾಸಿಗಳೇ! ನೀವು ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸಿರಿ. ಪ್ರಭಾತ ಮತ್ತು ಸಂಧ್ಯಾವೇಳೆಗಳಲ್ಲಿ ಅವನ ಪರಿಪಾವನತೆಯನ್ನು ಕೊಂಡಾಡಿರಿ."[3]

﴿ وَٱلذَّٰكِرِينَ ٱللَّهَ كَثِيرٗا وَٱلذَّٰكِرَٰتِ أَعَدَّ ٱللَّهُ لَهُم مَّغۡفِرَةٗ وَأَجۡرًا عَظِيمٗا ﴿٣٥﴾ ﴾

"ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವ ಸ್ತ್ರೀಯರು ಮತ್ತು ಪುರುಷರು ಯಾರೋ ಅವರಿಗೆ ಅಲ್ಲಾಹು ಕ್ಷಮೆಯನ್ನೂ ಅಗಾಧವಾದ ಪ್ರತಿಫಲವನ್ನೂ ಸಿದ್ಧಗೊಳಿಸಿದ್ದಾನೆ."[4]

عَنْ أَبِي هُرَيْرَةَ رَضِيَ اللَّهُ عَنْهُ قَالَ: كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يَسِيرُ فِي طَرِيقِ مَكَّةَ فَمَرَّ عَلَى جَبَلٍ يُقَالُ لَهُ جُمْدَانُ، فَقَالَ: «سِيرُوا هَذَا جُمْدَانُ سَبَقَ الْمُفَرِّدُونَ» قَالُوا: وَمَا الْمُفَرِّدُونَ؟ يَا رَسُولَ اللَّهِ، قَالَ: «الذَّاكِرُونَ اللَّهَ كَثِيرًا وَالذَّاكِرَاتُ»

"ಅಬೂ ಹುರೈರಾ(ರ)ರಿಂದ: ಪ್ರವಾದಿ(ﷺ)ರವರು ಮಕ್ಕಾದ ಹಾದಿಯಲ್ಲಿ ಸಾಗುತ್ತಿರುವಾಗ ಜುಮ್ದಾನ್ ಎಂದು ಹೆಸರಿನ ಪರ್ವತದ ಬಳಿಯಿಂದಾಗಿ ಹಾದು ಹೋದರು. ಆಗ ಅವರು ಹೇಳಿದರು: 'ಚಲಿಸಿರಿ, ಇದಾಗಿದೆ ಜುಮ್ದಾನ್, ಮುಫರ್‍ರಿದ್‌ಗಳು[5] ಮುಂಚಿತವಾಗಿ ತಲುಪಿದರು'[6]. ಅವರು(ಸಹಾಬಿಗಳು) ಕೇಳಿದರು: 'ಮುಫರ್‍ರಿದ್‌ಗಳೆಂದರೆ ಯಾರು ಓ ಅಲ್ಲಾಹನ ಸಂದೇಶವಾಹಕರೇ?' ಪ್ರವಾದಿ(ﷺ)ರವರು ಹೇಳಿದರು: 'ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವ ಸ್ತ್ರೀಯರು ಮತ್ತು ಪುರುಷರಾಗಿರುವರು'."[7]

ಮನುಷ್ಯನಿಗೆ ತನ್ನ ಅಸ್ತಿತ್ವದ ಉಳಿವಿಗೋಸ್ಕರ ಆಹಾರ, ಗಾಳಿ, ನೀರು ಹೇಗೆ ಅತ್ಯಗತ್ಯವೋ ಹಾಗೆಯೇ ದಿಕ್ರ್ ಕೂಡ. ದೇವನು ದಯಪಾಲಿಸಿದ ಸರ್ವ ಅನುಗ್ರಹಗಳನ್ನೂ ದಿನನಿತ್ಯ ಆಸ್ವಾದಿಸುತ್ತಾ ಅವನನ್ನು ಸ್ಮರಿಸದೆ ಜೀವಿಸುವ ವ್ಯಕ್ತಿಯು

---

2 ಕುರ್‌ಆನ್ 2/152

3 ಕುರ್‌ಆನ್ 33/41–42

4 ಕುರ್‌ಆನ್ 33/35

5 ಶಾಬ್ದಿಕವಾಗಿ 'ಮುಫರ್‍ರಿದ್' ಎಂದರೆ ಏಕಾಂಗಿ, ಜೊತೆಗಾರನಿಲ್ಲದವನು ಎಂದರ್ಥ. ಹದೀಸಿನಲ್ಲಿ 'ಮುಫರ್‍ರಿದ್' ಎಂಬುದರ ಅರ್ಥವನ್ನು ಪ್ರವಾದಿ(ﷺ)ರವರು ವಿಶದೀಕರಿಸಿದ್ದಾರೆ.

6 'ಸಬಕ' ಎಂಬುದರ ಅರ್ಥವು ಸಮಯ, ಸ್ಥಾನ ಅಥವಾ ಮಹತ್ವದಲ್ಲಿ ಮುಂಚಿತವಾಗಿ ಬರು ಅಥವಾ ಸಂಭವಿಸು ಎಂದಾಗಿದೆ.

7 ಇದನ್ನು ಮುಸ್ಲಿಮ್ (4/2062; ಹದೀಸ್ ನಂ. 2676) ವರದಿ ಮಾಡಿದ್ದಾರೆ.

ಒಬ್ಬ ಜೀವಂತ ಶವ ಮಾತ್ರವಾಗಿರುವನು.

ಪ್ರವಾದಿ(ﷺ)ರವರು ಹೇಳಿದರು:

«مَثَلُ الَّذِي يَذْكُرُ رَبَّهُ وَالَّذِي لا يَذْكُرُ رَبَّهُ مَثَلُ الْحَيِّ وَالْمَيِّتِ»

**"ತನ್ನ ಪ್ರಭುವನ್ನು ಸ್ಮರಿಸುವವನ ಮತ್ತು ತನ್ನ ಪ್ರಭುವನ್ನು ಸ್ಮರಿಸದಿರುವವನ ಉಪಮೆಯು ಜೀವಂತವಾಗಿರುವವನ ಮತ್ತು ಮೃತಪಟ್ಟವನ ಉಪಮೆಯಂತಿದೆ."[8]**

ದಿಕ್ರ್ ದೇವಸಾಮೀಪ್ಯಕ್ಕಿರುವ ಪ್ರಮುಖ ಮಾರ್ಗವಾಗಿದೆ. ಅಲ್ಲಾಹನನ್ನು ನಿರಂತರವಾಗಿ ಸ್ಮರಿಸುವ ಮೂಲಕ ನಾವು ಅವನ ಕೃಪೆಗೆ ಹೆಚ್ಚು ಪಾತ್ರರಾಗುತ್ತೇವೆ, ಅವನೊಂದಿಗೆ ಸಮೀಪವಾಗುತ್ತಿರುತ್ತೇವೆ ಮತ್ತು ಅವನ ಸಂರಕ್ಷಣೆಯಲ್ಲಿರುತ್ತೇವೆ. ಕುದ್ಸೀ ಹದೀಸೊಂದರಲ್ಲಿ ಹೀಗಿದೆ:

عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «يَقُولُ اللَّهُ عَزَّ وَجَلَّ: أَنَا عِنْدَ ظَنِّ عَبْدِي بِي، وَأَنَا مَعَهُ حِينَ يَذْكُرُنِي، إِنْ ذَكَرَنِي فِي نَفْسِهِ، ذَكَرْتُهُ فِي نَفْسِي، وَإِنْ ذَكَرَنِي فِى مَلَإٍ، ذَكَرْتُهُ فِي مَلَإٍ هُمْ خَيْرٌ مِنْهُمْ، وَإِنْ تَقَرَّبَ مِنِّي شِبْرًا، تَقَرَّبْتُ إِلَيْهِ ذِرَاعًا، وَإِنْ تَقَرَّبَ إِلَيَّ ذِرَاعًا، تَقَرَّبْتُ مِنْهُ بَاعًا، وَإِنْ أَتَانِي يَمْشِى، أَتَيْتُهُ هَرْوَلَةً»

**"ಅಬೂ ಹುರೈರಾ(رضي الله عنه)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ಅಲ್ಲಾಹು ಹೇಳುತ್ತಾನೆ: 'ನನ್ನ ದಾಸನು ನನ್ನ ಕುರಿತು ಏನು ಭಾವಿಸುತ್ತಾನೋ ನಾನು ಅದರ ಸಮೀಪವಿರುತ್ತೇನೆ. ಅವನು ನನ್ನನ್ನು ಸ್ಮರಿಸುವಾಗಲೆಲ್ಲಾ ನಾನು ಅವನೊಂದಿಗಿರುತ್ತೇನೆ. ಅವನು ನನ್ನನ್ನು ತನ್ನ ಮನಸ್ಸಿನಲ್ಲಿ ಸ್ಮರಿಸಿದರೆ ನಾನು ಅವನನ್ನು ನನ್ನ ಮನಸ್ಸಿನಲ್ಲಿ ಸ್ಮರಿಸುತ್ತೇನೆ. ಅವನು ನನ್ನನ್ನು ಸಭೆಯಲ್ಲಿ ಸ್ಮರಿಸಿದರೆ ನಾನು ಅವನನ್ನು ಆ ಸಭೆಯಲ್ಲಿರುವವರಿಗಿಂತಲೂ ಮಿಗಿಲಾದವರು[9] ಇರುವ ಸಭೆಯಲ್ಲಿ ಸ್ಮರಿಸುತ್ತೇನೆ. ಅವನು ಒಂದು ಗೇಣಿನಷ್ಟು ನನಗೆ ಹತ್ತಿರವಾದರೆ ನಾನು ಒಂದು ಮೊಳದಷ್ಟು ಅವನಿಗೆ ಹತ್ತಿರವಾಗುತ್ತೇನೆ. ಅವನು ಒಂದು ಮೊಳದಷ್ಟು ನನಗೆ ಹತ್ತಿರವಾದರೆ ನಾನು ಒಂದು ಮಾರಿನಷ್ಟು ಅವನಿಗೆ ಹತ್ತಿರವಾಗುತ್ತೇನೆ. ಅವನು ನನ್ನೆಡೆಗೆ ನಡೆಯುತ್ತಾ ಬಂದರೆ ನಾನು ಅವನೆಡೆಗೆ ಓಡೋಡಿ ಧಾವಿಸುತ್ತೇನೆ'."[10]**

---

**8** ಇದನ್ನು ಬುಖಾರಿ (5/2353; ಹದೀಸ್ ನಂ. 6044), ಮುಸ್ಲಿಮ್ (1/539; ಹದೀಸ್ ನಂ. 779) ಅಬೂ ಮೂಸಾ ಅಲ್‌ಅಶ್‌ಅರೀರಿಂದ ವರದಿ ಮಾಡಿದ್ದಾರೆ. ಬುಖಾರಿಯ ಹೊರತು ಇತರೆಲ್ಲವುಗಳಲ್ಲಿರುವ ಪಠ್ಯವು: "ಅಲ್ಲಾಹನನ್ನು ಸ್ಮರಿಸಲ್ಪಡುವ ಮನೆ ಮತ್ತು ಅಲ್ಲಾಹನನ್ನು ಸ್ಮರಿಸಲ್ಪಡದ ಮನೆಯ ಉಪಮೆಯು ಜೀವಂತವಾಗಿರುವ ಮತ್ತು ನಿರ್ಜೀವವಾಗಿರುವವನ ಉಪಮೆಯಂತಿದೆ" ಎಂದಾಗಿದೆ.

**9** ಅರ್ಥಾತ್ ಮಲಕ್‌ಗಳು

**10** ಇದನ್ನು ಬುಖಾರಿ (6/2694; ಹದೀಸ್ ನಂ. 6970), ಮುಸ್ಲಿಮ್ (4/2061; ಹದೀಸ್ ನಂ. 2675) ವರದಿ ಮಾಡಿದ್ದಾರೆ.

عَنْ أَبِي الدَّرْدَاءِ رَضِيَ اللَّهُ عَنْهُ قَالَ: قَالَ النَّبِيُّ صَلَّى اللَّهُ عَلَيْهِ وَسَلَّمَ: «أَلَا أُنَبِّئُكُمْ بِخَيْرِ أَعْمَالِكُمْ، وَأَزْكَاهَا عِنْدَ مَلِيكِكُمْ، وَأَرْفَعِهَا فِي دَرَجَاتِكُمْ وَخَيْرٌ لَكُمْ مِنْ إِنْفَاقِ الذَّهَبِ وَالْوَرِقِ، وَخَيْرٌ لَكُمْ مِنْ أَنْ تَلْقَوْا عَدُوَّكُمْ فَتَضْرِبُوا أَعْنَاقَهُمْ وَيَضْرِبُوا أَعْنَاقَكُمْ؟» قَالُوا: بَلَى، قَالَ: «ذِكْرُ اللَّهِ تَعَالَى» قَالَ مُعَاذُ بْنُ جَبَلٍ: مَا شَيْءٌ أَنْجَى مِنْ عَذَابِ اللَّهِ مِنْ ذِكْرِ اللَّهِ

**"ಅಬು ದ್ದರ್ದಾಅ್(ؓ)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ನಿಮ್ಮ ಕರ್ಮಗಳಲ್ಲಿ ಉತ್ತಮವಾದುದು, ನಿಮ್ಮ ಪ್ರಭುವಿನ ಬಳಿ ಶುಭ್ರವಾದುದು, ನಿಮ್ಮ ದರ್ಜೆಗಳಲ್ಲಿ ಉನ್ನತ ವಾದುದು, ಚಿನ್ನ ಮತ್ತು ಬೆಳ್ಳಿಯನ್ನು ವ್ಯಯಿಸುವುದಕ್ಕಿಂತಲೂ ಉತ್ತಮವಾದುದು, ನೀವು ನಿಮ್ಮ ಶತ್ರುಗಳನ್ನು ಎದುರುಗೊಂಡಾಗ ನೀವು ಅವರನ್ನು ಸಂಹರಿಸುವುದಕ್ಕಿಂತಲೂ ಮತ್ತು ಅವರು ನಿಮ್ಮನ್ನು ಸಂಹರಿಸುವುದಕ್ಕಿಂತಲೂ ಉತ್ತಮವಾದುದು ಯಾವುದೆಂದು ನಾನು ನಿಮಗೆ ತಿಳಿಸಿಕೊಡಲೇ?' ಸಹಾಬಿಗಳು ಹೇಳಿದರು: 'ತಿಳಿಸಿಕೊಡಿ'. ಪ್ರವಾದಿ(ﷺ) ರವರು ಹೇಳಿದರು: 'ಅದು ಅಲ್ಲಾಹನ ಸ್ಮರಣೆಯಾಗಿದೆ'. ಮುಆದ್ ಇಬ್ನ್ ಜಬಲ್ ಹೇಳಿದರು: 'ಅಲ್ಲಾಹನ ಸ್ಮರಣೆಗಿಂತಲೂ ಅಲ್ಲಾಹನ ಶಿಕ್ಷೆಯಿಂದ ರಕ್ಷಿಸುವ ಬೇರೊಂದು ವಸ್ತುವಿಲ್ಲ'."**[11]

ಅಲ್ಲಾಹನನ್ನು ಸ್ಮರಿಸುತ್ತಿರಬೇಕು ಎಂಬುದರ ತಾತ್ಪರ್ಯವು ಸದಾ ಮಸೀದಿಯ ಮೂಲೆಯೊಂದರಲ್ಲಿ ಕುಳಿತು ಜಪಮಾಲೆಯನ್ನು ಹಿಡಿದು ಅದರ ಮಣಿಗಳನ್ನು ಎಣಿಸುತ್ತಾ ಕಣ್ಣುಗಳನ್ನು ಮುಚ್ಚಿ ಲೋಕದ ಪರಿವೆಯೇ ಇಲ್ಲದಂತೆ ಗುಣುಗುಡುತ್ತಿರಬೇಕು ಎಂದಲ್ಲ. ಈ ರೀತಿಯ ಪ್ರವೃತ್ತಿಯನ್ನು ಸನ್ಯಾಸತ್ವ ಎನ್ನಲಾಗುತ್ತದೆ. ಆದರೆ ಇಸ್ಲಾಮ್ ಸನ್ಯಾಸತ್ವವನ್ನು ಕಟುವಾದ ಶಬ್ಧಗಳಲ್ಲಿ ವಿರೋಧಿಸಿದೆ. ಭೌತಿಕ ಕಾರ್ಯಕಲಾಪಗಳಿಂದ ಬೇರ್ಪಟ್ಟು ಒಂಟಿಯಾಗಿ ಆರಾಧನೆಗಳಲ್ಲಿ ಮುಳುಗಿಕೊಂಡಿರುವವನು ಎಂದೂ ಮುಸ್ಲಿಮನಾಗಲು ಸಾಧ್ಯವಿಲ್ಲ. ಇಸ್ಲಾಮ್ ಸಾಮಾಜಿಕವಾದ ಜೀವನಪದ್ಧತಿಯನ್ನು ಅನುಮೋದಿಸಿದೆ ಮತ್ತು ಅದನ್ನು ಮಾತ್ರವೇ ಅಳವಡಿಸಿಕೊಳ್ಳಬೇಕೆಂದು ಅನುಶಾಸಿಸಿದೆ. ಯಾಕೆಂದರೆ ಓರ್ವ ವ್ಯಕಿಗೆ ತನ್ನ ಪ್ರಭುವಿನೊಡನೆ ಹಲವಾರು ಕರ್ತವ್ಯಗಳಿರುವಂತೆ ಕೌಟುಂಬಿಕವಾಗಿಯೂ ಸಾಮಾಜಿಕವಾಗಿಯೂ ನಿರ್ವಹಿಸಬೇಕಾದ ಹಲವಾರು ಕರ್ತವ್ಯಗಳಿವೆ. ಈ ಕೌಟುಂಬಿಕ ಮತ್ತು ಸಾಮಾಜಿಕ ಕರ್ತವ್ಯಗಳಿಂದ ವಿಮುಖನಾಗಿ ಏಕಾಂಗಿಯಾಗಿ ಜೀವಿಸುವುದನ್ನು ಇಸ್ಲಾಮ್ ವಿರೋಧಿಸಿದೆ.

ಪ್ರವಾದಿ ಈಸಾ(ؑ)ರವರ ಸಮುದಾಯವು ಅವರ ನಂತರ ಸನ್ಯಾಸತ್ವವನ್ನು ಸ್ವೀಕರಿಸಿದ್ದನ್ನು ಖಂಡಿಸುತ್ತಾ ಅಲ್ಲಾಹು ಹೇಳಿದ್ದಾನೆ:

﴿ وَرَهْبَانِيَّةً ابْتَدَعُوهَا مَا كَتَبْنَاهَا عَلَيْهِمْ ﴾

---

11 ಇದನ್ನು ತಿರ್ಮಿದಿ (5/459; ಹದೀಸ್ ನಂ. 3377), ಇಬ್ನ್ ಮಾಜ (2/1245; ಹದೀಸ್ ನಂ. 3790) ವರದಿ ಮಾಡಿದ್ದಾರೆ.

**“ಮತ್ತು ಸನ್ಯಾಸತ್ವ, ಅದನ್ನವರು ಹೊಸದಾಗಿ ಆರಂಭಿಸಿದರು, ನಾವದನ್ನು ಅವರ ಮೇಲೆ ವಿಧಿಸಿರಲಿಲ್ಲ.”[12]**

عَنْ سَعْدِ بْنِ أَبِي وَقَّاصٍ رَضِيَ اللَّهُ عَنْهُ قَالَ: لَمَّا كَانَ مِنْ أَمْرِ عُثْمَانَ بْنِ مَظْعُونٍ الَّذِي كَانَ مِنْ تَرْكِ النِّسَاءِ بَعَثَ إِلَيْهِ رَسُولُ اللَّهِ صَلَّى اللَّهُ عَلَيْهِ وَسَلَّمَ فَقَالَ: يَا عُثْمَانُ إِنِّي لَمْ أُومَرْ بِالرَّهْبَانِيَّةِ، أَرَغِبْتَ عَنْ سُنَّتِي؟» قَالَ: لَا يَا رَسُولَ اللَّهِ ، قَالَ: «إِنَّ مِنْ سُنَّتِي أَنْ أُصَلِّيَ وَأَنَامَ وَأَصُومَ وَأَطْعَمَ وَأَنْكِحَ وَأُطَلِّقَ، فَمَنْ رَغِبَ عَنْ سُنَّتِي فَلَيْسَ مِنِّي، يَا عُثْمَانُ إِنَّ لِأَهْلِكَ عَلَيْكَ حَقًّا وَلِنَفْسِكَ عَلَيْكَ حَقًّا» قَالَ سَعْدٌ: فَوَاللَّهِ لَقَدْ كَانَ أَجْمَعَ رِجَالٌ مِنَ الْمُسْلِمِينَ عَلَى أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ إِنْ هُوَ أَقَرَّ عُثْمَانَ عَلَى مَا هُوَ عَلَيْهِ أَنْ نَخْتَصِيَ فَنَتَبَتَّلَ

**“ಸಅ್‌ದ್ ಇಬ್ನ್ ಅಬೀ ವಕ್ಕಾಸ್(رضي الله عنه)ರಿಂದ: ಉಸ್ಮಾನ್ ಇಬ್ನ್ ಮದ್‌ಊನ್ (رضي الله عنه) ವಿವಾಹವಾಗುವುದಿಲ್ಲವೆಂಬ ಸಂಗತಿಯು ಪ್ರವಾದಿ(ﷺ)ರವರಿಗೆ ತಲುಪಿದಾಗ ಅವರು ಉಸ್ಮಾನ್(رضي الله عنه)ರನ್ನು ಕರೆಸಿ ಕೇಳುತ್ತಾರೆ: ‘ಓ ಉಸ್ಮಾನ್! ಸನ್ಯಾಸತ್ವವನ್ನು ಕೈಗೊಳ್ಳಬೇಕೆಂಬ ಯಾವ ಆಜ್ಞೆಯೂ ನನ್ನ ಮೇಲೆ ವಿಧಿಸಲ್ಪಟ್ಟಿಲ್ಲ. ನನ್ನ ಸುನ್ನತ್ತಿನಿಂದ ನೀನು ವಿಮುಖನಾಗುತ್ತಿರುವೆಯಾ?’ ಉಸ್ಮಾನ್(رضي الله عنه) ಹೇಳಿದರು: ‘ಇಲ್ಲ! ಓ ಅಲ್ಲಾಹನ ಸಂದೇಶವಾಹಕರೇ’. ಪ್ರವಾದಿ(ﷺ)ರವರು ಹೇಳಿದರು: ‘ನಮಾಝ್ ಮಾಡುವುದು, ನಿದ್ರಿಸುವುದು, ಉಪವಾಸ ಆಚರಿಸುವುದು, ತೊರೆಯುವುದು, ವಿವಾಹವಾಗುವುದು, ವಿಚ್ಛೇದನ ನೀಡುವುದು ನನ್ನ ಸುನ್ನತ್‌ನಲ್ಲಿ ಸೇರಿದ್ದಾಗಿವೆ. ಯಾರಾದರೂ ನನ್ನ ಸುನ್ನತ್ತಿನಿಂದ ವಿಮುಖನಾದರೆ ಅವನು ನನ್ನವನಲ್ಲ. ನಿನಗೆ ನಿನ್ನ ಕುಟುಂಬದ ಮೇಲೆ ಹಕ್ಕುಗಳಿವೆ. ನಿನ್ನ ಶರೀರದ ಮೇಲೆ ಹಕ್ಕುಗಳಿವೆ’. ಸಅ್‌ದ್ ಇಬ್ನ್ ಅಬೀ ವಕ್ಕಾಸ್ ಹೇಳಿದರು: ‘ಅಲ್ಲಾಹನಾಣೆ, ಮುಸ್ಲಿಮರ ಒಂದು ಗುಂಪು ಅಲ್ಲಿ ನೆರೆದಿತ್ತು. ಒಂದು ವೇಳೆ ಪ್ರವಾದಿ (ﷺ)ರವರು ಉಸ್ಮಾನ್‌ರವರ ಈ ಪ್ರವೃತ್ತಿಯನ್ನು ಅಂಗೀಕರಿಸಿದ್ದರೆ ನಾವೆಲ್ಲರೂ ನಮ್ಮ ಪತ್ನಿಯರನ್ನು ತ್ಯಜಿಸಿ ಬ್ರಹ್ಮಚರ್ಯೆಯನ್ನು ಸ್ವೀಕರಿಸುತ್ತಿದ್ದೆವು’.”[13]**

---

**12** ಕುರ್‌ಆನ್ 57/27

**13** ಇದನ್ನು ದಾರಿಮೀ ತನ್ನ ‘ಸುನನ್’ನಲ್ಲಿ (2/179; ಹದೀಸ್ ನಂ. 2169) ಝುಹ್ರೀರವರ ಹಾದಿಯಿಂದ, ಅವರು ಸಈದ್ ಇಬ್ನುಲ್ ಮುಸಯ್ಯಬ್‌ರಿಂದ, ಅವರು ಸಅ್‌ದ್ ಇಬ್ನ್ ಅಬೀ ವಕ್ಕಾಸ್‌ರಿಂದ ವರದಿ ಮಾಡಿದ್ದಾರೆ. ಈ ಹದೀಸಿನ ಕೊನೆಯ ಭಾಗವನ್ನು ಇದೇ ಹಾದಿಯಿಂದ ಬುಖಾರಿ (5/1952; ಹದೀಸ್ ನಂ. 4786), ಮುಸ್ಲಿಮ್ (2/1020; ಹದೀಸ್ ನಂ. 1402), ತಿರ್ಮಿದಿ (3/394; ಹದೀಸ್ ನಂ. 1083), ಇಬ್ನ್ ಮಾಜ (1/593; ಹದೀಸ್ ನಂ. 1848), ಅಹ್ಮದ್ (1/175; ಹದೀಸ್ ನಂ. 1514), ದಾರಿಮೀ (2/178; ಹದೀಸ್ ನಂ. 2167), ಇಬ್ನ್ ಹಿಬ್ಬಾನ್ (9/337; ಹದೀಸ್ ನಂ. 4027),

ಪ್ರವಾದಿ(ﷺ)ರವರು ಹೇಳಿದರು:

«كُلُّكُمْ رَاعٍ وَكُلُّكُمْ مَسْؤُولٌ عَنْ رَعِيَّتِهِ، الْإِمَامُ رَاعٍ وَمَسْؤُولٌ عَنْ رَعِيَّتِهِ، وَالرَّجُلُ رَاعٍ فِي أَهْلِهِ وَمَسْؤُولٌ عَنْ رَعِيَّتِهِ، وَالْمَرْأَةُ رَاعِيَةٌ فِي بَيْتِ زَوْجِهَا وَمَسْؤُولَةٌ عَنْ رَعِيَّتِهَا، وَالْخَادِمُ رَاعٍ فِي مَالِ سَيِّدِهِ وَمَسْؤُولٌ عَنْ رَعِيَّتِهِ»

**"ನೀವೆಲ್ಲರೂ ರಕ್ಷಕರಾಗಿರುವಿರಿ ಮತ್ತು ತನ್ನ ಕ್ಷೇತ್ರ ರಕ್ಷಣೆಯ ಕುರಿತು ನೀವೆಲ್ಲರೂ ಪ್ರಶ್ನಿಸಲ್ಪಡುವಿರಿ. ನೇತಾರನು ರಕ್ಷಕನಾಗಿರುವನು ಮತ್ತು ತನ್ನ ಕ್ಷೇತ್ರ ರಕ್ಷಣೆಯ ಕುರಿತು ಅವನು ಪ್ರಶ್ನಿಸಲ್ಪಡುವನು. ಪುರುಷನು ಕುಟುಂಬದ ರಕ್ಷಕನಾಗಿರುವನು ಮತ್ತು ತನ್ನ ಕ್ಷೇತ್ರ ರಕ್ಷಣೆಯ ಕುರಿತು ಅವನು ಪ್ರಶ್ನಿಸಲ್ಪಡುವನು. ಮಹಿಳೆಯು ತನ್ನ ಪತಿಯ ಮನೆಯ ರಕ್ಷಕಳಾಗಿರುವಳು ಮತ್ತು ತನ್ನ ಕ್ಷೇತ್ರ ರಕ್ಷಣೆಯ ಕುರಿತು ಅವಳು ಪ್ರಶ್ನಿಸಲ್ಪಡುವಳು. ಸೇವಕನು ತನ್ನ ಯಜಮಾನನ ಸಂಪತ್ತಿನ ರಕ್ಷಕನಾಗಿರುವನು ಮತ್ತು ತನ್ನ ಕ್ಷೇತ್ರ ರಕ್ಷಣೆಯ ಕುರಿತು ಅವನು ಪ್ರಶ್ನಿಸಲ್ಪಡುವನು."**[14]

ಇಸ್ಲಾಮಿನಲ್ಲಿ ದಿಕ್ರ್ ಮನುಷ್ಯನ ಸರ್ವ ವಿಧ ದೈನಿಕ ಕರ್ಮಗಳನ್ನೂ ಆವರಿಸಿದೆ. ಐದು ವೇಳೆಯ ಕಡ್ಡಾಯ ನಮಾಝ್‌ಗಳಲ್ಲಿ ಮಾತ್ರವಲ್ಲದೆ ಭೌತಿಕವಾಗಿರುವ ಪ್ರತಿಯೊಂದು ಕರ್ಮಗಳ ಜೊತೆಗೂ ಅದು ಸಂಬಂಧವನ್ನು ಹೊಂದಿದೆ. ವಿದ್ವಾಂಸರೊಬ್ಬರು ಹೇಳಿದಂತೆ ದಿಕ್ರ್ ಕೇವಲ ಕೆಲವೊಂದು ಅಕ್ಷರಗಳನ್ನು ಬಾಯಿಯಿಂದ ಉಚ್ಚರಿಸುವುದಕ್ಕೆ ಮಾತ್ರ ಸೀಮಿತವಾಗಿಸಬಾರದು. ಬದಲಾಗಿ ಅದು ತನ್ನ ಮನಸ್ಸಿನಲ್ಲಿ ಉದ್ಭವಿಸುವ ಎಲ್ಲಾ ದುಷ್ಪ್ರೇರಣೆಗಳಿಗೂ ಕಡಿವಾಣ ಹಾಕುವಷ್ಟು ಶಕ್ತಿಶಾಲಿಯಾಗಿರಬೇಕು. ಉದಾಹರಣೆಗೆ ಓರ್ವ ವ್ಯಕ್ತಿಗೆ ಕಣ್ಮುಂದೆ ಸುಂದರಿಯಾದ ಸ್ತ್ರೀಯೋರ್ವಳು ಗೋಚರಿಸಿದರೆ ಹಾಗೂ ಆಕೆಯನ್ನು ಕೆಲಹೊತ್ತು ನೋಡುತ್ತಿರಬೇಕೆಂಬ ದುಷ್ಪ್ರೇರಣೆಯು ಅವನಿಗುಂಟಾದರೆ ತಕ್ಷಣ ಅವನು ಅಲ್ಲಾಹನನ್ನು ಸ್ಮರಿಸಿ ತನ್ನ ದೃಷ್ಟಿಯನ್ನು ತಗ್ಗಿಸಿ ಪಾಪಮುಕ್ತಿಯನ್ನು ಬೇಡಬೇಕು.

ಅಲ್ಲಾಹು ಹೇಳಿದ್ದಾನೆ:

﴿ وَٱلَّذِينَ إِذَا فَعَلُواْ فَٰحِشَةً أَوْ ظَلَمُوٓاْ أَنفُسَهُمْ ذَكَرُواْ ٱللَّهَ فَٱسْتَغْفَرُواْ لِذُنُوبِهِمْ وَمَن يَغْفِرُ ٱلذُّنُوبَ إِلَّا ٱللَّهُ وَلَمْ يُصِرُّواْ عَلَىٰ مَا فَعَلُواْ وَهُمْ يَعْلَمُونَ ١٣٥ ﴾

---

ತಬರಾನೀ ತನ್ನ 'ಮುಅ್‌ಜಮುಲ್ ಕಬೀರ್'ನಲ್ಲಿ (9/33; ಹದೀಸ್ ನಂ. 8313), ಅಬೂ ಯಅ್‌ಲಾ ತನ್ನ 'ಮುಸ್ನದ್'ನಲ್ಲಿ (2/120; ಹದೀಸ್ ನಂ. 788), ಇಬ್ನ್ ಅಬೀ ಶೈಬಾ ತನ್ನ 'ಮುಸನ್ನಫ್'ನಲ್ಲಿ (3/453; ಹದೀಸ್ ನಂ. 15905), ಬೈಹಕೀ ತನ್ನ 'ಸುನನುಲ್ ಕುಬ್ರಾ'ದಲ್ಲಿ (7/79; ಹದೀಸ್ ನಂ. 13240), ನಸಾಈ ತನ್ನ 'ಸುನನುಲ್ ಕುಬ್ರಾ'ದಲ್ಲಿ (3/263; ಹದೀಸ್ ನಂ. 5323) ವರದಿ ಮಾಡಿದ್ದಾರೆ

**14** ಇದನ್ನು ಬುಖಾರಿ (1/304; ಹದೀಸ್ ನಂ. 853), ಮುಸ್ಲಿಮ್ (3/1459; ಹದೀಸ್ ನಂ. 1829) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**"ಮತ್ತು ತಾವು ನೀಚಕೃತ್ಯವೆಸಗಿದರೆ ಅಥವಾ ತಮ್ಮ ಶರೀರಗಳ ಮೇಲೆ ಅತಿಕ್ರಮವೆಸಗಿದರೆ ಅಲ್ಲಾಹನನ್ನು ಸ್ಮರಿಸಿ ತಮ್ಮ ತಪ್ಪಿಗಾಗಿ ಅವನೊಡನೆ ಕ್ಷಮೆಯನ್ನು ಬೇಡುವವರು. ಅಲ್ಲಾಹನ ಹೊರತು ಪಾಪಗಳನ್ನು ಕ್ಷಮಿಸುವ(ಅಧಿಕಾರವಿರುವ)ವರು ಇನ್ನಾರಿದ್ದಾರೆ? ತಿಳಿದೂ ಕೂಡ ಅವರೆಂದೂ ತಾವು ಮಾಡಿದುದರಲ್ಲಿ ತಲ್ಲೀನರಾಗಿರಲಾರರು."**[15]

ನವವೀ ಹೇಳಿದ್ದಾರೆ:

اعْلَمْ أَنَّ فَضِيلَةَ الذِّكْرِ غَيْرُ مُنْحَصِرَةٍ فِي التَّسْبِيحِ وَالتَّهْلِيلِ وَالتَّحْمِيدِ وَالتَّكْبِيرِ وَنَحْوِهَا، بَلْ كُلُّ عَامِلٍ لِلَّهِ تَعَالَى بِطَاعَةٍ فَهُوَ ذَاكِرٌ لِلَّهِ تَعَالَى، كَذَا قَالَهُ سَعِيدُ بْنُ جُبَيْرٍ وَغَيْرُهُ مِنَ الْعُلَمَاءِ، وَقَالَ عَطَاءٌ : مَجَالِسُ الذِّكْرِ هِيَ مَجَالِسُ الْحَلَالِ وَالْحَرَامِ، كَيْفَ تَشْتَرِي وَتَبِيعُ وَتُصَلِّي وَتَصُومُ وَتَنْكِحُ وَتُطَلِّقُ وَتَحُجُّ وَأَشْبَاهُ هَذَا

**"ತಿಳಿದುಕೋ! ದಿಕ್ರ್‌ನ ಶ್ರೇಷ್ಠತೆಯು ಕೇವಲ ತಸ್ಬೀಹ್, ತಹ್ಲೀಲ್, ತಹ್ಮೀದ್, ತಕ್ಬೀರ್ ಮುಂತಾದವುಗಳಲ್ಲಿ ಸಂಕ್ಷಿಪ್ತಗೊಂಡಿಲ್ಲ. ಪ್ರತ್ಯುತಃ ಅಲ್ಲಾಹನಿಗೋಸ್ಕರ ಅನುಸರಣೆಯೊಂದಿಗೆ ಕರ್ಮವೆಸಗುವವರೆಲ್ಲರೂ ಅಲ್ಲಾಹನ ದಿಕ್ರ್ ಹೇಳುವವರಾಗಿದ್ದಾರೆ. ಸಈದ್ ಇಬ್ನ್ ಜುಬೈರ್(رضي الله عنه) ಮುಂತಾದ ವಿದ್ವಾಂಸರು ಇದನ್ನು ಹೇಳಿದ್ದಾರೆ. ಅತಾಅ್ ಹೇಳಿದರು: ದಿಕ್ರ್‌ನ ಸಭೆಗಳು ಹಲಾಲ್ ಮತ್ತು ಹರಾಮ್‌ನ ಸಭೆಗಳಾಗಿವೆ. ನೀನು ಹೇಗೆ ಖರೀದಿಸುತ್ತೀ, ಹೇಗೆ ಮಾರುತ್ತೀ, ಹೇಗೆ ನಮಾಝ್ ಮಾಡುತ್ತೀ, ಹೇಗೆ ಉಪವಾಸವಿರಿಸುತ್ತೀ, ಹೇಗೆ ಮದುವೆಯಾಗುತ್ತೀ, ಹೇಗೆ ತಲಾಕ್ ನೀಡುತ್ತೀ, ಹೇಗೆ ಹಜ್ಜ್ ಮಾಡುತ್ತೀ ಮುಂತಾದವುಗಳು ಇದರಲ್ಲೊಳಪಡುತ್ತವೆ."**[16]

ದಿಕ್ರ್ ಆಂತರಿಕ ಪ್ರಜ್ಞೆಯೊಂದಿಗೆ ಹೃದಯಾಳದಿಂದ ಹೊರಹೊಮ್ಮಬೇಕಾಗಿದೆ ಮತ್ತು ಅದು ಮೆದುಸ್ವರದಲ್ಲಿ ದೈನ್ಯವಾಗಿರಬೇಕೆಂದು ಇಸ್ಲಾಮ್ ಕಲಿಸುತ್ತದೆ.

ಅಲ್ಲಾಹು ಹೇಳಿದ್ದಾನೆ:

﴿ وَٱذۡكُر رَّبَّكَ فِي نَفۡسِكَ تَضَرُّعٗا وَخِيفَةٗ وَدُونَ ٱلۡجَهۡرِ مِنَ ٱلۡقَوۡلِ بِٱلۡغُدُوِّ وَٱلۡأٓصَالِ وَلَا تَكُن مِّنَ ٱلۡغَٰفِلِينَ ٢٠٥ ﴾

**"ಪ್ರಭಾತ ಮತ್ತು ಸಂಧ್ಯಾವೇಳೆಗಳಲ್ಲಿ ನಿನ್ನ ಮನಸ್ಸಿನಲ್ಲಿ ದೈನ್ಯತೆ ಮತ್ತು ಭಯದೊಂದಿಗೆ ಮತ್ತು ಉಚ್ಚಸ್ವರರಹಿತವಾಗಿ ನಿನ್ನ ಪ್ರಭುವನ್ನು ಸ್ಮರಿಸು. ಮತ್ತು ನಿರ್ಲಕ್ಷ್ಯರಾಗಿರುವವರಲ್ಲಿ ನೀನು ಸೇರದಿರು."**[17]

---

**15** ಕುರ್‌ಆನ್ 3/135

**16** ಅಲ್‌ಅದ್ಕಾರ್ ಪುಟ 9

**17** ಕುರ್‌ಆನ್ 7/205

ಪ್ರವಾದಿ(ﷺ)ರವರು ಮತ್ತು ಅವರ ಸಂಗಡಿಗರು ಖೈಬರ್ ಯುದ್ಧಕ್ಕಾಗಿ ಹೊರಟಾಗ ದಾರಿ ಮಧ್ಯೆ ಅವರು ಒಂದು ಪರ್ವತದ ಮೂಲಕ ಹಾದು ಹೋಗುತ್ತಿದ್ದರು. ಆಗ ಪರ್ವತವನ್ನೇರುವ ಸಂದರ್ಭದಲ್ಲಿ ಸಹಾಬಿಗಳು ಜೋರಾಗಿ ತಹ್ಲೀಲ್ ಮತ್ತು ತಕ್ಬೀರ್‌ಗಳನ್ನು ಹೇಳತೊಡಗಿದರು. ಆಗ ಅವರ ಈ ಪ್ರವೃತ್ತಿಯನ್ನು ತಿದ್ದುತ್ತಾ ಪ್ರವಾದಿ (ﷺ)ರವರು ಅವರಿಗೆ ನೀಡಿದ ಉಪದೇಶವು ಬುದ್ಧಿಯಿರುವ ಪ್ರತಿಯೋರ್ವ ವ್ಯಕ್ತಿಯೂ ಚಿಂತಿಸಬೇಕಾದುದೇ ಆಗಿದೆ. ಪ್ರವಾದಿ(ﷺ)ರವರು ಹೇಳಿದರು:

«يَا أَيُّهَا النَّاسُ، ارْبَعُوا عَلَى أَنْفُسِكُمْ، فَإِنَّكُمْ لَا تَدْعُونَ أَصَمَّ وَلَا غَائِبًا، إِنَّهُ مَعَكُمْ، إِنَّهُ سَمِيعٌ قَرِيبٌ»

**"ಓ ಜನರೇ! ನಿಮ್ಮ ಶರೀರಗಳ ಮೇಲೆ ಅನುಕಂಪ ತೋರಿಸಿರಿ! ಕಿವುಡನನ್ನಾಗಲಿ, ನಿಮ್ಮ ಬಳಿಯಿಲ್ಲದವನನ್ನಾಗಲಿ ಅಲ್ಲ ನೀವು ಕರೆಯುತ್ತಿರುವುದು! ಖಂಡಿತವಾಗಿಯೂ ಅವನು ನಿಮ್ಮೊಂದಿಗಿದ್ದಾನೆ[18]. ಅವನು (ಸರ್ವವನ್ನೂ) ಆಲಿಸುವವನೂ, (ನಿಮಗೆ) ಅತಿನಿಕಟನೂ ಆಗಿರುವನು."[19]**

ದಿಕ್ರ್ ಸಂಪೂರ್ಣವಾಗಿಯೂ ಪಾರಲೌಕಿಕ ಮೋಕ್ಷ ಮತ್ತು ದೇವಸಾಮೀಪ್ಯವನ್ನು ಹಾತೊರೆಯಬೇಕು. ಐಹಿಕವಾದ ಕೀರ್ತಿಗಾಗಲಿ, ಧನಜಮಾವಣೆಗಾಗಲಿ, ಜನಮನ್ನಣೆಗಾಗಲಿ ಆಗಿರಬಾರದು. ಆಧುನಿಕ ಪ್ರಪಂಚ ಶೋಧಕರು ಪ್ರಾಪಂಚಿಕ ವಿಸ್ಮಯಗಳನ್ನು ಬಯಲಿಗೆಳೆದಂತೆಲ್ಲಾ ದೇವಾಸ್ತಿತ್ವ ನಿರಾಕರಣೆಯತ್ತ ದಾಪುಗಾಲಿಡುತ್ತಿರುವುದು ಒಂದು ದುರಂತವಾಗಿದೆ. ಆದರೆ ವಾಸ್ತವಿಕವಾಗಿ ಪ್ರಾಪಂಚಿಕ ವಿಸ್ಮಯಗಳನ್ನು ಸಂಶೋಧಿಸುತ್ತಾ ಸಾಗಿದಂತೆಲ್ಲಾ ದೇವಾಸ್ತಿತ್ವದ ಪುರಾವೆಗಳು ಬಲಗೊಳ್ಳುತ್ತವೆ. ಪ್ರಪಂಚಕರ್ತನ ಕುರಿತು ನೈಜವಾದ ಪರಿಜ್ಞಾನವಿರದವನು ಮಾತ್ರ ಅವನ ಅಸ್ತಿತ್ವವನ್ನು ನಿರಾಕರಿಸುವನಲ್ಲದೆ ಓರ್ವ ಯಥಾರ್ಥ ದೇವಭಕ್ತನಿಗೆ ಖಂಡಿತವಾಗಿಯೂ ಪ್ರಾಪಂಚಿಕ ವಿಸ್ಮಯಗಳಲ್ಲಿ ಅಸಂಖ್ಯ ದೃಷ್ಟಾಂತಗಳು ಗೋಚರಿಸುತ್ತವೆ.

ಅಲ್ಲಾಹು ಹೇಳಿದ್ದಾನೆ:

﴿ إِنَّ فِي خَلْقِ ٱلسَّمَٰوَٰتِ وَٱلْأَرْضِ وَٱخْتِلَٰفِ ٱلَّيْلِ وَٱلنَّهَارِ لَءَايَٰتٍ لِّأُو۟لِى

---

**18** ನೋಡಿ ಕುರ್‌ಆನ್ 47/35, 57/4, 50/16 ಇತ್ಯಾದಿ. ಮುಸ್ಲಿಮ್ ಉಲ್ಲೇಖಿಸಿದ ಇನ್ನೊಂದು ವರದಿಯಲ್ಲಿ: 'ನೀವು ಯಾರನ್ನು ಕರೆಯುತ್ತಿರುವಿರೋ ಅವನು ನಿಮಗೆ ನಿಮ್ಮ ಒಂಟೆಯ ಕುತ್ತಿಗೆಗಿಂತಲೂ ಹೆಚ್ಚು ಸಮೀಪದಲ್ಲಿದ್ದಾನೆ' ಎಂದಿದೆ.

**19** ಇದನ್ನು ಬುಖಾರಿ (3/1091; ಹದೀಸ್ ನಂ. 2830), ಮುಸ್ಲಿಮ್ (4/2076; ಹದೀಸ್ ನಂ. 2704) ಅಬೂ ಮೂಸಾ ಅಲ್‌ಅಶ್‌ಅರೀರಿಂದ ವರದಿ ಮಾಡಿದ್ದಾರೆ. ತಬರೀ ಹೇಳಿದ್ದಾರೆ: 'ಉಚ್ಛಸ್ವರದಲ್ಲಿ ದಿಕ್ರ್ ಮತ್ತು ದುಆಗಳನ್ನು ಹೇಳುವುದನ್ನು ಸಹಾಬಿಗಳು ಮತ್ತು ತಾಬಿಈಗಳು ಅಸಹ್ಯಪಡುತ್ತಿದ್ದರು' (ಫತ್‌ಹುಲ್ ಬಾರಿ 6/135). ಆದರೆ ಕೆಲವೊಂದು ದಿಕ್ರ್‌ಗಳನ್ನು ಉದಾಹರಣೆಗೆ ನಮಾಝ್‌ನಲ್ಲಿ, ಈದ್ ದಿನದಂದು ತಕ್ಬೀರ್ ಹೇಳುವಾಗ ಇತ್ಯಾದಿ ಪ್ರವಾದಿ(ﷺ)ರವರು ಮತ್ತು ಸಹಾಬಿಗಳು ಉಚ್ಛಸ್ವರದಲ್ಲಿ ಹೇಳಿದ್ದಾಗಿ ದೃಢಪಟ್ಟಿದೆ. ಆದ್ದರಿಂದ ಪ್ರವಾದಿ(ﷺ)ರವರು ಮತ್ತು ಸಹಾಬಿಗಳು ಉಚ್ಛಸ್ವರದಲ್ಲಿ ಹೇಳಿದ ದಿಕ್ರ್‌ಗಳನ್ನು ಹೊರತುಪಡಿಸಿ ಉಳಿದೆಲ್ಲಾ ದಿಕ್ರ್‌ಗಳನ್ನು ಮೆಲುದನಿಯಲ್ಲಿಯೇ ಹೇಳಬೇಕಾಗಿದೆ.

ٱلْأَلْبَٰبِ ﴿١٩٠﴾ ٱلَّذِينَ يَذْكُرُونَ ٱللَّهَ قِيَٰمًا وَقُعُودًا وَعَلَىٰ جُنُوبِهِمْ وَيَتَفَكَّرُونَ فِى
خَلْقِ ٱلسَّمَٰوَٰتِ وَٱلْأَرْضِ رَبَّنَا مَا خَلَقْتَ هَٰذَا بَٰطِلًا سُبْحَٰنَكَ فَقِنَا عَذَابَ ٱلنَّارِ ﴿١٩١﴾ ﴾

**"ನಿಂತುಕೊಂಡು, ಕುಳಿತುಕೊಂಡು ಮತ್ತು ಪಾರ್ಶ್ವಕ್ಕೊರಗಿ (ಮಲಗಿ)ಕೊಂಡು ಅಲ್ಲಾಹನನ್ನು ಸ್ಮರಿಸುವ ಮತ್ತು ಆಕಾಶಗಳ ಮತ್ತು ಭೂಮಿಯ ಸೃಷ್ಟಿಯ ಕುರಿತು ಚಿಂತಿಸುವ ಬುದ್ಧಿವಂತರಿಗೆ ಖಂಡಿತವಾಗಿಯೂ ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲೂ, ರಾತ್ರಿ ಹಗಲುಗಳ ಬದಲಾವಣೆಗಳಲ್ಲೂ ದೃಷ್ಟಾಂತಗಳಿವೆ. (ಅವರು ಹೇಳುವರು:) ನಮ್ಮ ಪ್ರಭೂ! ನೀನಿದನ್ನು ವ್ಯರ್ಥವಾಗಿ ಸೃಷ್ಟಿಸಿಲ್ಲ. ನಿನ್ನ ಪರಿಪಾವನತೆಯನ್ನು ನಾವು ಕೊಂಡಾಡುತ್ತೇವೆ. ಆದ್ದರಿಂದ ನಮ್ಮನ್ನು ನರಕಯಾತನೆಯಿಂದ ಪಾರುಗೊಳಿಸು."**[20]

ವೈರತ್ವದಿಂದ ಛಿದ್ರರಾಗಿ ಸದಾ ಪರಸ್ಪರ ಹೋರಾಡುತ್ತಿದ್ದ ಅರಬ್ ಸಮೂಹವನ್ನು ಪ್ರವಾದಿ ಮುಹಮ್ಮದ್(ﷺ)ರವರ ನೇತೃತ್ವದಲ್ಲಿ ಒಂದೇ ಗ್ರಂಥದಡಿ ಪರಸ್ಪರ ಏಕೋದರ ಸಹೋದರರಂತೆ ಮುಸ್ಲಿಮರಾಗಿ ಒಂದುಗೂಡಿಸಿದ್ದು ಅಲ್ಲಾಹನ ಅತಿದೊಡ್ಡ ಅನುಗ್ರಹ ವಾಗಿದೆ. ಈ ಅನುಗ್ರಹವನ್ನು ನೆನಪಿಸುತ್ತಾ ಅಲ್ಲಾಹು ಹೇಳಿದ್ದಾನೆ:

﴿ وَٱعْتَصِمُوا۟ بِحَبْلِ ٱللَّهِ جَمِيعًا وَلَا تَفَرَّقُوا۟ ۚ وَٱذْكُرُوا۟ نِعْمَتَ ٱللَّهِ عَلَيْكُمْ إِذْ كُنتُمْ
أَعْدَآءً فَأَلَّفَ بَيْنَ قُلُوبِكُمْ فَأَصْبَحْتُم بِنِعْمَتِهِۦٓ إِخْوَٰنًا وَكُنتُمْ عَلَىٰ شَفَا حُفْرَةٍ مِّنَ ٱلنَّارِ
فَأَنقَذَكُم مِّنْهَا ۗ كَذَٰلِكَ يُبَيِّنُ ٱللَّهُ لَكُمْ ءَايَٰتِهِۦ لَعَلَّكُمْ تَهْتَدُونَ ﴿١٠٣﴾ ﴾

**"ನೀವೆಲ್ಲರೂ ಒಂದಾಗಿ ಅಲ್ಲಾಹನ ಪಾಶವನ್ನು ಬಲವಾಗಿ ಹಿಡಿದುಕೊಳ್ಳಿರಿ ಮತ್ತು ಛಿದ್ರರಾಗದಿರಿ. ನೀವು (ಪರಸ್ಪರ) ಶತ್ರುಗಳಾಗಿದ್ದಾಗ ಅಲ್ಲಾಹು ನಿಮ್ಮ ಮೇಲೆ ಸುರಿಸಿದ ಅನುಗ್ರಹವನ್ನು ಸ್ಮರಿಸಿರಿ. ಅವನು ನಿಮ್ಮ ಹೃದಯಗಳನ್ನು ಜೋಡಿಸಿದನು. ತನ್ನಿಮಿತ್ತ ಅವನ ಅನುಗ್ರಹದಿಂದಾಗಿ ನೀವು (ಪರಸ್ಪರ) ಸಹೋದರರಾಗಿ ಮಾರ್ಪಟ್ಟಿರಿ. ಮತ್ತು ನೀವು ನರಕದ ಹೊಂಡದ ಅಂಚಿನಲ್ಲಿದ್ದಿರಿ, ಆಗ ಅವನು ನಿಮ್ಮನ್ನು ಅದರಿಂದ ಪಾರುಗೊಳಿಸಿದನು. ಈ ರೀತಿ ಅಲ್ಲಾಹು ತನ್ನ ದೃಷ್ಟಾಂತಗಳನ್ನು ನಿಮಗೆ ವಿವರಿಸಿಕೊಡುತ್ತಿದ್ದಾನೆ. ನೀವು ಸನ್ಮಾರ್ಗ ಪಡೆದವರಾಗಲೂಬಹುದು."**[21]

ಆದರೆ ದುರದೃಷ್ಟವಶಾತ್ ಇಂದು ಮುಸ್ಲಿಮ್ ಸಮುದಾಯದಲ್ಲಿ ದಿಕ್ರ್ ಒಂದು ವ್ಯಾಪಾರದ ಸರಕಾಗಿ ಮಾರ್ಪಟ್ಟಿರುವುದರಿಂದ ಮುಸ್ಲಿಮರು ಪರಸ್ಪರ ವೈರತ್ವವನ್ನು ಕಟ್ಟಿಕೊಳ್ಳುವ ಮೂಲಕ ಛಿದ್ರರಾಗಿ ಹೋಗುತ್ತಿರುವುದು ವಿಪರ್ಯಾಸಕರವಾಗಿದೆ. ಪುರೋಹಿತರ ನೇತೃತ್ವದಲ್ಲಿ ನಿರ್ವಹಿಸಲಾಗುವ ಅನಿಸ್ಲಾಮಿಕ ಆಚಾರವಾದ ದಿಕ್ರ್ ಹಲ್ಕಾಗಳಲ್ಲಿ ಸಂಗ್ರಹವಾಗುವ ಧನಕ್ಕಾಗಿ ಮುಸ್ಲಿಮರು ಪರಸ್ಪರ ಜಗಳವಾಡುತ್ತಿರುವುದು ವೃತ್ತಪತ್ರಿಕೆಗಳಲ್ಲೂ, ಸುದ್ದಿ ಮಾಧ್ಯಮಗಳಲ್ಲೂ ದಿನನಿತ್ಯವೆಂಬಂತೆ ಕಾಣಬಹುದಾಗಿದೆ[22]

**20** ಕುರ್‌ಆನ್ 3/190–191

**21** ಕುರ್‌ಆನ್ 3/103

**22** ಇಂತಹ ಕೆಲವು ಜಗಳಗಳು ಕೊಲೆಯಲ್ಲಿ ಪರ್ಯಾವಸಾನಗೊಂಡದಕ್ಕೂ ಸಾಕಷ್ಟು

ಅತೀವ ಸಂಕಷ್ಟಗಳು ಎದುರಾದಾಗ ಮಾತ್ರ ಜನರಲ್ಲಿ ದಿಕ್ರ್ ಜಾಗೃತಗೊಳ್ಳುತ್ತದೆ. ಇದು ಓರ್ವ ಮುಸ್ಲಿಮನ ಸ್ವಭಾವವಾಗಿರಬಾರದು. ಯಾಕೆಂದರೆ ಇಸ್ಲಾಮಿನ ಪ್ರಕಾರ ಸಂತೋಷದ ಸಂದರ್ಭದಲ್ಲಿಯೂ, ದುರಂತದ ಸಂದರ್ಭದಲ್ಲಿಯೂ ಏಕಪ್ರಕಾರವಾಗಿ ಅಲ್ಲಾಹನನ್ನು ಸ್ಮರಿಸಬೇಕಾಗಿದೆ. ಮಾತ್ರವಲ್ಲದೆ ಉಭಯ ಸಂದರ್ಭಗಳಲ್ಲಿಯೂ ಅವನೊಂದಿಗೆ ಮಾತ್ರ ಪ್ರಾರ್ಥಿಸಬೇಕಾಗಿದೆ.

ಪ್ರವಾದಿ(ﷺ)ರವರು ಹೇಳಿದರು:

«احْفَظِ اللَّهَ يَحْفَظْكَ، احْفَظِ اللَّهَ تَجِدْهُ أَمَامَكَ، تَعَرَّفْ إِلَيْهِ فِي الرَّخَاءِ يَعْرِفْكَ فِي الشِّدَّةِ، وَإِذَا سَأَلْتَ فَاسْأَلِ اللَّهَ، وَإِذَا اسْتَعَنْتَ فَاسْتَعِنْ بِاللَّهِ، قَدْ جَفَّ الْقَلَمُ بِمَا هُوَ كَائِنٌ، فَلَوْ أَنَّ الْخَلْقَ كُلَّهُمْ جَمِيعًا أَرَادُوا أَنْ يَنْفَعُوكَ بِشَيْءٍ لَمْ يَكْتُبْهُ اللَّهُ عَلَيْكَ لَمْ يَقْدِرُوا عَلَيْهِ، وَإِنْ أَرَادُوا أَنْ يَضُرُّوكَ بِشَيْءٍ لَمْ يَكْتُبْهُ اللَّهُ عَلَيْكَ لَمْ يَقْدِرُوا عَلَيْهِ، وَاعْلَمْ أَنَّ فِي الصَّبْرِ عَلَى مَا تَكْرَهُ خَيْرًا كَثِيرًا، وَأَنَّ النَّصْرَ مَعَ الصَّبْرِ، وَأَنَّ الْفَرَجَ مَعَ الْكَرْبِ، وَأَنَّ مَعَ الْعُسْرِ يُسْرًا»

**"ಅಲ್ಲಾಹನನ್ನು ಭಯಪಡು ಅವನು ನಿನ್ನನ್ನು ರಕ್ಷಿಸುವನು, ಅಲ್ಲಾಹನನ್ನು ಭಯಪಡು ಅವನನ್ನು ನೀನು ನಿನ್ನ ಮುಂದೆ ಕಾಣುವೆ, ಸುಖಾವಸ್ಥೆಯಲ್ಲಿ ಅವನನ್ನು ಸ್ಮರಿಸು ಆಪತ್ಕಾಲದಲ್ಲಿ ಅವನು ನಿನ್ನನ್ನು ಸ್ಮರಿಸುವನು, ನೀನೇನಾದರೂ ಬೇಡುವುದಾದರೆ ಅಲ್ಲಾಹನೊಂದಿಗೆ ಬೇಡು, ನೀನೇನಾದರೂ ಸಹಾಯ ಯಾಚಿಸುವುದಾದರೆ ಅಲ್ಲಾಹನೊಂದಿಗೆ ಸಹಾಯ ಯಾಚಿಸು. ಏನೇನು ಉಂಟಾಗಬೇಕೋ ಅದರ ಕುರಿತು ಬರೆಯಲ್ಪಟ್ಟ ಲೇಖನಿಯು ಒಣಗಿದೆ. ಸೃಷ್ಟಿಗಳೆಲ್ಲರೂ ಒಂದಾಗಿ ಸೇರಿ ಅಲ್ಲಾಹು ನಿನ್ನ ಮೇಲೆ ವಿಧಿಸದ ಏನಾದರೂ ಉಪಕಾರವನ್ನು ಮಾಡಲು ಬಯಸಿದರೆ ಅವರಿಗೆ ಅದು ಸಾಧ್ಯವಾಗಲಾರದು. ಅಲ್ಲಾಹು ನಿನ್ನ ಮೇಲೆ ವಿಧಿಸದ ಏನಾದರೂ ಕೇಡನ್ನು ಮಾಡುವುದಕ್ಕಾಗಿ ಬಯಸಿದರೂ ಅವರಿಗೆ ಅದು ಸಾಧ್ಯವಾಗಲಾರದು. ತಿಳಿದುಕೋ! ನೀನು ಯಾವುದರ ಕುರಿತು ಅಸಹ್ಯಪಡುವೆಯೋ ಅದಕ್ಕಾಗಿ ಸಹನೆವಹಿಸುವುದರಲ್ಲಿ ನಿನಗೆ ಅತ್ಯಧಿಕ ಒಳಿತುಗಳಿವೆ. ಖಂಡಿತವಾಗಿಯೂ ಸಹಾಯವು ಸಹನೆಯೊಂದಿಗಿದೆ, ನಿರಾಳತೆಯು ಇಕ್ಕಟ್ಟಿನೊಂದಿಗಿದೆ ಮತ್ತು ಕಷ್ಟದೊಂದಿಗೆ ಸುಲಭವೂ ಇದೆ."**[23]

---

ಉದಾಹರಣೆಗಳಿವೆ.

**23** ಇದನ್ನು ತಿರ್ಮಿದಿ (4/667; ಹದೀಸ್ ನಂ. 2516), ಅಹ್ಮದ್ (1/307; ಹದೀಸ್ ನಂ. 2804), ತಬರಾನೀ ತನ್ನ 'ಮುಅ್‌ಜಮುಲ್ ಕಬೀರ್'ನಲ್ಲಿ (12/238; ಹದೀಸ್ ನಂ. 12988) ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ. ಇಬ್ನ್ ಅಬ್ಬಾಸ್‌ರವರು ಪ್ರವಾದಿ(ﷺ)ರವರ ಹಿಂಬದಿಯಲ್ಲಿ ಕುಳಿತು ಸವಾರಿ ಮಾಡುತ್ತಿದ್ದಾಗ ಅವರನ್ನು 'ಓ ಮಗೂ' ಎಂದು ಕರೆದು ಪ್ರವಾದಿ(ﷺ)ರವರು ಇದನ್ನು ಹೇಳಿದ್ದಾರೆ.

ದಿಕ್ರ್‌ಗಳನ್ನು ಹೇಳಬೇಕಾದ ಸಮಯ, ಸ್ಥಳ ಮತ್ತು ವಿಧಾನಗಳು ಸಂಪೂರ್ಣ ವಾಗಿಯೂ ಪ್ರವಾದಿ(ﷺ)ರವರು ಕಲಿಸಿಕೊಟ್ಟ ರೀತಿಯಲ್ಲಾಗಿರಬೇಕಾಗಿದೆ ಮತ್ತು ಸಹಾಬಿಗಳು ಅವುಗಳನ್ನು ಪ್ರಾಯೋಗಿಕಗೊಳಿಸಿ ತೋರಿಸಿಕೊಟ್ಟ ರೀತಿಯಲ್ಲಾಗಿರ ಬೇಕಾಗಿದೆ. ನೂತನವಾದ ಯಾವ ವಿಧಾನಗಳೂ ಇದರೊಂದಿಗೆ ಸೇರಿಕೊಳ್ಳದ ಬಗ್ಗೆ ಸದಾ ಜಾಗರೂಕರಾಗಿರಬೇಕಾಗಿದೆ. ಪ್ರವಾದಿ(ﷺ)ರವರು ಮೃತಪಟ್ಟ ಕೆಲವೇ ವರ್ಷಗಳೊಳಗೆ ಜನರು ನೂತನವಾದ ರೀತಿಯಲ್ಲಿ ದಿಕ್ರ್ ಹೇಳತೊಡಗಿದಾಗ ಪ್ರಸಿದ್ಧ ಸಹಾಬಿಗಳಲ್ಲೊಬ್ಬರಾದ ಅಬ್ದುಲ್ಲಾಹ್ ಇಬ್ನ್ ಮಸ್‌ಊದ್(رضي الله عنه) ಅವರೊಂದಿಗೆ ಯಾವ ರೀತಿ ವರ್ತಿಸಿದರು ಎಂದು ತಿಳಿಸುವ ಈ ಕೆಳಗಿನ ಹದೀಸಿನಿಂದ ಸಹಾಬಿಗಳು ಸುನ್ನತ್‌ಗೆ ನೀಡುತ್ತಿದ್ದ ಮಹತ್ವವನ್ನು ಮನಗಾಣಬಹುದಾಗಿದೆ.

عَنْ عَمْرِو بْنِ سَلَمَةَ رَضِيَ اللَّهُ عَنْهُ قَالَ: كُنَّا نَجْلِسُ عَلَى بَابِ عَبْدِ اللَّهِ بْنِ مَسْعُودٍ قَبْلَ صَلاَةِ الْغَدَاةِ فَإِذَا خَرَجَ مَشَيْنَا مَعَهُ إِلَى الْمَسْجِدِ، فَجَاءَنَا أَبُو مُوسَى الْأَشْعَرِيُّ فَقَالَ: أَخَرَجَ إِلَيْكُمْ أَبُو عَبْدِ الرَّحْمَنِ بَعْدُ؟ قُلْنَا: لا، فَجَلَسَ مَعَنَا حَتَّى خَرَجَ، فَلَمَّا خَرَجَ قُمْنَا إِلَيْهِ جَمِيعًا، فَقَالَ لَهُ أَبُو مُوسَى: يَا أَبَا عَبْدِ الرَّحْمَنِ، إِنِّي رَأَيْتُ فِي الْمَسْجِدِ آنِفًا أَمْرًا أَنْكَرْتُهُ وَلَمْ أَرَ وَالْحَمْدُ لِلَّهِ إِلَّا خَيْرًا، فَقَالَ: فَمَا هُوَ؟ فَقَالَ: إِنْ عِشْتَ فَسَتَرَاهُ، قَالَ: رَأَيْتُ فِي الْمَسْجِدِ قَوْمًا حِلَقًا جُلُوسًا يَنْتَظِرُونَ الصَّلَاةَ فِي كُلِّ حَلْقَةٍ رَجُلٌ وَفِي أَيْدِيهِمْ حَصًى، فَيَقُولُ كَبِّرُوا مِائَةً فَيُكَبِّرُونَ مِائَةً، فَيَقُولُ هَلِّلُوا مِائَةً فَيُهَلِّلُونَ مِائَةً، وَيَقُولُ سَبِّحُوا مِائَةً فَيُسَبِّحُونَ مِائَةً، قَالَ: مَاذَا قُلْتَ لَهُمْ؟ قَالَ: مَا قُلْتُ لَهُمْ شَيْئًا انْتِظَارَ رَأْيِكَ أَوِ انْتِظَارَ أَمْرِكَ، قَالَ: أَفَلَا أَمَرْتَهُمْ أَنْ يَعُدُّوا سَيِّئَاتِهِمْ وَضَمِنْتَ لَهُمْ أَنْ لَا يَضِيعَ مِنْ حَسَنَاتِهِمْ؟ ثُمَّ مَضَى وَمَضَيْنَا مَعَهُ حَتَّى أَتَى حَلْقَةً مِنْ تِلْكَ الْحِلَقِ فَوَقَفَ عَلَيْهِمْ وَقَالَ: مَا هَذَا الَّذِي أَرَاكُمْ تَصْنَعُونَ؟ قَالُوا: يَا أَبَا عَبْدِ الرَّحْمَنِ، حَصًى نَعُدُّ بِهِ التَّكْبِيرَ وَالتَّهْلِيلَ وَالتَّسْبِيحَ، قَالَ: فَعُدُّوا سَيِّئَاتِكُمْ، فَأَنَا ضَامِنٌ أَنْ لَا يَضِيعَ مِنْ حَسَنَاتِكُمْ شَيْءٌ، وَيْحَكُمْ يَا أُمَّةَ مُحَمَّدٍ! مَا أَسْرَعَ هَلَكَتَكُمْ، هَؤُلَاءِ صَحَابَةُ نَبِيِّكُمْ مُتَوَافِرُونَ، وَهَذِهِ ثِيَابُهُ

لَمْ تَبْلَ، وَآنِيَتُهُ لَمْ تُكْسَرْ، وَالَّذِي نَفْسِي فِي يَدِهِ إِنَّكُمْ لَعَلَى مِلَّةٍ هِيَ أَهْدَى مِنْ مِلَّةِ مُحَمَّدٍ أَوْ مُفْتَتِحِي بَابِ ضَلَالَةٍ، قَالُوا: وَاللَّهِ يَا أَبَا عَبْدِ الرَّحْمَنِ، مَا أَرَدْنَا إِلَّا الْخَيْرَ، قَالَ: وَكَمْ مِنْ مُرِيدٍ لِلْخَيْرِ لَنْ يُصِيبَهُ، إِنَّ رَسُولَ اللَّهِ صَلَّى اللَّهُ عَلَيْهِ وَسَلَّمَ حَدَّثَنَا أَنَّ قَوْمًا يَقْرَءُونَ الْقُرْآنَ لَا يُجَاوِزُ تَرَاقِيَهُمْ وَايْمُ اللَّهِ مَا أَدْرِي لَعَلَّ أَكْثَرَهُمْ مِنْكُمْ، ثُمَّ تَوَلَّى عَنْهُمْ، فَقَالَ عَمْرُو بْنُ سَلَمَةَ: رَأَيْنَا عَامَّةَ أُولَئِكَ الْحِلَقِ يُطَاعِنُونَا يَوْمَ النَّهْرَوَانِ مَعَ الْخَوَارِجِ

"ಅಮ್ರ್ ಇಬ್ನ್ ಸಲಮಾರಿಂದ: ಫಜ್ರ್ ನಮಾಝ್‌ಗಾಗಿ ಇಬ್ನ್ ಮಸ್‌ಊದ್ (ರಳಿಯಲ್ಲಾಹು ಅನ್ಹು) ರವರ ಜೊತೆ ಹೊರಡುವುದಕ್ಕಾಗಿ ನಾವು ಅವರ ದಾರಿ ಕಾಯುತ್ತಿದ್ದೆವು. ಆಗ ಅಬೂ ಮೂಸಾ ಅಲ್‌ಅಶ್‌ಅರೀ(ರಳಿಯಲ್ಲಾಹು ಅನ್ಹು)ರವರು ಬಂದು ಇಬ್ನ್ ಮಸ್‌ಊದ್(ರಳಿಯಲ್ಲಾಹು ಅನ್ಹು) ರನ್ನು ವಿಚಾರಿಸಿದರು. ಅವರಿನ್ನೂ ಹೊರಡಿಲ್ಲವೆಂದು ನಾವು ಹೇಳಿದೆವು. ನಂತರ ಇಬ್ನ್ ಮಸ್‌ಊದ್ ಬಂದಾಗ ನಾವೆಲ್ಲರೂ ಜೊತೆಯಾಗಿ ಹೊರಡಲು ನಿಂತೆವು. ಆಗ ಅಬೂ ಮೂಸಾರವರು ಇಬ್ನ್ ಮಸ್‌ಊದ್(ರಳಿಯಲ್ಲಾಹು ಅನ್ಹು)ರೊಂದಿಗೆ ಹೇಳಿದರು: ಓ ಅಬೂ ಅಬ್ದುರ್ರಹ್ಮಾನ್! ನಾನು ಮಸೀದಿಯಲ್ಲಿ ಸ್ವಲ್ಪ ಮುಂಚೆ ನಾನು ವಿರೋಧಿಸುವಂತಹ ಕಾರ್ಯವನ್ನು ಕಂಡೆ. ಅಲ್ಲಾಹನಿಗೆ ಸ್ತುತಿ, ನಾನು ಕಂಡದ್ದು ಒಳಿತಿನ ಕಾರ್ಯವಲ್ಲದೆ ಬೇರೇನೂ ಆಗಿರಲಿಲ್ಲ. ಇಬ್ನ್ ಮಸ್‌ಊದ್ ಕೇಳಿದರು: ಅದೇನು? ಅಬೂ ಮೂಸಾ ಹೇಳಿದರು: ನೀನು ಬದುಕುಳಿದರೆ ನೀನದನ್ನು ಕಾಣುವೆ. ಕೆಲವು ಜನರು ನಮಾಝನ್ನು ನಿರೀಕ್ಷಿಸುತ್ತಾ ಮಸೀದಿಯಲ್ಲಿ ವೃತ್ತಾಕಾರದಲ್ಲಿ ಕುಳಿತಿರುವುದನ್ನು ನಾನು ಕಂಡೆನು. ಅವರ ಕೈಗಳಲ್ಲಿ ಚಿಕ್ಕ ಚಿಕ್ಕ ಹರಳುಗಲ್ಲುಗಳಿದ್ದವು. ಪ್ರತಿಯೊಂದು ವೃತ್ತದಲ್ಲಿರುವ ಓರ್ವ ವ್ಯಕ್ತಿಯು ನೀವು ನೂರು ಬಾರಿ ತಕ್ಬೀರ್ ಹೇಳಿರಿ ಎಂದು ಹೇಳುವನು. ಅವರೆಲ್ಲರೂ ನೂರು ಬಾರಿ ಅಲ್ಲಾಹು ಅಕ್ಬರ್ ಎಂದು ಹೇಳುವರು. ಮತ್ತೆ ಆ ವ್ಯಕ್ತಿಯು ನೀವು ನೂರು ಬಾರಿ ತಹ್ಲೀಲ್ ಹೇಳಿರಿ ಎಂದು ಹೇಳುವನು. ಆಗ ಅವರೆಲ್ಲರೂ ನೂರು ಬಾರಿ ಲಾಇಲಾಹ ಇಲ್ಲಲ್ಲಾಹ್ ಎಂದು ಹೇಳುವರು. ಆಗ ಆ ವ್ಯಕ್ತಿಯು ನೀವು ನೂರು ಬಾರಿ ತಸ್ಬೀಹ್ ಹೇಳಿರಿ ಎನ್ನುವನು. ಆಗ ಅವರೆಲ್ಲರೂ ನೂರು ಬಾರಿ ಸುಬ್‌ಹಾನಲ್ಲಾಹ್ ಎಂದು ಹೇಳುವರು. ಇಬ್ನ್ ಮಸ್‌ಊದ್(ರಳಿಯಲ್ಲಾಹು ಅನ್ಹು)ರವರು ಅಬೂ ಮೂಸಾ(ರಳಿಯಲ್ಲಾಹು ಅನ್ಹು)ರೊಂದಿಗೆ ಕೇಳಿದರು: ನೀವು ಅವರೊಂದಿಗೆ ಏನು ಹೇಳಿದಿರಿ? ಅಬೂ ಮೂಸಾ(ರಳಿಯಲ್ಲಾಹು ಅನ್ಹು) ಹೇಳಿದರು: ನಿಮ್ಮ ಅಭಿಪ್ರಾಯ ಅರಿತ ಬಳಿಕ ನಿಮ್ಮ ಆಜ್ಞೆಯನ್ನು ನಿರೀಕ್ಷಿಸಿ ನಾನು ಅವರೊಂದಿಗೆ ಏನನ್ನೂ ಹೇಳಿಲ್ಲ. ಇಬ್ನ್ ಮಸ್‌ಊದ್(ರಳಿಯಲ್ಲಾಹು ಅನ್ಹು)ರವರು ಅಬೂ ಮೂಸಾ(ರಳಿಯಲ್ಲಾಹು ಅನ್ಹು)ರೊಂದಿಗೆ ಕೇಳಿದರು: ಅವರ ಕೆಡುಕುಗಳನ್ನು ಎಣಿಸಲು ನಿಮಗೆ ಅವರೊಂದಿಗೆ ಹೇಳಬಾರದಿತ್ತೇ? ಆಗ ಅವರ ಒಳಿತುಗಳು ನಿಷ್ಫಲವಾಗುತ್ತಿರಲಿಲ್ಲವೆಂದು ಅವರಿಗೆ ಭರವಸೆ ನೀಡಬಹುದಾಗಿತ್ತು. ನಂತರ ಇಬ್ನ್ ಮಸ್‌ಊದ್(ರಳಿಯಲ್ಲಾಹು ಅನ್ಹು) ಮತ್ತು ಅಬೂ ಮೂಸಾ(ರಳಿಯಲ್ಲಾಹು ಅನ್ಹು) ಜತೆಯಾಗಿ ಮಸೀದಿಯತ್ತ ನಡೆದರು. ಆ ಬಳಿಕ ಆ ವೃತ್ತಗಳಲ್ಲೊಂದರ ಬಳಿ ತಲುಪಿದಾಗ ಇಬ್ನ್ ಮಸ್‌ಊದ್(ರಳಿಯಲ್ಲಾಹು ಅನ್ಹು) ಅವರೊಂದಿಗೆ

ಕೇಳಿದರು: ನೀವು ಏನು ಮಾಡುತ್ತಿರುವುದಾಗಿ ನಾನು ಕಾಣುತ್ತಿದ್ದೇನೆ?' ಅವರು ಹೇಳಿದರು: ಓ ಅಬೂ ಅಬ್ದುರ್ರಹ್ಮಾನ್! ನಾವು ತಕ್ಬೀರ್, ತಹ್ಲೀಲ್, ತಸ್ಬೀಹ್ ಹೇಳುತ್ತಿರುವಾಗ ಕಲ್ಲುಗಳನ್ನುಪಯೋಗಿಸಿ ಎಣಿಸುತ್ತಿರುವೆವು. ಇಬ್ನ್ ಮಸ್‌ಊದ್(ﷺ) ಹೇಳಿದರು: ಹಾಗಾದರೆ ನೀವು ನಿಮ್ಮ ಕೆಡುಕುಗಳನ್ನು ಎಣಿಸಿರಿ, ನಿಮ್ಮ ಸತ್ಕರ್ಮಗಳು ನಿಷ್ಫಲವಾಗದೆಂದು ನಾನು ನಿಮಗೆ ಭರವಸೆ ನೀಡುವೆನು. ಓ ಮುಹಮ್ಮದರ ಸಮುದಾಯವೇ! ನಿಮಗೆ ನಾಶ! ನಿಮ್ಮ ಪ್ರವಾದಿಯ ಅನುಚರರು ಇನ್ನೂ ಜೀವಂತವಾಗಿರುವರು. ಪ್ರವಾದಿಯವರ ವಸ್ತ್ರಗಳು ಇನ್ನೂ ನಾಶಗೊಂಡಿಲ್ಲ. ಅವರು ಉಪಯೋಗಿಸಿದ ಪಾತ್ರೆಗಳು ಇನ್ನೂ ಒಡೆದುಹೋಗಿಲ್ಲ. ನನ್ನ ಆತ್ಮವು ಯಾರ ಕೈಯಲ್ಲಿದೆಯೋ ಅವನಾಣೆ, ನೀವು ಮುಹಮ್ಮದ್(ﷺ)ರವರ ಮಾರ್ಗಕ್ಕಿಂತ ಉತ್ತಮ ಮಾರ್ಗವೊಂದನ್ನು ಅರಸುತ್ತಿರುವಿರೋ? ಅಥವಾ ಪಥಭ್ರಷ್ಟತೆಯ ದ್ವಾರವೊಂದನ್ನು ತೆರೆಯುತ್ತಿರುವಿರೋ? ಅವರು ಹೇಳಿದರು: ಓ ಅಬೂ ಅಬ್ದುರ್ರಹ್ಮಾನ್! ಅಲ್ಲಾಹನಾಣೆ! ನಾವು ಒಳಿತನ್ನಲ್ಲದೆ ಬೇರೇನನ್ನೂ ಆಗ್ರಹಿಸಿಲ್ಲ.(24) ಇಬ್ನ್ ಮಸ್‌ಊದ್ (ﷺ) ಉತ್ತರಿಸಿದರು: ಒಳಿತನ್ನುದ್ದೇಶಿಸುವ ಎಷ್ಟೊಂದು ಜನರಿಗೆ ಅದು ಲಭಿಸದಿರುತ್ತದೆ. ಖಂಡಿತವಾಗಿಯೂ ಪ್ರವಾದಿ(ﷺ)ರವರು ನಮ್ಮೊಂದಿಗೆ ಹೇಳಿರುವರು: ಒಂದು ವಿಭಾಗ ಜನರು ಕುರ್‌ಆನ್ ಪಾರಾಯಣ ಮಾಡುವರು. ಆದರೆ ಅದು ಅವರ ಕೊರಳ ಕೆಳಗೆ ಇಳಿಯಲಾರದು. ನನಗೆ ಅರಿಯದು, ಒಂದೋ ಅವರಲ್ಲಿ ಹೆಚ್ಚಿನವರೂ ನಿಮ್ಮಲ್ಲಿ ಒಳಪಟ್ಟವರಾಗಿರಲೂಬಹುದು(25). ಇಷ್ಟು ಹೇಳಿ ಇಬ್ನ್ ಮಸ್‌ಊದ್(ﷺ) ಅವರ ಬಳಿಯಿಂದ ನಿರ್ಗಮಿಸಿದರು. – (ಈ ಘಟನೆಯನ್ನು ವರದಿ ಮಾಡಿದ) ಅಮ್ರ್ ಇಬ್ನ್ ಸಲಮಾ ಹೇಳಿದರು: ಆ ವೃತ್ತದಲ್ಲಿದ್ದವರನ್ನೆಲ್ಲಾ ನಾವು ಆ ಬಳಿಕ ಕಂಡದ್ದು 'ನಹ್ರವಾನ್' ಯುದ್ಧದಲ್ಲಿ ಖವಾರಿಜ್‌ಗಳೊಂದಿಗೆ ಸೇರಿ ನಮ್ಮನ್ನು ಇರಿಯುವವರನ್ನಾಗಿ ಆಗಿತ್ತು".(26)

**24** ಬಿದ್‌ಅತ್ತನ್ನು ಪ್ರಾರಂಭಿಸುವವರು ಮತ್ತು ಅದನ್ನು ಮಾಡುವವರೆಲ್ಲರೂ ಹೇಳುವ ಸಮಜಾಯಿಷಿಕೆಯಾಗಿದೆ ಇದು. ತಾವು ಮಾಡುತ್ತಿರುವುದು ಒಂದು ಉತ್ತಮ ಕಾರ್ಯವಾಗಿದೆ ಎಂದಾಗಿದೆ ಅವರ ಅಭಿಪ್ರಾಯ. ಅಲ್ಲಾಹು ಹೇಳುತ್ತಾನೆ: "ಹೇಳು, ಕರ್ಮಗಳು ನಿಷ್ಫಲಗೊಂಡವರ ಬಗ್ಗೆ ನಾನು ನಿಮಗೆ ತಿಳಿಸಿಕೊಡಲೇ? ಐಹಿಕ ಜೀವನದಲ್ಲಿ ತಮ್ಮ ಪರಿಶ್ರಮಗಳು ಪಥಭ್ರಷ್ಟಗೊಂಡವರಾಗಿದ್ದಾರೆ ಅವರು. ಮತ್ತು ತಾವು ಮಾಡುತ್ತಿರುವುದು ಉತ್ತಮ ಕಾರ್ಯವಾಗಿದೆಯೆಂದು ಅವರು ಭಾವಿಸುತ್ತಿದ್ದಾರೆ" (18/104). ಉತ್ತಮ ಕಾರ್ಯವೆಂದು ಭಾವಿಸಿ ತಾವು ಮಾಡುತ್ತಿರುವ ಕರ್ಮವು ಪ್ರವಾದಿ(ﷺ)ರವರ ಮತ್ತು ಸಹಾಬಿಗಳ ಚರ್ಯೆಯಲ್ಲಿಲ್ಲದ್ದಾಗಿದೆಯೆಂಬ ವಾಸ್ತವಿಕತೆಯನ್ನು ಅವರು ವಿಸ್ಮರಿಸುತ್ತಾರೆ. ಆದ್ದರಿಂದಲೇ ಪರಲೋಕವನ್ನು ತಲುಪುವಾಗ ತಮ್ಮ ಕರ್ಮಗಳೆಲ್ಲವೂ ನಿಷ್ಫಲಗೊಂಡದ್ದಾಗಿ ಅವರು ಕಾಣುತ್ತಾರೆ.

**25** ನವೀನ ರೀತಿಯಲ್ಲಿ ದಿಕ್ರ್ ಹೇಳುತ್ತಿದ್ದ ಆ ಗುಂಪಿನಲ್ಲಿ ಸಹಾಬಿಯಾದ ಒಬ್ಬರೂ ಇರಲಿಲ್ಲವೆಂಬುದಕ್ಕೆ ಇದು ಪುರಾವೆಯಾಗಿದೆ. ಮತ್ತು ಖವಾರಿಜ್‌ಗಳಲ್ಲಿ ಸಹಾಬಿಗಳಾದ ಯಾರೂ ಇರಲಿಲ್ಲವೆಂದು ದೃಢಪಟ್ಟಿದೆ. "ಮುಖಗಳು ಬೆಳ್ಳಗಾಗುವ ಮತ್ತು ಮುಖಗಳು ಕರ್ರಗಾಗುವ ದಿನ" ಎಂದು ಅಲ್ಲಾಹು ಹೇಳಿದ ವಚನ (3/106)ದ ತಾತ್ಪರ್ಯವು: 'ಸುನ್ನತ್‌ನ ವಕ್ತಾರರ ಮುಖಗಳು ಬೆಳ್ಳಗಾಗುವುದು ಮತ್ತು ಬಿದ್‌ಅತ್‌ನ ವಕ್ತಾರರ ಮುಖಗಳು ಕರ್ರಗಾಗುವುದು' ಎಂದು ಇಬ್ನ್ ಅಬ್ಬಾಸ್ ವ್ಯಾಖ್ಯಾನಿಸಿದ್ದಾರೆ (ನೋಡಿ: ಇಬ್ನ್ ಕಸೀರ್ 1/391). ಮುಖ ಕರ್ರಗಾಗುವವರು ಖವಾರಿಜ್‌ಗಳೆಂದು ಅಬೂ ಉಮಾಮಃ ವ್ಯಾಖ್ಯಾನಿಸಿದ್ದಾರೆ. (ನೋಡಿ: ಇಬ್ನ್ ಜರೀರ್ 4/40; ಇಬ್ನ್ ಕಸೀರ್ 1/347)

**26** ಇದನ್ನು ದಾರಿಮೀ ತನ್ನ **'ಸುನನ್'**ನಲ್ಲಿ (1/79; ಹದೀಸ್ ನಂ. 204) ಹಕಮ್ ಇಬ್ನ್ ಮುಬಾರಕ್‌ರವರ ಹಾದಿಯಿಂದ, ಅವರು ಅಮ್ರ್ ಇಬ್ನ್ ಯಹ್ಯಾರಿಂದ, ಅವರು ಯಹ್ಯಾ ಇಬ್ನ್ ಅಮ್ರ್‌ರಿಂದ, ಅವರು ಅಮ್ರ್ ಇಬ್ನ್ ಸಲಮಾರಿಂದ ವರದಿ ಮಾಡಿದ್ದಾರೆ.

ಕೊನೆಯದಾಗಿ, ಆರಂಭದಲ್ಲಿ ಹೇಳಿದಂತೆ, ಮನಶ್ಶಾಂತಿ ಲಭಿಸುವುದು ದಿಕ್ರ್‌ನಿಂದ ಮಾತ್ರ. ಜೀವನದ ಜಂಜಾಟಗಳಿಂದ ಬೇಸತ್ತು ಮುದುಡಿಕೊಂಡ ಮನಸ್ಸು ದಿಕ್ರ್‌ನಿಂದ ಅರಳುತ್ತದೆ. ತನ್ಮೂಲಕ ಅದಕ್ಕೆ ಯಾವುದೋ ಅನನ್ಯವಾದ ಅನುಭೂತಿಯು ಲಭಿಸುತ್ತದೆ. ಸರ್ವ ದುಃಖ ದುಮ್ಮಾನಗಳೂ ಅದರಿಂದ ದೂರಗೊಳ್ಳುತ್ತವೆ. ದಿಕ್ರ್ ಮನಸ್ಸಿನ ಕಲ್ಮಶಗಳನ್ನು ನಿವಾರಿಸಿ ಮನುಷ್ಯನನ್ನು ಆಂತರಿಕವಾಗಿ ಶುದ್ಧೀಕರಿಸುತ್ತದೆ.

ಅಲ್ಲಾಹು ಹೇಳಿದ್ದಾನೆ:

﴿ ٱلَّذِينَ ءَامَنُواْ وَتَطۡمَئِنُّ قُلُوبُهُم بِذِكۡرِ ٱللَّهِۗ أَلَا بِذِكۡرِ ٱللَّهِ تَطۡمَئِنُّ ٱلۡقُلُوبُ ٢٨ ﴾

**“ವಿಶ್ವಾಸ ಹೊಂದಿದವರು ಮತ್ತು ಮನಸ್ಸುಗಳು ಅಲ್ಲಾಹನ ಸ್ಮರಣೆಯಿಂದ ಶಾಂತಗೊಳ್ಳುವವರು. ತಿಳಿಯಿರಿ! ಅಲ್ಲಾಹನ ಸ್ಮರಣೆಯಿಂದ ಮನಸ್ಸುಗಳು ಶಾಂತಗೊಳ್ಳುತ್ತವೆ.”**(27)

ಅಲ್ಲಾಹು ಹೇಳಿದ್ದಾನೆ:

﴿ وَمَنۡ أَعۡرَضَ عَن ذِكۡرِي فَإِنَّ لَهُۥ مَعِيشَةٗ ضَنكٗا وَنَحۡشُرُهُۥ يَوۡمَ ٱلۡقِيَٰمَةِ أَعۡمَىٰ ١٢٤ قَالَ رَبِّ لِمَ حَشَرۡتَنِيٓ أَعۡمَىٰ وَقَدۡ كُنتُ بَصِيرٗا ١٢٥ قَالَ كَذَٰلِكَ أَتَتۡكَ ءَايَٰتُنَا فَنَسِيتَهَاۖ وَكَذَٰلِكَ ٱلۡيَوۡمَ تُنسَىٰ ١٢٦ ﴾

**“ನನ್ನ ದಿಕ್ರ್‌ನಿಂದ ಯಾರಾದರೂ ಹಿಮ್ಮುಖನಾದರೆ ಖಂಡಿತವಾಗಿಯೂ (ಇಹಲೋಕದಲ್ಲಿ) ಅವನಿಗೆ ಇಕ್ಕಟ್ಟಾದ ಜೀವನವಿರುತ್ತದೆ, ಮತ್ತು ಅಂತ್ಯದಿನದಂದು ಅವನನ್ನು ನಾವು ಕುರುಡನಾಗಿ ಒಟ್ಟುಗೂಡಿಸುವೆವು. ಅವನು ಕೇಳುವನು: ನನ್ನ ಪ್ರಭೂ! ನನ್ನನ್ನೇಕೆ ನೀನು ಕುರುಡನಾಗಿ ಒಟ್ಟುಗೂಡಿಸಿದೆ? ನಾನು ಕಣ್ಣುಕಾಣುವವನಾಗಿದ್ದೆನಲ್ಲವೇ? ಅವನು (ಅಲ್ಲಾಹು) ಹೇಳುವನು: ಅದೇ ರೀತಿ, ನಿನ್ನ ಬಳಿಗೆ ನನ್ನ ದೃಷ್ಟಾಂತಗಳು ಬಂದಿದ್ದವು, ಆಗ ನೀನು ಅವುಗಳನ್ನು ಮರೆತುಬಿಟ್ಟೆ, ಮತ್ತು ಅದೇ ರೀತಿ ಇಂದು ನೀನು ಕೂಡ ಮರೆಯಲ್ಪಟ್ಟೆ.”**(28)

ದಿಕ್ರ್‌ಗಳ ಕುರಿತು ಪೂರ್ವಿಕ ವಿದ್ವಾಂಸರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಪ್ರಖ್ಯಾತವಾಗಿರುವುದು ನವವೀ ಬರೆದ ‘ಅಲ್‌ಅದ್ಕಾರ್’, ಇಬ್ನು ಸ್ಸುನ್ನಿ ಬರೆದ ‘ಅಮಲುಲ್ ಯೌಮಿ ವಲ್ಲೈಲಃ’, ನಸಾಈ ಬರೆದ ‘ಅಲ್ ಮುನ್ತಕಾ ಮಿನ್ ಅಮಲಿಲ್ ಯೌಮಿ ವಲ್ಲೈಲಃ’ ಎಂಬ ಗ್ರಂಥಗಳು. ಸಈದ್ ಇಬ್ನ್ ಅಲೀ ಇಬ್ನ್ ವಹ್ಫ್ ಅಲ್ ಕಹ್ತಾನಿ ಬರೆದ ‘ಹಿಸ್ನುಲ್ ಮುಸ್ಲಿಮ್ ಮಿನ್ ಅದ್ಕಾರಿಲ್ ಕಿತಾಬಿ ವಸ್ಸುನ್ನಃ’, ಅಬ್ದುರ್ರಝ್ಝಾಕ್ ಇಬ್ನ್ ಅಬ್ದಿಲ್ ಮುಹ್ಸಿನ್ ಅಲ್‌ಬದ್ರ್ ಬರೆದ ‘ಕಿತಾಬು ದ್ದಿಕ್ರಿ ವದ್ದುಆ ಫೀ ದೌಇಲ್ ಕಿತಾಬಿ ವಸ್ಸುನ್ನಃ’ ಮುಂತಾದವುಗಳು ಈ ವಿಷಯದಲ್ಲಿ ತೀರಾ

**27** ಕುರ್‌ಆನ್ 13/28

**28** ಕುರ್‌ಆನ್ 20/124–126

ಇತ್ತೀಚಿನ ಸೇರ್ಪಡೆಗಳಾಗಿವೆ. ಈ ಎಲ್ಲಾ ಗ್ರಂಥಗಳನ್ನೂ ಅಭ್ಯಸಿಸಿ, ಅವುಗಳಲ್ಲಿರುವ ಹದೀಸ್‌ಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ದಈಫ್ ಹದೀಸ್‌ಗಳನ್ನು ಕೈಬಿಟ್ಟು ಸಹೀಹ್ ಮತ್ತು ಹಸನ್ ಶ್ರೇಣಿಯಲ್ಲಿರುವ ಹದೀಸ್‌ಗಳನ್ನು ಮಾತ್ರ ಅವಲಂಬಿಸಿ ಈ ಕೃತಿಯನ್ನು ರಚಿಸಿದ್ದೇನೆ.

ನನ್ನ ಸಾಮರ್ಥ್ಯದ ಪರಮಾವಧಿ ದೃಢಪಟ್ಟ ಆಗಿರುವ ಹದೀಸ್‌ಗಳನ್ನು ಮಾತ್ರ ಬಳಸಿದ್ದೇನೆ. ಆದರೂ ಓದುಗರು ಹದೀಸ್‌ಗಳ ವಿಶ್ವಾಸಾರ್ಹತೆಯನ್ನು ಪ್ರತ್ಯೇಕವಾಗಿ ಪರಿಶೋಧಿಸಬೇಕಾಗಿ ವಿನಂತಿಸುತ್ತಿದ್ದೇನೆ. ದಿಕ್ರ್‌ಗಳನ್ನು ಅರಬಿ ಮೂಲದೊಂದಿಗೆ ನೀಡುವುದರ ಜೊತೆಗೆ ಅವುಗಳ ಉಚ್ಚಾರಣೆಯನ್ನು ಆವರಣದೊಳಗೆ ನೀಡಿರುತ್ತೇನೆ. ಅರಬಿ ಭಾಷೆಯ ಸ್ಪಷ್ಟವಾದ ಉಚ್ಚಾರಕ್ಕೆ ಕನ್ನಡದಲ್ಲಿ ಸೂಕ್ತವಾದ ಪದಗಳು ಅಲಭ್ಯವಾಗಿರುವುದರಿಂದ ದಿಕ್ರ್‌ಗಳನ್ನು ಕನ್ನಡದಲ್ಲಿ ಉಚ್ಚರಿಸುವಾಗ ಮೂಲ ಅರಬಿ ಉಚ್ಚಾರಣಾಶೈಲಿಯನ್ನು ಪ್ರತ್ಯೇಕವಾಗಿ ಪರಿಗಣಿಸಬೇಕೆಂದು ವಿನಂತಿಸುತ್ತಿದ್ದೇನೆ. 'ದಿಕ್ರ್‌ಗಳು ಪ್ರವಾದಿ(ﷺ)ರವರ ವಚನಗಳಿಂದ' ಎಂಬ ಕೃತಿಯ ಮೂರನೆ ಪರಿಷ್ಕೃತ ಮುದ್ರಣವಾಗಿದೆಯಿದು. ಹಿಂದಿನ ಮುದ್ರಣದಲ್ಲಿ ಕಂಡುಬಂದ ದೋಷಗಳನ್ನು ತಿದ್ದಲಾಗಿದೆ. ಓದುಗರ ಹಿತದೃಷ್ಟಿಯಿಂದ ಪ್ರತಿಯೊಂದು ವಿಷಯಗಳಲ್ಲೂ ದಿಕ್ರ್‌ಗಳೊಂದಿಗೆ ಆ ವಿಷಯದಲ್ಲಿ ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ಕಂಡುಬರುವ ಕೆಲವು ಪ್ರತ್ಯೇಕ ವಿಷಯಗಳನ್ನು ಸೇರಿಸಲಾಗಿದೆ. ಮತ್ತು ಕೊನೆಯಲ್ಲಿ ಕುರ್‌ಆನ್‌ನಲ್ಲಿ ಉಲ್ಲೇಖಿಸಲ್ಪಟ್ಟಿರುವ ಪ್ರಾರ್ಥನೆಗಳನ್ನು ಸೇರಿಸಲಾಗಿದೆ. ಕೃತಿಯನ್ನು ಸಂಕ್ಷಿಪ್ತಗೊಳಿಸುವ ಉದ್ದೇಶದಿಂದ ಹದೀಸ್‌ಗಳ ತಖ್ರೀಜ್‌ನಲ್ಲಿ ಕೇವಲ ಒಂದು ಅಥವಾ ಎರಡು ಮಸ್ದರ್ (ಮೂಲ)ಗಳನ್ನು ಮಾತ್ರ ಉಲ್ಲೇಖಿಸಿದ್ದೇನೆ. ಇದರರ್ಥ ಆ ಹದೀಸ್ ಕೇವಲ ಉಲ್ಲೇಖಿಸಲ್ಪಟ್ಟ ಮಸ್ದರ್‌ಗಳಲ್ಲಿ ಮಾತ್ರವಿದೆಯೆಂದು ಓದುಗರು ಭಾವಿಸಬಾರದು.

ಈ ಕೃತಿಯ ಪೂರ್ತೀಕರಣಕ್ಕೆ ಸೌಭಾಗ್ಯವನ್ನು ಒದಗಿಸಿದ ಅಲ್ಲಾಹನಿಗೆ ಅನಂತಾನಂತ ಸ್ತುತಿಗಳನ್ನು ಸಲ್ಲಿಸುವುದರೊಂದಿಗೆ ಇದರ ರಚನೆಗೆ, ತಿದ್ದುಪಡಿಗೆ ಮತ್ತು ಪ್ರಕಟನೆಗೆ ಸಹಾಯ ಸಹಕಾರಗಳನ್ನು ನೀಡಿದ ಎಲ್ಲರಿಗೂ ಅವನು ಉತ್ತಮವಾದ ಪ್ರತಿಫಲವನ್ನು ನೀಡಲೆಂದು ಮತ್ತು ಇದನ್ನೊಂದು ಉತ್ತಮ ಸತ್ಕರ್ಮವನ್ನಾಗಿ ಸ್ವೀಕರಿಸಲೆಂದು ಅವನೊಂದಿಗೆ ದೈನ್ಯತೆಯೊಂದಿಗೆ ಬೇಡುತ್ತಿದ್ದೇನೆ.

**– ಮುಹಮ್ಮದ್ ಹಂಝಾ**

# 1. ದಿಕ್ರ್‌ನ ಶ್ರೇಷ್ಠತೆಗಳು

ಅಲ್ಲಾಹು ಹೇಳಿದ್ದಾನೆ:

﴿ فَٱذۡكُرُونِيٓ أَذۡكُرۡكُمۡ وَٱشۡكُرُواْ لِي وَلَا تَكۡفُرُونِ ١٥٢ ﴾

**“ಆದ್ದರಿಂದ ನೀವು ನನ್ನನ್ನು ಸ್ಮರಿಸಿರಿ, ನಾನು ನಿಮ್ಮನ್ನು ಸ್ಮರಿಸುವೆನು. ನನಗೆ ಕೃತಜ್ಞತೆ ಸಲ್ಲಿಸಿರಿ. ನನ್ನೊಂದಿಗೆ ಕೃತಘ್ನತೆಯನ್ನು ತೋರಿಸದಿರಿ.”**[29]

﴿ وَلَذِكۡرُ ٱللَّهِ أَكۡبَرُۗ ﴾

**“ಅಲ್ಲಾಹನ ಸ್ಮರಣೆಯು ಅತಿಮಹತ್ವವಾದುದಾಗಿದೆ.”**[30]

﴿ يَٰٓأَيُّهَا ٱلَّذِينَ ءَامَنُواْ ٱذۡكُرُواْ ٱللَّهَ ذِكۡرٗا كَثِيرٗا ٤١ وَسَبِّحُوهُ بُكۡرَةٗ وَأَصِيلًا ٤٢ ﴾

**“ಓ ವಿಶ್ವಾಸಿಗಳೇ! ನೀವು ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸಿರಿ. ಪ್ರಭಾತ ಮತ್ತು ಸಂಧ್ಯಾವೇಳೆಗಳಲ್ಲಿ ಅವನ ಪರಿಪಾವನತೆಯನ್ನು ಕೊಂಡಾಡಿರಿ.”**[31]

﴿ وَٱلذَّٰكِرِينَ ٱللَّهَ كَثِيرٗا وَٱلذَّٰكِرَٰتِ أَعَدَّ ٱللَّهُ لَهُم مَّغۡفِرَةٗ وَأَجۡرًا عَظِيمٗا ٣٥ ﴾

**“ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವ ಸ್ತ್ರೀಯರು ಮತ್ತು ಪುರುಷರು ಯಾರೋ ಅವರಿಗೆ ಅಲ್ಲಾಹು ಕ್ಷಮೆಯನ್ನೂ ಅಗಾಧವಾದ ಪ್ರತಿಫಲವನ್ನೂ ಸಿದ್ಧಗೊಳಿಸಿದ್ದಾನೆ.”**[32]

﴿ ٱلَّذِينَ يَذۡكُرُونَ ٱللَّهَ قِيَٰمٗا وَقُعُودٗا وَعَلَىٰ جُنُوبِهِمۡ ﴾

**“ನಿಂತುಕೊಂಡು, ಕುಳಿತುಕೊಂಡು ಮತ್ತು ಪಾರ್ಶ್ವಕ್ಕೊರಗಿ (ಮಲಗಿ)ಕೊಂಡು ಅಲ್ಲಾಹನನ್ನು ಸ್ಮರಿಸುವವರು.”**[33]

﴿ فَإِذَا قَضَيۡتُم مَّنَٰسِكَكُمۡ فَٱذۡكُرُواْ ٱللَّهَ كَذِكۡرِكُمۡ ءَابَآءَكُمۡ أَوۡ أَشَدَّ ذِكۡرٗاۗ ﴾

---

**29** ಕುರ್‌ಆನ್ 2/152
**30** ಕುರ್‌ಆನ್ 29/45
**31** ಕುರ್‌ಆನ್ 33/41–42
**32** ಕುರ್‌ಆನ್ 33/35
**33** ಕುರ್‌ಆನ್ 3/191

"ನೀವು ನಿಮ್ಮ ಹಜ್ಜ್ ಕರ್ಮಗಳನ್ನು ಪೂರೈಸಿದರೆ[34] ಅಲ್ಲಾಹನನ್ನು ಸ್ಮರಿಸಿರಿ, ನಿಮ್ಮ ಮಾತಾಪಿತರನ್ನು ಸ್ಮರಿಸುವಂತೆ, ಅಥವಾ ಅದಕ್ಕಿಂತಲೂ ಗಾಢವಾಗಿ ಸ್ಮರಿಸಿರಿ."[35]

﴿ يَٰٓأَيُّهَا ٱلَّذِينَ ءَامَنُوا۟ لَا تُلْهِكُمْ أَمْوَٰلُكُمْ وَلَآ أَوْلَٰدُكُمْ عَن ذِكْرِ ٱللَّهِ ﴾

"ಓ ವಿಶ್ವಾಸವಿಟ್ಟವರೇ! ನಿಮ್ಮ ಸಂಪತ್ತುಗಳು ಮತ್ತು ನಿಮ್ಮ ಸಂತಾನಗಳು ನಿಮ್ಮನ್ನು ಅಲ್ಲಾಹನ ದಿಕ್ರ್‌ನಿಂದ ವಿಮುಖಗೊಳಿಸದಿರಲಿ."[36]

﴿ وَٱذْكُر رَّبَّكَ فِى نَفْسِكَ تَضَرُّعًا وَخِيفَةً وَدُونَ ٱلْجَهْرِ مِنَ ٱلْقَوْلِ بِٱلْغُدُوِّ وَٱلْءَاصَالِ وَلَا تَكُن مِّنَ ٱلْغَٰفِلِينَ ﴿٢٠٥﴾ ﴾

"ಪ್ರಭಾತ ಮತ್ತು ಸಂಧ್ಯಾವೇಳೆಗಳಲ್ಲಿ ನಿನ್ನ ಮನಸ್ಸಿನಲ್ಲಿ ದೈನ್ಯತೆ ಮತ್ತು ಭಯದೊಂದಿಗೆ ಮತ್ತು ಉಚ್ಛಸ್ವರರಹಿತವಾಗಿ ನಿನ್ನ ಪ್ರಭುವನ್ನು ಸ್ಮರಿಸು. ಮತ್ತು ನಿರ್ಲಕ್ಷ್ಯರಾಗಿರುವವರಲ್ಲಿ ನೀನು ಒಳಗೊಳ್ಳದಿರು."[37]

﴿ فَلَوْلَآ أَنَّهُۥ كَانَ مِنَ ٱلْمُسَبِّحِينَ ﴿١٤٣﴾ لَلَبِثَ فِى بَطْنِهِۦٓ إِلَىٰ يَوْمِ يُبْعَثُونَ ﴿١٤٤﴾ ﴾

"ಅವನು ತಸ್ಬೀಹ್ ಹೇಳುವವರಲ್ಲಿ ಸೇರಿದವನಾಗಿಲ್ಲದಿರುತ್ತಿದ್ದರೆ ಅವರನ್ನು ಪುನರುತ್ಥಾನಗೊಳಿಸಲ್ಪಡುವ ದಿನದವರೆಗೆ ಅವನು ಅದರ ಹೊಟ್ಟೆಯಲ್ಲೇ ಇರುತ್ತಿದ್ದನು."[38]

ಪ್ರವಾದಿ(ﷺ)ರವರು ಹೇಳಿದರು:

«مَثَلُ الَّذِي يَذْكُرُ رَبَّهُ وَالَّذِي لَا يَذْكُرُ رَبَّهُ مَثَلُ الْحَيِّ وَالْمَيِّتِ»

"ತನ್ನ ಪ್ರಭುವನ್ನು ಸ್ಮರಿಸುವವನ ಮತ್ತು ತನ್ನ ಪ್ರಭುವನ್ನು ಸ್ಮರಿಸದಿರುವವನ ಉಪಮೆಯು ಜೀವಂತವಾಗಿರುವವನ ಮತ್ತು ಮೃತಪಟ್ಟವನ ಉಪಮೆಯಂತಿದೆ."[39]

عَنْ أَبِي هُرَيْرَةَ وَأَبِي سَعِيدٍ رَضِيَ اللَّهُ عَنْهُمَا أَنَّهُمَا شَهِدَا عَلَى النَّبِيِّ صَلَّى اللَّهُ عَلَيْهِ وَسَلَّمَ أَنَّهُ قَالَ: «لَا يَقْعُدُ قَوْمٌ يَذْكُرُونَ اللَّهَ إِلَّا حَفَّتْهُمُ الْمَلَائِكَةُ، وَغَشِيَتْهُمُ الرَّحْمَةُ، وَنَزَلَتْ عَلَيْهِمِ السَّكِينَةُ، وَذَكَرَهُمُ اللَّهُ فِيمَنْ عِنْدَهُ»

**34** ಅರ್ಥಾತ್ ನೀವು ಹಜ್ಜ್ ಕರ್ಮಗಳನ್ನು ಪೂರೈಸಿ ಬಲಿಮೃಗವನ್ನು ಕೊಯ್ದು ನಂತರ ಅಲ್ಲಾಹನನ್ನು ಸ್ಮರಿಸಿರಿ. (ನೋಡಿ: ಇಬ್ನ್ ಜರೀರ್ 2/295)

**35** ಕುರ್‌ಆನ್ 2/200

**36** ಕುರ್‌ಆನ್ 63/9

**37** ಕುರ್‌ಆನ್ 7/205

**38** ಕುರ್‌ಆನ್ 37/143–144

**39** ಇದನ್ನು ಬುಖಾರಿ (5/2353; ಹದೀಸ್ ನಂ. 6044), ಮುಸ್ಲಿಮ್ (1/539; ಹದೀಸ್ ನಂ. 779) ಅಬೂ ಮೂಸಾ ಅಲ್‌ಅಶ್‌ಅರೀರಿಂದ ವರದಿ ಮಾಡಿದ್ದಾರೆ.

**“ಅಬೂ ಹುರೈರಾ(ﷺ) ಮತ್ತು ಅಬೂ ಸಈದ್(ﷺ)ರಿಂದ: ಪ್ರವಾದಿ(ﷺ)ರವರು ಈ ರೀತಿ ಹೇಳಿದರೆಂದು ಅವರು ಪ್ರವಾದಿ(ﷺ)ರವರ ಮೇಲೆ ಸಾಕ್ಷ್ಯವಹಿಸಿ ಹೇಳಿದ್ದಾರೆ: ಜನರು ಅಲ್ಲಾಹನನ್ನು ಸ್ಮರಿಸುತ್ತಾ ಕೂರಲಾರರು, ಅವರನ್ನು ಮಲಕ್‌ಗಳು ಸುತ್ತುವರಿಯದೆ, ಅವರನ್ನು ಕಾರುಣ್ಯವು ಆವರಿಸದೆ, ಅವರ ಮೇಲೆ ಶಾಂತಿಯು ಅವತೀರ್ಣಗೊಳ್ಳದೆ ಮತ್ತು ಅಲ್ಲಾಹು ತನ್ನ ಸಮೀಪದಲ್ಲಿರುವವರೊಂದಿಗೆ ಅವರ ಕುರಿತು ಪ್ರಸ್ತಾಪಿಸದೆ.”(40)**

عَنْ أَبِي هُرَيْرَةَ رَضِيَ اللَّهُ عَنْهُ قَالَ: كَانَ رَسُولُ اللَّهِ صَلَّى اللَّهُ عَلَيْهِ وَسَلَّمَ يَسِيرُ فِي طَرِيقِ مَكَّةَ فَمَرَّ عَلَى جَبَلٍ يُقَالُ لَهُ جُمْدَانُ، فَقَالَ: «سِيرُوا هَذَا جُمْدَانُ سَبَقَ الْمُفَرِّدُونَ» قَالُوا: وَمَا الْمُفَرِّدُونَ؟ يَا رَسُولَ اللَّهِ، قَالَ: «الذَّاكِرُونَ اللَّهَ كَثِيرًا وَالذَّاكِرَاتُ»

**“ಅಬೂ ಹುರೈರಾ(ﷺ)ರಿಂದ: ಪ್ರವಾದಿ(ﷺ)ರವರು ಮಕ್ಕಾದ ಹಾದಿಯಲ್ಲಿ ಸಾಗುತ್ತಿರುವಾಗ ಜುಮ್ದಾನ್ ಎಂದು ಹೆಸರಿನ ಪರ್ವತದ ಬಳಿಯಿಂದಾಗಿ ಹಾದು ಹೋದರು. ಆಗ ಅವರು ಹೇಳಿದರು: ‘ಚಲಿಸಿರಿ! ಇದಾಗಿದೆ ಜುಮ್ದಾನ್, ಮುಫರ್ರಿದ್‌ಗಳು ಮುಂಚಿತವಾಗಿ ತಲುಪಿದರು’. ಅವರು (ಸಹಾಬಿಗಳು) ಕೇಳಿದರು: ‘ಓ ಅಲ್ಲಾಹನ ಸಂದೇಶವಾಹಕರೇ! ಮುಫರ್ರಿದ್‌ಗಳೆಂದರೆ ಯಾರು?’ ಪ್ರವಾದಿ(ﷺ)ರವರು ಹೇಳಿದರು: ‘ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವ ಪುರುಷರು ಮತ್ತು ಸ್ತ್ರೀಯರಾಗಿರುವರು’.”(41)**

ಪ್ರವಾದಿ(ﷺ)ರವರು ಹೇಳಿದರು:

«إِنَّ لِلَّهِ مَلَائِكَةً يَطُوفُونَ فِي الطُّرُقِ يَلْتَمِسُونَ أَهْلَ الذِّكْرِ فَإِذَا وَجَدُوا قَوْمًا يَذْكُرُونَ اللَّهَ تَنَادَوْا هَلُمُّوا إِلَى حَاجَتِكُمْ قَالَ: فَيَحُفُّونَهُمْ بِأَجْنِحَتِهِمْ إِلَى السَّمَاءِ الدُّنْيَا قَالَ: فَيَسْأَلُهُمْ رَبُّهُمْ وَهُوَ أَعْلَمُ مِنْهُمْ مَا يَقُولُ عِبَادِي قَالَ: يَقُولُونَ يُسَبِّحُونَكَ وَيُكَبِّرُونَكَ وَيَحْمَدُونَكَ وَيُمَجِّدُونَكَ قَالَ: فَيَقُولُ هَلْ رَأَوْنِي قَالَ: فَيَقُولُونَ وَاللَّهِ مَا رَأَوْكَ قَالَ: فَيَقُولُ وَكَيْفَ لَوْ رَأَوْنِي قَالَ: يَقُولُونَ لَوْ رَأَوْكَ كَانُوا أَشَدَّ لَكَ عِبَادَةً وَأَشَدَّ لَكَ تَمْجِيدًا وَتَحْمِيدًا وَأَكْثَرَ لَكَ تَسْبِيحًا قَالَ: يَقُولُ فَمَا يَسْأَلُونِي قَالَ: يَسْأَلُونَكَ الْجَنَّةَ قَالَ: يَقُولُ وَهَلْ

---

**40** ಇದನ್ನು ಮುಸ್ಲಿಮ್ (4/2074; ಹದೀಸ್ ನಂ. 2700), ತಿರ್ಮಿದಿ (5/459; ಹದೀಸ್ ನಂ. 3378) ವರದಿ ಮಾಡಿದ್ದಾರೆ.

**41** ಇದನ್ನು ಮುಸ್ಲಿಮ್ (4/2062; ಹದೀಸ್ ನಂ. 2676) ವರದಿ ಮಾಡಿದ್ದಾರೆ.

رَأَوْهَا قَالَ: يَقُولُونَ وَاللَّهِ يَا رَبِّ مَا رَأَوْهَا قَالَ: يَقُولُ فَكَيْفَ لَوْ أَنَّهُمْ رَأَوْهَا قَالَ: يَقُولُونَ لَوْ أَنَّهُمْ رَأَوْهَا كَانُوا أَشَدَّ عَلَيْهَا حِرْصًا وَأَشَدَّ لَهَا طَلَبًا وَأَعْظَمَ فِيهَا رَغْبَةً قَالَ: فَمِمَّ يَتَعَوَّذُونَ قَالَ: يَقُولُونَ مِنَ النَّارِ قَالَ: يَقُولُ وَهَلْ رَأَوْهَا قَالَ: يَقُولُونَ وَاللَّهِ يَا رَبِّ مَا رَأَوْهَا قَالَ: يَقُولُ فَكَيْفَ لَوْ رَأَوْهَا قَالَ: يَقُولُونَ لَوْ رَأَوْهَا كَانُوا أَشَدَّ مِنْهَا فِرَارًا وَأَشَدَّ لَهَا مَخَافَةً قَالَ: فَيَقُولُ فَأُشْهِدُكُمْ أَنِّي قَدْ غَفَرْتُ لَهُمْ قَالَ: يَقُولُ مَلَكٌ مِنَ الْمَلَائِكَةِ فِيهِمْ فُلَانٌ لَيْسَ مِنْهُمْ إِنَّمَا جَاءَ لِحَاجَةٍ قَالَ: هُمُ الْجُلَسَاءُ لَا يَشْقَى بِهِمْ جَلِيسُهُمْ»

**“ಅಲ್ಲಾಹನಿಗೆ ಕೆಲವು ಮಲಕ್‌ಗಳಿದ್ದಾರೆ. ಅವರು ದಿಕ್ರ್ ಹೇಳುತ್ತಿರುವವರನ್ನು ಅರಸುತ್ತಾ ಹಾದಿಗಳಲ್ಲಿ ಸುತ್ತುತ್ತಿರುತ್ತಾರೆ. ಹಾಗೆ ಅವರು ಅಲ್ಲಾಹನನ್ನು ಸ್ಮರಿಸುವ ಜನರನ್ನು ಕಂಡರೆ ನಿಮ್ಮ ಉದ್ದೇಶದೆಡೆಗೆ ಬನ್ನಿರಿ ಎಂದು ಇತರ ಮಲಕ್‌ಗಳನ್ನು ಕರೆಯುತ್ತಾರೆ. ನಂತರ ಅವರು ಅತಿ ಕೆಳಗಿನ ಆಕಾಶದವರೆಗೆ ದಿಕ್ರ್ ಹೇಳುವವರನ್ನು ಆವರಿಸುವರು. ಆಗ ಈ ಎಲ್ಲಾ ವಿಷಯಗಳು ಗೊತ್ತಿದ್ದೂ[42] ಅಲ್ಲಾಹು ಅವರೊಂದಿಗೆ ಕೇಳುವನು: ನನ್ನ ದಾಸರು ಏನೆನ್ನುತ್ತಿದ್ದಾರೆ? ಮಲಕ್‌ಗಳು ಹೇಳುವರು: ಅವರು ನಿನ್ನ ತಸ್ಬೀಹ್, ತಕ್ಬೀರ್, ತಹ್ಮೀದ್ ಮತ್ತು ತಮ್ಜೀದ್‌ಗಳನ್ನು ಹೇಳುತ್ತಿದ್ದಾರೆ. ಅಲ್ಲಾಹು ಕೇಳುವನು: ಅವರು ನನ್ನನ್ನು ಕಂಡಿದ್ದಾರೆಯೇ? ಅವರು ಹೇಳುವರು: ಇಲ್ಲ, ಅಲ್ಲಾಹನಾಣೆ! ಅವರು ನಿನ್ನನ್ನು ಕಂಡಿಲ್ಲ. ಅಲ್ಲಾಹು ಕೇಳುವನು: ಅವರು ನನ್ನನ್ನು ಕಂಡರೆ ಅವರ ಸ್ಥಿತಿ ಹೇಗಿರಬಹುದು? ಅವರು ಹೇಳುವರು: ಅವರು ನಿನ್ನನ್ನು ಕಂಡರೆ ಅತಿಹೆಚ್ಚಾಗಿ ನಿನಗೆ ಇಬಾದತ್ ಮಾಡುವರು, ಅತಿಹೆಚ್ಚಾಗಿ ನಿನಗೆ ತಮ್ಜೀದ್ ಮತ್ತು ತಹ್ಮೀದ್ ಹೇಳುವರು ಮತ್ತು ಅತಿಹೆಚ್ಚು ನಿನಗೆ ತಸ್ಬೀಹ್ ಹೇಳುವರು. ಅಲ್ಲಾಹು ಕೇಳುವನು: ಅವರು ನನ್ನೊಂದಿಗೆ ಏನನ್ನು ಬೇಡುತ್ತಿದ್ದಾರೆ? ಅವರು ಹೇಳುವರು: ಅವರು ನಿನ್ನೊಂದಿಗೆ ಸ್ವರ್ಗವನ್ನು ಬೇಡುತ್ತಿದ್ದಾರೆ. ಅಲ್ಲಾಹು ಕೇಳುವನು: ಅವರು ಅದನ್ನು ನೋಡಿದ್ದಾರೆಯೇ? ಅವರು ಹೇಳುವರು: ಇಲ್ಲ, ಅಲ್ಲಾಹನಾಣೆ! ಓ ಪ್ರಭೂ! ಅವರು ಅದನ್ನು ನೋಡಿಲ್ಲ. ಅಲ್ಲಾಹು ಕೇಳುವನು: ಅವರೇನಾದರೂ ಅದನ್ನು ನೋಡಿದರೆ ಅವರ ಸ್ಥಿತಿ ಹೇಗಿರಬಹುದು? ಅವರು ಹೇಳುವರು: ಅವರೇನಾದರೂ ಅದನ್ನು ನೋಡಿದರೆ ಅವರು ಅತಿಹೆಚ್ಚಾಗಿ ಅದಕ್ಕಾಗಿ ಹಂಬಲಿಸುವರು, ಅತಿಹೆಚ್ಚಾಗಿ ಅದಕ್ಕಾಗಿ ಬೇಡುವರು ಮತ್ತು ಅತಿಹೆಚ್ಚಾಗಿ ಅದಕ್ಕಾಗಿ ಹಾತೊರೆಯುವರು. ಅಲ್ಲಾಹು ಕೇಳುವನು: ಅವರು ಯಾವುದರಿಂದ ಅಭಯ ಯಾಚಿಸುತ್ತಿದ್ದಾರೆ? ಅವರು ಹೇಳುವರು: ನರಕದಿಂದ. ಅಲ್ಲಾಹು ಕೇಳುವನು: ಅವರು ಅದನ್ನು ನೋಡಿದ್ದಾರೆಯೇ? ಅವರು ಹೇಳುವರು: ಇಲ್ಲ, ಅಲ್ಲಾಹನಾಣೆ! ಓ ಪ್ರಭೂ! ಅವರು ಅದನ್ನು ನೋಡಿಲ್ಲ. ಅಲ್ಲಾಹು ಕೇಳುವನು:**

---

**42** ಅರ್ಥಾತ್ ಈ ಕೆಳಗೆ ನಡೆಯುವ ಸಂಭಾಷಣೆಯ ಪೂರ್ಣ ವಿವರ ಗೊತ್ತಿದ್ದೂ ಕೂಡ ಅಲ್ಲಾಹು ಅವರೊಂದಿಗೆ ಕೇಳುತ್ತಾನೆ.

ಅವರೇನಾದರೂ ಅದನ್ನು ನೋಡಿದರೆ ಅವರ ಸ್ಥಿತಿ ಹೇಗಿರಬಹುದು? ಅವರು ಹೇಳುವರು: ಅವರೇನಾದರೂ ಅದನ್ನು ನೋಡಿದರೆ ಅತಿಬಿರುಸಿನಿಂದ ಅದರಿಂದ ದೂರ ಓಡುವರು ಮತ್ತು ಅತಿಕಠಿಣವಾಗಿ ಅದನ್ನು ಭಯಪಡುವರು. ಅಲ್ಲಾಹು ಹೇಳುವನು: ನಾನು ಅವರಿಗೆ ಕ್ಷಮಿಸಿದ್ದೇನೆಂಬುದಕ್ಕೆ ನಿಮ್ಮನ್ನು ಸಾಕ್ಷಿಯಾಗಿಸುತ್ತಿದ್ದೇನೆ. ಆಗ ಅವರಲ್ಲೋರ್ವ ಮಲಕ್ ಹೇಳುವನು: ಅವರಲ್ಲಿರುವ ಓರ್ವ ವ್ಯಕ್ತಿ ಅವರಲ್ಲಿ ಸೇರಿದವನಲ್ಲ. ಅವನು ಯಾವುದೋ ಅಗತ್ಯದಿಂದ ಅಲ್ಲಿಗೆ ಬಂದಿದ್ದಾನೆ. ಅಲ್ಲಾಹು ಹೇಳುವನು: ಅವರು (ದಿಕ್ರ್ ಹೇಳುವುದಕ್ಕಾಗಿ) ಕುಳಿತವರಾಗಿದ್ದಾರೆ. ಅವರಿಂದಾಗಿ[43] ಅಲ್ಲಿ ಕುಳಿತವನು ವಂಚಿತನಾಗಲಾರನು."[44]

عَنْ عَبْدِ اللَّهِ بْنِ بُسْرٍ رَضِيَ اللَّهُ عَنْهُ أَنَّ رَجُلًا قَالَ: يَا رَسُولَ اللَّهِ إِنَّ شَرَائِعَ الْإِسْلَامِ قَدْ كَثُرَتْ عَلَيَّ فَأَخْبِرْنِي بِشَيْءٍ أَتَشَبَّثُ بِهِ قَالَ: «لَا يَزَالُ لِسَانُكَ رَطْبًا مِنْ ذِكْرِ اللَّهِ»

**"ಅಬ್ದುಲ್ಲಾಹ್ ಇಬ್ನ್ ಬುಸ್ರ್(ರ)ರಿಂದ: ಓರ್ವ ವ್ಯಕ್ತಿ ಹೇಳಿದನು: 'ಓ ಅಲ್ಲಾಹನ ಸಂದೇಶವಾಹಕರೇ! ಇಸ್ಲಾಮಿನ ಶರೀಅತ್‌ಗಳು[45] ನನ್ನ ಮೇಲೆ ಅಧಿಕಗೊಂಡಿವೆ. ಆದ್ದರಿಂದ ನಾನು ಬಲವಾಗಿ ಹಿಡಿಯುವಂತಹ ಒಂದು ಕಾರ್ಯವನ್ನು ನನಗೆ ತಿಳಿಸಿಕೊಡಿ'[46]. ಪ್ರವಾದಿ(ﷺ)ರವರು ಹೇಳಿದರು: 'ನಿನ್ನ ನಾಲಗೆಯು ಅಲ್ಲಾಹನ ದಿಕ್ರ್‌ನಿಂದಾಗಿ ಸದಾ ಒದ್ದೆಯಾಗಿರಲಿ'."[47]**

عَنْ أَبِي سَعِيدٍ الْخُدْرِيِّ رَضِيَ اللَّهُ عَنْهُ قَالَ: خَرَجَ مُعَاوِيَةُ عَلَى حَلْقَةٍ فِي الْمَسْجِدِ فَقَالَ: مَا أَجْلَسَكُمْ؟ قَالُوا: جَلَسْنَا نَذْكُرُ اللَّهَ قَالَ: آللَّهِ مَا أَجْلَسَكُمْ إِلَّا ذَاكَ؟ قَالُوا: وَاللَّهِ مَا أَجْلَسَنَا إِلَّا ذَاكَ قَالَ: أَمَا إِنِّي لَمْ أَسْتَحْلِفْكُمْ تُهْمَةً لَكُمْ، وَمَا كَانَ أَحَدٌ بِمَنْزِلَتِي مِنْ رَسُولِ اللَّهِ صَلَّى اللَّهُ عَلَيْهِ وَسَلَّمَ أَقَلَّ عَنْهُ

---

**43** ಹಾಫಿದ್ ಇಬ್ನ್ ಹಜರ್ ಹೇಳಿದ್ದಾರೆ: **'**ಅವರೊಂದಿಗೆ ಕೂರುವವನು, ಅವನು ದಿಕ್ರ್‌ನೊಂದಿಗೆ ಪಾಲ್ಗೊಳ್ಳದಿದ್ದರೂ, ಅವರಿಗೆ ಲಭಿಸುವ ಎಲ್ಲಾ ಶ್ರೇಷ್ಠತೆಗಳಿಗೂ, ಮಾನ್ಯತೆಗಳಿಗೂ ಅವನು ಅರ್ಹನಾಗುವನು**'** (ನೋಡಿ: ಫತ್‌ಹುಲ್ ಬಾರಿ 11/213)

**44** ಇದನ್ನು ಬುಖಾರಿ (5/2353; ಹದೀಸ್ ನಂ. 6045), ಮುಸ್ಲಿಮ್ (4/2069; ಹದೀಸ್ ನಂ. 2689) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**45** ಅಲಿಯ್ಯುಲ್ ಕಾರಿ ಹೇಳಿದ್ದಾರೆ: **'**ಇಲ್ಲಿ ಇಸ್ಲಾಮಿನ ಶರೀಅತ್ ಎಂಬುದರ ಉದ್ದೇಶವು ಐಚ್ಛಿಕ ಕರ್ಮಗಳಾಗಿವೆ**'** (ನೋಡಿ: ತುಹ್ಫತುಲ್ ಅಹ್ವದೀ 9/222)

**46** ತೀಬೀ ಹೇಳಿದ್ದಾರೆ: **'**ಅರ್ಥಾತ್ ಅತಿಹೆಚ್ಚು ಪುಣ್ಯವಿರುವ ಸುಲಭವಾದ ಕಾರ್ಯವನ್ನು ತಿಳಿಸಿಕೊಡಿ**'** (ನೋಡಿ: ತುಹ್ಫತುಲ್ ಅಹ್ವದೀ 9/222)

**47** ಇದನ್ನು ತಿರ್ಮಿದಿ (5/458; ಹದೀಸ್ ನಂ. 3375), ಇಬ್ನ್ ಮಾಜ (2/1246; ಹದೀಸ್ ನಂ. 3793) ವರದಿ ಮಾಡಿದ್ದಾರೆ.

حَدِيثًا مِنِّي، وَإِنَّ رَسُولَ اللَّهِ صَلَّى اللَّهُ عَلَيْهِ وَسَلَّمَ خَرَجَ عَلَى حَلْقَةٍ مِنْ أَصْحَابِهِ فَقَالَ «مَا أَجْلَسَكُمْ؟» قَالُوا: جَلَسْنَا نَذْكُرُ اللَّهَ وَنَحْمَدُهُ عَلَى مَا هَدَانَا لِلْإِسْلَامِ وَمَنَّ بِهِ عَلَيْنَا قَالَ: «آللَّهِ مَا أَجْلَسَكُمْ إِلَّا ذَاكَ؟» قَالُوا: وَاللَّهِ مَا أَجْلَسَنَا إِلَّا ذَاكَ قَالَ: «أَمَا إِنِّي لَمْ أَسْتَحْلِفْكُمْ تُهْمَةً لَكُمْ وَلَكِنَّهُ أَتَانِي جِبْرِيلُ فَأَخْبَرَنِي أَنَّ اللَّهَ عَزَّ وَجَلَّ يُبَاهِي بِكُمُ الْمَلَائِكَةَ»

**"ಅಬೂ ಸಈದ್ ಅಲ್‌ಖುದ್ರೀ(رضي الله عنه)ರಿಂದ: ಒಮ್ಮೆ ಮಸೀದಿಯಲ್ಲಿ ಮುಆವಿಯರವರು ಜನರು ವೃತ್ತಾಕಾರದಲ್ಲಿ ಕುಳಿತಿರುವಲ್ಲಿಗೆ ಹೋದರು. ಅವರು ಕೇಳಿದರು: 'ನಿಮ್ಮನ್ನು ಇಲ್ಲಿ ಕೂರಿಸಿದ್ದಾದರೂ ಏನು?' ಅವರು ಹೇಳಿದರು: 'ನಾವು ಅಲ್ಲಾಹನನ್ನು ಸ್ಮರಿಸುವುದಕ್ಕಾಗಿ ಕುಳಿತಿದ್ದೇವೆ.' ಅವರು ಕೇಳಿದರು: 'ಅಲ್ಲಾಹನಾಣೆ! ನಿಮ್ಮನ್ನು ಅದಲ್ಲದೆ ಕೂರಿಸಿಲ್ಲವೇ?' ಅವರು ಹೇಳಿದರು: 'ಅಲ್ಲಾಹನಾಣೆ! ನಮ್ಮನ್ನು ಅದಲ್ಲದೆ ಕೂರಿಸಿಲ್ಲ.' ಮುಆವಿಯಾ ಹೇಳಿದರು: 'ನಾನು ನಿಮ್ಮ ಸತ್ಯಸಂಧತೆಯಲ್ಲಿ ಹುಳುಕನ್ನು ಅರಸುತ್ತಿಲ್ಲ. ಪ್ರವಾದಿ(ﷺ)ರವರ ಬಳಿ ನನ್ನಷ್ಟು ದರ್ಜೆಯಿರುವ ಯಾರೂ ನನಗಿಂತ ಕಮ್ಮಿ ಹದೀಸ್ ವರದಿ ಮಾಡಿಲ್ಲ[48]. ಪ್ರವಾದಿ(ﷺ)ರವರು ತಮ್ಮ ಸಹಾಬಿಗಳು ವೃತ್ತಾಕಾರದಲ್ಲಿ ಕುಳಿತಿರುವತ್ತ ಹೊರಟು ಅವರೊಂದಿಗೆ ಕೇಳಿದರು: 'ನಿಮ್ಮನ್ನು ಇಲ್ಲಿ ಕೂರಿಸಿದ್ದಾದರೂ ಏನು?' ಅವರು ಹೇಳಿದರು: 'ನಾವು ಅಲ್ಲಾಹನನ್ನು ಸ್ಮರಿಸುವುದಕ್ಕಾಗಿ, ಅವನು ನಮ್ಮನ್ನು ಇಸ್ಲಾಮಿನೆಡೆಗೆ ಮುನ್ನಡೆಸಿದ್ದಕ್ಕಾಗಿ ಮತ್ತು ಅದನ್ನು ನಮಗೆ ಅನುಗ್ರಹಿಸಿದ್ದಕ್ಕಾಗಿ ಅವನನ್ನು ಸ್ತುತಿಸಲು ನಾವು ಕುಳಿತಿದ್ದೇವೆ.' ಅವರು ಕೇಳಿದರು: 'ಅಲ್ಲಾಹನಾಣೆ! ನಿಮ್ಮನ್ನು ಅದಲ್ಲದೆ ಕೂರಿಸಿಲ್ಲವೇ?' ಅವರು ಹೇಳಿದರು: 'ಅಲ್ಲಾಹನಾಣೆ! ನಮ್ಮನ್ನು ಅದಲ್ಲದೆ ಕೂರಿಸಿಲ್ಲ.' ಪ್ರವಾದಿ(ﷺ)ರವರು ಹೇಳಿದರು: 'ನಾನು ನಿಮ್ಮ ಸತ್ಯಸಂಧತೆಯಲ್ಲಿ ಹುಳುಕನ್ನು ಅರಸುತ್ತಿಲ್ಲ. ಆದರೆ ಜಿಬ್ರೀಲ್ ನನ್ನ ಬಳಿ ಬಂದು ಅಲ್ಲಾಹು ತನ್ನ ಮಲಕ್‌ಗಳೊಂದಿಗೆ ನಿಮ್ಮನ್ನು ಪ್ರಶಂಸಿಸುತ್ತಿದ್ದಾನೆಂದು ತಿಳಿಸಿದ್ದಾರೆ'."[49]**

عَنْ أَبِى هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ

---

**48** ಮುಆವಿಯಃರವರು ಅಬೂ ಸುಫ್ಯಾನ್‌ರವರ ಪುತ್ರರಾಗಿದ್ದಾರೆ. ಪ್ರವಾದಿ ಪತ್ನಿಯಾದ ಉಮ್ಮು ಹಬೀಬಃ ಇವರ ಸಹೋದರಿಯಾಗಿದ್ದಾರೆ. ಆದ್ದರಿಂದ ಇವರಿಗೆ ಪ್ರವಾದಿ(ﷺ)ರವರೊಂದಿಗೆ ಹತ್ತಿರದ ಸಂಬಂಧವಿದೆ. ಮಾತ್ರವಲ್ಲದೆ ಅವರು ವಹ್ಯ್‌ನ್ನು ಬರೆದಿಡುವವರಲ್ಲಿ ಒಬ್ಬರಾಗಿದ್ದರು. ಈ ರೀತಿ ಪ್ರವಾದಿ (ﷺ)ರವರೊಂದಿಗೆ ಹತ್ತಿರದ ಸಂಬಂಧವಿರುವ ಯಾರೂ ಕೂಡ ಇವರಿಗಿಂತಲೂ ಕಮ್ಮಿ ಹದೀಸನ್ನು ವರದಿ ಮಾಡಿಲ್ಲವೆಂದು ಅವರಿಲ್ಲಿ ಹೇಳುತ್ತಿದ್ದಾರೆ. ಇದು ಹದೀಸ್‌ಗಳ ಕುರಿತು ಅವರು ಸೂಕ್ಷ್ಮತೆಯನ್ನು ಪಾಲಿಸಿದ್ದರಿಂದಾಗಿತ್ತು. ಇಲ್ಲದಿದ್ದರೆ ಅವರಂತಹ ಸ್ಥಾನದಲ್ಲಿರುವವರು ಅತಿಹೆಚ್ಚು ಹದೀಸ್‌ಗಳನ್ನು ವರದಿ ಮಾಡುವವರಾಗಿರುತ್ತಿದ್ದರು.

**49** ಇದನ್ನು ಮುಸ್ಲಿಮ್ (4/2075; ಹದೀಸ್ ನಂ. 2701), ತಿರ್ಮಿದಿ (5/460; ಹದೀಸ್ ನಂ. 3379) ವರದಿ ಮಾಡಿದ್ದಾರೆ.

وَسَلَّمَ «يَقُولُ اللَّهُ عَزَّ وَجَلَّ: أَنَا عِنْدَ ظَنِّ عَبْدِي بِي، وَأَنَا مَعَهُ حِينَ يَذْكُرُنِي، إِنْ ذَكَرَنِي فِي نَفْسِهِ، ذَكَرْتُهُ فِي نَفْسِي، وَإِنْ ذَكَرَنِي فِي مَلَإٍ، ذَكَرْتُهُ فِي مَلَإٍ هُمْ خَيْرٌ مِنْهُمْ، وَإِنْ تَقَرَّبَ مِنِّي شِبْرًا، تَقَرَّبْتُ إِلَيْهِ ذِرَاعًا، وَإِنْ تَقَرَّبَ إِلَيَّ ذِرَاعًا، تَقَرَّبْتُ مِنْهُ بَاعًا، وَإِنْ أَتَانِي يَمْشِي، أَتَيْتُهُ هَرْوَلَةً»

"ಅಬೂ ಹುರೈರಾ(ರ)ರಿಂದ: ಪ್ರವಾದಿ(ﷺ)ರವರು ಹೇಳಿದರು: ಅಲ್ಲಾಹು ಹೇಳುತ್ತಾನೆ: 'ನನ್ನ ದಾಸನು ನನ್ನ ಕುರಿತು ಏನು ಭಾವಿಸುತ್ತಾನೋ ನಾನು ಅದರ ಸಮೀಪವಿರುತ್ತೇನೆ. ಅವನು ನನ್ನನ್ನು ಸ್ಮರಿಸುವಾಗಲೆಲ್ಲಾ ನಾನು ಅವನೊಂದಿಗಿರುತ್ತೇನೆ. ಅವನು ನನ್ನನ್ನು ತನ್ನ ಮನಸ್ಸಿನಲ್ಲಿ ಸ್ಮರಿಸಿದರೆ ನಾನು ಅವನನ್ನು ನನ್ನ ಮನಸ್ಸಿನಲ್ಲಿ ಸ್ಮರಿಸುತ್ತೇನೆ. ಅವನು ನನ್ನನ್ನು ಸಭೆಯಲ್ಲಿ ಸ್ಮರಿಸಿದರೆ ನಾನು ಅವನನ್ನು ಆ ಸಭೆಯಲ್ಲಿರುವವರಿಗಿಂತಲೂ ಮಿಗಿಲಾದವರು ಇರುವ ಸಭೆಯಲ್ಲಿ ಸ್ಮರಿಸುತ್ತೇನೆ. ಅವನು ಒಂದು ಗೇಣಿನಷ್ಟು ನನಗೆ ಹತ್ತಿರನಾದರೆ ನಾನು ಒಂದು ಮೊಳದಷ್ಟು ಅವನಿಗೆ ಹತ್ತಿರನಾಗುತ್ತೇನೆ. ಅವನು ಒಂದು ಮೊಳದಷ್ಟು ನನಗೆ ಹತ್ತಿರನಾದರೆ ನಾನು ಒಂದು ಮಾರಿನಷ್ಟು ಅವನಿಗೆ ಹತ್ತಿರನಾಗುತ್ತೇನೆ. ಅವನು ನನ್ನೆಡೆಗೆ ನಡೆಯುತ್ತಾ ಬಂದರೆ ನಾನು ಅವನೆಡೆಗೆ ಓಡೋಡಿ ಧಾವಿಸುತ್ತೇನೆ'."[50]

عَنْ أَبِي الدَّرْدَاءِ رَضِيَ اللَّهُ عَنْهُ قَالَ: قَالَ النَّبِيُّ صَلَّى اللَّهُ عَلَيْهِ وَسَلَّمَ: «أَلَا أُنَبِّئُكُمْ بِخَيْرِ أَعْمَالِكُمْ، وَأَزْكَاهَا عِنْدَ مَلِيكِكُمْ، وَأَرْفَعِهَا فِي دَرَجَاتِكُمْ وَخَيْرٌ لَكُمْ مِنْ إِنْفَاقِ الذَّهَبِ وَالْوَرَقِ، وَخَيْرٌ لَكُمْ مِنْ أَنْ تَلْقَوْا عَدُوَّكُمْ فَتَضْرِبُوا أَعْنَاقَهُمْ وَيَضْرِبُوا أَعْنَاقَكُمْ؟» قَالُوا: بَلَى، قَالَ: «ذِكْرُ اللَّهِ تَعَالَى» قَالَ مُعَاذُ بْنُ جَبَلٍ: مَا شَيْءٌ أَنْجَى مِنْ عَذَابِ اللَّهِ مِنْ ذِكْرِ اللَّهِ

"ಅಬು ದ್ದರ್ದಾಅ್‌ರಿಂದ: ಪ್ರವಾದಿ(ﷺ)ರವರು ಹೇಳಿದರು: 'ನಿಮ್ಮ ಕರ್ಮಗಳಲ್ಲಿ ಉತ್ತಮವಾದುದು, ನಿಮ್ಮ ಪ್ರಭುವಿನ ಬಳಿ ಶುಭ್ರವಾದುದು, ನಿಮ್ಮ ದರ್ಜೆಗಳಲ್ಲಿ ಉನ್ನತವಾದುದು, ಚಿನ್ನ ಮತ್ತು ಬೆಳ್ಳಿಯನ್ನು ವ್ಯಯಿಸುವುದಕ್ಕಿಂತಲೂ ಉತ್ತಮವಾದುದು, ನೀವು ನಿಮ್ಮ ಶತ್ರುಗಳನ್ನು ಎದುರುಗೊಂಡಾಗ ನೀವು ಅವರನ್ನು ಸಂಹರಿಸುವುದಕ್ಕಿಂತಲೂ ಮತ್ತು ಅವರು ನಿಮ್ಮನ್ನು ಸಂಹರಿಸುವುದಕ್ಕಿಂತಲೂ ಉತ್ತಮವಾದುದು ಯಾವುದೆಂದು ನಾನು ನಿಮಗೆ ತಿಳಿಸಿಕೊಡಲೇ?' ಸಹಾಬಿಗಳು ಹೇಳಿದರು: 'ತಿಳಿಸಿಕೊಡಿ'. ಪ್ರವಾದಿ(ﷺ) ರವರು ಹೇಳಿದರು: 'ಅದು ಅಲ್ಲಾಹನ ಸ್ಮರಣೆಯಾಗಿದೆ.' ಮುಆದ್ ಇಬ್ನ್ ಜಬಲ್ ಹೇಳಿದರು: 'ಅಲ್ಲಾಹನ ಸ್ಮರಣೆಗಿಂತಲೂ ಅಲ್ಲಾಹನ ಶಿಕ್ಷೆಯಿಂದ ರಕ್ಷಿಸುವ ಬೇರೊಂದು

---

**50** ಇದನ್ನು ಬುಖಾರಿ (6/2694; ಹದೀಸ್ ನಂ. 6970), ಮುಸ್ಲಿಮ್ (4/2061; ಹದೀಸ್ ನಂ. 2675) ವರದಿ ಮಾಡಿದ್ದಾರೆ.

ವಸ್ತುವಿಲ್ಲ’.”[51]

عَنْ أَبِي هُرَيْرَةَ رَضِيَ اللَّهُ عَنْهُ عَنْ رَسُولِ اللَّهِ صَلَّى اللَّهُ عَلَيْهِ وَسَلَّمَ أَنَّهُ قَالَ: «مَنْ قَعَدَ مَقْعَدًا لَمْ يَذْكُرِ اللَّهَ فِيهِ كَانَتْ عَلَيْهِ مِنَ اللَّهِ تِرَةٌ وَمَنِ اضْطَجَعَ مَضْجَعًا لَا يَذْكُرُ اللَّهَ فِيهِ كَانَتْ عَلَيْهِ مِنَ اللَّهِ تِرَةٌ»

**“ಅಬೂ ಹುರೈರಾರಿಂದ: ಪ್ರವಾದಿ(ﷺ)ರವರು ಹೇಳಿದರು: ‘ಯಾರಾದರೂ ಕುಳಿತುಕೊಳ್ಳುವಾಗ ಅದರಲ್ಲಿ ಅಲ್ಲಾಹನನ್ನು ಸ್ಮರಿಸದಿದ್ದರೆ ಅವನ ಮೇಲೆ ಅಲ್ಲಾಹನಿಂದ ಒಂದು ನಷ್ಟವುಂಟಾಗುವುದು. ಯಾರಾದರೂ ಮಲಗುವಾಗ ಅದರಲ್ಲಿ ಅಲ್ಲಾಹನನ್ನು ಸ್ಮರಿಸದಿದ್ದರೆ ಅವನ ಮೇಲೆ ಅಲ್ಲಾಹನಿಂದ ಒಂದು ನಷ್ಟವುಂಟಾಗುವುದು’.”**[52]

عَنْ أَبِي هُرَيْرَةَ رَضِيَ اللَّهُ عَنْهُ عَنِ النَّبِيِّ صَلَّى اللَّهُ عَلَيْهِ وَسَلَّمَ أَنَّهُ قَالَ: «مَا جَلَسَ قَوْمٌ مَجْلِسًا لَمْ يَذْكُرُوا اللَّهَ فِيهِ وَلَمْ يُصَلُّوا عَلَى نَبِيِّهِمْ إِلَّا كَانَ عَلَيْهِمْ تِرَةً فَإِنْ شَاءَ عَذَّبَهُمْ وَإِنْ شَاءَ غَفَرَ لَهُمْ»

**“ಅಬೂ ಹುರೈರಾರಿಂದ: ಪ್ರವಾದಿ(ﷺ)ರವರು ಹೇಳಿದರು: ‘ಒಂದು ಸಮೂಹವು ಅಲ್ಲಾಹನನ್ನು ಸ್ಮರಿಸದೆ, ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳದೆ ಒಂದು ಸಭೆಯಲ್ಲಿ ಕುಳಿತುಕೊಳ್ಳಲಾರರು, ಅವರ ಮೇಲೆ ಒಂದು ನಷ್ಟವು ಉಂಟಾಗದ ಹೊರತು. ಆಗ ಅವನು (ಅಲ್ಲಾಹು) ಇಚ್ಛಿಸಿದರೆ ಅವರನ್ನು ಶಿಕ್ಷಿಸುವನು ಮತ್ತು ಅವನು ಇಚ್ಛಿಸಿದರೆ ಅವರನ್ನು ಕ್ಷಮಿಸುವನು’.”**[53]

عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «مَا مِنْ قَوْمٍ يَقُومُونَ مِنْ مَجْلِسٍ لَا يَذْكُرُونَ اللَّهَ فِيهِ إِلَّا قَامُوا عَنْ مِثْلِ جِيفَةِ حِمَارٍ وَكَانَ لَهُمْ حَسْرَةً»

**“ಅಬೂ ಹುರೈರಾರಿಂದ: ಪ್ರವಾದಿ(ﷺ)ರವರು ಹೇಳಿದರು: ‘ಒಂದು ಸಮೂಹವು ಅಲ್ಲಾಹನನ್ನು ಸ್ಮರಿಸದೆ ಒಂದು ಸಭೆಯಿಂದ ಎದ್ದೇಳಲಾರದು, ಕತ್ತೆಯ ಶವದಂತಿರುವುದರಿಂದ ಎದ್ದೇಳುವವರಾಗಿ ಹೊರತು. ಮತ್ತು ಅದು ಅವರಿಗೆ ದುಃಖದಾಯಕವಾಗಿರುವುದು’.”**[54]

**51** ಇದನ್ನು ತಿರ್ಮಿದಿ (5/459; ಹದೀಸ್ ನಂ. 3377), ಇಬ್ನ್ ಮಾಜ (2/1245; ಹದೀಸ್ ನಂ. 3790) ವರದಿ ಮಾಡಿದ್ದಾರೆ.

**52** ಇದನ್ನು ಅಬೂ ದಾವೂದ್ (2/680; ಹದೀಸ್ ನಂ. 4856) ವರದಿ ಮಾಡಿದ್ದಾರೆ.

**53** ಇದನ್ನು ತಿರ್ಮಿದಿ (5/461; ಹದೀಸ್ ನಂ. 3380) ವರದಿ ಮಾಡಿದ್ದಾರೆ.

**54** ಇದನ್ನು ಅಬೂ ದಾವೂದ್ (2/680; ಹದೀಸ್ ನಂ. 4855) ವರದಿ ಮಾಡಿದ್ದಾರೆ.

## 2. ಪ್ರಾರ್ಥನೆ (ದುಆ)ಯ ಶ್ರೇಷ್ಠತೆಗಳು

ಅಲ್ಲಾಹು ಹೇಳಿದ್ದಾನೆ:

﴿ وَقَالَ رَبُّكُمُ ٱدۡعُونِيٓ أَسۡتَجِبۡ لَكُمۡۚ إِنَّ ٱلَّذِينَ يَسۡتَكۡبِرُونَ عَنۡ عِبَادَتِي سَيَدۡخُلُونَ جَهَنَّمَ دَاخِرِينَ ٦٠ ﴾

**“ನಿಮ್ಮ ಪ್ರಭುವು ಹೇಳಿದ್ದಾನೆ: ನನ್ನೊಂದಿಗೆ ಪ್ರಾರ್ಥಿಸಿರಿ, ನಾನು ನಿಮಗೆ ಉತ್ತರವನ್ನು ನೀಡುತ್ತೇನೆ. ನನ್ನ ಇಬಾದತ್[55] ಮಾಡುವುದರಿಂದ ಅಹಂಭಾವ ತೋರುವವರು ಯಾರೋ ಅವರು ನಿಂದ್ಯರಾಗಿ ನರಕವನ್ನು ಪ್ರವೇಶಿಸುವರು.”[56]**

﴿ وَإِذَا سَأَلَكَ عِبَادِي عَنِّي فَإِنِّي قَرِيبٌۖ أُجِيبُ دَعۡوَةَ ٱلدَّاعِ إِذَا دَعَانِۖ فَلۡيَسۡتَجِيبُواْ لِي وَلۡيُؤۡمِنُواْ بِي لَعَلَّهُمۡ يَرۡشُدُونَ ١٨٦ ﴾

**“ನನ್ನ ದಾಸರು ನನ್ನ ಬಗ್ಗೆ ನಿನ್ನೊಂದಿಗೆ ಕೇಳಿದರೆ, ನಾನು ಅತ್ಯಂತ ಹತ್ತಿರದಲ್ಲಿದ್ದೇನೆ (ಎಂದು ಹೇಳು). ಪ್ರಾರ್ಥಿಸುವವನು ನನ್ನೊಂದಿಗೆ ಪ್ರಾರ್ಥಿಸಿದರೆ ಅವನ ಪ್ರಾರ್ಥನೆಗೆ ನಾನು ಉತ್ತರವನ್ನು ನೀಡುವೆನು. ಆದ್ದರಿಂದ ಅವರು ನನಗೆ ಓಗೊಡಲಿ ಮತ್ತು ನನ್ನ ಮೇಲೆ ವಿಶ್ವಾಸವಿರಿಸಲಿ. ಅವರು ಮಾರ್ಗದರ್ಶನ ಪಡೆದವರಾಗಲೂ ಬಹುದು.”[57]**

﴿ قُلۡ مَا يَعۡبَؤُاْ بِكُمۡ رَبِّي لَوۡلَا دُعَآؤُكُمۡۖ ﴾

**“ಹೇಳು: ನಿಮ್ಮ ಪ್ರಾರ್ಥನೆಯಿಲ್ಲದಿರುತ್ತಿದ್ದರೆ ನನ್ನ ಪ್ರಭುವು ನಿಮ್ಮನ್ನು ಪರಿಗಣಿಸುತ್ತಲೇ ಇರಲಿಲ್ಲ.”[58]**

عَنِ النُّعْمَانِ بْنِ بَشِيرٍ رَضِيَ اللَّهُ عَنْهُ أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ قَالَ: «الدُّعَاءُ هُوَ الْعِبَادَةُ» ثُمَّ قَرَأَ: ﴿ وَقَالَ رَبُّكُمُ ٱدۡعُونِيٓ أَسۡتَجِبۡ لَكُمۡۚ إِنَّ ٱلَّذِينَ يَسۡتَكۡبِرُونَ عَنۡ عِبَادَتِي سَيَدۡخُلُونَ جَهَنَّمَ دَاخِرِينَ ٦٠ ﴾»

**“ನುಅ್‌ಮಾನ್ ಇಬ್ನ್ ಬಶೀರ್(رضي الله عنه)ರಿಂದ: ಪ್ರವಾದಿ(ﷺ)ರವರು ಹೇಳಿದರು: ‘ಪ್ರಾರ್ಥನೆ, ಅದುವೇ ಆರಾಧನೆ’. ನಂತರ ಓದಿದರು: ‘ನಿಮ್ಮ ಪ್ರಭುವು ಹೇಳಿದ್ದಾನೆ:**

**55** ಪ್ರಾರ್ಥನೆಯು ಇಬಾದತ್ ಆಗಿದೆಯೆಂಬ ಪ್ರವಾದಿ(ﷺ)ರವರ ಹದೀಸನ್ನು ಇದೇ ಅಧ್ಯಾಯದಲ್ಲಿ ನೀಡಲಾಗಿದೆ.

**56** ಕುರ್‌ಆನ್ 40/60

**57** ಕುರ್‌ಆನ್ 2/186

**58** ಕುರ್‌ಆನ್ 25/77; ಇಲ್ಲಿ ‘ದುಆ’ ಎಂಬುದನ್ನು ಇಬ್ನ್ ಅಬ್ಬಾಸ್ ‘ಈಮಾನ್’ (ವಿಶ್ವಾಸ) ಎಂದು ವ್ಯಾಖ್ಯಾನಿಸಿದ್ದಾರೆ (ನೋಡಿ: ಬುಖಾರಿ 1/7)

**ನನ್ನೊಂದಿಗೆ ಪ್ರಾರ್ಥಿಸಿರಿ, ನಾನು ನಿಮಗೆ ಉತ್ತರವನ್ನು ನೀಡುತ್ತೇನೆ. ನನ್ನ ಆರಾಧನೆ ಮಾಡುವುದರಿಂದ ಅಹಂಭಾವ ತೋರುವವರು ಯಾರೋ ಅವರು ನಿಂದ್ಯರಾಗಿ ನರಕವನ್ನು ಪ್ರವೇಶಿಸುವರು'."(59)**

عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «لَيْسَ شَيْءٌ أَكْرَمَ عَلَى اللَّهِ مِنَ الدُّعَاءِ»

**"ಅಬೂ ಹುರೈರಾ(رضي الله عنه)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ಅಲ್ಲಾಹನಿಗೆ ಪ್ರಾರ್ಥನೆಗಿಂತಲೂ ಗೌರವಾರ್ಹವಾದ ವಸ್ತು ಬೇರೊಂದಿಲ್ಲ'."(60)**

عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «مَنْ لَمْ يَدْعُ اللَّهَ غَضِبَ عَلَيْهِ»

**"ಅಬೂ ಹುರೈರಾ(رضي الله عنه)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ಯಾರು ಅಲ್ಲಾಹನೊಂದಿಗೆ ಪ್ರಾರ್ಥಿಸುವುದಿಲ್ಲವೋ ಅವನ ಮೇಲೆ ಅವನು ಕೋಪಿಸಿಕೊಳ್ಳುವನು'."(61)**

## 3. ಪ್ರಾರ್ಥನೆಯ ಶರತ್ತುಗಳು ಮತ್ತು ಶಿಷ್ಟಾಚಾರಗಳು

ಅಲ್ಲಾಹು ಹೇಳಿದ್ದಾನೆ:

﴿ وَأَنَّ ٱلْمَسَـٰجِدَ لِلَّهِ فَلَا تَدْعُوا۟ مَعَ ٱللَّهِ أَحَدًا ١٨ ﴾

**"ಮಸೀದಿಗಳು ಅಲ್ಲಾಹನದ್ದಾಗಿವೆ. ಆದ್ದರಿಂದ ಅಲ್ಲಾಹನೊಂದಿಗೆ ಇತರ ಯಾರನ್ನೂ ಕರೆದು ಪ್ರಾರ್ಥಿಸಬಾರದು."(62)**

﴿ قُلْ إِنَّمَآ أَدْعُوا۟ رَبِّى وَلَآ أُشْرِكُ بِهِۦٓ أَحَدًا ٢٠ ﴾

**"ಹೇಳು: ನಾನು ನನ್ನ ಪ್ರಭುವಿನೊಂದಿಗೆ ಮಾತ್ರ ಪ್ರಾರ್ಥಿಸುವೆನು. ಅವನೊಂದಿಗೆ ಇತರ ಯಾರನ್ನೂ ಸಹಭಾಗಿಗಳಾಗಿ ಮಾಡಲಾರೆನು."(63)**

---

**59** ಇದನ್ನು ಅಬೂದಾವೂದ್ (1/466; ಹದೀಸ್ ನಂ. 1479), ತಿರ್ಮಿದಿ (5/211; ಹದೀಸ್ ನಂ. 2969) ವರದಿ ಮಾಡಿದ್ದಾರೆ

**60** ಇದನ್ನು ತಿರ್ಮಿದಿ (5/455; ಹದೀಸ್ ನಂ. 3370), ಇಬ್ನ್ ಮಾಜ (2/1258; ಹದೀಸ್ ನಂ. 3829) ವರದಿ ಮಾಡಿದ್ದಾರೆ

**61** ಇದನ್ನು ತಿರ್ಮಿದಿ (5/456; ಹದೀಸ್ ನಂ. 3373), ಇಬ್ನ್ ಮಾಜ (2/1258; ಹದೀಸ್ ನಂ. 3827) ವರದಿ ಮಾಡಿದ್ದಾರೆ.

**62** ಕುರ್‌ಆನ್ 72/18

**63** ಕುರ್‌ಆನ್ 72/20

﴿ هُوَ ٱلْحَىُّ لَآ إِلَـٰهَ إِلَّا هُوَ فَٱدْعُوهُ مُخْلِصِينَ لَهُ ٱلدِّينَ ﴾

"ಅವನು ಶಾಶ್ವತವಾಗಿ ಜೀವಿಸಿರುವವನಾಗಿದ್ದಾನೆ. ಅವನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ. ಆದ್ದರಿಂದ ಧರ್ಮವನ್ನು ಅವನಿಗೆ ನಿಷ್ಕಳಂಕಗೊಳಿಸಿ ಅವನೊಂದಿಗೆ ಪ್ರಾರ್ಥಿಸಿರಿ."(64)

﴿ ٱدْعُوا۟ رَبَّكُمْ تَضَرُّعًا وَخُفْيَةً ۚ إِنَّهُۥ لَا يُحِبُّ ٱلْمُعْتَدِينَ ٥٥ ﴾

"ದೈನ್ಯತೆಯೊಂದಿಗೆ ಮೆಲುದನಿಯಲ್ಲಿ ನಿಮ್ಮ ಪ್ರಭುವಿನೊಂದಿಗೆ ಪ್ರಾರ್ಥಿಸಿರಿ. ಹದ್ದು ಮೀರುವವರನ್ನು ಅವನು ಇಷ್ಟಪಡುವುದಿಲ್ಲ."(65)

﴿ وَلَا تُفْسِدُوا۟ فِى ٱلْأَرْضِ بَعْدَ إِصْلَـٰحِهَا وَٱدْعُوهُ خَوْفًا وَطَمَعًا ﴾

"ಭೂಮಿಯಲ್ಲಿ ಅದರ ಸುಧಾರಣೆಯ ನಂತರ ಕ್ಷೋಭೆಯನ್ನು ಉಂಟುಮಾಡದಿರಿ. ಮತ್ತು ಅವನೊಂದಿಗೆ ಭಯದಿಂದಲೂ ಆಕಾಂಕ್ಷೆಯಿಂದಲೂ ಪ್ರಾರ್ಥಿಸಿರಿ."(66)

﴿ إِنَّهُمْ كَانُوا۟ يُسَـٰرِعُونَ فِى ٱلْخَيْرَٰتِ وَيَدْعُونَنَا رَغَبًا وَرَهَبًا ۖ وَكَانُوا۟ لَنَا خَـٰشِعِينَ ٩٠ ﴾

"ಅವರು (ಪ್ರವಾದಿಗಳು) ಉತ್ತಮ ಕಾರ್ಯಗಳಲ್ಲಿ ಧಾವಂತದಿಂದ ಸಾಗುವವರಾಗಿದ್ದರು ಮತ್ತು ಹಂಬಲದಿಂದ ಹಾಗೂ ಭಯದಿಂದ ನಮ್ಮೊಂದಿಗೆ ಪ್ರಾರ್ಥಿಸುವವರಾಗಿದ್ದರು. ಅವರು ನಮ್ಮಲ್ಲಿ ಭಯಭಕ್ತಿಯುಳ್ಳವರಾಗಿದ್ದರು."(67)

عَنْ فَضَالَةَ بْنَ عُبَيْدٍ قَالَ: سَمِعَ النَّبِيُّ صَلَّى اللَّهُ عَلَيْهِ وَسَلَّمَ رَجُلًا يَدْعُو فِي صَلَاتِهِ لَمْ يَحْمَدِ اللَّهَ وَلَمْ يُمَجِّدْهُ وَلَمْ يُصَلِّ عَلَى النَّبِيِّ صَلَّى اللَّهُ عَلَيْهِ وَسَلَّمَ فَقَالَ النَّبِيُّ صَلَّى اللَّهُ عَلَيْهِ وَسَلَّمَ: «عَجِلَ هَذَا» ثُمَّ دَعَاهُ فَقَالَ لَهُ أَوْ لِغَيْرِهِ: «إِذَا صَلَّى أَحَدُكُمْ فَلْيَبْدَأْ بِتَحْمِيدِ اللَّهِ وَالثَّنَاءِ عَلَيْهِ ثُمَّ لْيُصَلِّ عَلَى النَّبِيِّ صَلَّى اللَّهُ عَلَيْهِ وَسَلَّمَ ثُمَّ لْيَدْعُ بَعْدُ بِمَا شَاءَ»

"ಫದಾಲಃ ಇಬ್ನ್ ಉಬೈದ್(رضي الله عنه)ರಿಂದ: ಓರ್ವ ವ್ಯಕ್ತಿ ನಮಾಝ್‌ನಲ್ಲಿ ಪ್ರಾರ್ಥಿಸುತ್ತಿರುವುದನ್ನು ಪ್ರವಾದಿ(ﷺ)ರವರು ಆಲಿಸಿದರು. ಅವನು ಅಲ್ಲಾಹನನ್ನು ಸ್ತುತಿಸಲಿಲ್ಲ ಮತ್ತು

64 ಕುರ್‌ಆನ್ 40/65
65 ಕುರ್‌ಆನ್ 7/55
66 ಕುರ್‌ಆನ್ 7/56
67 ಕುರ್‌ಆನ್ 21/90

ಪ್ರಶಂಸಿಸಲಿಲ್ಲ ಹಾಗೂ ಪ್ರವಾದಿ(ﷺ)ರವರ ಮೇಲೆ ಸಲಾತನ್ನು ಹೇಳಲಿಲ್ಲ. ಆಗ ಪ್ರವಾದಿ (ﷺ)ರವರು ಹೇಳಿದರು: 'ಇವನು ಆತುರಪಟ್ಟಿದ್ದಾನೆ.' ನಂತರ ಆ ವ್ಯಕ್ತಿಯನ್ನು ಕರೆದು ಅವನೊಂದಿಗೆ ಅಥವಾ ಇತರರೊಂದಿಗೆ ಹೇಳಿದರು: 'ನಿಮ್ಮಲ್ಲೊಬ್ಬನು ನಮಾಝ್ ಮಾಡಿದರೆ ಅವನು ಅಲ್ಲಾಹನ ಸ್ತುತಿಯೊಂದಿಗೆ ಮತ್ತು ಅವನ ಪ್ರಶಂಸೆಯೊಂದಿಗೆ ಆರಂಭಿಸಲಿ, ನಂತರ ಅವನು ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳಲಿ, ಅದರ ನಂತರ ಅವನು ತಾನು ಇಚ್ಛಿಸಿದ್ದನ್ನು ಪ್ರಾರ್ಥಿಸಲಿ'."[68]

عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «اُدْعُوا اللَّهَ وَأَنْتُمْ مُوقِنُونَ بِالْإِجَابَةِ، وَاعْلَمُوا أَنَّ اللَّهَ لَا يَسْتَجِيبُ دُعَاءً مِنْ قَلْبٍ غَافِلٍ لَاهٍ»

"ಅಬೂ ಹುರೈರಾ(رضي الله عنه)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ಉತ್ತರವು ಲಭಿಸುತ್ತದೆಯೆಂಬ ದೃಢವಿಶ್ವಾಸದಿಂದ ನೀವು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ತಿಳಿದುಕೊಳ್ಳಿರಿ! ಅಲಕ್ಷ್ಯವಾಗಿರುವ, ಸ್ವೇಚ್ಛೆಯಾಗಿರುವ ಹೃದಯದಿಂದಿರುವ ಪ್ರಾರ್ಥನೆಗೆ ಅಲ್ಲಾಹು ಉತ್ತರವನ್ನೀಯಲಾರನು'."[69]

عَنْ أَبِي هُرَيْرَةَ رَضِيَ اللَّهُ عَنْهُ أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ قَالَ: «لَا يَقُلْ أَحَدُكُمْ اللَّهُمَّ اغْفِرْ لِي إِنْ شِئْتَ ارْحَمْنِي إِنْ شِئْتَ ارْزُقْنِي إِنْ شِئْتَ، وَلِيَعْزِمْ مَسْأَلَتَهُ، إِنَّهُ يَفْعَلُ مَا يَشَاءُ لَا مُكْرِهَ لَهُ»

"ಅಬೂ ಹುರೈರಾ(رضي الله عنه)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ನಿಮ್ಮಲ್ಲೋರ್ವನು (ತನ್ನ ಪ್ರಾರ್ಥನೆಯಲ್ಲಿ) ಓ ಅಲ್ಲಾಹ್! ನೀನು ಇಚ್ಛಿಸಿದರೆ ನನಗೆ ಕ್ಷಮೆ ನೀಡು, ನೀನು ಇಚ್ಛಿಸಿದರೆ ನನಗೆ ಕರುಣೆ ತೋರು, ನೀನು ಇಚ್ಛಿಸಿದರೆ ನನಗೆ ಅನ್ನಾಧಾರಗಳನ್ನು ನೀಡು ಎಂದು ಹೇಳಕೂಡದು. ಅವನು ತನ್ನ ಬೇಡಿಕೆಯ ಬಗ್ಗೆ ದೃಢವಾಗಿರಲಿ. ಅವನು (ಅಲ್ಲಾಹು) ತಾನು ಇಚ್ಛಿಸಿದ್ದನ್ನು ಮಾಡುತ್ತಾನೆ. ಅವನನ್ನು ಬಲಾತ್ಕರಿಸುವವರು ಯಾರೂ ಇಲ್ಲ'. "[70]

عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ

**68** ಇದನ್ನು ತಿರ್ಮಿದಿ (5/517; ಹದೀಸ್ ನಂ. 3477), ಅಬೂ ದಾವೂದ್ (1/467; ಹದೀಸ್ ನಂ. 1481) ವರದಿ ಮಾಡಿದ್ದಾರೆ.

**69** ಇದನ್ನು ತಿರ್ಮಿದಿ (5/517; ಹದೀಸ್ ನಂ. 3479), ಹಾಕಿಮ್ ತನ್ನ 'ಮುಸ್ತದ್ರಕ್'ನಲ್ಲಿ (1/670; ಹದೀಸ್ ನಂ. 1817), ತಬರಾನೀ ತನ್ನ 'ಮುಅ್‌ಜಮುಲ್ ಅವ್ಸತ್'ನಲ್ಲಿ (5/211; ಹದೀಸ್ ನಂ. 5109) ವರದಿ ಮಾಡಿದ್ದಾರೆ.

**70** ಇದನ್ನು ಬುಖಾರಿ (6/2718; ಹದೀಸ್ ನಂ. 7039), ಮುಸ್ಲಿಮ್ (4/2063; ಹದೀಸ್ ನಂ. 2679) ವರದಿ ಮಾಡಿದ್ದಾರೆ.

وَسَلَّمَ: «أَيُّهَا النَّاسُ إِنَّ اللَّهَ طَيِّبٌ لَا يَقْبَلُ إِلَّا طَيِّبًا وَإِنَّ اللَّهَ أَمَرَ الْمُؤْمِنِينَ بِمَا أَمَرَ بِهِ الْمُرْسَلِينَ فَقَالَ : ﴿ يَٰٓأَيُّهَا ٱلرُّسُلُ كُلُواْ مِنَ ٱلطَّيِّبَٰتِ وَٱعْمَلُواْ صَٰلِحًا ۖ إِنِّى بِمَا تَعْمَلُونَ عَلِيمٌ ﴿٥١﴾ ﴾ وَقَالَ : ﴿ يَٰٓأَيُّهَا ٱلَّذِينَ ءَامَنُواْ كُلُواْ مِن طَيِّبَٰتِ مَا رَزَقْنَٰكُمْ ﴾ ثُمَّ ذَكَرَ الرَّجُلَ يُطِيلُ السَّفَرَ أَشْعَثَ أَغْبَرَ يَمُدُّ يَدَيْهِ إِلَى السَّمَاءِ يَا رَبِّ يَا رَبِّ وَمَطْعَمُهُ حَرَامٌ وَمَشْرَبُهُ حَرَامٌ وَمَلْبَسُهُ حَرَامٌ وَغُذِيَ بِالْحَرَامِ فَأَنَّى يُسْتَجَابُ لِذَلِكَ؟»

**"ಅಬೂ ಹುರೈರಾ(ರ)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ಓ ಜನರೇ! ಅಲ್ಲಾಹು ಶುದ್ಧನು ಮತ್ತು ಶುದ್ಧವಾದುದನ್ನು ಮಾತ್ರ ಅವನು ಸ್ವೀಕರಿಸುತ್ತಾನೆ. ಅಲ್ಲಾಹು ಸಂದೇಶವಾಹಕರಿಗೆ ಏನನ್ನು ಆದೇಶಿಸಿದ್ದಾನೋ ಅದನ್ನೇ ವಿಶ್ವಾಸಿಗಳಿಗೂ ಆದೇಶಿಸಿದ್ದಾನೆ. ಅವನು ಹೇಳಿದ್ದಾನೆ: ಓ ಸಂದೇಶವಾಹಕರೇ! ಶುದ್ಧವಾದುದರಿಂದ ತಿನ್ನಿರಿ ಮತ್ತು ಸತ್ಕರ್ಮವನ್ನು ಮಾಡಿರಿ, ನೀವು ಮಾಡುತ್ತಿರುವುದರ ಬಗ್ಗೆ ನಾನು ಅರಿತವನಾಗಿರುವೆನು[71]. ಮತ್ತು ಅವನು ಹೇಳಿದ್ದಾನೆ: ಓ ವಿಶ್ವಾಸವಿಟ್ಟವರೇ! ನಾವು ನಿಮಗೆ ನೀಡಿದ ಅನ್ನಾಧಾರಗಳಿಂದ ಶುದ್ಧವಾದುದನ್ನು ತಿನ್ನಿರಿ'[72]. ನಂತರ ಪ್ರವಾದಿ(ﷺ)ರವರು ದೀರ್ಘ ಯಾತ್ರೆ ಮಾಡಿದ, ಕೆದರಿದ ಕೂದಲಿನ, ಧೂಳಿನಿಂದಾವೃತನಾದ ವ್ಯಕ್ತಿಯೊಬ್ಬನನ್ನು ಪ್ರಸ್ತಾಪಿಸಿದರು. 'ಅವನು ಆಕಾಶದೆಡೆಗೆ ಕೈಗಳೆರಡನ್ನು ಚಾಚಿ, ಓ ನನ್ನ ಪ್ರಭೂ! ಓ ನನ್ನ ಪ್ರಭೂ! ಎನ್ನುತ್ತಿದ್ದಾನೆ. ಅವನ ಆಹಾರವು ಹರಾಮ್ ಆಗಿದೆ, ಅವನ ಪಾನೀಯವು ಹರಾಮ್ ಆಗಿದೆ, ಅವನ ಉಡುಪುಗಳು ಹರಾಮ್ ಆಗಿವೆ, ಅವನು ಹರಾಮ್‌ನಿಂದಲೇ ಬೆಳೆದಿದ್ದಾನೆ. ಅವನ ಪ್ರಾರ್ಥನೆಗೆ ಉತ್ತರ ಲಭಿಸುವುದಾದರೂ ಹೇಗೆ?"[73]**

عَنِ ابْنٍ لِسَعْدٍ أَنَّهُ قَالَ: سَمِعَنِي أَبِي وَأَنَا أَقُولُ: اللَّهُمَّ إِنِّي أَسْأَلُكَ الْجَنَّةَ وَنَعِيمَهَا وَبَهْجَتَهَا وَكَذَا وَكَذَا، وَأَعُوذُ بِكَ مِنَ النَّارِ وَسَلَاسِلِهَا وَأَغْلَالِهَا وَكَذَا وَكَذَا، فَقَالَ: يَا بُنَيَّ إِنِّي سَمِعْتُ رَسُولَ اللَّهِ صَلَّى اللَّهُ عَلَيْهِ وَسَلَّمَ يَقُولُ: «سَيَكُونُ قَوْمٌ يَعْتَدُونَ فِي الدُّعَاءِ» فَإِيَّاكَ أَنْ تَكُونَ مِنْهُمْ إِنَّكَ إِنْ أُعْطِيتَ الْجَنَّةَ أُعْطِيتَهَا وَمَا فِيهَا مِنَ الْخَيْرِ وَإِنْ أُعِذْتَ مِنَ النَّارِ أُعِذْتَ مِنْهَا

---

**71** ಕುರ್‌ಆನ್ 23/51

**72** ಕುರ್‌ಆನ್ 2/172

**73** ಇದನ್ನು ಮುಸ್ಲಿಮ್ (2/703; ಹದೀಸ್ ನಂ. 1015), ತಿರ್ಮಿದಿ (5/220; ಹದೀಸ್ ನಂ. 2989), ಅಹ್ಮದ್ (2/328; ಹದೀಸ್ ನಂ. 8330) ವರದಿ ಮಾಡಿದ್ದಾರೆ.

وَمَا فِيهَا مِنَ الشَّرِّ

**“ಇಬ್ನ್ ಸಅ್‌ದ್(ﷺ)ರಿಂದ: ಓ ಅಲ್ಲಾಹ್! ನಾನು ನಿನ್ನೊಂದಿಗೆ ಸ್ವರ್ಗವನ್ನೂ, ಅದರಲ್ಲಿರುವ ಐಶ್ವರ್ಯವನ್ನೂ, ಸೌಂದರ್ಯವನ್ನೂ ಬೇಡುತ್ತಿದ್ದೇನೆ. ನಾನು ನಿನ್ನೊಂದಿಗೆ ನರಕದಿಂದ, ಅದರಲ್ಲಿರುವ ಸಂಕಲೆಗಳಿಂದ ಮತ್ತು ಕಂಠಹಾರಗಳಿಂದ ಅಭಯ ಯಾಚಿಸುತ್ತಿದ್ದೇನೆ ಎಂದು ನಾನು ಹೇಳುತ್ತಿರುವುದನ್ನು ನನ್ನ ತಂದೆಯವರು ಆಲಿಸಿದರು. ಆಗ ಅವರು ಹೇಳಿದರು: ‘ಓ ಪ್ರಿಯ ಪುತ್ರನೇ! ಪ್ರವಾದಿ(ﷺ)ರವರು ಹೀಗೆ ಹೇಳುತ್ತಿದ್ದುದನ್ನು ನಾನು ಆಲಿಸಿದ್ದೇನೆ: ‘ಪ್ರಾರ್ಥನೆಯಲ್ಲಿ ಹದ್ದುಮೀರುವ ಜನರು ಬರಲಿರುವರು’. ಆದ್ದರಿಂದ ನೀನು ಅಂತಹವರಲ್ಲಿ ಸೇರುವುದರ ಕುರಿತು ಎಚ್ಚರವಹಿಸು. ನಿನಗೇನಾದರೂ ಸ್ವರ್ಗವನ್ನು ನೀಡಲಾದರೆ, ಅದನ್ನು ಮತ್ತು ಅದರಲ್ಲಿರುವ ಒಳಿತುಗಳನ್ನೂ ನೀಡಲಾಗುವುದು. ನಿನ್ನನ್ನೇನಾದರೂ ನರಕದಿಂದ ರಕ್ಷಿಸಲಾದರೆ, ಅದರಿಂದ ಮತ್ತು ಅದರಲ್ಲಿರುವ ಕೆಡುಕುಗಳಿಂದಲೂ ರಕ್ಷಿಸಲಾಗುವುದು’.”**[74]

عَنْ أَبِي هُرَيْرَةَ رَضِيَ اللَّهُ عَنْهُ عَنِ النَّبِيِّ صَلَّى اللَّهُ عَلَيْهِ وَسَلَّمَ أَنَّهُ قَالَ: «لَا يَزَالُ يُسْتَجَابُ لِلْعَبْدِ مَا لَمْ يَدْعُ بِإِثْمٍ أَوْ قَطِيعَةِ رَحِمٍ مَا لَمْ يَسْتَعْجِلْ» قِيلَ: يَا رَسُولَ اللَّهِ مَا الْإِسْتِعْجَالُ؟ قَالَ: «يَقُولُ قَدْ دَعَوْتُ وَقَدْ دَعَوْتُ فَلَمْ أَرَ يَسْتَجِيبُ لِي فَيَسْتَحْسِرُ عِنْدَ ذَلِكَ وَيَدَعُ الدُّعَاءَ»

**“ಅಬೂ ಹುರೈರಾ(ﷺ)ರಿಂದ: ಪ್ರವಾದಿ(ﷺ)ರವರು ಹೇಳಿದರು: ‘ಪಾಪದೊಂದಿಗೆ ಮತ್ತು ಕುಟುಂಬ ಸಂಬಂಧವನ್ನು ಕಡಿಯುವುದಕ್ಕಾಗಿ ಬೇಡುವವರ ಹೊರತು, ಮತ್ತು ಅವಸರಿಸದವರ ಹೊರತು, ದಾಸನ ಪ್ರಾರ್ಥನೆಗೆ ಉತ್ತರ ಲಭಿಸದಿರಲಾರದು’. ಸಹಾಬಿಗಳು ಕೇಳಿದರು: ‘ಓ ಅಲ್ಲಾಹನ ಸಂದೇಶವಾಹಕರೇ! ಅವಸರಿಸುವುದು ಎಂದರೆ ಏನು?’ ಅವರು ಹೇಳಿದರು. ‘ನಾನು ಪ್ರಾರ್ಥಿಸಿದೆ, ನಾನು ಪ್ರಾರ್ಥಿಸಿದೆ ಆದರೆ ನನಗೆ ಉತ್ತರ ಲಭಿಸುವುದನ್ನು ಕಂಡಿಲ್ಲ ಎಂದು ಅವನು ಹೇಳುತ್ತಾನೆ. ನಂತರ ಅವನು ಪ್ರಾರ್ಥಿಸುವುದರಲ್ಲಿ ದಣಿವಾಗಿ ಪ್ರಾರ್ಥಿಸುವುದನ್ನೇ ತೊರೆಯುತ್ತಾನೆ (ಅದಾಗಿದೆ ಅವಸರಿಸುವುದು)’.”**[75]

---

**74** ಇದನ್ನು ಅಬೂ ದಾವೂದ್ (1/466; ಹದೀಸ್ ನಂ. 1480), ಅಹ್ಮದ್ (1/172; ಹದೀಸ್ ನಂ. 1483), ತಯಾಲಿಸೀ ತನ್ನ ‘ಮುಸ್ನದ್’ನಲ್ಲಿ (1/28; ಹದೀಸ್ ನಂ. 200), ಅಬೂ ಯಅ್‌ಲಾ ತನ್ನ ‘ಮುಸ್ನದ್’ನಲ್ಲಿ (2/71; ಹದೀಸ್ ನಂ. 715), ಇಬ್ನ್ ಅಬೀ ಶೈಬಾ ತನ್ನ ‘ಮುಸನ್ನಫ್’ನಲ್ಲಿ (6/53; ಹದೀಸ್ ನಂ. 29410) ವರದಿ ಮಾಡಿದ್ದಾರೆ. ಈ ಹದೀಸ್ ಅಬ್ದುಲ್ಲಾಹ್ ಇಬ್ನ್ ಮುಗಫ್ಫಲ್‌ರಿಂದ ಕೂಡ ವರದಿಯಾಗಿದೆ. ಪ್ರಾರ್ಥಿಸುವಾಗ ರಾಗದಿಂದ ಹಾಡುವುದು, ಅನಗತ್ಯವಾದ ಪದಗಳನ್ನು ಬಳಸುವುದು, ಅನಗತ್ಯವಾಗಿ ದೀರ್ಘಗೊಳಿಸುವುದು ಕೆಲವರಿಗಿರುವ ಕೆಟ್ಟ ಚಾಳಿಯಾಗಿದೆ. ಇವೆಲ್ಲವನ್ನೂ ವರ್ಜಿಸಬೇಕಾಗಿದೆ. ಆದರೆ ಪ್ರಾರ್ಥಿಸುವಾಗ ಪ್ರಾರ್ಥನೆಯನ್ನು ಒಂದಕ್ಕಿಂತ ಹೆಚ್ಚು ಬಾರಿ ಪುನರಾವರ್ತಿಸುವುದರಲ್ಲಿ ತೊಂದರೆಯಿಲ್ಲ. ಪ್ರವಾದಿ(ﷺ)ರವರು ಕೆಲವೊಂದು ಪ್ರಾರ್ಥನೆಗಳನ್ನು ಮೂರು ಮೂರು ಬಾರಿ ಪುನರಾವರ್ತಿಸಿದ್ದು ದೃಢಪಟ್ಟಿದೆ.

**75** ಇದನ್ನು ಬುಖಾರಿ (4/2335; ಹದೀಸ್ ನಂ. 5981), ಮುಸ್ಲಿಮ್ (4/2095; ಹದೀಸ್ ನಂ. 2735) ವರದಿ ಮಾಡಿದ್ದಾರೆ. ಈ ಹದೀಸ್ ಅನಸ್ ಇಬ್ನ್ ಮಾಲಿಕ್ ಮತ್ತು ಉಬಾದಃ ಇಬ್ನು

## 4. ಇಸ್ತಿಗ್ಫಾರ್‌ನ ಶ್ರೇಷ್ಠತೆಗಳು

ಅಲ್ಲಾಹು ಹೇಳಿದ್ದಾನೆ:

﴿ فَقُلْتُ ٱسْتَغْفِرُوا۟ رَبَّكُمْ إِنَّهُۥ كَانَ غَفَّارًا ﴿١٠﴾ ﴾

**"ಆಗ ನಾನು (ನೂಹ್) ಹೇಳಿದೆನು: ನೀವು ನಿಮ್ಮ ಪ್ರಭುವಿನೊಂದಿಗೆ ಇಸ್ತಿಗ್ಫಾರ್ ಮಾಡಿರಿ. ಖಂಡಿತವಾಗಿಯೂ ಅವನು ಅತ್ಯಂತ ಕ್ಷಮಿಸುವವನಾಗಿದ್ದಾನೆ."[76]**

﴿ وَيَٰقَوْمِ ٱسْتَغْفِرُوا۟ رَبَّكُمْ ثُمَّ تُوبُوٓا۟ إِلَيْهِ ﴾

**"ಓ ನನ್ನ ಜನರೇ! ನೀವು ನಿಮ್ಮ ಪ್ರಭುವಿನೊಂದಿಗೆ ಇಸ್ತಿಗ್ಫಾರ್ ಮಾಡಿರಿ, ನಂತರ ಅವನೆಡೆಗೆ ಪಶ್ಚಾತ್ತಾಪದಿಂದ ಮರಳಿರಿ."[77]**

﴿ وَمَا كَانَ ٱللَّهُ لِيُعَذِّبَهُمْ وَأَنتَ فِيهِمْ ۚ وَمَا كَانَ ٱللَّهُ مُعَذِّبَهُمْ وَهُمْ يَسْتَغْفِرُونَ ﴿٣٣﴾ ﴾

**"ನೀನು ಅವರಲ್ಲಿರುವಾಗ ಅಲ್ಲಾಹು ಅವರನ್ನು ಶಿಕ್ಷಿಸುವವನಾಗಲಾರನು, ಮತ್ತು ಅವರು ಇಸ್ತಿಗ್ಫಾರ್ ಮಾಡುತ್ತಿರುವಾಗ ಅಲ್ಲಾಹು ಅವರನ್ನು ಶಿಕ್ಷಿಸುವವನಾಗಲಾರನು."[78]**

عَنْ أَبِي هُرَيْرَةَ رَضِيَ اللَّهُ عَنْهُ قَالَ: سَمِعْتُ رَسُولَ اللَّهِ صَلَّى اللَّهُ عَلَيْهِ وَسَلَّمَ يَقُولُ: «وَاللَّهِ إِنِّي لَأَسْتَغْفِرُ اللَّهَ وَأَتُوبُ إِلَيْهِ فِي الْيَوْمِ أَكْثَرَ مِنْ سَبْعِينَ مَرَّةً»

**"ಅಬೂ ಹುರೈರಾ(رضي الله عنه) ಹೇಳಿದರು: ಪ್ರವಾದಿ(ﷺ)ರವರು ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: 'ಅಲ್ಲಾಹನ ಮೇಲಾಣೆ! ನಾನು ದಿನದಲ್ಲಿ ಎಪ್ಪತ್ತಕ್ಕಿಂತಲೂ ಹೆಚ್ಚು ಬಾರಿ ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡಿ ಅವನೆಡೆಗೆ ಪಶ್ಚಾತ್ತಾಪಪಟ್ಟು ಮರಳುತ್ತೇನೆ'."[79]**

«اللَّهُمَّ أَنْتَ رَبِّي لَا إِلَهَ إِلَّا أَنْتَ خَلَقْتَنِي وَأَنَا عَبْدُكَ، وَأَنَا عَلَى عَهْدِكَ

---

ಸ್ಸಾಮಿತ್‌ರಿಂದ ಕೂಡ ವರದಿಯಾಗಿದೆ.

**76** ಕುರ್‌ಆನ್ 71/10

**77** ಕುರ್‌ಆನ್ 11/52

**78** ಕುರ್‌ಆನ್ 8/33

**79** ಇದನ್ನು ಬುಖಾರಿ (5/2324; ಹದೀಸ್ ನಂ. 5948), ತಿರ್ಮಿದಿ (5/383; ಹದೀಸ್ ನಂ. 3259) ಅಅಝ್ಝ್ ಅಲ್‌ಮುಝುನೀರಿಂದ ವರದಿ ಮಾಡಿದ್ದಾರೆ. ಕೆಲವೊಂದು ವರದಿಗಳಲ್ಲಿ ಎಪ್ಪತ್ತಕ್ಕಿಂತಲೂ ಹೆಚ್ಚು ಬಾರಿ ಎಂಬುದಕ್ಕೆ ಬದಲಾಗಿ ನೂರು ಬಾರಿ ಎನ್ನಲಾಗಿದೆ.

وَوَعْدِكَ مَا اسْتَطَعْتُ، أَعُوذُ بِكَ مِنْ شَرِّ مَا صَنَعْتُ، أَبُوءُ لَكَ بِنِعْمَتِكَ عَلَيَّ، وَأَبُوءُ بِذَنْبِي فَاغْفِرْ لِي إِنَّهُ لَا يَغْفِرُ الذُّنُوبَ إِلَّا أَنْتَ»

**(ಅಲ್ಲಾಹುಮ್ಮ ಅನ್ತ ರಬ್ಬೀ ಲಾ ಇಲಾಹ ಇಲ್ಲಾ ಅನ್ತ ಖಲಕ್ತನೀ ವಅನ ಅಬ್ದುಕ, ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು, ಅಊದು ಬಿಕ ಮಿನ್ ಶರ್‍ರಿ ಮಾ ಸನಅ್‌ತು, ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ ಫಗ್‌ಫಿರ್ ಲೀ ಇನ್ನಹೂ ಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ್)**

**“ಓ ಅಲ್ಲಾಹ್! ನೀನು ನನ್ನ ಪ್ರಭುವಾಗಿರುವೆ. ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ. ನೀನು ನನ್ನನ್ನು ಸೃಷ್ಟಿಸಿರುವೆ ಮತ್ತು ನಾನು ನಿನ್ನ ದಾಸನಾಗಿರುವೆ. ನನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ನಾನು ನಿನ್ನ ಕರಾರು ಮತ್ತು ವಾಗ್ದಾನವನ್ನು ಪಾಲಿಸುತ್ತಿರುವೆ. ನಾನು ಮಾಡಿದ ಕರ್ಮಗಳ ಕೆಡುಕಿನಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ. ನೀನು ನನ್ನ ಮೇಲೆ ಸುರಿಸಿದ ಅನುಗ್ರಹಗಳಿಗಾಗಿ ನಾನು ನಿನಗೆ ಶರಣಾಗುತ್ತಿರುವೆ. ಮತ್ತು ನನ್ನ ಪಾಪಗಳಿಂದಾಗಿ ನಾನು ನಿನಗೆ ಶರಣಾಗುತ್ತಿರುವೆ. ಆದ್ದರಿಂದ ನನಗೆ ಕ್ಷಮೆ ನೀಡು. ಖಂಡಿತವಾಗಿಯೂ ನೀನಲ್ಲದೆ ಪಾಪಗಳನ್ನು ಕ್ಷಮಿಸುವವರಿಲ್ಲ.”(80)**

## 5. ತಸ್ಬೀಹ್, ತಹ್ಮೀದ್, ತಹ್ಲೀಲ್ ಮತ್ತು ತಕ್ಬೀರ್‌ನ ಶ್ರೇಷ್ಠತೆಗಳು

عَنْ سُمْرَةَ بْنِ جُنْدَبٍ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «أَحَبُّ الْكَلَامِ إِلَى اللَّهِ أَرْبَعٌ، سُبْحَانَ اللَّهِ، وَالْحَمْدُ لِلَّهِ، وَلَا إِلَهَ إِلَّا اللَّهُ، وَاللَّهُ أَكْبَرُ، لَا يَضُرُّكَ بِأَيِّهِنَّ بَدَأْتَ»

**“ಸುಮ್ರಾ ಇಬ್ನ್ ಜುನ್ದಬ್(رضي الله عنه)ರಿಂದ: ಪ್ರವಾದಿ(ﷺ)ರವರು ಹೇಳಿದರು: ‘ವಚನಗಳಲ್ಲಿ ಅಲ್ಲಾಹನಿಗೆ ಅತ್ಯಂತ ಇಷ್ಟವಾದುದು ನಾಲ್ಕು ವಚನಗಳಾಗಿವೆ: ಸುಬ್‌ಹಾನಲ್ಲಾಹ್, ಅಲ್‌ಹಮ್ದುಲಿಲ್ಲಾಹ್, ಲಾಇಲಾಹ ಇಲ್ಲಲ್ಲಾಹ್ ಮತ್ತು ಅಲ್ಲಾಹು ಅಕ್ಬರ್. ಇವುಗಳಲ್ಲಿ ನೀನು ಯಾವುದರಿಂದ ಆರಂಭಿಸಿದರೂ ನಿನಗೇನೂ ತೊಂದರೆಯಿಲ್ಲ’.”(81)**

عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «كَلِمَتَانِ خَفِيفَتَانِ عَلَى اللِّسَانِ، ثَقِيلَتَانِ فِي الْمِيزَانِ، حَبِيبَتَانِ إِلَى

**80** ಇದನ್ನು ಬುಖಾರಿ (5/2323; ಹದೀಸ್ ನಂ. 5947) ಶದ್ದಾದ್ ಇಬ್ನ್ ಔಸ್‌ರಿಂದ ವರದಿ ಮಾಡಿದ್ದಾರೆ. ಈ ಪ್ರಾರ್ಥನೆಯನ್ನು ‘ಸಯ್ಯಿದುಲ್ ಇಸ್ತಿಗ್ಫಾರ್’ ಎಂದು ಪ್ರವಾದಿ(ﷺ)ರವರು ಹೆಸರಿಸಿದ್ದಾರೆ.

**81** ಇದನ್ನು ಮುಸ್ಲಿಮ್ (3/1685; ಹದೀಸ್ ನಂ. 2137), ಇಬ್ನ್ ಮಾಜ (2/1253; ಹದೀಸ್ ನಂ. 3811) ವರದಿ ಮಾಡಿದ್ದಾರೆ.

الرَّحْمَنِ: سُبْحَانَ اللَّهِ وَبِحَمْدِهِ، سُبْحَانَ اللَّهِ الْعَظِيمِ»

**"ಅಬೂ ಹುರೈರಾ(ರ)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ಎರಡು ವಚನಗಳು, ಅವು ನಾಲಗೆಯ ಮೇಲೆ ಅತಿಹಗುರವಾಗಿವೆ, ತಕ್ಕಡಿಯಲ್ಲಿ ಅತಿಭಾರವಾಗಿವೆ, ಪರಮ ದಯಾಮಯನಿಗೆ (ಅಲ್ಲಾಹನಿಗೆ) ಅತಿ ಇಷ್ಟಕರವಾಗಿವೆ. (ಅವುಗಳಾಗಿವೆ) ಸುಬ್‌ಹಾನಲ್ಲಾಹಿ ವಬಿಹಮ್ದಿಹೀ, ಸುಬ್‌ಹಾನಲ್ಲಾಹಿಲ್ ಅದೀಮ್'."[82]**

عَنْ أَبِي مَالِكٍ الْأَشْعَرِيِّ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «الطُّهُورُ شَطْرُ الْإِيمَانِ وَالْحَمْدُ لِلَّهِ تَمْلَأُ الْمِيزَانِ، وَسُبْحَانَ اللَّهِ وَالْحَمْدُ لِلَّهِ تَمْلَآنِ - أَوْ تَمْلَأُ - مَا بَيْنَ السَّمَاوَاتِ وَالْأَرْضِ، وَالصَّلَاةُ نُورٌ، وَالصَّدَقَةُ بُرْهَانٌ وَالصَّبْرُ ضِيَاءٌ، وَالْقُرْآنُ حُجَّةٌ لَكَ أَوْ عَلَيْكَ، كُلُّ النَّاسِ يَغْدُو فَبَايِعٌ نَفْسَهُ فَمُعْتِقُهَا أَوْ مُوبِقُهَا»

**"ಅಬೂ ಮಾಲಿಕ್ ಅಲ್‌ಅಶ್‌ಅರೀ(ರ)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ಶುಚಿತ್ವವು ಈಮಾನ್‌ನ ಅರ್ಧ ಭಾಗವಾಗಿದೆ. ಅಲ್‌ಹಮ್ದುಲಿಲ್ಲಾಹ್ (ಎಂಬ ವಚನವು) ತಕ್ಕಡಿಯನ್ನು ತುಂಬುವುದು. ಸುಬ್‌ಹಾನಲ್ಲಾಹ್ ಮತ್ತು ಅಲ್‌ಹಮ್ದುಲಿಲ್ಲಾಹ್ ಆಕಾಶಗಳ ಮತ್ತು ಭೂಮಿಯ ಮಧ್ಯಭಾಗವನ್ನು ತುಂಬುವುದು[83]. ನಮಾಝ್ ಬೆಳಕಾಗಿದೆ, ಸದಕಾ ಪುರಾವೆಯಾಗಿದೆ, ಸಹನೆಯು ಪ್ರಕಾಶವಾಗಿದೆ, ಕುರ್‌ಆನ್ ನಿನಗೆ ಅಥವಾ ನಿನ್ನ ವಿರುದ್ಧವಾಗಿರುವ ಪುರಾವೆಯಾಗಿದೆ.[84] ಎಲ್ಲ ಜನರು ಬೆಳಗಾಗುವಾಗ ತಮ್ಮ ದೇಹಗಳನ್ನು ಮಾರುವವರಾಗಿದ್ದಾರೆ.[85] ಅವರಲ್ಲಿ ಕೆಲವರು ಅದನ್ನು ಸ್ವತಂತ್ರಗೊಳಿಸುವವರು ಮತ್ತು ಕೆಲವರು ಅದನ್ನು ವಿನಾಶಗೊಳಿಸುವವರು'."[86]**

---

**82** ಇದನ್ನು ಬುಖಾರಿ (5/2352; ಹದೀಸ್ ನಂ. 6043), ಮುಸ್ಲಿಮ್ (4/2072; ಹದೀಸ್ ನಂ. 2694) ವರದಿ ಮಾಡಿದ್ದಾರೆ.

**83** ಅರ್ಥಾತ್ ಅವುಗಳ ಪುಣ್ಯವನ್ನು ಮೂರ್ತರೂಪವಾಗಿಸಿದರೆ ಅದು ಆಕಾಶಗಳ ಮತ್ತು ಭೂಮಿಯ ಮಧ್ಯಭಾಗವನ್ನು ತುಂಬುವುದು.

**84** ಅರ್ಥಾತ್ ನೀನು ಅದನ್ನು ಪಾರಾಯಣ ಮಾಡಿದರೆ ಮತ್ತು ಅದಕ್ಕೆ ಅನುಸೃತವಾಗಿ ಕಾರ್ಯಪ್ರವೃತ್ತನಾದರೆ ಅದು ನಿನ್ನ ಪರವಾಗಿ ಸಾಕ್ಷಿ ಹೇಳುತ್ತದೆ. ಇಲ್ಲದಿದ್ದರೆ ಅದು ನಿನಗೆ ವಿರುದ್ಧವಾಗಿ ಸಾಕ್ಷಿ ಹೇಳುತ್ತದೆ.

**85** ಅರ್ಥಾತ್ ಪ್ರತಿಯೊಬ್ಬ ಮನುಷ್ಯನು ತನ್ನ ದೇಹದೊಂದಿಗೆ ಶ್ರಮಿಸುತ್ತಾನೆ. ಅವರಲ್ಲಿ ಕೆಲವರು ಅಲ್ಲಾಹನ ಅನುಸರಣೆಗಾಗಿ ಅದನ್ನು ಅಲ್ಲಾಹನಿಗೆ ಮಾರುತ್ತಾರೆ. ಹಾಗೆ ಅವರು ಅದನ್ನು ಶಿಕ್ಷೆಯಿಂದ ಸ್ವತಂತ್ರಗೊಳಿಸುತ್ತಾರೆ. ಅವರಲ್ಲಿ ಕೆಲವರು ಶೈತಾನನ ಅನುಸರಣೆಗಾಗಿ ಅದನ್ನು ಅವನಿಗೆ ಮಾರುತ್ತಾರೆ. ಹಾಗೆ ಅವರು ಅದನ್ನು ಶಿಕ್ಷೆಯಿಂದ ವಿನಾಶಗೊಳಿಸುತ್ತಾರೆ. (ನೋಡಿ: ತುಹ್ಫತುಲ್ ಅಹ್ವದೀ 9/351)

**86** ಇದನ್ನು ಮುಸ್ಲಿಮ್ (1/203; ಹದೀಸ್ ನಂ. 223), ತಿರ್ಮಿದಿ (5/535; ಹದೀಸ್ ನಂ. 3517) ವರದಿ ಮಾಡಿದ್ದಾರೆ.

عَنْ عَائِشَةَ رَضِيَ اللَّهُ عَنْهَا قَالَتْ: إِنَّ رَسُولَ اللَّهِ صَلَّى اللَّهُ عَلَيْهِ وَسَلَّمَ قَالَ: «إِنَّهُ خُلِقَ كُلُّ إِنْسَانٍ مِنْ بَنِي آدَمَ عَلَى سِتِّينَ وَثَلَاثِمِائَةِ مَفْصِلٍ، فَمَنْ كَبَّرَ اللَّهَ، وَحَمِدَ اللَّهَ، وَهَلَّلَ اللَّهَ، وَسَبَّحَ اللَّهَ، وَاسْتَغْفَرَ اللَّهَ، وَعَزَلَ حَجَرًا عَنْ طَرِيقِ النَّاسِ، أَوْ شَوْكَةً أَوْ عَظْمًا عَنْ طَرِيقِ النَّاسِ، وَأَمَرَ بِمَعْرُوفٍ أَوْ نَهَى عَنْ مُنْكَرٍ، عَدَدَ تِلْكَ السِّتِّينَ وَالثَّلَاثِمِائَةِ السُّلَامَى، فَإِنَّهُ يَمْشِي يَوْمَئِذٍ وَقَدْ زَحْزَحَ نَفْسَهُ عَنِ النَّارِ»

**"ಆಯಿಶಾ(رضي الله عنها)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ಆದಮನ ಸಂತಾನದಲ್ಲಿ ಸೇರಿದ ಪ್ರತಿಯೊಬ್ಬ ಮನುಷ್ಯನನ್ನು ಮುನ್ನೂರ ಅರವತ್ತು ಜೋಡಣೆಗಳಿಂದ ಸೃಷ್ಟಿಸಲಾಗಿದೆ. ಯಾರು ಆ ಜೋಡಣೆಗಳ ಸಂಖ್ಯೆಯಷ್ಟು ತಕ್ಬೀರ್ ಹೇಳುತ್ತಾನೋ, ತಹ್ಮೀದ್ ಹೇಳುತ್ತಾನೋ, ತಹ್ಲೀಲ್ ಹೇಳುತ್ತಾನೋ, ತಸ್ಬೀಹ್ ಹೇಳುತ್ತಾನೋ, ಇಸ್ತಿಗ್ಫಾರ್ ಮಾಡುತ್ತಾನೋ, ಜನರು ನಡೆಯುವ ಹಾದಿಯಿಂದ ಕಲ್ಲನ್ನು, ಮುಳ್ಳನ್ನು ಅಥವಾ ಮೂಳೆಯನ್ನು ದೂರೀಕರಿಸುತ್ತಾನೋ, ಒಳಿತನ್ನು ಆದೇಶಿಸುತ್ತಾನೋ ಅಥವಾ ಕೆಡುಕನ್ನು ತಡೆಯುತ್ತಾನೋ, ಅವನು ತನ್ನ ದೇಹವನ್ನು ನರಕದಿಂದ ದೂರೀಕರಿಸಿದ ರೀತಿಯಲ್ಲಿ ನಡೆಯುತ್ತಾನೆ'."**[87]

عَنْ سَعْدِ بْنِ أَبِي وَقَّاصٍ رَضِيَ اللَّهُ عَنْهُ قَالَ: كُنَّا عِنْدَ رَسُولِ اللَّهِ صَلَّى اللَّهُ عَلَيْهِ وَسَلَّمَ فَقَالَ: «أَيَعْجِزُ أَحَدُكُمْ أَنْ يَكْسِبَ كُلَّ يَوْمٍ أَلْفَ حَسَنَةٍ؟» فَسَأَلَهُ سَائِلٌ مِنْ جُلَسَائِهِ: »؟ كَيْفَ يَكْسِبُ أَحَدُنَا أَلْفَ حَسَنَةٍ؟ قَالَ: «يُسَبِّحُ مِائَةَ تَسْبِيحَةٍ، فَيُكْتَبُ لَهُ أَلْفُ حَسَنَةٍ، أَوْ يُحَطُّ عَنْهُ أَلْفُ خَطِيئَةٍ»

**"ಸಅ್‌ದ್ ಇಬ್ನ್ ಅಬೀ ವಕ್ಕಾಸ್(رضي الله عنه)ರಿಂದ: ನಾವು ಪ್ರವಾದಿ(ﷺ)ರವರ ಬಳಿಯಿದ್ದಾಗ ಅವರು ಹೇಳಿದರು: 'ನಿಮ್ಮಲ್ಲೋರ್ವನು ಪ್ರತಿದಿನ ಒಂದು ಸಾವಿರ ಒಳಿತುಗಳನ್ನು ಸಂಪಾದಿಸಲು ಶಕ್ತನಾಗಿರುವನೇ?' ಅವರ ಬಳಿ ಕುಳಿತವರಲ್ಲೊಬ್ಬನು ಕೇಳಿದನು: 'ನಮ್ಮಲ್ಲೋರ್ವನು ಒಂದು ಸಾವಿರ ಒಳಿತುಗಳನ್ನು ಹೇಗೆ ಸಂಪಾದಿಸುವನು?' ಪ್ರವಾದಿ (ﷺ)ರವರು ಹೇಳಿದರು: 'ಅವನು ನೂರು ತಸ್ಬೀಹ್‌ಗಳನ್ನು ಹೇಳಲಿ. ಆಗ ಅವನಿಗೆ ಒಂದು ಸಾವಿರ ಒಳಿತುಗಳನ್ನು ಲಿಖಿತಗೊಳಿಸಲಾಗುವುದು ಅಥವಾ ಅವನಿಂದ ಒಂದು**

---

**87** ಇದನ್ನು ಮುಸ್ಲಿಮ್ (2/698; ಹದೀಸ್ ನಂ. 1007), ಇಬ್ನ್ ಹಿಬ್ಬಾನ್ ತನ್ನ 'ಸಹೀಹ್'ನಲ್ಲಿ (8/173; ಹದೀಸ್ ನಂ. 3380), ತಬರಾನೀ ತನ್ನ 'ಮುಅ್‌ಜಮುಲ್ ಅವ್ಸತ್'ನಲ್ಲಿ (1/129; ಹದೀಸ್ ನಂ. 405) ವರದಿ ಮಾಡಿದ್ದಾರೆ.

**ಸಾವಿರ ಪಾಪಗಳನ್ನು ಅಳಿಸಲಾಗುವುದು'."[88]**

عَنْ عَبْدِ اللَّهِ بْنِ عَمْرٍو رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «مَا عَلَى الْأَرْضِ أَحَدٌ يَقُولُ: لَا إِلَهَ إِلَّا اللَّهُ وَاللَّهُ أَكْبَرُ وَلَا حَوْلَ وَلَا قُوَّةَ إِلَّا بِاللَّهِ، إِلَّا كُفِّرَتْ عَنْهُ خَطَايَاهُ وَلَوْ كَانَتْ مِثْلَ زَبَدِ الْبَحْرِ»

**"ಅಬ್ದುಲ್ಲಾಹ್ ಇಬ್ನ್ ಅಮ್ರ್(ರ)ರಿಂದ: ಪ್ರವಾದಿ(ﷺ)ರವರು ಹೇಳಿದರು: 'ಭೂಮಿಯ ಮೇಲೆ ಯಾವೊಬ್ಬನು ಲಾಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್ಬರ್ ವಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್ ಎನ್ನುತ್ತಾನೋ ಅವನ ಪಾಪಗಳನ್ನು ಮನ್ನಿಸದಿರಲಾರದು. ಅವುಗಳು ಸಮುದ್ರದ ತೆರೆಗಳಷ್ಟಿದ್ದರೂ ಸರಿ'."[89]**

## 6. ದಿಕ್ರ್‌ಗಳನ್ನು ಎಣಿಸುವುದು

عَنْ عَبْدِ اللَّهِ بْنِ عَمْرٍو رَضِيَ اللَّهُ عَنْهُ قَالَ: رَأَيْتُ رَسُولَ اللَّهِ صَلَّى اللَّهُ عَلَيْهِ وَسَلَّمَ يَعْقِدُ التَّسْبِيحَ، قَالَ ابْنُ قُدَامَةَ: بِيَمِينِهِ

**"ಅಬ್ದುಲ್ಲಾಹ್ ಇಬ್ನ್ ಅಮ್ರ್(ರ)ರಿಂದ: ಪ್ರವಾದಿ(ﷺ)ರವರು ತಸ್ಬೀಹ್‌ಗಳನ್ನು ಎಣಿಸುವುದನ್ನು ನಾನು ಕಂಡಿದ್ದೇನೆ. (ಇದರ ವರದಿಗಾರರಲ್ಲೊಬ್ಬರಾದ) ಮುಹಮ್ಮದ್ ಇಬ್ನ್ ಕುದಾಮಃ ಹೇಳಿದ್ದಾರೆ: 'ತನ್ನ ಬಲಗೈಯಿಂದ'."[90]**

## 7. ನಿದ್ದೆಯಿಂದ ಎದ್ದೇಳುವಾಗ

ಅಲ್ಲಾಹು ಹೇಳಿದ್ದಾನೆ:

﴿ ٱللَّهُ يَتَوَفَّى ٱلْأَنفُسَ حِينَ مَوْتِهَا وَٱلَّتِى لَمْ تَمُتْ فِى مَنَامِهَا ۖ فَيُمْسِكُ ٱلَّتِى قَضَىٰ عَلَيْهَا ٱلْمَوْتَ وَيُرْسِلُ ٱلْأُخْرَىٰٓ إِلَىٰٓ أَجَلٍ مُّسَمًّى ۚ إِنَّ فِى ذَٰلِكَ لَءَايَٰتٍ لِّقَوْمٍ

---

**88** ಇದನ್ನು ಮುಸ್ಲಿಮ್ (4/2073; ಹದೀಸ್ ನಂ. 2698), ಅಹ್ಮದ್ (1/180; ಹದೀಸ್ ನಂ. 1563) ವರದಿ ಮಾಡಿದ್ದಾರೆ.

**89** ಇದನ್ನು ತಿರ್ಮಿದಿ (5/509; ಹದೀಸ್ ನಂ. 3460), ಅಹ್ಮದ್ (2/158; ಹದೀಸ್ ನಂ. 6479), ಹಾಕಿಮ್ ತನ್ನ 'ಮುಸ್ತದ್ರಕ್'ನಲ್ಲಿ (1/682; ಹದೀಸ್ ನಂ. 1853), ನಸಾಈ ತನ್ನ 'ಸುನನುಲ್ ಕುಬ್ರಾ'ದಲ್ಲಿ (6/206; ಹದೀಸ್ ನಂ. 10658) ವರದಿ ಮಾಡಿದ್ದಾರೆ.

**90** ಇದನ್ನು ಅಬೂ ದಾವೂದ್ (1/471; ಹದೀಸ್ ನಂ. 1502), ಇಬ್ನ್ ಮಾಜ (1/299; ಹದೀಸ್ ನಂ. 926), ತಿರ್ಮಿದಿ (5/478; ಹದೀಸ್ ನಂ. 3411) ವರದಿ ಮಾಡಿದ್ದಾರೆ.

يَتَفَكَّرُونَ ﴿٤٢﴾

**"ಮರಣವೇಳೆಯಲ್ಲಿ ಅಲ್ಲಾಹು ಆತ್ಮಗಳನ್ನು ವಶಪಡಿಸಿಕೊಳ್ಳುವನು. ಮತ್ತು ಮರಣಹೊಂದದವನ ಆತ್ಮವನ್ನು ನಿದ್ರಾವೇಳೆಯಲ್ಲಿ ವಶಪಡಿಸಿಕೊಳ್ಳುವನು. ಯಾವ ಆತ್ಮದ ಮೇಲೆ ಅವನು ಮರಣವನ್ನು ವಿಧಿಸಿರುವನೋ ಅದನ್ನು ತನ್ನ ವಶದಲ್ಲಿರಿಸುವನು ಮತ್ತು ಇತರ ಆತ್ಮಗಳನ್ನು ಒಂದು ನಿರ್ದಿಷ್ಟ ಅವಧಿಯವರೆಗೆ ಬಿಟ್ಟುಬಿಡುವನು. ಚಿಂತಿಸುವ ಜನರಿಗೆ ಖಂಡಿತವಾಗಿಯೂ ಇದರಲ್ಲಿ ಹಲವು ದೃಷ್ಟಾಂತಗಳಿವೆ."(91)**

ಪ್ರವಾದಿ(ﷺ)ರವರು ಹೇಳಿದರು:

«يَعْقِدُ الشَّيْطَانُ عَلَى قَافِيَةِ رَأْسِ أَحَدِكُمْ إِذَا هُوَ نَامَ ثَلَاثَ عُقَدٍ، يَضْرِبُ عَلَى كُلِّ عُقْدَةٍ مَكَانَهَا عَلَيْكَ لَيْلٌ طَوِيلٌ فَارْقُدْ، فَإِنِ اسْتَيْقَظَ وَذَكَرَ اللَّهَ تَعَالَى انْحَلَّتْ عُقْدَةٌ، فَإِنْ تَوَضَّأَ انْحَلَّتْ عُقْدَةٌ، فَإِنْ صَلَّى انْحَلَّتْ عُقَدُهُ كُلُّهَا، فَأَصْبَحَ نَشِيطًا طَيِّبَ النَّفْسِ، وَإِلَّا أَصْبَحَ خَبِيثَ النَّفْسِ كَسْلَانَ»

**"ನಿಮ್ಮಲ್ಲೋರ್ವನು ನಿದ್ರಾವಶನಾಗಿರುವಾಗ ಶೈತಾನನು ಅವನ ತಲೆಯ ಹಿಂಭಾಗದಲ್ಲಿ ಮೂರು ಗಂಟುಗಳನ್ನು ಕಟ್ಟುವನು. ರಾತ್ರಿಯುದ್ದಕ್ಕೂ ಪ್ರತಿಯೊಂದು ಗಂಟಿನ ಮೇಲೆ ಗುದ್ದುತ್ತಾ ಮಲಗು ಎನ್ನುತ್ತಿರುವನು. ಒಂದು ವೇಳೆ ಆ ವ್ಯಕ್ತಿ ನಿದ್ದೆಯಿಂದ ಎಚ್ಚೆತ್ತು ಅಲ್ಲಾಹನನ್ನು ಸ್ಮರಿಸಿದರೆ ಒಂದು ಗಂಟು ಬಿಚ್ಚಿಕೊಳ್ಳುವುದು. (ನಂತರ) ಅವನು ವುದೂ ಮಾಡಿದರೆ ಇನ್ನೊಂದು ಗಂಟು ಬಿಚ್ಚಿಕೊಳ್ಳುವುದು. (ನಂತರ) ಅವನು (ಫಜ್ರ್) ನಮಾಝ್ ಮಾಡಿದರೆ ಎಲ್ಲಾ ಗಂಟುಗಳೂ ಬಿಚ್ಚಿಕೊಳ್ಳುವುವು. ಆಗ ಅವನು ಉಲ್ಲಾಸಭರಿತನಾಗಿ ಶುಭ್ರ ಮನಸ್ಸಿನೊಂದಿಗೆ ಎದ್ದೇಳುವನು. ಅನ್ಯಥಾ ಅವನು ಕಳಂಕ ಮನಸ್ಕನಾಗಿ ಸೋಮಾರಿತನದೊಂದಿಗೆ ಎದ್ದೇಳುವನು."(92)**

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«الْحَمْدُ لِلَّهِ الَّذِي أَحْيَانَا بَعْدَ مَا أَمَاتَنَا، وَإِلَيْهِ النُّشُورُ»

**(ಅಲ್‌ಹಮ್ದುಲಿಲ್ಲಾಹಿಲ್ಲದೀ ಅಹ್ಯಾನಾ ಬಅ್‌ದ ಮಾ ಅಮಾತನಾ, ವಇಲೈಹಿ ನ್ನುಶೂರ್)**

"ಮೃತಗೊಳಿಸಿದ(93) ಬಳಿಕ ನಮಗೆ ಜೀವವನ್ನು ನೀಡಿದ ಅಲ್ಲಾಹನಿಗೆ ಸ್ತುತಿ ಮತ್ತು

---

**91** ಕುರ್‌ಆನ್ 39/42

**92** ಇದನ್ನು ಬುಖಾರಿ (1/383; ಹದೀಸ್ ನಂ. 1091), ಮುಸ್ಲಿಮ್ (1/538; ಹದೀಸ್ ನಂ. 776) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**93** ಅಲ್ಲಾಹು ನಿದ್ರಾವೇಳೆಯಲ್ಲಿ ಎಲ್ಲರ ಆತ್ಮಗಳನ್ನೂ ವಶಪಡಿಸುತ್ತಾನೆ. ನಂತರ ತಾನಿಚ್ಛಿಸಿದವರ ಅರ್ಥಾತ್ ಜೀವಿತಾವಧಿ ಮುಗಿದವರ ಆತ್ಮಗಳನ್ನು ಹೊರತುಪಡಿಸಿ ಉಳಿದ ಆತ್ಮಗಳನ್ನು ಅವುಗಳ ದೇಹಗಳಿಗೆ ಹಿಂದಿರುಗಿಸುತ್ತಾನೆ. ನಿದ್ದೆಯನ್ನು ಮರಣವೆಂದು ಕರೆದಿರುವುದರ ಕುರಿತು ಹಲವಾರು

ಪುನರುತ್ಥಾನವು ಅವನ ಬಳಿಗಾಗಿದೆ.”(94)

«الْحَمْدُ لِلَّهِ الَّذِي عَافَانِي فِي جَسَدِي، وَرَدَّ عَلَيَّ رُوحِي وَأَذِنَ لِي بِذِكْرِهِ»

**(ಅಲ್‌ಹಮ್ದುಲಿಲ್ಲಾಹಿಲ್ಲದೀ ಆಫಾನೀ ಫೀ ಜಸದೀ, ವರದ್ದ ಅಲಯ್ಯ ರೂಹೀ, ವಅದಿನ ಲೀ ಬಿದಿಕ್ರಿಹೀ)**

“ನನ್ನ ಶರೀರದಲ್ಲಿ ಆರೋಗ್ಯವನ್ನು ಕರುಣಿಸಿದ, ನನ್ನ ಆತ್ಮವನ್ನು ನನಗೆ ಮರಳಿಸಿದ ಮತ್ತು ತನ್ನ ಸ್ಮರಣೆಯನ್ನು ನನಗೆ ಅನುಮತಿಸಿದ ಅಲ್ಲಾಹನಿಗೆ ಸ್ತುತಿ.”(95)

«اللَّهُ أَكْبَرُ (عشرًا)، الْحَمْدُ لِلَّهِ (عشرًا)، سُبْحَانَ اللَّهِ وَبِحَمْدِهِ (عشرًا)، سُبْحَانَ الْمَلِكِ الْقُدُّوسِ (عشرًا)، أَسْتَغْفِرُ اللَّهَ (عشرًا)، لَا إِلَهَ إِلَّا اللَّهُ (عشرًا)، اللَّهُمَّ إِنِّي أَعُوذُ بِكَ مِنْ ضِيقِ الدُّنْيَا وَضِيقِ يَوْمِ الْقِيَامَةِ (عشرًا)

**[ಅಲ್ಲಾಹು ಅಕ್ಬರ್ (ಹತ್ತು ಬಾರಿ), ಅಲ್‌ಹಮ್ದುಲಿಲ್ಲಾಹ್ (ಹತ್ತು ಬಾರಿ), ಸುಬ್‌ಹಾನಲ್ಲಾಹಿ ವಬಿಹಮ್ದಿಹೀ (ಹತ್ತು ಬಾರಿ), ಸುಬ್‌ಹಾನಲ್ ಮಲಿಕಿಲ್ ಕುದ್ದೂಸ್ (ಹತ್ತು ಬಾರಿ), ಅಸ್ತಗ್‌ಫಿರುಲ್ಲಾಹ್ (ಹತ್ತು ಬಾರಿ), ಲಾಇಲಾಹ ಇಲ್ಲಲ್ಲಾಹ್ (ಹತ್ತು**

---

ರೀತಿಯ ವ್ಯಾಖ್ಯಾನಗಳು ಉಲ್ಲೇಖಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವು ಹೀಗಿವೆ: ಅಬೂ ಇಸ್‌ಹಾಕ್ ಹೇಳಿದ್ದಾರೆ: ನಿದ್ರಾವೇಳೆಯಲ್ಲಿ ಮನುಷ್ಯನಿಂದ ಬೇರ್ಪಡುವ ಆತ್ಮವು ವಿವೇಚನೆಯ ಆತ್ಮವಾಗಿದೆ. ಮರಣದ ವೇಳೆಯಲ್ಲಿ ಬೇರ್ಪಡುವ ಆತ್ಮವು ಜೀವದ ಆತ್ಮವಾಗಿದೆ. ಈ ಆತ್ಮದೊಂದಿಗೆ ಶ್ವಾಸೋಚ್ಛ್ವಾಸವೂ ಹೊರಟುಹೋಗುತ್ತದೆ. ‘ನಿಹಾಯ’ದಲ್ಲಿರುವ ಪ್ರಕಾರ ನಿದ್ದೆಯನ್ನು ಮರಣವೆಂದು ಕರೆದಿರುವುದು ಯಾಕೆಂದರೆ ನಿದ್ದೆಯಲ್ಲಿ ಮನುಷ್ಯನ ಬೋಧ, ಕ್ರಿಯಾಶೀಲತೆ, ಚಲನವಲನ, ವಿವೇಚನೆ ಮುಂತಾದವುಗಳು ಕಡಿದುಹೋಗುತ್ತವೆ. ತೀಬೀ ಹೇಳಿದ್ದಾರೆ: ಇಲ್ಲಿ ಮರಣವೆಂಬುದರ ಉದ್ದೇಶವು ನಿಷ್ಕ್ರಿಯತೆಯಾಗಿರಲೂಬಹುದು. ಯಾಕೆಂದರೆ ಗಾಳಿಯು ನಿಷ್ಕ್ರಿಯವಾಗುವಾಗ ಗಾಳಿಯು ಮೃತಪಟ್ಟಿದೆ ಎಂದು ಹೇಳಲಾಗುತ್ತದೆ. ಆದ್ದರಿಂದ ಮನುಷ್ಯನ ಕ್ರಿಯಾಶೀಲತೆಯು ನಿಷ್ಕ್ರಿಯವಾಗುವುದರಿಂದಾಗಿ ನಿದ್ದೆಯನ್ನು ಮರಣವೆಂದು ಕರೆದಿರಲೂಬಹುದು. ಕುರ್ತುಬೀ ಹೇಳಿದ್ದಾರೆ: ನಿದ್ದೆ ಮತ್ತು ಮರಣವೆರಡರಲ್ಲೂ ಆತ್ಮವು ದೇಹದಿಂದ ಬೇರ್ಪಡುತ್ತದೆ. ಅದು ಬಾಹ್ಯವಾಗಿರುವಾಗ ಅದನ್ನು ನಿದ್ದೆಯೆಂದು ಕರೆಯಲಾಗುತ್ತದೆ ಮತ್ತು ಆಂತರಿಕವಾಗಿರುವಾಗ ಅದನ್ನು ಮರಣವೆಂದು ಕರೆಯಲಾಗುತ್ತದೆ. ಆತ್ಮವು ದೇಹದಿಂದ ಬೇರ್ಪಡುವುದರಿಂದಾಗಿ ನಿದ್ದೆಯನ್ನು ಮರಣವೆಂದು ಅಲಂಕಾರಿಕ ರೂಪದಲ್ಲಿ ಕರೆಯಲಾಗಿದೆ. ತೀಬೀ ಹೇಳಿದ್ದಾರೆ: ನಿದ್ದೆಯನ್ನು ಮರಣವೆಂದು ಕರೆದಿರುವುದರ ಯುಕ್ತಿಯೇನೆಂದರೆ ಬದುಕಿನ ಮೂಲಕ ಮನುಷ್ಯನು ಪಡೆಯುವ ಲಾಭವು ಅಲ್ಲಾಹನ ತೃಪ್ತಿಯನ್ನು ಆಗ್ರಹಿಸುವುದು, ಅವನ ಆಜ್ಞೆಗಳನ್ನು ಅನುಸರಿಸುವುದು, ಅವನ ಕ್ರೋಧವನ್ನು ಮತ್ತು ಶಿಕ್ಷೆಯನ್ನು ತನ್ನಿಂದ ದೂರೀಕರಿಸುವುದಾಗಿದೆ. ಅವನು ನಿದ್ದೆಹೋದರೆ ಈ ಲಾಭವು ಅವನಿಂದ ಕಡಿದುಹೋಗಿ ಅವನು ಮೃತ ಪಟ್ಟವನಂತಾಗುತ್ತಾನೆ. ಆದ್ದರಿಂದ ಆ ಅನುಗ್ರಹವು (ಬದುಕು) ತನಗೆ ಮರಳಿ ಲಭಿಸುವಾಗ (ನಿದ್ದೆಯಿಂದ ಎದ್ದೇಳುವಾಗ) ಅವನು ಅಲ್ಲಾಹನನ್ನು ಸ್ತುತಿಸುತ್ತಾನೆ. (ಫತ್‌ಹುಲ್ ಬಾರಿ 11/114)

**94** ಇದನ್ನು ಬುಖಾರಿ ತನ್ನ ‘ಸಹೀಹ್’ನಲ್ಲಿ (5/2326; ಹದೀಸ್ ನಂ. 5953) ಮತ್ತು ‘ಅದಬುಲ್ ಮುಫ್ರದ್’ನಲ್ಲಿ (1/413; ಹದೀಸ್ ನಂ. 1205), ಅಬೂ ದಾವೂದ್ (2/732; ಹದೀಸ್ ನಂ. 5049), ತಿರ್ಮಿದಿ (5/481; ಹದೀಸ್ ನಂ. 3417) ಹುದೈಫಾ ಇಬ್ನುಲ್ ಯಮಾನ್‌ರಿಂದ ವರದಿ ಮಾಡಿದ್ದಾರೆ.

**95** ಇದನ್ನು ತಿರ್ಮಿದಿ (5/472; ಹದೀಸ್ ನಂ. 3401), ನಸಾಈ ತನ್ನ ‘ಸುನನುಲ್ ಕುಬ್ರಾ’ದಲ್ಲಿ (6/217; ಹದೀಸ್ ನಂ. 10702) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**ಬಾರಿ), ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ದೀಕಿ ದ್ದುನ್ಯಾ ವದೀಕಿ ಯೌಮಿಲ್ ಕಿಯಾಮಃ (ಹತ್ತು ಬಾರಿ)]**

"ಅಲ್ಲಾಹು ಮಹಾನನು, ಸ್ತುತಿ ಅಲ್ಲಾಹನಿಗೆ, ಅಲ್ಲಾಹನ ಸ್ತುತಿಯೊಂದಿಗೆ ಅವನ ಪರಿಪಾವನತೆಯನ್ನು ಕೊಂಡಾಡುತ್ತೇನೆ, ಸಾಮ್ರಾಟನೂ, ಪವಿತ್ರನೂ ಆಗಿರುವವನ ಪರಿಪಾವನತೆಯನ್ನು ಕೊಂಡಾಡುತ್ತೇನೆ, ಅಲ್ಲಾಹನೊಂದಿಗೆ ನಾನು ಕ್ಷಮೆಯಾಚಿಸುತ್ತೇನೆ, ಓ ಅಲ್ಲಾಹ್! ಇಹಲೋಕದ ಇಕ್ಕಟ್ಟುಗಳಿಂದ ಮತ್ತು ಅಂತ್ಯದಿನದ ಇಕ್ಕಟ್ಟುಗಳಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ."[96]

«لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ، سُبْحَانَ اللَّهِ، وَالْحَمْدُ لِلَّهِ، وَلَا إِلَهَ إِلَّا اللَّهُ، وَاللَّهُ أَكْبَرُ، وَلَا حَوْلَ وَلَا قُوَّةَ إِلَّا بِاللَّهِ الْعَلِيِّ الْعَظِيمِ، رَبِّ اغْفِرْ لِي»

**(ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್, ಸುಬ್‌ಹಾನಲ್ಲಾಹಿ, ವಲ್‌ಹಮ್ದುಲಿಲ್ಲಾಹಿ, ವಲಾಇಲಾಹ ಇಲ್ಲಲ್ಲಾಹು, ವಲ್ಲಾಹು ಅಕ್ಬರ್, ವಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹಿಲ್ ಅಲಿಯ್ಯಿಲ್ ಅದೀಮ್, ರಬ್ಬಿಗ್‌ಫಿರ್ ಲೀ)**

"ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ, ಅವನು ಏಕೈಕನೂ ಸಹಭಾಗಿರಹಿತನೂ ಆಗಿರುವನು, ಆಧಿಪತ್ಯವು ಅವನಿಗಾಗಿದೆ ಮತ್ತು ಸ್ತುತಿಯು ಅವನಿಗಾಗಿದೆ, ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ, ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ, ಅಲ್ಲಾಹನಿಗೆ ಸ್ತುತಿ, ಅಲ್ಲಾಹನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ, ಅಲ್ಲಾಹು ಮಹಾನನಾಗಿದ್ದಾನೆ, ಅಲ್ಲಾಹನ ಹೊರತು ಶಕ್ತಿಯಾಗಲಿ ಸಾಮರ್ಥ್ಯವಾಗಲಿ ಇಲ್ಲ, ಅವನು ಅತ್ಯುನ್ನತನೂ, ಮಹೋನ್ನತನೂ ಆಗಿದ್ದಾನೆ, ಪ್ರಭೂ! ನನಗೆ ಕ್ಷಮೆ ನೀಡು."[97]

**96** ಇದನ್ನು ಅಬೂ ದಾವೂದ್ (2/744; ಹದೀಸ್ ನಂ. 5085), ನಸಾಈ ತನ್ನ 'ಸುನನುಲ್ ಕುಬ್ರಾ'ದಲ್ಲಿ (6/218; ಹದೀಸ್ ನಂ. 10707) ಶರೀಕ್ ಅಲ್‌ಹೌಝುನೀರವರ ಹಾದಿಯಿಂದ ವರದಿ ಮಾಡಿದ್ದಾರೆ. ಇದೇ ಹದೀಸ್ ಆಸಿಮ್ ಇಬ್ನ್ ಹುಮೈದ್‌ರವರ ಹಾದಿಯಿಂದ ಹಾಗೂ ರಬೀಅ ಅಲ್‌ಜುರಶೀರವರ ಹಾದಿಯಿಂದ, ಅಬೂ ಹುರೈರಾರಿಂದ ವ್ಯತ್ಯಸ್ತ ಪದಗಳೊಂದಿಗೆ ವರದಿಯಾಗಿದೆ. ಶರೀಕ್ ಅಲ್‌ಹೌಝುನೀ ಎಂಬವರು ಆಯಿಶಾರೊಂದಿಗೆ ಪ್ರವಾದಿ(ﷺ)ರವರು ರಾತ್ರಿ ಎದ್ದ ನಂತರ ಯಾವುದರೊಂದಿಗೆ ಆರಂಭಿಸುತ್ತಿದ್ದರೆಂದು ಕೇಳಿದಾಗ ಅವರು ಪ್ರವಾದಿ(ﷺ)ರವರು ಎದ್ದೊಡನೆ ಈ ದಿಕ್ರ್‌ಗಳನ್ನು ಹೇಳಿದ ನಂತರ ನಮಾಝನ್ನು ಆರಂಭಿಸುತ್ತಿದ್ದರೆಂದು ಹೇಳುತ್ತಾರೆ.

**97** ಇದನ್ನು ಬುಖಾರಿ (1/387; ಹದೀಸ್ ನಂ. 1103), ಅಬೂ ದಾವೂದ್ (2/734; ಹದೀಸ್ ನಂ. 5060), ತಿರ್ಮಿದಿ (5/480; ಹದೀಸ್ ನಂ. 3414) ಉಬಾದ ಇಬ್ನು ಸ್ಸಾಮಿತ್‌ರಿಂದ ವರದಿ ಮಾಡಿದ್ದಾರೆ. ಹದೀಸಿನ ಕೊನೆಯಲ್ಲಿ ಪ್ರವಾದಿ(ﷺ)ರವರು ಹೇಳಿದ್ದಾರೆ: ನಿದ್ದೆಯಿಂದ ಎದ್ದ ನಂತರ ಈ ದಿಕ್ರ್ ಹೇಳಿ ಕೊನೆಯಲ್ಲಿ ರಬ್ಬಿಗ್‌ಫಿರ್ ಲೀ ಎಂದು ಹೇಳಿದವನಿಗೆ ಅಲ್ಲಾಹು ಕ್ಷಮಿಸುವನು, ಅಥವಾ ಅವನು ಪ್ರಾರ್ಥಿಸಿದರೆ ಅವನಿಗೆ ಉತ್ತರ ಲಭಿಸುವುದು ಮತ್ತು ಅವನು ವುದೂ ಮಾಡಿ ನಮಾಝ್ ಮಾಡಿದರೆ ಅವನ ನಮಾಝ್ ಸ್ವೀಕರಿಸಲ್ಪಡುವುದು.

## 8. ಉಡುಪು ಧರಿಸುವಾಗ

ಅಲ್ಲಾಹು ಹೇಳಿದ್ದಾನೆ:

﴿ يَـٰبَنِيٓ ءَادَمَ قَدْ أَنزَلْنَا عَلَيْكُمْ لِبَاسًا يُوَٰرِى سَوْءَٰتِكُمْ وَرِيشًا ۖ وَلِبَاسُ ٱلتَّقْوَىٰ ذَٰلِكَ خَيْرٌ ۚ ذَٰلِكَ مِنْ ءَايَـٰتِ ٱللَّهِ لَعَلَّهُمْ يَذَّكَّرُونَ ﴿٢٦﴾ ﴾

**"ಓ ಆದಮನ ಸಂತತಿಗಳೇ! ನಿಮ್ಮ ದೇಹದ ಲಜ್ಜಾಭಾಗಗಳನ್ನು ಮುಚ್ಚುವುದಕ್ಕಾಗಿ ಮತ್ತು ಒಂದು ಅಲಂಕಾರವಾಗಿ ನಾವು ನಿಮಗೆ ಉಡುಪುಗಳನ್ನು ಇಳಿಸಿಕೊಟ್ಟಿದ್ದೇವೆ. ಮತ್ತು ಭಯಭಕ್ತಿಯ ಉಡುಪು, ಅದು ಉತ್ತಮವಾಗಿದೆ. ಅದು ಅಲ್ಲಾಹನ ದೃಷ್ಟಾಂತಗಳಲ್ಲಿ ಸೇರಿದ್ದಾಗಿವೆ. ಅವರು ಬೋಧಿತರಾಗಲೂಬಹುದು."**[98]

ಪ್ರವಾದಿ(ﷺ)ರವರು ಹೇಳಿದರು:

«إِذَا لَبِسْتُمْ وَإِذَا تَوَضَّأْتُمْ فَابْدَؤُوا بِمَيَامِنِكُمْ»

**"ನೀವು ಉಡುಪನ್ನು ಧರಿಸುವಾಗ ಮತ್ತು ವುದೂ ಮಾಡುವಾಗ ಬಲಭಾಗದಿಂದ ಆರಂಭಿಸಿರಿ."**[99]

ಈ ವಿಷಯದಲ್ಲಿ ವರದಿಯಾದ ದಿಕ್ರ್:

«الْحَمْدُ لِلَّهِ الَّذِي كَسَانِي هَذَا الثَّوْبَ وَرَزَقَنِيهِ مِنْ غَيْرِ حَوْلٍ مِنِّي وَلَا قُوَّةٍ»

**(ಅಲ್‌ಹಮ್ದುಲಿಲ್ಲಾಹಿಲ್ಲದೀ ಕಸಾನೀ ಹಾದ ಸ್ಸೌಬ ವರಝಕನೀಹಿ ಮಿನ್ ಗೈರಿ ಹೌಲಿನ್ ಮಿನ್ನೀ ವಲಾ ಕುವ್ವಃ)**

"ಸ್ವಶಕ್ತಿಯಾಗಲಿ, ಸ್ವಸಾಮರ್ಥ್ಯವಾಗಲಿ ಇಲ್ಲದ ನನಗೆ ಈ ಉಡುಪನ್ನು ಉಡಿಸಿದ ಮತ್ತು ಇದನ್ನು ನನಗೆ ಒದಗಿಸಿದ ಅಲ್ಲಾಹನಿಗೆ ಸ್ತುತಿ."[100]

---

**98** ಕುರ್‌ಆನ್ 7/26

**99** ಇದನ್ನು ಅಬೂ ದಾವೂದ್ (2/468; ಹದೀಸ್ ನಂ. 4141), ಇಬ್ನ್ ಮಾಜ (1/141; ಹದೀಸ್ ನಂ. 402), ಅಹ್ಮದ್ (2/354; ಹದೀಸ್ ನಂ. 8637) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**100** 100 ಇದನ್ನು ಅಬೂ ದಾವೂದ್ (2/440; ಹದೀಸ್ ನಂ. 4023), ದಾರಿಮೀ ತನ್ನ 'ಸುನನ್'ನಲ್ಲಿ (2/378; ಹದೀಸ್ ನಂ. 2690), ಹಾಕಿಮ್ ತನ್ನ 'ಮುಸ್ತದ್ರಕ್'ನಲ್ಲಿ (1/687; ಹದೀಸ್ ನಂ. 1870) ಮುಆದ್ ಇಬ್ನ್ ಅನಸ್‌ರಿಂದ ವರದಿ ಮಾಡಿದ್ದಾರೆ. ಈ ರೀತಿ ಹೇಳುವವನ ಗತ ಪಾಪಗಳನ್ನು ಅಲ್ಲಾಹು ಕ್ಷಮಿಸುವನೆಂದು ಪ್ರವಾದಿ(ﷺ)ರವರು ಹೇಳಿದ್ದಾರೆ.

## 9. ಹೊಸ ಉಡುಪು ಧರಿಸುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ لَكَ الْحَمْدُ أَنْتَ كَسَوْتَنِيهِ، أَسْأَلُكَ مِنْ خَيْرِهِ وَخَيْرِ مَا صُنِعَ لَهُ، وَأَعُوذُ بِكَ مِنْ شَرِّهِ وَشَرِّ مَا صُنِعَ لَهُ»

**(ಅಲ್ಲಾಹುಮ್ಮ ಲಕಲ್ ಹಮ್ದು ಅನ್ತ ಕಸೌತನೀಹಿ, ಅಸ್‌ಅಲುಕ ಮಿನ್ ಖೈರಿಹೀ ವಖೈರಿ ಮಾ ಸುನಿಅ ಲಹೂ, ವಅಊದು ಬಿಕ ಮಿನ್ ಶರ್‍ರಿಹೀ ವಶರ್‍ರಿ ಮಾ ಸುನಿಅ ಲಹೂ)**

"ಓ ಅಲ್ಲಾಹ್! ನಿನಗೆ ಸ್ತುತಿ, ಈ ಉಡುಪನ್ನು ನೀನು ನನಗೆ ಉಡಿಸಿರುವೆ, ಇದರ ಒಳಿತನ್ನು ಮತ್ತು ಇದು ನಿರ್ಮಿಸಲ್ಪಟ್ಟುದರ ಒಳಿತನ್ನು ನಾನು ನಿನ್ನೊಂದಿಗೆ ಬೇಡುತ್ತೇನೆ, ಮತ್ತು ಇದರ ಕೆಡುಕಿನಿಂದ ಮತ್ತು ಇದು ನಿರ್ಮಿಸಲ್ಪಟ್ಟುದರ ಕೆಡುಕಿನಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತೇನೆ."(101)

## 10. ಇತರರು ಹೊಸ ಉಡುಪು ಧರಿಸಿರುವುದನ್ನು ಕಂಡಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«أَبْلِي وَأَخْلِقِي»

**(ಅಬ್ಲೀ ವಅಖ್ಲಿಕೀ)**

"ಧರಿಸು ಮತ್ತು ಹಳತಾಗಿಸು."(102)

---

**101** ಇದನ್ನು ಅಬೂ ದಾವೂದ್ (2/439; ಹದೀಸ್ ನಂ. 4020), ತಿರ್ಮಿದಿ (4/239; ಹದೀಸ್ ನಂ. 1767), ಅಹ್ಮದ್ (3/30; ಹದೀಸ್ ನಂ. 11266) ಅಬೂ ಸಈದ್ ಅಲ್ ಖುದ್ರೀರಿಂದ ವರದಿ ಮಾಡಿದ್ದಾರೆ. ಪ್ರವಾದಿ(ﷺ)ರವರು ಹೊಸ ಉಡುಪನ್ನು ಧರಿಸುವಾಗ ಆ ಉಡುಪಿನ ಹೆಸರನ್ನು ಹೇಳಿಕೊಂಡು ಉದಾ: ಅಂಗಿ, ರುಮಾಲು, ಈ ದಿಕ್ರನ್ನು ಹೇಳುತ್ತಿದ್ದರು.

**102** ಇದನ್ನು ಬುಖಾರಿ (5/2191; ಹದೀಸ್ ನಂ. 5485), ಅಬೂ ದಾವೂದ್ (2/440; ಹದೀಸ್ ನಂ. 4024), ಅಹ್ಮದ್ (6/364; ಹದೀಸ್ ನಂ. 27102) ಉಮ್ಮು ಖಾಲಿದ್‌ರಿಂದ ವರದಿ ಮಾಡಿದ್ದಾರೆ. ಪ್ರವಾದಿ(ﷺ)ರವರು ಈ ಮಾತನ್ನು ಉಮ್ಮು ಖಾಲಿದ್‌ರಿಗೆ ಹೇಳಿರುವುದರಿಂದಾಗಿ ಇಲ್ಲಿ ಸ್ತ್ರೀಲಿಂಗ ಪ್ರಯೋಗವುಂಟಾಗಿದೆ. ಹದೀಸಿನ ಪೂರ್ಣ ರೂಪವು ಹೀಗಿದೆ: ಒಮ್ಮೆ ಪ್ರವಾದಿ(ﷺ)ರವರ ಬಳಿಗೆ ಕಪ್ಪು ಬಣ್ಣದ ಸಣ್ಣ ಅಂಗಿಯೊಂದು ತರಲ್ಪಟ್ಟಿತು. ಪ್ರವಾದಿ(ﷺ)ರವರು ಕೇಳಿದರು: 'ಈ ಅಂಗಿಯನ್ನು ನಾನು ಯಾರಿಗೆ ಉಡಿಸುವೆನೆಂದು ನಿಮಗನಿಸುತ್ತದೆ'. ಜನರು ನಿಶಬ್ಧರಾದರು. ಪ್ರವಾದಿ(ﷺ)ರವರು ಹೇಳಿದರು: 'ಉಮ್ಮು ಖಾಲಿದ್‌ರನ್ನು ಕರೆತನ್ನಿರಿ'. ಹಾಗೆ ಉಮ್ಮು ಖಾಲಿದ್‌ರನ್ನು ಎತ್ತಿಕೊಂಡು ಬರಲಾಯಿತು (ಅವರು ಅಂದು ಮಗುವಾಗಿದ್ದರು). ಪ್ರವಾದಿ(ﷺ)ರವರು ಅಂಗಿಯನ್ನು ಆಕೆಗೆ ಉಡಿಸಿ ಮೇಲಿನ ಮಾತನ್ನು ಹೇಳಿದರು. ಅದು ಹಸಿರು ಅಥವಾ ಹಳದಿ ಕಲೆಗಳಿರುವ ಅಂಗಿಯಾಗಿತ್ತು. ಪ್ರವಾದಿ(ﷺ)ರವರು ನಂತರ ಹೇಳಿದರು: 'ಓ ಉಮ್ಮು ಖಾಲಿದ್, ಇದು ಸುಂದರವಾಗಿದೆ.'

«تُبْلِي وَيُخْلِفُ اللَّهُ تَعَالَى»

**(ತುಬ್ಲೀ ವಯುಖ್ಲಿಫುಲ್ಲಾಹು ತಆಲಾ)**

"ಧರಿಸು ಮತ್ತು ಅಲ್ಲಾಹು ನಿನಗೆ ಇದರ ನಂತರ (ಬೇರೊಂದನ್ನು) ನೀಡುವನು."[103]

«الْبَسْ جَدِيدًا، وَعِشْ حَمِيدًا، وَمُتْ شَهِيدًا»

**(ಇಲ್ಬಸ್ ಜದೀದನ್, ವಇಶ್ ಹಮೀದನ್, ವಮುತ್ ಶಹೀದನ್)**

"ಹೊಸದನ್ನು ಧರಿಸು, ಸ್ತುತ್ಯರ್ಹನಾಗಿ ಜೀವಿಸು ಮತ್ತು ಹುತಾತ್ಮನಾಗಿ ಮೃತಪಡು."[104]

## 11. ಮನೆಯಿಂದ ಹೊರಡುವಾಗ

ಪ್ರವಾದಿ(ﷺ)ರವರು ಹೇಳಿದರು:

«لَوْ أَنَّكُمْ كُنْتُمْ تَوَكَّلُونَ عَلَى اللَّهِ حَقَّ تَوَكُّلِهِ، لَرُزِقْتُمْ كَمَا يُرْزَقُ الطَّيْرُ تَغْدُوا خِمَاصًا وَتَرُوحُ بِطَانًا»

**"ಒಂದು ವೇಳೆ ನೀವು ಅಲ್ಲಾಹನ ಮೇಲೆ ಭಾರವನ್ನರ್ಪಿಸಬೇಕಾದ ರೀತಿಯಲ್ಲಿ ಭಾರವನ್ನರ್ಪಿಸುತ್ತಿದ್ದರೆ ಖಂಡಿತವಾಗಿಯೂ ಹಕ್ಕಿಗಳಿಗೆ ಅನ್ನಾಧಾರಗಳು ಲಭಿಸುವಂತೆ ನಿಮಗೂ ಲಭಿಸುತ್ತಿತ್ತು. ಅವುಗಳು (ಹಕ್ಕಿಗಳು) ಬೆಳಗ್ಗೆ ಬರಿಹೊಟ್ಟೆಯಲ್ಲಿ ಹೋಗಿ ಸಂಜೆ ತುಂಬಿದ ಹೊಟ್ಟೆಯೊಂದಿಗೆ ಮರಳುತ್ತವೆ."**[105]

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«بِسْمِ اللَّهِ تَوَكَّلْتُ عَلَى اللَّهِ، لَا حَوْلَ وَلَا قُوَّةَ إِلَّا بِاللَّهِ»

---

**103** ಇದನ್ನು ಅಬೂ ದಾವೂದ್ (2/439; ಹದೀಸ್ ನಂ. 4020), ಇಬ್ನ್ ಅಬೀ ಶೈಬಾ ತನ್ನ 'ಮುಸನ್ನಫ್'ನಲ್ಲಿ (5/189; ಹದೀಸ್ ನಂ. 25092), ಬೈಹಕೀ ತನ್ನ 'ಶುಅಬುಲ್ ಈಮಾನ್'ನಲ್ಲಿ (5/180; ಹದೀಸ್ ನಂ. 6284) ಅಬೂ ನದ್ರಃರಿಂದ ವರದಿ ಮಾಡಿದ್ದಾರೆ. ಯಾರಾದರೂ ಹೊಸ ಉಡುಪನ್ನು ಧರಿಸಿರುವುದನ್ನು ಕಂಡಾಗ ಸಹಾಬಿಗಳು ಹೀಗೆ ಹೇಳುತ್ತಿದ್ದರೆಂದು ಅಬೂ ನದ್ರಃ (ಅಲ್‌ಮುನ್ದಿರ್ ಇಬ್ನ್ ಮಾಲಿಕ್) ಇದರಲ್ಲಿ ಹೇಳಿದ್ದಾರೆ.

**104** ಇದನ್ನು ಇಬ್ನ್ ಮಾಜ (2/1178; ಹದೀಸ್ ನಂ. 3558), ಅಹ್ಮದ್ (2/88; ಹದೀಸ್ ನಂ. 5620) ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ. ಉಮರ್‌ರವರು ಬೆಳ್ಳಗಿನ ಅಂಗಿಯೊಂದನ್ನು ಧರಿಸಿರುವುದನ್ನು ಕಂಡಾಗ ಪ್ರವಾದಿ(ﷺ)ರವರು ಕೇಳಿದರು: 'ಇದು ತೊಳೆದದ್ದೇ ಅಥವಾ ಹೊಸತೇ?' ಅವರು ಹೇಳಿದರು: 'ಹೊಸತು'. ಆಗ ಪ್ರವಾದಿ(ﷺ)ರವರು ಈ ಮಾತನ್ನು ಹೇಳಿದರು.

**105** ಇದನ್ನು ತಿರ್ಮಿದಿ (4/573; ಹದೀಸ್ ನಂ. 2344), ಇಬ್ನ್ ಮಾಜ (2/1394; ಹದೀಸ್ ನಂ. 4164) ಉಮರ್ ಇಬ್ನುಲ್ ಖತ್ತಾಬ್‌ರಿಂದ ವರದಿ ಮಾಡಿದ್ದಾರೆ.

**(ಬಿಸ್ಮಿಲ್ಲಾಹಿ ತವಕ್ಕಲ್ತು ಅಲಲ್ಲಾಹಿ, ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್)**

"ಅಲ್ಲಾಹನ ನಾಮದೊಂದಿಗೆ, ನಾನು ಅಲ್ಲಾಹನ ಮೇಲೆ ಭಾರವನ್ನರ್ಪಿಸಿದೆನು, ಅಲ್ಲಾಹನ ಹೊರತು ಶಕ್ತಿಯಾಗಲಿ, ಸಾಮರ್ಥ್ಯವಾಗಲಿ ಇಲ್ಲ."(106)

«اللَّهُمَّ إِنِّي أَعُوذُ بِكَ أَنْ أَضِلَّ أَوْ أُضَلَّ، أَوْ أَزِلَّ أَوْ أُزَلَّ، أَوْ أَظْلِمَ أَوْ أُظْلَمَ، أَوْ أَجْهَلَ أَوْ يُجْهَلَ عَلَيَّ»

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಅನ್ ಅದಿಲ್ಲ ಅವ್ ಉದಲ್ಲ, ಅವ್ ಅಝಿಲ್ಲ ಅವ್ ಉಝಲ್ಲ, ಅವ್ ಅದ್ಲಿಮ ಅವ್ ಉದ್ಲಮ, ಅವ್ ಅಜ್‌ಹಲ ಅವ್ ಯುಜ್‌ಹಲ ಅಲಯ್ಯ)**

"ಓ ಅಲ್ಲಾಹ್! ನಾನು ದಾರಿಗೆಡುವುದರಿಂದ ಮತ್ತು ಇತರರು ನನ್ನನ್ನು ದಾರಿ ಗೆಡಿಸುವುದರಿಂದ, ನಾನು ವ್ಯತಿಚಲನಗೊಳ್ಳುವುದರಿಂದ ಮತ್ತು ಇತರರು ನನ್ನನ್ನು ವ್ಯತಿಚಲನಗೊಳಿಸುವುದರಿಂದ, ನಾನು ಅಕ್ರಮವೆಸಗುವುದರಿಂದ ಮತ್ತು ಇತರರಿಂದ ಅಕ್ರಮಿಸಲ್ಪಡುವುದರಿಂದ, ನಾನು ಮೂರ್ಖನಂತೆ ವರ್ತಿಸುವುದರಿಂದ ಮತ್ತು ಇತರರು ನನ್ನನ್ನು ಮೂರ್ಖನಂತೆ ನಡೆಸಿಕೊಳ್ಳುವುದರಿಂದ ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ."(107)

## 12. ಮನೆಯನ್ನು ಪ್ರವೇಶಿಸುವಾಗ

ಅಲ್ಲಾಹು ಹೇಳಿದ್ದಾನೆ:

﴿ فَإِذَا دَخَلْتُم بُيُوتًا فَسَلِّمُوا۟ عَلَىٰٓ أَنفُسِكُمْ تَحِيَّةً مِّنْ عِندِ ٱللَّهِ مُبَـٰرَكَةً طَيِّبَةً ﴾

**"ನೀವು ಮನೆಗಳನ್ನು ಪ್ರವೇಶಿಸಿದರೆ ಸ್ವತಃ ನಿಮ್ಮ ಮೇಲೆ ಸಲಾಮ್ ಹೇಳಿರಿ. ಇದು ಅಲ್ಲಾಹನ ಬಳಿಯ ಅನುಗ್ರಹೀತವಾದ, ಉತ್ತಮವಾದ ಅಭಿನಂದನೆಯಾಗಿದೆ."(108)**

﴿ يَـٰٓأَيُّهَا ٱلَّذِينَ ءَامَنُوا۟ لَا تَدْخُلُوا۟ بُيُوتًا غَيْرَ بُيُوتِكُمْ حَتَّىٰ تَسْتَأْنِسُوا۟ وَتُسَلِّمُوا۟ عَلَىٰٓ أَهْلِهَا ۚ ذَٰلِكُمْ خَيْرٌ لَّكُمْ لَعَلَّكُمْ تَذَكَّرُونَ ﴿٢٧﴾ فَإِن لَّمْ تَجِدُوا۟ فِيهَآ أَحَدًا فَلَا تَدْخُلُوهَا

---

**106** ಇದನ್ನು ಅಬೂ ದಾವೂದ್ (2/746; ಹದೀಸ್ ನಂ. 5095), ತಿರ್ಮಿದಿ (5/490; ಹದೀಸ್ ನಂ. 3426) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**107** ಇದನ್ನು ಅಬೂ ದಾವೂದ್ (2/746; ಹದೀಸ್ ನಂ. 5094) ಉಮ್ಮು ಸಲಮಾರಿಂದ ವರದಿ ಮಾಡಿದ್ದಾರೆ. ಪ್ರವಾದಿ(ﷺ)ರವರು ಈ ರೀತಿ ಹೇಳುವಾಗ ಮುಖವನ್ನು ಆಕಾಶದತ್ತ ಎತ್ತುತ್ತಿದ್ದರು.

**108** ಕುರ್‌ಆನ್ 24/61

حَتَّىٰ يُؤْذَنَ لَكُمْۖ وَإِن قِيلَ لَكُمُ ٱرْجِعُواْ فَٱرْجِعُواْۖ هُوَ أَزْكَىٰ لَكُمْۚ وَٱللَّهُ بِمَا تَعْمَلُونَ عَلِيمٌ ﴿٢٨﴾

**"ಓ ವಿಶ್ವಾಸವಿಟ್ಟವರೇ! ನೀವು ನಿಮ್ಮ ಮನೆಗಳ ಹೊರತು ಇತರರ ಮನೆಗಳನ್ನು ಅವರೊಂದಿಗೆ ಅನುಮತಿ ಕೇಳಿ ಅವುಗಳ (ಮನೆಗಳ) ನಿವಾಸಿಗಳ ಮೇಲೆ ಸಲಾಮ್ ಹೇಳುವವರೆಗೆ ಪ್ರವೇಶಿಸಬಾರದು. ಇದು (ಈ ವಿಧಾನ) ನಿಮಗೆ ಅತ್ಯುತ್ತಮವಾಗಿದೆ. ನೀವು ಜ್ಞಾಪಿತರಾಗಲೂಬಹುದು. ಅಲ್ಲಿ (ಆ ಮನೆಗಳಲ್ಲಿ) ನೀವು ಯಾರೊಬ್ಬರನ್ನೂ ಕಾಣದಿದ್ದರೂ ಕೂಡ ನಿಮಗೆ ಅನುಮತಿ ಲಭಿಸುವ ತನಕ ನೀವು ಅವುಗಳನ್ನು ಪ್ರವೇಶಿಸಬಾರದು. ನಿಮ್ಮೊಂದಿಗೆ ಮರಳಿ ಹೋಗಿರೆಂದು ಹೇಳಲಾದರೆ ನೀವು ಮರಳಿ ಹೋಗಿರಿ. ಇದು (ಈ ವಿಧಾನ) ನಿಮಗೆ ಸುಸಂಸ್ಕೃತವಾದುದ್ದಾಗಿದೆ. ನೀವು ಮಾಡುತ್ತಿರುವುದರ ಕುರಿತು ಅಲ್ಲಾಹು ಅರಿವುಳ್ಳವನಾಗಿದ್ದಾನೆ."**[109]

ಪ್ರವಾದಿ(ﷺ)ರವರು ಹೇಳಿದರು:

«رَجُلٌ دَخَلَ بَيْتَهُ بِسَلَامٍ فَهُوَ ضَامِنٌ عَلَى اللَّهِ عَزَّ وَجَلَّ»

**"ಸಲಾಮ್‌ನೊಂದಿಗೆ ತನ್ನ ಮನೆಯನ್ನು ಪ್ರವೇಶಿಸುವ ವ್ಯಕ್ತಿಯು ಅಲ್ಲಾಹನ ರಕ್ಷಣೆಯಲ್ಲಿರುವನು."**[110]

ಪ್ರವಾದಿ(ﷺ)ರವರು ಹೇಳಿದರು:

«إِذَا دَخَلَ الرَّجُلُ بَيْتَهُ فَذَكَرَ اللَّهَ عِنْدَ دُخُولِهِ وَعِنْدَ طَعَامِهِ، قَالَ الشَّيْطَانُ: لَا مَبِيتَ لَكُمْ وَلَا عَشَاءَ، وَإِذَا دَخَلَ فَلَمْ يَذْكُرِ اللَّهَ عِنْدَ دُخُولِهِ، قَالَ الشَّيْطَانُ: أَدْرَكْتُمُ الْمَبِيتَ، وَإِذَا لَمْ يَذْكُرِ اللَّهَ عِنْدَ طَعَامِهِ، قَالَ: أَدْرَكْتُمُ الْمَبِيتَ وَالْعَشَاءَ»

**"ಓರ್ವ ವ್ಯಕ್ತಿ ತನ್ನ ಮನೆಯನ್ನು ಪ್ರವೇಶಿಸುವಾಗ ಮತ್ತು ಆಹಾರವನ್ನು ಸೇವಿಸುವಾಗ ಅಲ್ಲಾಹನನ್ನು ಸ್ಮರಿಸಿದರೆ ಶೈತಾನನು (ತನ್ನ ಸಂಗಡಿಗರಿಗೆ) ಹೇಳುವನು: ನಿಮಗೆ (ಈ ಮನೆಯಲ್ಲಿ) ರಾತ್ರಿವಾಸವಾಗಲಿ, ರಾತ್ರಿಯೂಟವಾಗಲಿ ಇಲ್ಲ. (ತನ್ನ ಮನೆಯನ್ನು) ಪ್ರವೇಶಿಸುವಾಗ ಓರ್ವನು ಅಲ್ಲಾಹನನ್ನು ಸ್ಮರಿಸದಿದ್ದರೆ ಶೈತಾನನು (ತನ್ನ ಸಂಗಡಿಗರಿಗೆ) ಹೇಳುವನು: ನಿಮಗೆ (ಈ ಮನೆಯಲ್ಲಿ) ರಾತ್ರಿವಾಸವು ದೊರಕಿದೆ. ಆಹಾರವನ್ನು ಸೇವಿಸುವಾಗ ಅವನು ಅಲ್ಲಾಹನನ್ನು ಸ್ಮರಿಸದಿದ್ದರೆ ಅವನು (ಶೈತಾನನು) ಹೇಳುವನು:**

---

**109** ಕುರ್‌ಆನ್ 24/27–28

**110** ಇದನ್ನು ಬುಖಾರಿ ತನ್ನ 'ಅದಬುಲ್ ಮುಫ್ರದ್'ನಲ್ಲಿ (1/375; ಹದೀಸ್ ನಂ. 1094), ಅಬೂ ದಾವೂದ್ ತನ್ನ 'ಸುನನ್'ನಲ್ಲಿ (2/10; ಹದೀಸ್ ನಂ. 2494), ಇಬ್ನ್ ಹಿಬ್ಬಾನ್ ತನ್ನ 'ಸಹೀಹ್'ನಲ್ಲಿ (2/251; ಹದೀಸ್ ನಂ. 499) ಅಬೂ ಉಮಾಮಃ ಅಲ್‌ಬಾಹಿಲೀರಿಂದ ವರದಿ ಮಾಡಿದ್ದಾರೆ.

**ನಿಮಗೆ ರಾತ್ರಿವಾಸವೂ ರಾತ್ರಿಯೂಟವೂ ದೊರಕಿದೆ."**(111)

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ إِنِّي أَسْأَلُكَ خَيْرَ الْمَوْلِجِ وَخَيْرَ الْمَخْرَجِ، بِسْمِ اللَّهِ وَلَجْنَا، وَبِسْمِ اللَّهِ خَرَجْنَا، وَعَلَى اللَّهِ رَبِّنَا تَوَكَّلْنَا»

**(ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಖೈರಲ್ ಮೌಲಿಜಿ ವಖೈರಲ್ ಮಖ್ರಜಿ, ಬಿಸ್ಮಿಲ್ಲಾಹಿ ವಲಜ್‌ನಾ, ವಬಿಸ್ಮಿಲ್ಲಾಹಿ ಖರಜ್‌ನಾ, ವಅಲಲ್ಲಾಹಿ ರಬ್ಬಿನಾ ತವಕ್ಕಲ್‌ನಾ)**

"ಓ ಅಲ್ಲಾಹ್! (ಈ ಮನೆಯನ್ನು) ಪ್ರವೇಶಿಸುವುದರ ಒಳಿತನ್ನು ಮತ್ತು (ಇದ-ರಿಂದ) ಹೊರಡುವುದರ ಒಳಿತನ್ನು ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ. ಅಲ್ಲಾಹನ ನಾಮದೊಂದಿಗೆ ನಾವು (ಈ ಮನೆಯನ್ನು) ಪ್ರವೇಶಿಸಿದ್ದೇವೆ ಮತ್ತು ಅಲ್ಲಾಹನ ನಾಮದೊಂದಿಗೆ ನಾವು (ಇದರಿರಿಂದ) ಹೊರಡಿದ್ದೇವೆ. ಮತ್ತು ನಮ್ಮ ಪ್ರಭುವಾದ ಅಲ್ಲಾಹನ ಮೇಲೆ ನಾವು ಭಾರವನ್ನರ್ಪಿಸಿದ್ದೇವೆ."(112)

## 13. ರಾತ್ರಿ ಮನೆಯಿಂದ ಹೊರಬಂದರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

﴿ إِنَّ فِي خَلْقِ ٱلسَّمَٰوَٰتِ وَٱلْأَرْضِ وَٱخْتِلَٰفِ ٱلَّيْلِ وَٱلنَّهَارِ لَءَايَٰتٍ لِّأُو۟لِى ٱلْأَلْبَٰبِ ﴿١٩٠﴾ ٱلَّذِينَ يَذْكُرُونَ ٱللَّهَ قِيَٰمًا وَقُعُودًا وَعَلَىٰ جُنُوبِهِمْ وَيَتَفَكَّرُونَ فِى خَلْقِ ٱلسَّمَٰوَٰتِ وَٱلْأَرْضِ رَبَّنَا مَا خَلَقْتَ هَٰذَا بَٰطِلًا سُبْحَٰنَكَ فَقِنَا عَذَابَ ٱلنَّارِ ﴿١٩١﴾ ﴾

**(ಇನ್ನ ಫೀ ಖಲ್ಕಿ ಸ್ಸಮಾವಾತಿ ವಲ್ ಅರ್‌ದಿ ವಖ್ತಿಲಾಫಿ ಲ್ಲೈಲಿ ವನ್ನಹಾರಿ ಲಆಯಾತಿ ಲ್ಲಿಉಲಿಲ್ ಅಲ್ಬಾಬ್, ಅಲ್ಲದೀನ ಯದ್ಕುರೂನಲ್ಲಾಹ ಕಿಯಾಮನ್ ವಕುಊದನ್ ವಅಲಾ ಜುನೂಬಿಹಿಮ್ ವಯತಫಕ್ಕರೂನ ಫೀ ಖಲ್ಕಿ ಸ್ಸಮಾವಾತಿ ವಲ್ ಅರ್‌ದಿ ರಬ್ಬನಾ ಮಾ ಖಲಕ್ತ ಹಾದಾ ಬಾತಿಲನ್ ಸುಬ್‌ಹಾನಕ ಫಕಿನಾ ಅದಾಬನ್ನಾರ್)**

---

**111** ಇದನ್ನು ಬುಖಾರಿ ತನ್ನ 'ಅದಬುಲ್ ಮುಫ್ರದ್'ನಲ್ಲಿ (1/376; ಹದೀಸ್ ನಂ. 1096), ಮುಸ್ಲಿಮ್ (3/1598; ಹದೀಸ್ ನಂ. 2018), ಅಬೂ ದಾವೂದ್ (2/374; ಹದೀಸ್ ನಂ. 3765), ನಸಾಈ ತನ್ನ 'ಸುನನುಲ್ ಕುಬ್ರಾ'ದಲ್ಲಿ (4/174; ಹದೀಸ್ ನಂ. 6757) ಜಾಬಿರ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

**112** ಇದನ್ನು ಅಬೂ ದಾವೂದ್ (2/747; ಹದೀಸ್ ನಂ. 5096), ತಬರಾನೀ ತನ್ನ 'ಮುಅ್‌ಜಮುಲ್ ಕಬೀರ್'ನಲ್ಲಿ (3/296; ಹದೀಸ್ ನಂ. 3452) ಮತ್ತು 'ಮುಸ್ನದು ಶ್ಯಾಮಿಯ್ಯೀನ್'ನಲ್ಲಿ (2/447; ಹದೀಸ್ ನಂ. 1674) ಅಬೂ ಮಾಲಿಕ್ ಅಲ್‌ಅಶ್‌ಅರೀರಿಂದ ವರದಿ ಮಾಡಿದ್ದಾರೆ. ಇದನ್ನು ಹೇಳಿದ ನಂತರ ಮನೆಯವರಿಗೆ ಸಲಾಮ್ ಹೇಳಬೇಕೆಂದು ಪ್ರವಾದಿ(ﷺ)ರವರು ಹೇಳಿದ್ದಾರೆ.

"ನಿಂತಿರುವಾಗಲೂ, ಕುಳಿತಿರುವಾಗಲೂ, ಪಾರ್ಶ್ವಕ್ಕೊರಗಿ (ಮಲಗಿ)ರುವಾಗಲೂ ಅಲ್ಲಾಹನನ್ನು ಸ್ಮರಿಸುವ ಮತ್ತು ಧರಿತ್ರಿ ದಿಗಂತಗಳ ಸೃಷ್ಟಿಯ ಕುರಿತು ಚಿಂತಿಸುವ ಬುದ್ಧಿವಂತರಿಗೆ ಖಂಡಿತವಾಗಿಯೂ ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲೂ, ರಾತ್ರಿ ಹಗಲುಗಳ ಬದಲಾವಣೆಗಳಲ್ಲೂ (ಅಸಂಖ್ಯ) ದೃಷ್ಟಾಂತಗಳಿವೆ. (ಅವರು ಹೇಳುವರು:) ನಮ್ಮ ಪ್ರಭೂ! ನೀನಿದನ್ನು ವ್ಯರ್ಥವಾಗಿ ಸೃಷ್ಟಿಸಿಲ್ಲ. ನಿನ್ನ ಪರಿಪಾವನತೆಯನ್ನು ನಾನು ಕೊಂಡಾಡುತ್ತೇನೆ. ಆದ್ದರಿಂದ ನಮ್ಮನ್ನು ನರಕಯಾತನೆಯಿಂದ ಪಾರುಗೊಳಿಸು."(113)

«اللَّهُمَّ رَبَّنَا لَكَ الْحَمْدُ، أَنْتَ قَيِّمُ السَّمَاوَاتِ وَالْأَرْضِ وَمَنْ فِيهِنَّ، وَلَكَ الْحَمْدُ، لَكَ مُلْكُ السَّمَاوَاتِ وَالْأَرْضِ وَمَنْ فِيهِنَّ، وَلَكَ الْحَمْدُ، أَنْتَ نُورُ السَّمَاوَاتِ وَالْأَرْضِ، وَلَكَ الْحَمْدُ، أَنْتَ مَلِكُ السَّمَاوَاتِ وَالْأَرْضِ، وَلَكَ الْحَمْدُ، أَنْتَ الْحَقُّ، وَوَعْدُكَ الْحَقُّ، وَلِقَاؤُكَ حَقٌّ، وَقَوْلُكَ حَقٌّ، وَالْجَنَّةُ حَقٌّ، وَالنَّارُ حَقٌّ، وَالنَّبِيُّونَ حَقٌّ، وَمُحَمَّدٌ صَلَّى اللَّهُ عَلَيْهِ وَسَلَّمَ حَقٌّ، وَالسَّاعَةُ حَقٌّ، اللَّهُمَّ لَكَ أَسْلَمْتُ، وَبِكَ آمَنْتُ، وَعَلَيْكَ تَوَكَّلْتُ، وَإِلَيْكَ أَنَبْتُ، وَبِكَ خَاصَمْتُ، وَإِلَيْكَ حَاكَمْتُ، فَاغْفِرْ لِي مَا قَدَّمْتُ وَمَا أَخَّرْتُ، وَمَا أَسْرَرْتُ وَمَا أَعْلَنْتُ، أَنْتَ الْمُقَدِّمُ وَأَنْتَ الْمُؤَخِّرُ، لَا إِلَهَ إِلَّا أَنْتَ»

**(ಅಲ್ಲಾಹುಮ್ಮ ರಬ್ಬನಾ ಲಕಲ್ ಹಮ್ದು, ಅನ್ತ ಕಯ್ಯಿಮು ಸ್ಸಮಾವಾತಿ ವಲ್ ಅರ್‌ದಿ ವಮನ್ ಫೀಹಿನ್ನ, ವಲಕಲ್ ಹಮ್ದು, ಲಕ ಮುಲ್ಕು ಸ್ಸಮಾವಾತಿ ವಲ್ ಅರ್‌ದಿ ವಮನ್ ಫೀಹಿನ್ನ, ವಲಕಲ್ ಹಮ್ದು, ಅನ್ತ ನೂರು ಸ್ಸಮಾವಾತಿ ವಲ್ ಅರ್‌ದಿ, ವಲಕಲ್ ಹಮ್ದು, ಅನ್ತ ಮಲಿಕು ಸ್ಸಮಾವಾತಿ ವಲ್ ಅರ್‌ದಿ, ವಲಕಲ್ ಹಮ್ದು, ಅನ್ತಲ್ ಹಕ್ಕು, ವವಅ್‌ದುಕಲ್ ಹಕ್ಕು, ವಲಿಕಾಉಕ ಹಕ್ಕುನ್, ವಕೌಲುಕ ಹಕ್ಕುನ್, ವಲ್ ಜನ್ನತು ಹಕ್ಕುನ್, ವನ್ನಾರು ಹಕ್ಕುನ್, ವನ್ನಬಿಯ್ಯೂನ ಹಕ್ಕುನ್, ವಮುಹಮ್ಮದುನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ಹಕ್ಕುನ್, ವಸ್ಸಾಅತು ಹಕ್ಕುನ್, ಅಲ್ಲಾಹುಮ್ಮ ಲಕ ಅಸ್ಲಮ್ತು, ವಬಿಕ ಆಮನ್ತು, ವಅಲೈಕ ತವಕ್ಕಲ್ತು, ವಇಲೈಕ ಅನಬ್ತು, ವಬಿಕ ಖಾಸಮ್ತು, ವಇಲೈಕ ಹಾಕಮ್ತು, ಫಗ್‌ಫಿರ್ ಲೀ ಮಾ ಕದ್ದಮ್ತು ವಮಾ ಅಖ್ಖರ್ತು, ವಮಾ ಅಸ್ರರ್ತು ವಮಾ ಅಅ್‌ಲನ್ತು, ಅನ್ತಲ್ ಮುಕದ್ದಿಮು ವಅನ್ತಲ್ ಮುಅಖ್ಖಿರು, ಲಾ ಇಲಾಹ ಇಲ್ಲಾ ಅನ್ತ್)**

"ಓ ಅಲ್ಲಾಹ್! ನಮ್ಮ ಪ್ರಭೂ! ನಿನಗೆ ಸ್ತುತಿ. ಆಕಾಶಗಳ, ಭೂಮಿಯ ಮತ್ತು ಅವುಗಳಲ್ಲಿರುವುದೆಲ್ಲದರ ನಿಯಂತ್ರಕನು ನೀನಾಗಿರುವೆ. ಮತ್ತು ನಿನಗೆ ಸ್ತುತಿ. ಆಕಾಶಗಳ,

---

**113** ಕುರ್‌ಆನ್ 3/190–191, ಇದನ್ನು ಬುಖಾರಿ (4/1665; ಹದೀಸ್ ನಂ. 4293), ಮುಸ್ಲಿಮ್ (1/221; ಹದೀಸ್ ನಂ. 256) ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ. ಇದನ್ನು ಹೇಳುವಾಗ ಪ್ರವಾದಿ(ﷺ)ರವರು ಆಕಾಶದೆಡೆಗೆ ನೋಡುತ್ತಿದ್ದರು.

ಭೂಮಿಯ ಮತ್ತು ಅವುಗಳಲ್ಲಿರುವುದೆಲ್ಲದರ ಆಧಿಪತ್ಯವು ನಿನ್ನದಾಗಿದೆ. ಮತ್ತು ನಿನಗೆ ಸ್ತುತಿ. ಆಕಾಶಗಳ ಮತ್ತು ಭೂಮಿಯ ಬೆಳಕು(114) ನೀನಾಗಿರುವೆ. ಮತ್ತು ನಿನಗೆ ಸ್ತುತಿ. ಆಕಾಶಗಳ ಮತ್ತು ಭೂಮಿಯ ಸಾಮ್ರಾಟನು ನೀನಾಗಿರುವೆ. ಮತ್ತು ನಿನಗೆ ಸ್ತುತಿ. ನೀನು ಸತ್ಯವಾಗಿರುವೆ, ನಿನ್ನ ವಾಗ್ದಾನವು ಸತ್ಯವಾಗಿದೆ, ನಿನ್ನ ಭೇಟಿಯು ಸತ್ಯವಾಗಿದೆ, ನಿನ್ನ ಮಾತು ಸತ್ಯವಾಗಿದೆ, ಸ್ವರ್ಗವು ಸತ್ಯವಾಗಿದೆ, ನರಕವು ಸತ್ಯವಾಗಿದೆ, ಪ್ರವಾದಿಗಳು ಸತ್ಯವಾಗಿದ್ದಾರೆ, ಮುಹಮ್ಮದ್(ﷺ) ಸತ್ಯವಾಗಿದ್ದಾರೆ, ಪುನರುತ್ಥಾನವು ಸತ್ಯವಾಗಿದೆ, ಓ ಅಲ್ಲಾಹ್! ನಿನಗೆ ನಾನು ಶರಣಾಗಿದ್ದೇನೆ, ನಿನ್ನಲ್ಲಿ ನಾನು ವಿಶ್ವಾಸವಿಟ್ಟಿದ್ದೇನೆ, ನಿನ್ನ ಮೇಲೆ ನಾನು ಭರವಸೆಯಿಟ್ಟಿದ್ದೇನೆ, ನಿನ್ನೆಡೆಗೆ ನಾನು (ಪಶ್ಚಾತ್ತಾಪದೊಂದಿಗೆ) ಮರಳಿದ್ದೇನೆ, ನಿನ್ನಿಂದಾಗಿ ನಾನು ತರ್ಕಿಸುತ್ತೇನೆ(115), (ನಮ್ಮ ನಡುವಿನ ವ್ಯಾಜ್ಯಗಳಿಗೆ) ನಾನು ನಿನ್ನನ್ನು ತೀರ್ಪುಗಾರನನ್ನಾಗಿಸುತ್ತೇನೆ. ಆದ್ದರಿಂದ ನನ್ನ ಗತ ಮತ್ತು ಮುಂಬರುವ ಪಾಪಗಳನ್ನು ಕ್ಷಮಿಸು, ನಾನು ಬಚ್ಚಿಟ್ಟಿರುವುದನ್ನು ಮತ್ತು ಜಾಹೀರುಗೊಳಿಸಿರುವುದನ್ನು (ಕ್ಷಮಿಸು). (ಜನರನ್ನು) ಮುಂದಿನವರನ್ನಾಗಿಯೂ, ಹಿಂದುಳಿದವರನ್ನಾಗಿಯೂ ಮಾಡುವವನು ನೀನಾಗಿರುವೆ. ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ."(116)

## 14. ಮಲಮೂತ್ರ ವಿಸರ್ಜನಾ ಸ್ಥಳವನ್ನು ಪ್ರವೇಶಿಸುವಾಗ

ಪ್ರವಾದಿ(ﷺ)ರವರು ಹೇಳಿದರು:

«إِذَا أَتَيْتُمُ الْغَائِطَ فَلَا تَسْتَقْبِلُوا الْقِبْلَةَ وَلَا تَسْتَدْبِرُوهَا، وَلَكِنْ شَرِّقُوا أَوْ غَرِّبُوا»

**"ನೀವು ಮಲಮೂತ್ರ ವಿಸರ್ಜನಾ ಸ್ಥಳವನ್ನು ಹೊಕ್ಕರೆ ಕಿಬ್ಲಾವನ್ನು ಅಭಿಮುಖೀ ಕರಿಸುವುದಾಗಲಿ ಹಿಮ್ಮುಖೀಕರಿಸುವುದಾಗಲಿ ಮಾಡಬಾರದು, ಆದರೆ ಪೂರ್ವಕ್ಕೆ ಅಥವಾ ಪಶ್ಚಿಮಕ್ಕೆ ತಿರುಗಿಕೊಳ್ಳಿರಿ."**(117)

عَنِ ابْنِ عُمَرَ رَضِيَ اللَّهُ عَنْهُمَا أَنَّ رَجُلًا مَرَّ وَرَسُولُ اللَّهِ صَلَّى اللَّهُ عَلَيْهِ وَسَلَّمَ يَبُولُ، فَسَلَّمَ فَلَمْ يَرُدَّ عَلَيْهِ»

---

**114** ಅರ್ಥಾತ್ ಬೆಳಗಿಸುವವನು.

**115** ಅರ್ಥಾತ್ ನಿನ್ನ ಸಹಾಯದಿಂದ ನಾನು ವಿರೋಧಿಗಳೊಂದಿಗೆ ಮತ್ತು ಅವಿಶ್ವಾಸಿಗಳೊಂದಿಗೆ ತರ್ಕಿಸುತ್ತೇನೆ.

**116** ಇದನ್ನು ಬುಖಾರಿ (1/377; ಹದೀಸ್ ನಂ. 1069), ಮುಸ್ಲಿಮ್ (1/532; ಹದೀಸ್ ನಂ. 769) ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

**117** ಇದನ್ನು ಬುಖಾರಿ (1/154; ಹದೀಸ್ ನಂ. 386), ಮುಸ್ಲಿಮ್ (1/124; ಹದೀಸ್ ನಂ. 264) ಅಬೂ ಅಯ್ಯೂಬ್ ಅಲ್‌ಅನ್ಸಾರೀರಿಂದ ವರದಿ ಮಾಡಿದ್ದಾರೆ. ಕಿಬ್ಲಾ ಮದೀನದ ದಕ್ಷಿಣ ದಿಕ್ಕಿನಲ್ಲಿದ್ದುದರಿಂದ ಈ ರೀತಿ ಹೇಳಲಾಗಿದೆ. ಈ ಹದೀಸನ್ನು ಗ್ರಹಿಸುವಾಗ ನಾವು ಕಿಬ್ಲಾದ ದಿಕ್ಕನ್ನು ಪ್ರತ್ಯೇಕವಾಗಿ ಪರಿಗಣಿಸಬೇಕಾಗಿದೆ.

**"ಇಬ್ನ್ ಉಮರ್(ﷺ)ರಿಂದ: ಅಲ್ಲಾಹನ ಸಂದೇಶವಾಹಕ(ﷺ)ರವರು ಮೂತ್ರ ವಿಸರ್ಜನೆ ಮಾಡುತ್ತಿರುವಾಗ ಅವರ ಬಳಿಯಿಂದ ಹಾದು ಹೋದ ವ್ಯಕ್ತಿಯೊಬ್ಬರು ಸಲಾಮ್ ಹೇಳಿದರು, ಆದರೆ ಪ್ರವಾದಿ(ﷺ)ರವರು ಅದಕ್ಕೆ ಉತ್ತರಿಸಲಿಲ್ಲ."[118]**

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«بِسْمِ اللَّهِ»

**(ಬಿಸ್ಮಿಲ್ಲಾಹ್)**

"ಅಲ್ಲಾಹನ ನಾಮದೊಂದಿಗೆ"[119]

«اللَّهُمَّ إِنِّي أَعُوذُ بِكَ مِنَ الْخُبُثِ وَالْخَبَائِثِ»

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಖುಬುಸಿ ವಲ್ ಖಬಾಇಸ್)**

"ಓ ಅಲ್ಲಾಹ್! ನಾನು ಖುಬುಸ್[120] ಮತ್ತು ಖಬಾಇಸ್‌ನಿಂದ ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ."[121]

## 15. ಮಲಮೂತ್ರ ವಿಸರ್ಜನಾ ಸ್ಥಳದಿಂದ ಹೊರಬರುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«غُفْرَانَكَ»

**(ಗುಫ್ರಾನಕ್)**

---

**118** ಇದನ್ನು ಮುಸ್ಲಿಮ್ (1/281; ಹದೀಸ್ ನಂ. 370), ಅಬೂ ದಾವೂದ್ (1/51; ಹದೀಸ್ ನಂ. 16), ತಿರ್ಮಿದಿ (5/71; ಹದೀಸ್ ನಂ. 2720), ನಸಾಈ (1/35; ಹದೀಸ್ ನಂ. 37), ಇಬ್ನ್ ಮಾಜ (1/121; ಹದೀಸ್ ನಂ. 353), ಇಬ್ನ್ ಖುಝೈಮಃ ತನ್ನ 'ಸಹೀಹ್'ನಲ್ಲಿ (1/40; ಹದೀಸ್ ನಂ. 73), ಬೈಹಕೀ ತನ್ನ 'ಸುನನುಲ್ ಕುಬ್ರಾ'ದಲ್ಲಿ (1/99; ಹದೀಸ್ ನಂ. 486) ವರದಿ ಮಾಡಿದ್ದಾರೆ. ನವವೀ ಹೇಳಿದ್ದಾರೆ: ಮಲಮೂತ್ರ ವಿಸರ್ಜನೆ ಮಾಡುವಾಗ ಸಲಾಮ್ ಹೇಳುವುದು ಮತ್ತು ಅದಕ್ಕೆ ಉತ್ತರಿಸುವುದು ಕರಾಹತ್ ತನ್ಝೀಹ್ ಆಗಿದೆಯೇ ಹೊರತು ಕರಾಹತ್ ತಹ್ರೀಮ್ ಅಲ್ಲ. ಈ ರೀತಿ ಮಾಡುವವನು ಶಿಕ್ಷಿಸಲ್ಪಡಲಾರನು. (ನೋಡಿ: ಶರ್ಹು ಮುಸ್ಲಿಮ್ 4/65)

**119** ಇದನ್ನು ಇಬ್ನ್ ಮಾಜ (1/109; ಹದೀಸ್ ನಂ. 297) ಅಲೀ ಇಬ್ನ್ ಅಬೀ ತಾಲಿಬ್‌ರಿಂದ ವರದಿ ಮಾಡಿದ್ದಾರೆ.

**120** 'ಖುಬುಸ್' ಎಂಬುದು 'ಖಬೀಸ್' ಎಂಬುದರ ಬಹುವಚನವಾಗಿದೆ. 'ಖಬಾಇಸ್' ಎಂಬುದು 'ಖಬೀಸ' ಎಂಬುದರ ಬಹುವಚನವಾಗಿದೆ. ಲಿಂಗಬೇಧದ ಹೊರತು ಇವೆರಡರ ಅರ್ಥವೂ ಮ್ಲೇಚ್ಛ, ಮಲಿನ ಅಥವಾ ಕೆಟ್ಟ ಎಂದಾಗಿದೆ. ಖತ್ತಾಬೀ, ಇಬ್ನ್ ಹಿಬ್ಬಾನ್ ಇವುಗಳನ್ನು ಅನುಕ್ರಮವಾಗಿ ಗಂಡು ಪಿಶಾಚಿಗಳು ಮತ್ತು ಹೆಣ್ಣು ಪಿಶಾಚಿಗಳು ಎಂದು ಹೇಳಿದ್ದಾರೆ. (ಫತ್‌ಹುಲ್ ಬಾರಿ 1/243)

**121** ಇದನ್ನು ಬುಖಾರಿ (1/66; ಹದೀಸ್ ನಂ. 142), ಮುಸ್ಲಿಮ್ (1/283; ಹದೀಸ್ ನಂ. 375) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

"(ಓ ಅಲ್ಲಾಹ್) ನಿನ್ನೊಂದಿಗೆ ಕ್ಷಮೆಯನ್ನು ಬೇಡುತ್ತಿದ್ದೇನೆ"(122)

## 16. ವುದೂ ಮಾಡಲು ಪ್ರಾರಂಭಿಸುವಾಗ

ಪ್ರವಾದಿ(ﷺ)ರವರು ಹೇಳಿದರು:

«لَا صَلَاةَ لِمَنْ لَا وُضُوءَ لَهُ، وَلَا وُضُوءَ لِمَنْ لَمْ يَذْكُرِ اسْمَ اللَّهِ عَلَيْهِ»

**"ವುದೂ ಇಲ್ಲದವನಿಗೆ ನಮಾಝ್ ಇಲ್ಲ, (ವುದೂ ಮಾಡುವಾಗ) ಅಲ್ಲಾಹನ ಹೆಸರನ್ನು ಉಚ್ಚರಿಸದವನಿಗೆ ವುದೂ ಇಲ್ಲ."(123)**

'ಬಿಸ್ಮಿಲ್ಲಾಹ್' ಎನ್ನುವ ಹೊರತು ಈ ವಿಷಯದಲ್ಲಿ ಯಾವುದೇ ದಿಕ್ರ್ ವರದಿಯಾಗಿಲ್ಲ. ಅಂಗಾಂಗಗಳನ್ನು ತೊಳೆಯುವಾಗ ಹೇಳಬೇಕಾದ ಯಾವುದೇ ದಿಕ್ರ್ ಕೂಡ ಪ್ರವಾದಿ(ﷺ)ರವರ ಸುನ್ನತ್‌ನಲ್ಲಿ ವರದಿಯಾಗಿಲ್ಲ.

## 17. ವುದೂ ಪೂರ್ತೀಕರಿಸಿದ ನಂತರ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«أَشْهَدُ أَنْ لَا إِلَهُ إِلَّا اللَّهُ وَحْدَهُ لَا شَرِيكَ لَهُ، وَأَشْهَدُ أَنَّ مُحَمَّدًا عَبْدُهُ وَرَسُولُهُ، [اللَّهُمَّ اجْعَلْنِي مِنَ التَّوَّابِينَ، وَاجْعَلْنِي مِنَ الْمُتَطَهِّرِينَ]»

**(ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹೂ, [ಅಲ್ಲಾಹುಮ್ಮಜ್‌ಅಲ್‌ನೀ ಮಿನ ತ್ತವ್ವಾಬೀನ ವಜ್‌ಅಲ್‌ನೀ ಮಿನಲ್ ಮುತತಹ್ಹಿರೀನ್])**

"ಅಲ್ಲಾಹನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲವೆಂದೂ ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆಂದೂ ನಾನು ಸಾಕ್ಷ್ಯವಹಿಸುತ್ತೇನೆ. ಮುಹಮ್ಮದ್(ﷺ) ಅವನ ದಾಸನೂ ಸಂದೇಶವಾಹಕನೂ ಆಗಿದ್ದಾರೆಂದೂ ನಾನು

---

**122** ಇದನ್ನು ಬುಖಾರಿ ತನ್ನ 'ಅದಬುಲ್ ಮುಫ್ರದ್'ನಲ್ಲಿ (1/240; ಹದೀಸ್ ನಂ. 693), ಅಬೂ ದಾವೂದ್ (1/55; ಹದೀಸ್ ನಂ. 30), ತಿರ್ಮಿದಿ (1/12; ಹದೀಸ್ ನಂ. 7), ನಸಾಈ ತನ್ನ 'ಸುನನುಲ್ ಕುಬ್ರಾ'ದಲ್ಲಿ (6/24; ಹದೀಸ್ ನಂ. 9907), ಇಬ್ನ್ ಮಾಜ (1/110; ಹದೀಸ್ ನಂ. 300), ಅಹ್ಮದ್ (6/155; ಹದೀಸ್ ನಂ. 25261) ಆಯಿಶಾರಿಂದ ವರದಿ ಮಾಡಿದ್ದಾರೆ.

**123** ಇದನ್ನು ಅಬೂ ದಾವೂದ್ (1/73; ಹದೀಸ್ ನಂ. 101), ಇಬ್ನ್ ಮಾಜ (1/140; ಹದೀಸ್ ನಂ. 399), ಅಹ್ಮದ್ (2/418; ಹದೀಸ್ ನಂ. 9408), ಹಾಕಿಮ್ ತನ್ನ 'ಮುಸ್ತದ್ರಕ್'ನಲ್ಲಿ (1/245; ಹದೀಸ್ ನಂ. 518), ತಬರಾನೀ ತನ್ನ 'ಮುಅ್‌ಜಮುಲ್ ಅವ್ಸತ್'ನಲ್ಲಿ (8/96; ಹದೀಸ್ ನಂ. 8080), ಅಬೂ ಯಅ್‌ಲಾ ತನ್ನ 'ಮುಸ್ನದ್'ನಲ್ಲಿ (11/293; ಹದೀಸ್ ನಂ. 6409), ಬೈಹಕೀ ತನ್ನ 'ಸುನನುಲ್ ಕುಬ್ರಾ'ದಲ್ಲಿ (1/41; ಹದೀಸ್ ನಂ. 183) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

ಸಾಕ್ಷ್ಯವಹಿಸುತ್ತೇನೆ. ಓ ಅಲ್ಲಾಹ್! ನಿರಂತರವಾಗಿ ಕ್ಷಮೆಯಾಚಿಸುವವರೊಡನೆ ನನ್ನನ್ನು ಸೇರಿಸು ಮತ್ತು ಸದಾ ಶುಚಿಯಾಗಿರುವವರೊಡನೆ ನನ್ನನ್ನು ಸೇರಿಸು."[124]

«سُبْحَانَكَ اللَّهُمَّ وَبِحَمْدِكَ أَشْهَدُ أَنْ لَا إِلَهَ إِلَّا أَنْتَ أَسْتَغْفِرُكَ وَأَتُوبُ إِلَيْكَ»

**(ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ ಅಶ್‌ಹದು ಅನ್ ಲಾ ಇಲಾಹ ಇಲ್ಲಾ ಅನ್ತ ಅಸ್ತಗ್ಫಿರುಕ ವಅತೂಬು ಇಲೈಕ್)**

"ನಿನ್ನ ಪರಿಪಾವನತೆಯನ್ನು ನಾನು ಕೊಂಡಾಡುತ್ತೇನೆ. ಓ ಅಲ್ಲಾಹ್! ನಿನ್ನ ಸ್ತುತಿಯೊಂದಿಗೆ, ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ. ನಾನು ನಿನ್ನೊಂದಿಗೆ ಕ್ಷಮೆಯನ್ನು ಬೇಡುತ್ತೇನೆ ಮತ್ತು ಪಶ್ಚಾತ್ತಾಪದೊಂದಿಗೆ ನಿನ್ನೆಡೆಗೆ ಮರಳುತ್ತೇನೆ."[125]

## 18. ಮಸೀದಿಯೆಡೆಗೆ ಹೊರಡುವಾಗ

ಅಲ್ಲಾಹು ಹೇಳಿದ್ದಾನೆ:

﴿ ۞ يَٰبَنِيٓ ءَادَمَ خُذُواْ زِينَتَكُمۡ عِندَ كُلِّ مَسۡجِدٖ وَكُلُواْ وَٱشۡرَبُواْ وَلَا تُسۡرِفُوٓاْۚ إِنَّهُۥ لَا يُحِبُّ ٱلۡمُسۡرِفِينَ ٣١ ﴾

**"ಓ ಆದಮನ ಮಕ್ಕಳೇ! ಎಲ್ಲಾ ಮಸೀದಿಗಳಲ್ಲಿಯೂ ನಿಮ್ಮ ಅಲಂಕಾರಗಳನ್ನು[126] ಧರಿಸಿರಿ. ತಿನ್ನಿರಿ, ಕುಡಿಯಿರಿ ಮತ್ತು ಮಿತಿಮೀರದಿರಿ. ಖಂಡಿತವಾಗಿಯೂ ಮಿತಿಮೀರುವವರನ್ನು ಅಲ್ಲಾಹು ಮೆಚ್ಚುವುದಿಲ್ಲ."[127]**

عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ

---

**124** ಇದನ್ನು ಮುಸ್ಲಿಮ್ (1/209; ಹದೀಸ್ ನಂ. 234), ತಿರ್ಮಿದಿ (1/78; ಹದೀಸ್ ನಂ. 55) ಉಮರ್ ಇಬ್ನುಲ್ ಖತ್ತಾಬ್‌ರಿಂದ ವರದಿ ಮಾಡಿದ್ದಾರೆ. ಉತ್ತಮವಾದ ರೀತಿಯಲ್ಲಿ ವುದೂ ಮಾಡಿ ಈ ದಿಕ್ರ್ ಹೇಳುವವನಿಗೆ ಸ್ವರ್ಗದ ಎಂಟು ಬಾಗಿಲುಗಳು ತೆರೆಯಲ್ಪಡುತ್ತವೆ. ಅವನು ಬಯಸುವ ಬಾಗಿಲಿನಿಂದ ಅವನಿಗೆ ಪ್ರವೇಶಿಸಬಹುದೆಂದು ಪ್ರವಾದಿ(ﷺ)ರವರು ಹೇಳಿದ್ದಾರೆ. ಚೌಕ ಆವರಣದಲ್ಲಿರುವುದು ತಿರ್ಮಿದಿಯ ಹೆಚ್ಚುವರಿಯಾಗಿದೆ.

**125** ಇದನ್ನು ನಸಾಈ ತನ್ನ 'ಅಲ್‌ಮುನ್ತಕಾ ಮಿನ್ ಅಮಲಿಲ್ ಯೌಮಿ ವಲ್ಲೈಲಃ'ದಲ್ಲಿ (ಪುಟ 173; ಹದೀಸ್ ನಂ. 81) ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ.

**126** ಅರ್ಥಾತ್ ಉಡುಪುಗಳನ್ನು. ಇಬ್ನ್ ಅಬ್ಬಾಸ್ ಹೇಳುತ್ತಾರೆ: ಅರಬ್ ಸ್ತ್ರೀಯರು ಮತ್ತು ಪುರುಷರು ನಗ್ನರಾಗಿ ಕಅ್‌ಬಾವನ್ನು ತವಾಫ್ ಮಾಡುತ್ತಿದ್ದರು. ಆದ್ದರಿಂದ ಅಲ್ಲಾಹು ಈ ಸೂಕ್ತಿಯನ್ನು ಅವತೀರ್ಣಗೊಳಿಸಿದನು. (ಇಬ್ನ್ ಜರೀರ್ 8/149)

**127** ಕುರ್‌ಆನ್ 7/31

وَسَلَّمَ صَلَاةُ الرَّجُلِ فِي الْجَمَاعَةِ تُضَعَّفُ عَلَى صَلَاتِهِ فِى بَيْتِهِ وَفِي سُوقِهِ خَمْسًا وَعِشْرِينَ ضِعْفًا، وَذَلِكَ أَنَّهُ إِذَا تَوَضَّأَ فَأَحْسَنَ الْوُضُوءَ، ثُمَّ خَرَجَ إِلَى الْمَسْجِدِ لَا يُخْرِجُهُ إِلَّا الصَّلَاةُ، لَمْ يَخْطُ خَطْوَةً إِلَّا رُفِعَتْ لَهُ بِهَا دَرَجَةٌ وَحُطَّ عَنْهُ بِهَا خَطِيئَةٌ، فَإِذَا صَلَّى لَمْ تَزَلِ الْمَلَائِكَةُ تُصَلِّي عَلَيْهِ مَا دَامَ فِى مُصَلَّاهُ: اللَّهُمَّ صَلِّ عَلَيْهِ، اللَّهُمَّ ارْحَمْهُ، وَلَا يَزَالُ أَحَدُكُمْ فِي صَلَاةٍ مَا انْتَظَرَ الصَّلَاةَ»

**"ಅಬೂ ಹುರೈರಾ(ﷺ)ರಿಂದ: ಅಲ್ಲಾಹನ ಸಂದೇಶವಾಹಕ(ﷺ)ರವರು ಹೇಳಿದರು: ಓರ್ವ ವ್ಯಕ್ತಿ (ಒಬ್ಬಂಟಿಗನಾಗಿ) ತನ್ನ ಮನೆಯಲ್ಲಿ ಅಥವಾ ತನ್ನ ಅಂಗಡಿಯಲ್ಲಿ ಮಾಡುವ ನಮಾಝ್‌ಗಿಂತಲೂ ಜಮಾಅತ್(ಸಾಮೂಹಿಕ) ಆಗಿ ಮಾಡುವ ನಮಾಝ್ ಇಪ್ಪತ್ತೈದು ಪಟ್ಟು ಹೆಚ್ಚು (ಪುಣ್ಯವುಳ್ಳದ್ದು) ಆಗಿದೆ. ಅದು ಹೇಗೆಂದರೆ ಅವನು ಉತ್ತಮವಾದ ರೀತಿಯಲ್ಲಿ ವುದೂ ಮಾಡಿ, ಮಸೀದಿಯೆಡೆಗೆ ಹೊರಡುತ್ತಾನೆ. ನಮಾಝ್ ಅಲ್ಲದೆ ಬೇರೇನೂ ಅವನನ್ನು (ಮಸೀದಿಯೆಡೆಗೆ) ಹೊರಡಿಸುವುದಿಲ್ಲ. ಆಗ ಅವನ ಒಂದೊಂದು ಹೆಜ್ಜೆಗೆ ಅನುಸಾರವಾಗಿ ಅವನು ಒಂದೊಂದು ದರ್ಜೆ ಮೇಲೇರಿಸಲ್ಪಡುತ್ತಾನೆ ಮತ್ತು (ಅವನ ಒಂದೊಂದು ಹೆಜ್ಜೆಗೆ ಅನುಸಾರವಾಗಿ) ಅವನ ಒಂದೊಂದು ಪಾಪವು ಮನ್ನಿಸಲ್ಪಡುತ್ತದೆ. ಅವನು ನಮಾಝ್ ಮಾಡುತ್ತಿರುವಾಗ, ಅವನು ನಮಾಝ್‌ನ ಸ್ಥಳದಲ್ಲಿರುವವರೆಗೆ ಮಲಕ್‌ಗಳು ಅವನಿಗಾಗಿ ಪ್ರಾರ್ಥಿಸುತ್ತಿರುತ್ತಾರೆ: ಓ ಅಲ್ಲಾಹ್! ಅವನಿಗೆ ಕೃಪೆತೋರು, ಓ ಅಲ್ಲಾಹ್! ಅವನ ಮೇಲೆ ದಯೆತೋರು (ಎನ್ನುತ್ತಿರುತ್ತಾರೆ). ನಮಾಝ್‌ಗಾಗಿ ನಿರೀಕ್ಷಿಸುತ್ತಿರುವ ಓರ್ವನು ನಮಾಝ್‌ನಲ್ಲಿರುವವನೇ ಆಗಿದ್ದಾನೆ."[128]**

عَنْ أَبِى هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «إِذَا سَمِعْتُمُ الْإِقَامَةَ فَامْشُوا إِلَى الصَّلَاةِ وَعَلَيْكُمْ بِالسَّكِينَةِ وَالْوَقَارِ، وَلَا تُسْرِعُوا، فَمَا أَدْرَكْتُمْ فَصَلُّوا وَمَا فَاتَكُمْ فَأَتِمُّوا»

**"ಅಬೂ ಹುರೈರಾ(ﷺ)ರಿಂದ: ಅಲ್ಲಾಹನ ಸಂದೇಶವಾಹಕ(ﷺ)ರವರು ಹೇಳಿದರು: ನೀವು ಇಕಾಮತನ್ನು ಆಲಿಸಿದರೆ ಶಾಂತವಾಗಿ ಮತ್ತು ಗಂಭೀರವಾಗಿ ನಮಾಝ್‌ನೆಡೆಗೆ ಚಲಿಸಿರಿ. ನೀವು ಆತುರಪಟ್ಟು ಧಾವಿಸದಿರಿ. ನಿಮಗೆ ಲಭಿಸಿದ (ರಕ್‌ಅತ್‌ಗಳ)ನ್ನು ನಮಾಝ್ ಮಾಡಿರಿ ಮತ್ತು ಲಭಿಸದ (ರಕ್‌ಅತ್‌ಗಳನ್ನು ನಂತರ) ಪೂರ್ತೀಕರಿಸಿರಿ."[129]**

**128** ಇದನ್ನು ಬುಖಾರಿ (1/232; ಹದೀಸ್ ನಂ. 620), ಮುಸ್ಲಿಮ್ (1/458; ಹದೀಸ್ ನಂ. 649) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**129** ಇದನ್ನು ಬುಖಾರಿ (1/228; ಹದೀಸ್ ನಂ. 610), ಮುಸ್ಲಿಮ್ (1/420; ಹದೀಸ್ ನಂ. 602) ವರದಿ ಮಾಡಿದ್ದಾರೆ.

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ اجْعَلْ فِي قَلْبِي نُورًا، وَفِي لِسَانِي نُورًا، وَاجْعَلْ فِي سَمْعِي نُورًا، وَاجْعَلْ فِي بَصَرِي نُورًا، وَاجْعَلْ مِنْ خَلْفِي نُورًا، وَمِنْ أَمَامِي نُورًا، وَاجْعَلْ مِنْ فَوْقِي نُورًا، وَمِنْ تَحْتِي نُورًا، اللَّهُمَّ أَعْطِنِي نُورًا»

**(ಅಲ್ಲಾಹುಮ್ಮಜ್‌ಅಲ್ ಫೀ ಕಲ್ಬೀ ನೂರನ್, ವಫೀ ಲಿಸಾನೀ ನೂರನ್, ವಜ್‌ಅಲ್ ಫೀ ಸಮ್‌ಈ ನೂರನ್, ವಜ್‌ಅಲ್ ಫೀ ಬಸರೀ ನೂರನ್, ವಜ್‌ಅಲ್ ಮಿನ್ ಖಲ್ಫೀ ನೂರನ್, ವಮಿನ್ ಅಮಾಮೀ ನೂರನ್, ವಜ್‌ಅಲ್ ಮಿನ್ ಫೌಕೀ ನೂರನ್, ವಮಿನ್ ತಹ್ತೀ ನೂರನ್, ಅಲ್ಲಾಹುಮ್ಮಅ್‌ತಿನೀ ನೂರಾ)**

"ಓ ಅಲ್ಲಾಹ್! ನನ್ನ ಹೃದಯದಲ್ಲಿ ಬೆಳಕನ್ನಿಡು, ನನ್ನ ನಾಲಗೆಯಲ್ಲಿ ಬೆಳಕನ್ನಿಡು, ನನ್ನ ಆಲಿಸುವಿಕೆಯಲ್ಲಿ ಬೆಳಕನ್ನಿಡು, ನನ್ನ ದೃಷ್ಟಿಯಲ್ಲಿ ಬೆಳಕನ್ನಿಡು, ನನ್ನ ಹಿಂಬದಿಯಲ್ಲಿ ಬೆಳಕನ್ನಿಡು, ನನ್ನ ಮುಂಬದಿಯಲ್ಲಿ ಬೆಳಕನ್ನಿಡು, ನನ್ನ ಮೇಲ್ಭಾಗದಲ್ಲಿ ಬೆಳಕನ್ನಿಡು ಮತ್ತು ನನ್ನ ಅಡಿಭಾಗದಲ್ಲಿ ಬೆಳಕನ್ನಿಡು. ಓ ಅಲ್ಲಾಹ್! ನನಗೆ ಬೆಳಕನ್ನು ನೀಡು"[130]

## 19. ಮಸೀದಿಯನ್ನು ಪ್ರವೇಶಿಸುವಾಗ

ಅಲ್ಲಾಹು ಹೇಳಿದ್ದಾನೆ:

﴿ وَمَنْ أَظْلَمُ مِمَّن مَّنَعَ مَسَٰجِدَ ٱللَّهِ أَن يُذْكَرَ فِيهَا ٱسْمُهُۥ وَسَعَىٰ فِى خَرَابِهَآ أُو۟لَٰٓئِكَ مَا كَانَ لَهُمْ أَن يَدْخُلُوهَآ إِلَّا خَآئِفِينَ لَهُمْ فِى ٱلدُّنْيَا خِزْىٌ وَلَهُمْ فِى ٱلْءَاخِرَةِ عَذَابٌ عَظِيمٌ ﴿١١٤﴾ ﴾

**"ಅಲ್ಲಾಹನ ಮಸೀದಿಗಳಲ್ಲಿ ಅವನ ನಾಮ ಸ್ಮರಿಸಲ್ಪಡುವುದನ್ನು ತಡೆಯುವ ಮತ್ತು ಅವುಗಳನ್ನು ನಾಶಗೊಳಿಸಲು ಪರಿಶ್ರಮಿಸಿದವನಿಗಿಂತ ದೊಡ್ಡ ಅಕ್ರಮಿ ಇನ್ನಾರಿದ್ದಾರೆ? ಅವರಿಗೆ ಅವುಗಳನ್ನು (ಮಸೀದಿಗಳನ್ನು) ಭಯಭೀತರಾಗಿಯಲ್ಲದೆ ಪ್ರವೇಶಿಸಬಾರದಾಗಿತ್ತು. ಅವರಿಗೆ ಇಹಲೋಕದಲ್ಲಿ ಅಪಮಾನವಿದೆ ಮತ್ತು ಅವರಿಗೆ ಪರಲೋಕದಲ್ಲಿ ಕಠೋರ ಶಿಕ್ಷೆಯಿದೆ."**[131]

ಪ್ರವಾದಿ(ﷺ)ರವರು ಹೇಳಿದರು:

---

**130** ಇದನ್ನು ಮುಸ್ಲಿಮ್ (1/525; ಹದೀಸ್ ನಂ. 763), ಅಬೂ ದಾವೂದ್ (1/430; ಹದೀಸ್ ನಂ. 1353) ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ. ಪ್ರವಾದಿ(ﷺ)ರವರು ಫಜ್ರ್ ನಮಾಝ್‌ಗಾಗಿ ಹೊರಟಾಗ ಈ ರೀತಿ ಹೇಳುತ್ತಿದ್ದರು.

**131** ಕುರ್‌ಆನ್ 2/114

«إِذَا دَخَلَ أَحَدُكُمُ الْمَسْجِدَ فَلْيُسَلِّمْ عَلَى النَّبِيِّ صَلَّى اللَّهُ عَلَيْهِ وَسَلَّمَ»

**"ನಿಮ್ಮಲ್ಲೋರ್ವನು ಮಸೀದಿಯನ್ನು ಪ್ರವೇಶಿಸಿದರೆ ಅವನು ಪ್ರವಾದಿ(ﷺ)ರವರ ಮೇಲೆ ಸಲಾಮ್ ಹೇಳಲಿ."**[132]

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ افْتَحْ لِي أَبْوَابَ رَحْمَتِكَ»

**(ಅಲ್ಲಾಹುಮ್ಮಫ್ತಹ್ ಲೀ ಅಬ್ವಾಬ ರಹ್ಮತಿಕ್)**

"ಓ ಅಲ್ಲಾಹ್! ನಿನ್ನ ಅನುಗ್ರಹದ ಬಾಗಿಲುಗಳನ್ನು ನನಗೆ ತೆರೆದುಕೊಡು."[133]

«[بِسْمِ اللَّهِ وَالصَّلَاةُ وَالسَّلَامُ عَلَى رَسُولِ اللَّهِ]، اللَّهُمَّ اغْفِرْ لِي ذُنُوبِي وَافْتَحْ لِي أَبْوَابَ رَحْمَتِكَ»

**([ಬಿಸ್ಮಿಲ್ಲಾಹಿ ವಸ್ಸಲಾತು ವಸ್ಸಲಾಮು ಅಲಾ ರಸೂಲಿಲ್ಲಾಹಿ] ಅಲ್ಲಾಹುಮ್ಮಗ್‌ಫಿರ್ ಲೀ ದುನೂಬೀ ವಫ್ತಹ್ ಲೀ ಅಬ್ವಾಬ ರಹ್ಮತಿಕ್)**

"ಅಲ್ಲಾಹನ ನಾಮದೊಂದಿಗೆ ಮತ್ತು ಅಲ್ಲಾಹನ ಸಂದೇಶವಾಹಕರ ಮೇಲೆ ರಕ್ಷೆ ಮತ್ತು ಶಾಂತಿಯಿರಲಿ, ಓ ಅಲ್ಲಾಹ್! ನನ್ನ ಪಾಪಗಳನ್ನು ನನಗೆ ಕ್ಷಮಿಸು ಮತ್ತು ನಿನ್ನ ಅನುಗ್ರಹದ ಬಾಗಿಲುಗಳನ್ನು ನನಗೆ ತೆರೆದುಕೊಡು."[134]

«أَعُوذُ بِاللَّهِ الْعَظِيمِ، وَبِوَجْهِهِ الْكَرِيمِ، وَسُلْطَانِهِ الْقَدِيمِ، مِنَ الشَّيْطَانِ الرَّجِيمِ»

**(ಅಊದು ಬಿಲ್ಲಾಹಿಲ್ ಅದೀಮಿ, ವಬಿವಜ್‌ಹಿಹಿಲ್ ಕರೀಮಿ, ವಸುಲ್ತಾನಿಹಿಲ್ ಕದೀಮಿ, ಮಿನ ಶ್ಶೈತಾನಿ ರ್ರಜೀಮ್)**

"ಅತ್ಯುನ್ನತನಾದ ಅಲ್ಲಾಹನೊಂದಿಗೆ, ಅವನ ಮಾನ್ಯವಾದ ಮುಖದೊಂದಿಗೆ, ಅವನ ಶಾಶ್ವತವಾದ ಅಧಿಕಾರದೊಂದಿಗೆ, ಶಪಿಸಲ್ಪಟ್ಟ ಶೈತಾನನಿಂದ ನಾನು ಅಭಯ

---

**132** ಇದನ್ನು ಅಬೂ ದಾವೂದ್ (1/180; ಹದೀಸ್ ನಂ. 465), ಇಬ್ನ್ ಮಾಜ (1/254; ಹದೀಸ್ ನಂ. 772), ದಾರಿಮೀ ತನ್ನ 'ಸುನನ್'ನಲ್ಲಿ (1/377; ಹದೀಸ್ ನಂ. 1394) ಅಬೂ ಉಸೈದ್ ಅಲ್‌ಅನ್ಸಾರೀರಿಂದ ವರದಿ ಮಾಡಿದ್ದಾರೆ.

**133** ಇದನ್ನು ಮುಸ್ಲಿಮ್ (1/494; ಹದೀಸ್ ನಂ. 713), ಅಬೂ ದಾವೂದ್ (1/180; ಹದೀಸ್ ನಂ. 465), ಇಬ್ನ್ ಮಾಜ (1/254; ಹದೀಸ್ ನಂ. 772), ನಸಾಈ (2/53; ಹದೀಸ್ ನಂ. 729), ದಾರಿಮೀ ತನ್ನ 'ಸುನನ್'ನಲ್ಲಿ (1/377; ಹದೀಸ್ ನಂ. 1394) ಅಬೂ ಉಸೈದ್ ಅಲ್‌ಅನ್ಸಾರೀರಿಂದ ವರದಿ ಮಾಡಿದ್ದಾರೆ.

**134** ಇದನ್ನು ತಿರ್ಮಿದಿ (2/127; ಹದೀಸ್ ನಂ. 314), ಇಬ್ನ್ ಮಾಜ (1/253; ಹದೀಸ್ ನಂ. 771), ಅಹ್ಮದ್ (6/282; ಹದೀಸ್ ನಂ. 26459) ಫಾತಿಮಾರಿಂದ ವರದಿ ಮಾಡಿದ್ದಾರೆ.

ಯಾಚಿಸುತ್ತಿದ್ದೇನೆ."[135]

«بِسْمِ اللَّهِ وَالسَّلَامُ عَلَى رَسُولِ اللَّهِ، اللَّهُمَّ إِنِّي أَسْأَلُكَ مِنْ فَضْلِكَ، اللَّهُمَّ اعْصِمْنِي مِنَ الشَّيْطَانِ الرَّجِيمِ»

**(ಬಿಸ್ಮಿಲ್ಲಾಹಿ ವಸ್ಸಲಾಮು ಅಲಾ ರಸೂಲಿಲ್ಲಾಹಿ, ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಮಿನ್ ಫದ್ಲಿಕ, ಅಲ್ಲಾಹುಮ್ಮಅ್‌ಸಿಮ್ನೀ ಮಿನ ಶ್ಶೈತಾನಿ ರ್ರಜೀಮ್)**

"ಅಲ್ಲಾಹನ ನಾಮದೊಂದಿಗೆ ಮತ್ತು ಅಲ್ಲಾಹನ ಸಂದೇಶವಾಹಕರ ಮೇಲೆ ಶಾಂತಿಯಿರಲಿ, ಓ ಅಲ್ಲಾಹ್! ನಾನು ನಿನ್ನ ಔದಾರ್ಯದೊಂದಿಗೆ ನಿನ್ನಲ್ಲಿ ಬೇಡುತ್ತಿದ್ದೇನೆ. ಓ ಅಲ್ಲಾಹ್! ಶಪಿಸಲ್ಪಟ್ಟ ಶೈತಾನನಿಂದ ನನ್ನನ್ನು ಕಾಪಾಡು."[136]

## 20. ಮಸೀದಿಯೊಳಗಿರುವಾಗ

ಅಲ್ಲಾಹು ಹೇಳಿದ್ದಾನೆ:

﴿ قُلْ أَمَرَ رَبِّي بِٱلْقِسْطِ ۖ وَأَقِيمُوا۟ وُجُوهَكُمْ عِندَ كُلِّ مَسْجِدٍ وَٱدْعُوهُ مُخْلِصِينَ لَهُ ٱلدِّينَ ۚ كَمَا بَدَأَكُمْ تَعُودُونَ ﴿٢٩﴾ ﴾

**"ಹೇಳು: ನನ್ನ ಪ್ರಭು ನನ್ನೊಂದಿಗೆ ನ್ಯಾಯಪಾಲಿಸಲು ಆದೇಶಿಸಿದ್ದಾನೆ. ಎಲ್ಲಾ ಮಸೀದಿಗಳಲ್ಲಿಯೂ ನಿಮ್ಮ ಮುಖಗಳನ್ನು ನೆಲೆಗೊಳಿಸಿರಿ[137] ಮತ್ತು ಧರ್ಮವನ್ನು ಅವನಿಗೆ ನಿಷ್ಕಳಂಕಗೊಳಿಸಿ ಅವನೊಂದಿಗೆ ಪ್ರಾರ್ಥಿಸಿರಿ. ನೀವು ಮೊದಲು ಸೃಷ್ಟಿಸಲ್ಪಟ್ಟ ಅವಸ್ಥೆಗೆ ಅವನು ನಿಮ್ಮನ್ನು ಮರಳಿಸುತ್ತಾನೆ."[138]**

ಅಲ್ಲಾಹು ಹೇಳಿದ್ದಾನೆ:

﴿ لَا تَقُمْ فِيهِ أَبَدًا ۚ لَّمَسْجِدٌ أُسِّسَ عَلَى ٱلتَّقْوَىٰ مِنْ أَوَّلِ يَوْمٍ أَحَقُّ أَن تَقُومَ فِيهِ ۚ فِيهِ رِجَالٌ يُحِبُّونَ أَن يَتَطَهَّرُوا۟ ۚ وَٱللَّهُ يُحِبُّ ٱلْمُطَّهِّرِينَ ﴿١٠٨﴾ ﴾

---

**135** ಇದನ್ನು ಅಬೂ ದಾವೂದ್ (1/180; ಹದೀಸ್ ನಂ. 466) ಅಬ್ದುಲ್ಲಾಹ್ ಇಬ್ನ್ ಅಮ್ರ್ ಇಬ್ನ್ ಅಲ್‌ಆಸ್‌ರಿಂದ ವರದಿ ಮಾಡಿದ್ದಾರೆ.

**136** ಇದನ್ನು ನಸಾಈ (1/254; ಹದೀಸ್ ನಂ. 773) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**137** ಅರ್ಥಾತ್ ಕಅ್‌ಬಾದೆಡೆಗೆ ಮುಖಮಾಡಿರಿ. ಇದು ಮುಜಾಹಿದ್ ಮತ್ತು ಸುದ್ದೀರವರ ವ್ಯಾಖ್ಯಾನವಾಗಿದೆ. ರಬೀಅ್ ಹೇಳುತ್ತಾರೆ: ನಿಮ್ಮ ಮುಖಗಳನ್ನು ನಿಷ್ಕಳಂಕತೆಯೊಂದಿಗೆ ನೆಲೆಗೊಳಿಸಿರಿ. ಅಂದರೆ ನೀವು ಅಲ್ಲಾಹನೊಂದಿಗಲ್ಲದೆ ಇತರ ಯಾರೊಂದಿಗೂ ಪ್ರಾರ್ಥಿಸದಿರಿ ಮತ್ತು ಧರ್ಮವನ್ನು ಅವನಿಗೆ ನಿಷ್ಕಳಂಕಗೊಳಿಸಿರಿ.

**138** ಕುರ್‌ಆನ್ 7/29

**“ನೀನು ಒಮ್ಮೆಯೂ ಅಲ್ಲಿ (ಮುನಾಫಿಕ್‌ಗಳ ಮಸೀದಿಯಲ್ಲಿ) ನಮಾಝ್ ಮಾಡಬಾರದು. ಮೊದಲ ದಿನದಂದೇ ಭಯಭಕ್ತಿಯ ಮೇಲೆ ಸ್ಥಾಪಿಸಲ್ಪಟ್ಟ ಮಸೀದಿ[139]ಯಾಗಿದೆ ನೀನು ನಮಾಝ್ ಮಾಡಲು ಹೆಚ್ಚು ಅರ್ಹವಾಗಿರುವುದು. ಅದರಲ್ಲಿ ಜನರಿದ್ದಾರೆ, ಅವರು ಶುದ್ಧರಾಗಲು ಆಗ್ರಹಿಸುತ್ತಾರೆ. ಅಲ್ಲಾಹು ಶುದ್ಧರಾಗಿರುವವರನ್ನು ಇಷ್ಟಪಡುತ್ತಾನೆ.”[140]**

ಪ್ರವಾದಿ(ﷺ)ರವರು ಹೇಳಿದರು:

«سَبْعَةٌ يُظِلُّهُمُ اللَّهُ فِي ظِلِّهِ يَوْمَ ظِلَّ إِلَّا ظِلُّهُ الْإِمَامُ الْعَادِلُ وَشَابٌّ نَشَأَ فِي عِبَادَةِ رَبِّهِ وَرَجُلٌ قَلْبُهُ مُعَلَّقٌ فِي الْمَسَاجِدِ وَرَجُلَانِ تَحَابَّا فِي اللَّهِ اجْتَمَعَا عَلَيْهِ وَتَفَرَّقَا عَلَيْهِ وَرَجُلٌ طَلَبَتْهُ امْرَأَةٌ ذَاتُ مَنْصِبٍ وَجَمَالٍ فَقَالَ إِنِّي أَخَافُ اللَّهَ وَرَجُلٌ تَصَدَّقَ أَخْفَى حَتَّى تَعْلَمَ شِمَالُهُ مَا تُنْفِقُ يَمِينُهُ وَرَجُلٌ ذَكَرَ اللَّهَ خَالِيًا فَفَاضَتْ عَيْنَاهُ»

**“ಏಳು ವಿಧದ ಜನರಿಗೆ ಅಲ್ಲಾಹು ತನ್ನ ನೆರಳಿನಿಂದ ನೆರಳನ್ನು ನೀಡುವನು. ಅಂದು ಅವನ ನೆರಳಲ್ಲದೆ ಬೇರೆ ನೆರಳಿರಲಾರದು. ನ್ಯಾಯ ಪಾಲಿಸುವ ನಾಯಕ, ತನ್ನ ಪ್ರಭುವಿನ ಆರಾಧನೆಯೊಂದಿಗೆ ಬೆಳೆದ ಯುವಕ, ತನ್ನ ಹೃದಯವು ಮಸೀದಿಗಳಲ್ಲಿ ತೂಗಿಸಲ್ಪಟ್ಟಿರುವ ವ್ಯಕ್ತಿ, ಅಲ್ಲಾಹನಿಗೋಸ್ಕರ ಪ್ರೀತಿಸಿದ ಇಬ್ಬರು ವ್ಯಕ್ತಿಗಳು ಅವರು ಅದಕ್ಕಾಗಿ ಒಂದಾದರು ಮತ್ತು ಅದಕ್ಕಾಗಿ ಬೇರ್ಪಟ್ಟರು, ಉತ್ತಮ ಕುಲದ ಸುಂದರಿಯಾದ ಮಹಿಳೆಯು ತನ್ನನ್ನು ಕರೆದಾಗ ನಾನು ಅಲ್ಲಾಹನನ್ನು ಭಯಪಡುತ್ತೇನೆ ಎಂದು ಹೇಳಿದ ವ್ಯಕ್ತಿ, ತನ್ನ ಬಲಗೈ ವ್ಯಯಿಸಿದ್ದನ್ನು ಎಡಗೈ ಅರಿಯದಂತೆ ಗುಪ್ತವಾಗಿ ಸದಕಾ ನೀಡಿದ ವ್ಯಕ್ತಿ ಮತ್ತು ಏಕಾಂತ ಸ್ಥಳದಲ್ಲಿ ಅಲ್ಲಾಹನನ್ನು ಸ್ಮರಿಸಿ ಕಣ್ಣೀರು ಹರಿಸಿದ ವ್ಯಕ್ತಿ.”[141]**

ಪ್ರವಾದಿ(ﷺ)ರವರು ಹೇಳಿದರು:

«إِنَّمَا بُنِيَتِ الْمَسَاجِدُ لِمَا بُنِيَتْ لَهُ»

**“ಮಸೀದಿಗಳು ಯಾವುದಕ್ಕಾಗಿ ನಿರ್ಮಿಸಲ್ಪಟ್ಟಿವೆಯೋ ಅದಕ್ಕಾಗಿ ಮಾತ್ರ ನಿರ್ಮಿಸಲ್ಪಟ್ಟಿವೆ.”[142]**

ಪ್ರವಾದಿ(ﷺ)ರವರು ಹೇಳಿದರು:

---

**139** ಅರ್ಥಾತ್ ಮಸ್ಜಿದುನ್ನಬವೀ. ಇಬ್ನ್ ಅಬ್ಬಾಸ್‌ರವರ ಪ್ರಕಾರ ಅದು ಕುಬಾ ಮಸೀದಿಯಾಗಿದೆ.

**140** ಕುರ್‌ಆನ್ 9/108

**141** ಇದನ್ನು ಬುಖಾರಿ (2/517; ಹದೀಸ್ ನಂ. 1357), ಮುಸ್ಲಿಮ್ (2/715; ಹದೀಸ್ ನಂ. 1031) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**142** ಇದನ್ನು ಮುಸ್ಲಿಮ್ (1/397; ಹದೀಸ್ ನಂ. 569), ಇಬ್ನ್ ಮಾಜ (1/252; ಹದೀಸ್ ನಂ. 765), ಅಹ್ಮದ್ (5/361; ಹದೀಸ್ ನಂ. 23101), ಇಬ್ನ್ ಹಿಬ್ಬಾನ್ ತನ್ನ ‘ಸಹೀಹ್’ನಲ್ಲಿ (4/530; ಹದೀಸ್ ನಂ. 1652) ಬುರೈದಾರಿಂದ ವರದಿ ಮಾಡಿದ್ದಾರೆ.

«مَنْ سَمِعَ رَجُلًا يَنْشُدُ ضَالَّةً فِي الْمَسْجِدِ فَلْيَقُلْ: لَا رَدَّهَا اللَّهُ عَلَيْكَ، فَإِنَّ الْمَسَاجِدَ لَمْ تُبْنَ لِهَذَا»

**"ಓರ್ವ ವ್ಯಕ್ತಿ ತಾನು ಕಳೆದುಕೊಂಡ ವಸ್ತುವಿನ ಕುರಿತು ಮಸೀದಿಯಲ್ಲಿ ಅನ್ವೇಷಿಸುವುದನ್ನು ಯಾರಾದರೂ ಕೇಳಿಸಿಕೊಂಡರೆ ಅವನು ಆ ವ್ಯಕ್ತಿಯೊಂದಿಗೆ (ಹೀಗೆ) ಹೇಳಲಿ: ಅದನ್ನು (ಕಳಕೊಂಡ ವಸ್ತುವನ್ನು) ಅಲ್ಲಾಹು ನಿನಗೆ ಮರಳಿಸದಿರಲಿ, ಖಂಡಿತವಾಗಿಯೂ ಮಸೀದಿಗಳು ಅವುಗಳಿಗಾಗಿ ನಿರ್ಮಿಸಲ್ಪಟ್ಟಿಲ್ಲ."**[143]

عَنْ أَنَسِ بْنِ مَالِكٍ رَضِيَ اللَّهُ عَنْهُ قَالَ: بَيْنَمَا نَحْنُ فِى الْمَسْجِدِ مَعَ رَسُولِ اللَّهِ صَلَّى اللَّهُ عَلَيْهِ وَسَلَّمَ إِذْ جَاءَ أَعْرَابِيٌّ، فَقَامَ يَبُولُ فِى الْمَسْجِدِ، فَقَالَ أَصْحَابُ رَسُولِ اللَّهِ صَلَّى اللَّهُ عَلَيْهِ وَسَلَّمَ: مَهْ، مَهْ، قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «لَا تُزْرِمُوهُ، دَعُوهُ» فَتَرَكُوهُ حَتَّى بَالَ، ثُمَّ إِنَّ رَسُولَ اللَّهِ صَلَّى اللَّهُ عَلَيْهِ وَسَلَّمَ دَعَاهُ فَقَالَ لَهُ: «إِنَّ هَذِهِ الْمَسَاجِدَ لَا تَصْلُحُ لِشَيْءٍ مِنْ هَذَا الْبَوْلِ وَالْقَذَرِ، إِنَّمَا هِيَ لِذِكْرِ اللَّهِ عَزَّ وَجَلَّ، وَالصَّلَاةِ، وَقِرَاءَةِ الْقُرْآنِ»

**"ಅನಸ್ ಇಬ್ನ್ ಮಾಲಿಕ್(رضي الله عنه)ರಿಂದ: ನಾವು ಅಲ್ಲಾಹನ ಸಂದೇಶವಾಹಕ(ﷺ)ರೊಂದಿಗೆ ಮಸೀದಿಯಲ್ಲಿದ್ದಾಗ ಗ್ರಾಮೀಣ ಅರಬಿಯೊಬ್ಬನು ಬಂದು, ನಿಂತುಕೊಂಡು ಮಸೀದಿಯಲ್ಲಿ ಮೂತ್ರ ವಿಸರ್ಜನೆ ಮಾಡಿದನು. ಆಗ ಅಲ್ಲಾಹನ ಸಂದೇಶವಾಹಕ(ﷺ)ರವರ ಸಹವರ್ತಿಗಳು ಹೇಳಿದರು: ನಿಲ್ಲಿಸು, ನಿಲ್ಲಿಸು. ಆಗ ಅಲ್ಲಾಹನ ಸಂದೇಶವಾಹಕ(ﷺ)ರವರು ಹೇಳಿದರು: ಅವನನ್ನು ಉಪದ್ರವಿಸಬೇಡಿ, ಅವನನ್ನು ಬಿಟ್ಟುಬಿಡಿ. ಅವನು ಮೂತ್ರ ವಿಸರ್ಜನೆ ಮಾಡುವಂತೆ ಅವರು ಅವನನ್ನು ಬಿಟ್ಟುಬಿಟ್ಟರು. ನಂತರ ಅಲ್ಲಾಹನ**

---

**143** ಇದನ್ನು ಮುಸ್ಲಿಮ್ (1/397; ಹದೀಸ್ ನಂ. 568), ಅಬೂ ದಾವೂದ್ (1/182; ಹದೀಸ್ ನಂ. 473), ಇಬ್ನ್ ಮಾಜ (1/252; ಹದೀಸ್ ನಂ. 767) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ. ನವವೀ ಹೇಳಿದ್ದಾರೆ: ಕಳಕೊಂಡ ವಸ್ತುವನ್ನು ಅನ್ವೇಷಿಸುತ್ತಾ ಮಸೀದಿಯಲ್ಲಿ ಮಾತನಾಡಬಾರದು. ಅದೇ ರೀತಿ ಅದರಂತಿರುವ ಇತರ ಕಾರ್ಯಗಳಾದ ಮಾರುವುದು, ಖರೀದಿಸುವುದು, ಬಾಡಿಗೆಗೆ ನೀಡುವುದು ಮುಂತಾದ ಕರಾರುಗಳನ್ನು ಮಸೀದಿಯಲ್ಲಿ ಮಾಡಬಾರದು. ಮಸೀದಿಯಲ್ಲಿ ಉಚ್ಛಸ್ವರದಲ್ಲಿ ಮಾತನಾಡುವುದು ಕರಾಹತ್ ಆಗಿದೆ. ವಿದ್ಯೆ ಮುಂತಾದ ವಿಷಯಗಳಿಗಾಗಿ ಮಸೀದಿಯಲ್ಲಿ ಉಚ್ಛಸ್ವರದಲ್ಲಿ ಮಾತನಾಡುವುದು ಕರಾಹತ್ ಆಗಿದೆಯೆಂದು ಹೇಳಿ ಇಮಾಮ್ ಮಾಲಿಕ್ ಮತ್ತಿತರ ಹಲವಾರು ವಿದ್ವಾಂಸರು ಅದನ್ನು ವಿರೋಧಿಸಿದ್ದಾರೆ. ಇಮಾಮ್ ಅಬೂ ಹನೀಫ ಮತ್ತು ಇಮಾಮ್ ಮಾಲಿಕ್‌ರವರ ಶಿಷ್ಯರಲ್ಲಿ ಒಳಪಟ್ಟ ಮುಹಮ್ಮದ್ ಇಬ್ನ್ ಮಸ್ಲಮ ವಿದ್ಯೆ, ಚರ್ಚೆ ಮುಂತಾದ ಜನರಿಗೆ ಅಗತ್ಯವಿರುವ ಕಾರ್ಯಗಳಿಗಾಗಿ ಉಚ್ಛಸ್ವರದಲ್ಲಿ ಮಾತನಾಡುವುದಕ್ಕೆ ಅನುಮತಿಯಿದೆಯೆಂದಿದ್ದಾರೆ. (ಶರ್ಹು ಮುಸ್ಲಿಮ್ 5/55)

**ಸಂದೇಶವಾಹಕ(ﷺ)ರವರು ಅವನನ್ನು ಕರೆದು ಹೇಳಿದರು: ಖಂಡಿತವಾಗಿಯೂ ಈ ಮಸೀದಿಗಳು ಮೂತ್ರ ವಿಸರ್ಜನೆ ಮಾಡುವುದಕ್ಕಾಗಲಿ, ಮಲಿನಗೊಳಿಸುವುದಕ್ಕಾಗಲಿ ಇರುವುದಲ್ಲ. ಇವುಗಳು ಕೇವಲ ಅಲ್ಲಾಹನನ್ನು ಸ್ಮರಿಸುವುದಕ್ಕೆ, ನಮಾಝ್‌ಗೆ ಮತ್ತು ಕುರ್‌ಆನ್ ಓದುವುದಕ್ಕೆ ಇರುವುದಾಗಿವೆ."**(144)

ಪ್ರವಾದಿ(ﷺ)ರವರು ಹೇಳಿದರು:

«إِذَا رَأَيْتُمْ مَنْ يَبِيعُ أَوْ يَبْتَاعُ فِي الْمَسْجِدِ فَقُولُوا: لَا أَرْبَحَ اللَّهُ تِجَارَتَكَ»

**"ಮಸೀದಿಯಲ್ಲಿ ಮಾರುವವನನ್ನು ಅಥವಾ ಖರೀದಿಸುವವನನ್ನು ಕಂಡರೆ ನೀವು ಹೇಳಿರಿ: ಅಲ್ಲಾಹು ನಿನ್ನ ವ್ಯಾಪಾರವನ್ನು ಲಾಭಕರವಾಗಿಸದಿರಲಿ."**(145)

ಮಸೀದಿಯೊಳಗೆ ಹೇಳಬೇಕಾದ ಯಾವುದೇ ಪ್ರತ್ಯೇಕ ದಿಕ್ರ್ ವರದಿಯಾಗಿಲ್ಲ. ತಸ್ಬೀಹ್, ತಹ್ಮೀದ್, ತಹ್ಲೀಲ್, ತಕ್ಬೀರ್ ಮುಂತಾದ ದಿಕ್ರ್‌ಗಳಲ್ಲಿ, ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳುವುದರಲ್ಲಿ ಅಥವಾ ಕುರ್‌ಆನ್ ಪಾರಾಯಣದಲ್ಲಿ ನಿರತರಾಗ ಬಹುದಾಗಿದೆ.

## 21. ಮಸೀದಿಯಿಂದ ಹೊರಬರುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ إِنِّي أَسْأَلُكَ مِنْ فَضْلِكَ»

**(ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಮಿನ್ ಫದ್ಲಿಕ್)**

"ಓ ಅಲ್ಲಾಹ್! ನಿನ್ನ ಔದಾರ್ಯದಿಂದ ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ."(146)

«[بِسْمِ اللَّهِ وَالصَّلَاةُ وَالسَّلَامُ عَلَى رَسُولِ اللَّهِ]، اللَّهُمَّ اغْفِرْ لِي ذُنُوبِي وَافْتَحْ لِي أَبْوَابَ فَضْلِكَ»

---

**144** ಇದನ್ನು ಮುಸ್ಲಿಮ್ (1/236; ಹದೀಸ್ ನಂ. 285), ಇಬ್ನ್ ಖುಝೈಮಃ ತನ್ನ 'ಸಹೀಹ್'ನಲ್ಲಿ (1/148; ಹದೀಸ್ ನಂ. 293), ಇಬ್ನ್ ಹಿಬ್ಬಾನ್ ತನ್ನ 'ಸಹೀಹ್'ನಲ್ಲಿ (4/246; ಹದೀಸ್ ನಂ. 1401) ವರದಿ ಮಾಡಿದ್ದಾರೆ.

**145** ಇದನ್ನು ತಿರ್ಮಿದಿ (3/610; ಹದೀಸ್ ನಂ. 1321), ಇಬ್ನ್ ಖುಝೈಮಃ ತನ್ನ 'ಸಹೀಹ್'ನಲ್ಲಿ (2/274; ಹದೀಸ್ ನಂ. 1305), ಇಬ್ನ್ ಹಿಬ್ಬಾನ್ ತನ್ನ 'ಸಹೀಹ್'ನಲ್ಲಿ (4/528; ಹದೀಸ್ ನಂ. 1650), ಹಾಕಿಮ್ ತನ್ನ 'ಮುಸ್ತದ್ರಕ್'ನಲ್ಲಿ (2/65; ಹದೀಸ್ ನಂ. 2339) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**146** ಇದನ್ನು ಮುಸ್ಲಿಮ್ (1/494; ಹದೀಸ್ ನಂ. 713), ಅಬೂ ದಾವೂದ್ (1/180; ಹದೀಸ್ ನಂ. 465), ಇಬ್ನ್ ಮಾಜ (1/254; ಹದೀಸ್ ನಂ. 772), ನಸಾಈ (2/53; ಹದೀಸ್ ನಂ. 729), ದಾರಿಮೀ ತನ್ನ 'ಸುನನ್'ನಲ್ಲಿ (1/377; ಹದೀಸ್ ನಂ. 1394) ಅಬೂ ಉಸೈದ್ ಅಲ್‌ಅನ್ಸಾರೀರಿಂದ ವರದಿ ಮಾಡಿದ್ದಾರೆ.

**([ಬಿಸ್ಮಿಲ್ಲಾಹಿ ವಸ್ಸಲಾತು ವಸ್ಸಲಾಮು ಅಲಾ ರಸೂಲಿಲ್ಲಾಹಿ] ಅಲ್ಲಾಹುಮ್ಮಗ್‌ಫಿರ್ ಲೀ ದುನೂಬೀ ವಫ್ತಹ್ ಲೀ ಅಬ್‌ವಾಬ ಫದ್ಲಿಕ್)**

**"**ಅಲ್ಲಾಹನ ನಾಮದೊಂದಿಗೆ ಮತ್ತು ಅಲ್ಲಾಹನ ಸಂದೇಶವಾಹಕರ ಮೇಲೆ ರಕ್ಷೆ ಮತ್ತು ಶಾಂತಿಯಿರಲಿ, ಓ ಅಲ್ಲಾಹ್! ನನ್ನ ಪಾಪಗಳನ್ನು ನನಗೆ ಕ್ಷಮಿಸು ಮತ್ತು ನಿನ್ನ ಔದಾರ್ಯದ ಬಾಗಿಲುಗಳನ್ನು ನನಗೆ ತೆರೆದುಕೊಡು.**"**[147]

## 22. ಅದಾನ್ ಆಲಿಸುವಾಗ

ಪ್ರವಾದಿ(ﷺ)ರವರು ಹೇಳಿದರು:

«إِذَا سَمِعْتُمُ النِّدَاءَ فَقُولُوا مِثْلَ مَا يَقُولُ الْمُؤَذِّنُ»

**"ನೀವು ಅದಾನ್ ಆಲಿಸಿದಾಗ ಮುಅದ್ದಿನ್ (ಅದಾನ್ ನೀಡುವವನು) ಹೇಳುವಂತೆಯೇ ಹೇಳಿರಿ."**[148]

ಪ್ರವಾದಿ(ﷺ)ರವರು ಹೇಳಿದರು:

«إِذَا قَالَ الْمُؤَذِّنُ: اللَّهُ أَكْبَرُ اللَّهُ أَكْبَرُ، فَقَالَ أَحَدُكُمْ: اللَّهُ أَكْبَرُ اللَّهُ أَكْبَرُ، ثُمَّ قَالَ: أَشْهَدُ أَنْ لَا إِلَهَ إِلَّا اللَّهُ، قَالَ: أَشْهَدُ أَنْ لَا إِلَهَ إِلَّا اللَّهُ، ثُمَّ قَالَ: أَشْهَدُ أَنَّ مُحَمَّدًا رَسُولُ اللَّهِ، قَالَ: أَشْهَدُ أَنَّ مُحَمَّدًا رَسُولُ اللَّهِ، ثُمَّ قَالَ: حَيَّ عَلَى الصَّلَاةِ، قَالَ: لَا حَوْلَ وَلَا قُوَّةَ إِلَّا بِاللَّهِ، ثُمَّ قَالَ: حَيَّ عَلَى الْفَلَاحِ، قَالَ: لَا حَوْلَ وَلَا قُوَّةَ إِلَّا بِاللَّهِ، ثُمَّ قَالَ: اللَّهُ أَكْبَرُ اللَّهُ أَكْبَرُ، قَالَ: اللَّهُ أَكْبَرُ اللَّهُ أَكْبَرُ، ثُمَّ قَالَ: لَا إِلَهَ إِلَّا اللَّهُ، قَالَ: لَا إِلَهَ إِلَّا اللَّهُ مِنْ قَلْبِهِ دَخَلَ الْجَنَّةَ»

**"ಮುಅದ್ದಿನ್: ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಎನ್ನುವಾಗ, ನಿಮ್ಮಲ್ಲೊಬ್ಬನು: ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಎಂದರೆ, ಮುಅದ್ದಿನ್: ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹ್ ಎನ್ನುವಾಗ, ಅವನು: ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹ್ ಎಂದರೆ, ಮುಅದ್ದಿನ್: ಅಶ್‌ಹದು ಅನ್ನ ಮುಹಮ್ಮದನ್ ರಸೂಲುಲ್ಲಾಹ್ ಎನ್ನುವಾಗ, ಅವನು:**

---

**147** ಇದನ್ನು ತಿರ್ಮಿದಿ (2/127; ಹದೀಸ್ ನಂ. 314), ಇಬ್ನ್ ಮಾಜ (1/253; ಹದೀಸ್ ನಂ. 771), ಅಹ್ಮದ್ (6/282; ಹದೀಸ್ ನಂ. 26459) ಫಾತಿಮಾರಿಂದ ವರದಿ ಮಾಡಿದ್ದಾರೆ.

**148** ಇದನ್ನು ಬುಖಾರಿ (1/221; ಹದೀಸ್ ನಂ. 586), ಮುಸ್ಲಿಮ್ (1/288; ಹದೀಸ್ ನಂ. 383), ಅಬೂ ದಾವೂದ್ (1/199; ಹದೀಸ್ ನಂ. 522), ತಿರ್ಮಿದಿ (1/407; ಹದೀಸ್ ನಂ. 208), ನಸಾಈ (2/23; ಹದೀಸ್ ನಂ. 673), ಇಬ್ನ್ ಮಾಜ (1/238; ಹದೀಸ್ ನಂ. 720) ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ.

**ಅಶ್‌ಹದು ಅನ್ನ ಮುಹಮ್ಮದನ್ ರಸೂಲುಲ್ಲಾಹ್ ಎಂದರೆ, ಮುಅದ್ದಿನ್: ಹಯ್ಯ ಅಲ ಸ್ಸಲಾಹ್ ಎನ್ನುವಾಗ, ಅವನು: ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್ ಎಂದರೆ, ಮುಅದ್ದಿನ್: ಹಯ್ಯ ಅಲಲ್ ಫಲಾಹ್ ಎನ್ನುವಾಗ, ಅವನು: ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್ ಎಂದರೆ, ಮುಅದ್ದಿನ್: ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಎನ್ನುವಾಗ, ಅವನು: ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಎಂದರೆ, ಮುಅದ್ದಿನ್: ಲಾ ಇಲಾಹ ಇಲ್ಲಲ್ಲಾಹ್ ಎನ್ನುವಾಗ, ಅವನು: ಲಾ ಇಲಾಹ ಇಲ್ಲಲ್ಲಾಹ್ ಎಂದು ಹೃದಯದಿಂದ ಹೇಳಿದರೆ ಅವನು ಸ್ವರ್ಗವನ್ನು ಪ್ರವೇಶಿಸಿದನು."**(149)

ಪ್ರವಾದಿ(ﷺ)ರವರು ಹೇಳಿದರು:

«مَنْ قَالَ حِينَ يَسْمَعُ الْمُؤَذِّنَ: وَأَنَا أَشْهَدُ أَنْ لَا إِلَهَ إِلَّا اللَّهُ وَحْدَهُ شَرِيكَ لَهُ وَ[أَشْهَدُ] أَنَّ مُحَمَّدًا عَبْدُهُ وَرَسُولُهُ، رَضِيتُ بِاللَّهِ رَبًّا، وَبِمُحَمَّدٍ رَسُولًا ، وَبِالْإِسْلَامِ دِينًا، غُفِرَ لَهُ [ذَنْبُهُ]»

**"ಅದಾನ್ ಆಲಿಸುವಾಗ ಯಾರಾದರೂ: 'ವಅನ ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ವ[ಅಶ್‌ಹದು] ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹೂ, ರದೀತು ಬಿಲ್ಲಾಹಿ ರಬ್ಬನ್, ವಬಿಮುಹಮ್ಮದಿನ್ ರಸೂಲನ್, ವಬಿಲ್ ಇಸ್ಲಾಮಿ ದೀನಾ' (ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ, ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆ ಎಂದು [ನಾನು] ಸಾಕ್ಷ್ಯವಹಿಸುತ್ತೇನೆ ಮತ್ತು ಮುಹಮ್ಮದ್(ﷺ) ಅವನ ದಾಸನೂ ಸಂದೇಶವಾಹಕನೂ ಆಗಿದ್ದಾರೆ[ಂದು ನಾನು ಸಾಕ್ಷ್ಯವಹಿಸುತ್ತೇನೆ], ಪ್ರಭುವಾಗಿ ಅಲ್ಲಾಹನನ್ನು, ಸಂದೇಶವಾಹಕರಾಗಿ ಮುಹಮ್ಮದ್ (ﷺ)ರನ್ನು ಮತ್ತು ಧರ್ಮವಾಗಿ ಇಸ್ಲಾಮನ್ನು ನಾನು ತೃಪ್ತಿಪಟ್ಟಿದ್ದೇನೆ) ಎಂದು ಹೇಳಿದರೆ [ಅವನ ಪಾಪಗಳು] ಕ್ಷಮಿಸಲ್ಪಡುವುವು."**(150)

## 23. ಅದಾನ್ ಮುಗಿದ ನಂತರ

ಪ್ರವಾದಿ(ﷺ)ರವರು ಹೇಳಿದರು:

«إِذَا سَمِعْتُمُ الْمُؤَذِّنَ فَقُولُوا مِثْلَ مَا يَقُولُ، ثُمَّ صَلُّوا عَلَيَّ، فَإِنَّهُ مَنْ صَلَّى

**149** ಇದನ್ನು ಮುಸ್ಲಿಮ್ (1/289; ಹದೀಸ್ ನಂ. 385), ಅಬೂ ದಾವೂದ್ (1/200; ಹದೀಸ್ ನಂ. 527), ಇಬ್ನ್ ಖುಝೈಮಃ ತನ್ನ 'ಸಹೀಹ್'ನಲ್ಲಿ (1/218; ಹದೀಸ್ ನಂ. 417), ಇಬ್ನ್ ಹಿಬ್ಬಾನ್ ತನ್ನ 'ಸಹೀಹ್'ನಲ್ಲಿ (4/582; ಹದೀಸ್ ನಂ. 1685) ಉಮರ್ ಇಬ್ನುಲ್ ಖತ್ತಾಬ್‌ರಿಂದ ವರದಿ ಮಾಡಿದ್ದಾರೆ.

**150** ಇದನ್ನು ಮುಸ್ಲಿಮ್ (1/290; ಹದೀಸ್ ನಂ. 386), ಅಬೂ ದಾವೂದ್ (1/199; ಹದೀಸ್ ನಂ. 525), ತಿರ್ಮಿದಿ (1/411; ಹದೀಸ್ ನಂ. 210), ಇಬ್ನ್ ಮಾಜ (1/238; ಹದೀಸ್ ನಂ. 721) ಸಅ್‌ದ್ ಇಬ್ನ್ ಅಬೀ ವಕ್ಕಾಸ್‌ರಿಂದ ವರದಿ ಮಾಡಿದ್ದಾರೆ.

عَلَيَّ صَلاَةً صَلَّى اللَّهُ عَلَيْهِ بِهَا عَشْرًا، ثُمَّ سَلُوا اللَّهَ لِي الْوَسِيلَةَ، فَإِنَّهَا مَنْزِلَةٌ فِي الْجَنَّةِ لَا تَنْبَغِي إِلَّا لِعَبْدٍ مِنْ عِبَادِ اللَّهِ، وَأَرْجُو أَنْ أَكُونَ أَنَا هُوَ، فَمَنْ سَأَلَ لِيَ الْوَسِيلَةَ حَلَّتْ عَلَيْهِ الشَّفَاعَةُ»

**"ನೀವು ಅದಾನ್ ಆಲಿಸಿದಾಗ ಮುಅದ್ದಿನ್ ಹೇಳುವಂತೆಯೇ ಹೇಳಿರಿ. ನಂತರ ನನ್ನ ಮೇಲೆ ಸಲಾತ್ ಹೇಳಿರಿ. ಯಾರು ನನ್ನ ಮೇಲೆ ಒಂದು ಸಲಾತ್ ಹೇಳುತ್ತಾನೋ ಅದರಿಂದಾಗಿ ಅವನ ಮೇಲೆ ಅಲ್ಲಾಹು ಹತ್ತು ಸಲಾತ್‌ಗಳನ್ನು ಹೇಳುತ್ತಾನೆ. ನಂತರ ನನಗೋಸ್ಕರ ಅಲ್ಲಾಹನೊಂದಿಗೆ ವಸೀಲವನ್ನು ಬೇಡಿರಿ. ಅದು (ವಸೀಲ) ಸ್ವರ್ಗದಲ್ಲಿರುವ ಒಂದು ಸ್ಥಾನವಾಗಿದೆ, ಅದು ಅಲ್ಲಾಹನ ದಾಸರಲ್ಲಿ ಓರ್ವನಿಗೆ ಮಾತ್ರವೇ ದೊರಕುತ್ತದೆ. ಮತ್ತು ಅದು ನನಗಾಗಿರಬೇಕೆಂದು ನಾನು ಆಶಿಸುತ್ತೇನೆ. ಯಾರು ನನಗಾಗಿ ವಸೀಲವನ್ನು ಬೇಡುತ್ತಾನೋ ಅವನಿಗೆ (ನನ್ನ) ಶಫಾಅತ್ ಸಮ್ಮತಾರ್ಹವಾಗುತ್ತದೆ."[151]**

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ رَبَّ هَذِهِ الدَّعْوَةِ التَّامَّةِ وَالصَّلَاةِ الْقَائِمَةِ، آتِ مُحَمَّدًا الْوَسِيلَةَ وَالْفَضِيلَةَ، وَابْعَثْهُ مَقَامًا مَحْمُودًا الَّذِي وَعَدْتَهُ»

**(ಅಲ್ಲಾಹುಮ್ಮ ರಬ್ಬ ಹಾದಿಹಿ ದ್ದಅ್‌ವತಿ ತ್ತಾಮ್ಮತಿ ವಸ್ಸಲಾತಿಲ್ ಕಾಇಮತಿ, ಆತಿ ಮುಹಮ್ಮದನಿಲ್ ವಸೀಲತ ವಲ್ ಫದೀಲತ ವಬ್‌ಅಸ್‌ಹೂ ಮಕಾಮನ್ ಮಹ್ಮೂದನಿಲ್ಲದೀ ವಅದ್ತಹ್)**

"ಓ ಅಲ್ಲಾಹ್! ಈ ಪರಿಪೂರ್ಣವಾದ ಕರೆಯ[152] ಮತ್ತು ಸಂಸ್ಥಾಪಿಸಲ್ಪಡುವ ನಮಾಝ್‌ನ ಒಡೆಯನೇ! ನೀನು ಮುಹಮ್ಮದ್(ﷺ)ರಿಗೆ ವಸೀಲ ಮತ್ತು ಫದೀಲ ಗಳನ್ನು[153] ನೀಡು. ಮತ್ತು ನೀನು ನೀಡಿದ ವಾಗ್ದಾನದಂತೆ ಅವರನ್ನು ಮಕಾಮ್ ಮಹ್ಮೂದ್‌ಗೆ[154] ನಿಯೋಗಿಸು."[155]

---

**151** ಇದನ್ನು ಮುಸ್ಲಿಮ್ (1/288; ಹದೀಸ್ ನಂ. 384), ಅಬೂ ದಾವೂದ್ (1/199; ಹದೀಸ್ ನಂ. 523) ಸಅ್‌ದ್ ಇಬ್ನ್ ಅಬೀ ವಕ್ಕಾಸ್‌ರಿಂದ ವರದಿ ಮಾಡಿದ್ದಾರೆ.

**152** ಇಬ್ನು ತ್ತೀನ್ ಹೇಳಿದ್ದಾರೆ: ಅದಾನ್‌ನಲ್ಲಿ ತೌಹೀದ್‌ನ ಕರೆಯಿರುವುದರಿಂದ ಅದನ್ನು ಪರಿಪೂರ್ಣವಾದ ಕರೆ ಎಂದು ಹೇಳಲಾಗಿದೆ. (ಫತ್‌ಹುಲ್ ಬಾರಿ 2/95)

**153** ವಸೀಲದ ವ್ಯಾಖ್ಯಾನವನ್ನು ಈ ಹಿಂದಿನ ಹದೀಸಿನಲ್ಲಿ ಪ್ರವಾದಿ(ﷺ)ರವರು ವಿಶದೀಕರಿಸಿದ್ದಾರೆ. ಫದೀಲ ಎಂದರೆ ಸರ್ವ ಸೃಷ್ಟಿಗಳಿಗಿಂತಲೂ ಉಚ್ಛವಾದ ಹೆಚ್ಚುವರಿ ಸ್ಥಾನವಾಗಿದೆ. ಅಥವಾ ಅದು ವಸೀಲಕ್ಕಿರುವ ವ್ಯಾಖ್ಯಾನವಾಗಿದೆ. (ಫತ್‌ಹುಲ್ ಬಾರಿ 2/95)

**154** ಸ್ತುತಿಸಲ್ಪಡುವ ಸ್ಥಾನ. (ಫತ್‌ಹುಲ್ ಬಾರಿ 2/95)

**155** ಇದನ್ನು ಬುಖಾರಿ (1/222; ಹದೀಸ್ ನಂ. 589), ಅಬೂ ದಾವೂದ್ (1/201; ಹದೀಸ್ ನಂ. 529), ತಿರ್ಮಿದಿ (1/413; ಹದೀಸ್ ನಂ. 211), ನಸಾಈ (2/26; ಹದೀಸ್ ನಂ. 680), ಇಬ್ನ್ ಮಾಜ (1/239; ಹದೀಸ್ ನಂ. 722) ಜಾಬಿರ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ. ಇದನ್ನು ಹೇಳುವವನಿಗೆ ಪ್ರವಾದಿ(ﷺ)ರವರ ಶಫಾಅತ್ ಲಭಿಸುತ್ತದೆಯೆಂದು ಪ್ರವಾದಿ(ﷺ)ರವರು ಹೇಳಿದ್ದಾರೆ.

ಪ್ರವಾದಿ(ﷺ)ರವರು ಹೇಳಿದರು:

«لَا يُرَدُّ الدُّعَاءُ بَيْنَ الْأَذَانِ وَالْإِقَامَةِ»

**“ಅದಾನ್ ಮತ್ತು ಇಕಾಮತ್‌ನ ಮಧ್ಯೆಯ ಪ್ರಾರ್ಥನೆಯು ತಿರಸ್ಕರಿಸಲ್ಪಡುವುದಿಲ್ಲ.”[156]**

## 24. ದುಆಉಲ್ ಇಸ್ತಿಫ್ತಾಹ್[157]

ಪ್ರವಾದಿ(ﷺ)ರವರು ಹೇಳಿದರು:

«إِنَّهُ لَا تَتِمُّ صَلَاةٌ لِأَحَدٍ مِنَ النَّاسِ حَتَّى يَتَوَضَّأَ فَيَضَعَ الْوُضُوءَ» يَعْنِي مَوَاضِعَهُ «ثُمَّ يُكَبِّرُ وَيَحْمَدُ اللَّهَ عَزَّ وَجَلَّ وَيُثْنِي عَلَيْهِ ..... فَإِذَا فَعَلَ ذَلِكَ فَقَدْ تَمَّتْ صَلَاتُهُ»

**“ವುದೂ ಮಾಡಬೇಕಾದ ರೀತಿಯಲ್ಲಿ ವುದೂ ಮಾಡಿ, ತಕ್ಬೀರ್ ಹೇಳಿ ಅಲ್ಲಾಹನನ್ನು ಪ್ರಶಂಸಿಸಿ, ಪ್ರಕೀರ್ತಿಸಿ...........ವರೆಗೆ ಜನರ ಪೈಕಿ ಯಾರೊಬ್ಬನ ನಮಾಝ್ ಕೂಡ ಪೂರ್ತಿಯಾಗಲಾರದು. ಅವನು ಈ ರೀತಿ ಮಾಡಿದರೆ ಖಂಡಿತವಾಗಿಯೂ ಅವನ ನಮಾಝ್ ಪೂರ್ತಿಯಾಗುತ್ತದೆ.”[158]**

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ بَاعِدْ بَيْنِي وَبَيْنَ خَطَايَايَ كَمَا بَاعَدْتَ بَيْنَ الْمَشْرِقِ وَالْمَغْرِبِ، اللَّهُمَّ نَقِّنِي مِنْ خَطَايَايَ كَمَا يُنَقَّى الثَّوْبُ الْأَبْيَضُ مِنَ الدَّنَسِ، اللَّهُمَّ اغْسِلْنِي مِنْ خَطَايَايَ بِالثَّلْجِ وَالْمَاءِ وَالْبَرَدِ»

**(ಅಲ್ಲಾಹುಮ್ಮ ಬಾಇದ್ ಬೈನೀ ವಬೈನ ಖತಾಯಾಯ ಕಮಾ ಬಾಅದ್ತ ಬೈನಲ್ ಮಶ್ರಿಕಿ ವಲ್ ಮಗ್ರಿಬ್, ಅಲ್ಲಾಹುಮ್ಮ ನಕ್ಕಿನೀ ಮಿನ್ ಖತಾಯಾಯ ಕಮಾ ಯುನಕ್ಕ ಸ್ಸೌಬುಲ್ ಅಬ್‌ಯದು ಮಿನ ದ್ದನಸ್, ಅಲ್ಲಾಹುಮ್ಮಗ್‌ಸಿಲ್ನೀ ಮಿನ್ ಖತಾಯಾಯ ಬಿಸ್ಸಲ್ಜಿ ವಲ್ ಮಾಇ ವಲ್ ಬರದ್)**

**“**ಓ ಅಲ್ಲಾಹ್! ಪೂರ್ವ ಮತ್ತು ಪಶ್ಚಿಮ(ದಿಕ್ಕು)ಗಳ ಮಧ್ಯೆ ಅಂತರವಿರಿಸಿದಂತೆ

---

**156** ಇದನ್ನು ಅಬೂ ದಾವೂದ್ (1/199; ಹದೀಸ್ ನಂ. 521), ತಿರ್ಮಿದಿ (1/415; ಹದೀಸ್ ನಂ. 212), ಅಹ್ಮದ್ (3/155; ಹದೀಸ್ ನಂ. 12606) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**157** ತಕ್ಬೀರ್ ಹೇಳಿ ನಮಾಝನ್ನು ಪ್ರವೇಶಿಸಿದ ನಂತರ ಮಾಡುವ ಪ್ರಾರ್ಥನೆ

**158** ಇದನ್ನು ಅಬೂ ದಾವೂದ್ (1/288; ಹದೀಸ್ ನಂ. 857) ರಿಫಾಅಃ ಇಬ್ನ್ ರಾಫಿಅ್‌ರಿಂದ ವರದಿ ಮಾಡಿದ್ದಾರೆ.

ನನ್ನ ಮತ್ತು ನನ್ನ ಪಾಪಗಳ ಮಧ್ಯೆ ಅಂತರವಿರಿಸು. ಓ ಅಲ್ಲಾಹ್! ಬಿಳಿ ಉಡುಪನ್ನು ಕೊಳೆಯಿಂದ ಶುದ್ಧೀಕರಿಸುವಂತೆ ನನ್ನನ್ನು ನನ್ನ ಪಾಪಗಳಿಂದ ಶುದ್ಧೀಕರಿಸು. ಓ ಅಲ್ಲಾಹ್! ಮಂಜು, ನೀರು ಮತ್ತು ಹಿಮಗಳಿಂದ ನನ್ನನ್ನು ನನ್ನ ಪಾಪಗಳಿಂದ ತೊಳೆದುಬಿಡು."(159)

«وَجَّهْتُ وَجْهِيَ لِلَّذِي فَطَرَ السَّمَاوَاتِ وَالْأَرْضَ حَنِيفًا [مُسْلِمًا] وَمَا أَنَا مِنَ الْمُشْرِكِينَ، إِنَّ صَلَاتِي وَنُسُكِي وَمَحْيَايَ وَمَمَاتِي لِلَّهِ رَبِّ الْعَالَمِينَ، لَا شَرِيكَ لَهُ وَبِذَلِكَ أُمِرْتُ وَأَنَا مِنَ الْمُسْلِمِينَ، اللَّهُمَّ أَنْتَ الْمَلِكُ لَا إِلَهَ إِلَّا أَنْتَ، [سُبْحَانَكَ وَبِحَمْدِكَ] أَنْتَ رَبِّي وَأَنَا عَبْدُكَ، ظَلَمْتُ نَفْسِي وَاعْتَرَفْتُ بِذَنْبِي فَاغْفِرْ لِي ذُنُوبِي جَمِيعًا، إِنَّهُ لَا يَغْفِرُ الذُّنُوبَ إِلَّا أَنْتَ، وَاهْدِنِي لِأَحْسَنِ الْأَخْلَاقِ لَا يَهْدِى لِأَحْسَنِهَا إِلَّا أَنْتَ، وَاصْرِفْ عَنِّي سَيِّئَهَا، لَا يَصْرِفُ عَنِّي سَيِّئَهَا إِلَّا أَنْتَ، [آمَنْتُ بِكَ] [لَبَّيْكَ، وَسَعْدَيْكَ وَالْخَيْرُ كُلُّهُ فِي يَدَيْكَ، وَالشَّرُّ لَيْسَ إِلَيْكَ، أَنَا بِكَ وَإِلَيْكَ]، تَبَارَكْتَ وَتَعَالَيْتَ، أَسْتَغْفِرُكَ وَأَتُوبُ إِلَيْكَ»

**(ವಜ್ಜಹ್ತು ವಜ್‌ಹಿಯ ಲಿಲ್ಲದೀ ಫತರ ಸ್ಸಮಾವಾತಿ ವಲ್ ಅರ್‌ದ ಹನೀಫನ್ [ಮುಸ್ಲಿಮನ್] ವಮಾ ಅನ ಮಿನಲ್ ಮುಶ್ರಿಕೀನ, ಇನ್ನ ಸಲಾತೀ ವನುಸುಕೀ ವಮಹ್ಯಾಯ ವಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ, ಲಾ ಶರೀಕ ಲಹೂ ವಬಿದಾಲಿಕ ಉಮಿರ್ತು ವಅನ ಮಿನಲ್ ಮುಸ್ಲಿಮೀನ(160), ಅಲ್ಲಾಹುಮ್ಮ ಅನ್ತಲ್ ಮಲಿಕು ಲಾ ಇಲಾಹ ಇಲ್ಲಾ ಅನ್ತ, [ಸುಬ್‌ಹಾನಕ ವಬಿಹಮ್ದಿಕ] ಅನ್ತ ರಬ್ಬೀ ವಅನ ಅಬ್ದುಕ ದಲಮ್ತು ನಫ್ಸೀ ವಅ್‌ತರಫ್ತು ಬಿದಮ್ಬೀ ಫಗ್‌ಫಿರ್ ಲೀ ದುನೂಬೀ ಜಮೀಅನ್, ಇನ್ನಹೂ ಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ, ವಹ್ದಿನೀ ಲಿಅಹ್ಸನಿಲ್ ಅಖ್‌ಲಾಕಿ, ಲಾ ಯಹ್ದೀ ಲಿಅಹ್ಸನಿಹಾ ಇಲ್ಲಾ ಅನ್ತ, ವಸ್ರಿಫ್ ಅನ್ನೀ ಸಯ್ಯಿಅಹಾ, ಲಾ ಯಸ್ರಿಫು ಅನ್ನೀ ಸಯ್ಯಿಅಹಾ ಇಲ್ಲಾ ಅನ್ತ, [ಆಮನ್ತು ಬಿಕ] [ಲಬ್ಬಯ್ಕ, ವಸಅ್‌ದಯ್ಕ ವಲ್ ಖೈರು ಕುಲ್ಲುಹೂ ಫೀ ಯದೈಕ, ವಶ್ಶರ್ರು ಲೈಸ ಇಲೈಕ, ಅನ ಬಿಕ ವಇಲೈಕ,] ತಬಾರಕ್ತ ವತಆಲೈತ, ಅಸ್ತಗ್‌ಫಿರುಕ ವಅತೂಬು ಇಲೈಕ್)**

"ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವನೆಡೆಗೆ ನಿಷ್ಕಳಂಕಿತನಾಗಿ ಮುಸ್ಲಿಮನಾಗಿ ನಾನು ನನ್ನ ಮುಖವನ್ನು ತಿರುಗಿಸಿದೆನು ಮತ್ತು ನಾನು ಬಹುದೈವವಿಶ್ವಾಸಿಗಳಲ್ಲಿ

---

**159** ಇದನ್ನು ಬುಖಾರಿ (1/259; ಹದೀಸ್ ನಂ. 711), ಮುಸ್ಲಿಮ್ (1/419; ಹದೀಸ್ ನಂ. 598) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**160** ಕೆಲವು ವರದಿಗಳಲ್ಲಿ ವಅನ ಅವ್ವಲುಲ್ ಮುಸ್ಲಿಮೀನ್ ಎಂದಿದೆ.

ಸೇರಿದವನಲ್ಲ. ನನ್ನ ನಮಾಝ್, ನನ್ನ ಬಲಿಕರ್ಮ, ನನ್ನ ಜೀವನ ಮತ್ತು ನನ್ನ ಮರಣವು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗಾಗಿದೆ. ಅವನಿಗೆ ಯಾವುದೇ ಸಹಭಾಗಿಗಳಿಲ್ಲ, ಮತ್ತು ಈ ರೀತಿಯಾಗಿ ನನ್ನೊಂದಿಗೆ ಆಜ್ಞಾಪಿಸಲ್ಪಟ್ಟಿದೆ ಮತ್ತು ನಾನು ಮುಸ್ಲಿಮರಲ್ಲಿ ಸೇರಿದವನಾಗಿದ್ದೇನೆ. ಓ ಅಲ್ಲಾಹ್! ನೀನು ಅಧಿಪತಿಯಾಗಿರುವೆ, ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ, [ನಿನ್ನ ಪರಿಪಾವನತೆಯನ್ನು ನಾನು ಕೊಂಡಾಡುತ್ತೇನೆ ಮತ್ತು ನಿನ್ನ ಸ್ತುತಿಯೊಂದಿಗೆ] ನೀನು ನನ್ನ ಪ್ರಭು ಮತ್ತು ನಾನು ನಿನ್ನ ದಾಸನಾಗಿದ್ದೇನೆ. ನಾನು ನನ್ನ ಶರೀರದ ಮೇಲೆ ಅತಿಕ್ರಮವೆಸಗಿದ್ದೇನೆ ಮತ್ತು ನನ್ನ ಪಾಪದೊಂದಿಗೆ ನಿನ್ನಲ್ಲಿ ಪಶ್ಚಾತ್ತಾಪಪಡುತ್ತಿದ್ದೇನೆ. ಆದ್ದರಿಂದ ನನ್ನ ಪಾಪಗಳೆಲ್ಲವನ್ನೂ ಕ್ಷಮಿಸು. ಖಂಡಿತವಾಗಿಯೂ ನೀನಲ್ಲದೆ ಪಾಪಗಳನ್ನು ಕ್ಷಮಿಸುವವರಿಲ್ಲ. ಅತ್ಯುತ್ತಮವಾದ ಸ್ವಭಾವದೆಡೆಗೆ ನನ್ನನ್ನು ಮುನ್ನಡೆಸು. ಖಂಡಿತವಾಗಿಯೂ ಅತ್ಯುತ್ತಮವಾದ ಸ್ವಭಾವದೆಡೆಗೆ ನೀನಲ್ಲದೆ ಮುನ್ನಡೆಸುವವರಿಲ್ಲ. ಹೀನವಾದ ಸ್ವಭಾವವನ್ನು ನನ್ನಿಂದ ದೂರವಾಗಿಸು. ಹೀನವಾದ ಸ್ವಭಾವವನ್ನು ನೀನಲ್ಲದೆ ದೂರವಾಗಿಸುವವರಿಲ್ಲ. [ನಾನು ನಿನ್ನಲ್ಲಿ ವಿಶ್ವಾಸವಿರಿಸಿದ್ದೇನೆ.] [ನಿನ್ನ ಕರೆಗೆ ಉತ್ತರಿಸಲು ನಾನಿಲ್ಲಿದ್ದೇನೆ. ಒಳಿತೆಲ್ಲವೂ ನಿನ್ನ ಕರಗಳಲ್ಲಿದೆ, ಕೆಡುಕು ನಿನಗೆ ಹೇಳಿಸಿದ್ದಲ್ಲ.[161] ನಿನ್ನಿಂದಾಗಿ ನಾನು ಅಸ್ತಿತ್ವವನ್ನು ಪಡೆದಿದ್ದೇನೆ, ಮತ್ತು ನಾನು ನಿನ್ನೆಡೆಗೆ ಮರಳುವವನಾಗಿದ್ದೇನೆ.] ನೀನು ಅನುಗ್ರಹೀತನೂ ಅತ್ಯುನ್ನತನೂ ಆಗಿರುವೆ. ನಿನ್ನೊಂದಿಗೆ ಕ್ಷಮಾಪಣೆಯನ್ನು ಬೇಡುತ್ತಾ ನಿನ್ನೆಡೆಗೆ ಪಶ್ಚಾತ್ತಾಪದೊಂದಿಗೆ ಮರಳುತ್ತಿದ್ದೇನೆ.”[162]

«سُبْحَانَكَ اللَّهُمَّ وَبِحَمْدِكَ، وَتَبَارَكَ اسْمُكَ وَتَعَالَى جَدُّكَ، وَلَا إِلَهَ

---

**161** ಒಳಿತು ಕೆಡುಕುಗಳೆಲ್ಲವೂ ಅಲ್ಲಾಹನ ಸೃಷ್ಟಿಯೇ ಆಗಿದೆ. ಇಲ್ಲಿ ಕೆಡುಕು ನಿನಗೆ ಹೇಳಿಸಿದ್ದಲ್ಲ ಎಂಬುದಕ್ಕೆ ವಿದ್ವಾಂಸರು ವಿವಿಧ ರೀತಿಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಒಂದು: ಖಲೀಲ್ ಇಬ್ನ್ ಅಹ್ಮದ್, ನದ್ರ್ ಇಬ್ನ್ ಶುಮೈಲ್, ಇಸ್‌ಹಾಕ್ ಇಬ್ನ್ ರಾಹವೈಹಿ, ಯಹ್ಯಾ ಇಬ್ನ್ ಮಈನ್, ಅಬೂಬಕ್ರ್ ಇಬ್ನ್ ಖುಝೈಮಾ, ಅಝ್‌ಹರೀ ಮುಂತಾದವರು ಹೇಳಿದ್ದಾರೆ: ಅರ್ಥಾತ್ ಕೆಡುಕಿನೊಂದಿಗೆ ಅಲ್ಲಾಹನ ಸಾಮೀಪ್ಯವನ್ನು ಬೇಡಬಾರದು. ಎರಡು: ಮುಝನೀ ಹೇಳಿದ್ದಾರೆ: ಅರ್ಥಾತ್ ಕೆಡುಕನ್ನು ಅಲ್ಲಾಹನಿಗೆ ಸೇರಿಸಲಾಗದು, ಅಲ್ಲಾಹು ಸರ್ವ ಚರಾಚರಗಳ ಸೃಷ್ಟಿಕರ್ತನು ಮತ್ತು ಪ್ರಭುವಾಗಿದ್ದರೂ ಕೂಡ ಓ ಮಂಗಗಳ ಮತ್ತು ಹಂದಿಗಳ ಸೃಷ್ಟಿಕರ್ತನೇ! ಓ ಕೆಡುಕುಗಳ ಪ್ರಭುವೇ! ಇತ್ಯಾದಿಯಾಗಿ ಪ್ರಾರ್ಥಿಸಬಾರದು. ಮೂರು: ಅರ್ಥಾತ್ ಕೆಡುಕು ಅವನೆಡೆಗೆ ಏರಿಹೋಗಲಾರದು, ಉತ್ತಮವಾದ ಮಾತು ಮತ್ತು ಸತ್ಕರ್ಮ ಮಾತ್ರ ಅವನೆಡೆಗೆ ಏರಿಹೋಗುತ್ತದೆ. ನಾಲ್ಕು: ಅಲ್ಲಾಹನಿಗೆ ಹೋಲಿಸಿದರೆ ಕೆಡುಕು ಕೆಡುಕಾಗಲಾರದು. ಯಾಕೆಂದರೆ ಅಲ್ಲಾಹು ಕೆಡುಕನ್ನು ಯುಕ್ತಿಯೊಂದಿಗೆ ಸೃಷ್ಟಿಸಿದ್ದಾನೆ. ಸೃಷ್ಟಿಗಳಿಗೆ ಹೋಲಿಸುವಾಗ ಮಾತ್ರ ಕೆಡುಕು ಕೆಡುಕಾಗುತ್ತದೆ. (ಅರ್ಥಾತ್ ಅಲ್ಲಾಹು ಪ್ರತಿಯೊಂದನ್ನೂ ಸದುದ್ದೇಶದಿಂದ ಯುಕ್ತಿಯೊಂದಿಗೆ ಸೃಷ್ಟಿಸಿದ್ದಾನೆ. ಮತ್ತು ಅವುಗಳನ್ನು ಒಳಿತು ಮತ್ತು ಕೆಡುಕುಗಳೆರಡಕ್ಕೂ ಬಳಸುವ ಸ್ವಾತಂತ್ರ್ಯವನ್ನು ಅವನು ಸೃಷ್ಟಿಗಳಿಗೆ ನೀಡಿದ್ದಾನೆ. ಮನುಷ್ಯನು ಅವುಗಳನ್ನು ಕೆಡುಕುಗಳಿಗೆ ಬಳಸಿ ಅಲ್ಲಾಹು ಕೆಡುಕನ್ನು ಸೃಷ್ಟಿಸಿದ್ದರಿಂದಾಗಿ ನಾನು ಕೆಡುಕು ಮಾಡಿದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ) (ಶರ್ಹ್ ಮುಸ್ಲಿಮ್ 6/59)

**162** ಇದನ್ನು ಮುಸ್ಲಿಮ್ (1/534; ಹದೀಸ್ ನಂ. 771), ಅಬೂ ದಾವೂದ್ (1/260; ಹದೀಸ್ ನಂ. 760), ತಿರ್ಮಿದಿ (5/485; ಹದೀಸ್ ನಂ. 3421), ನಸಾಈ (2/129; ಹದೀಸ್ ನಂ. 897) ಅಲೀ ಇಬ್ನ್ ಅಬೀ ತಾಲಿಬ್‌ರಿಂದ ವರದಿ ಮಾಡಿದ್ದಾರೆ.

غَيْرُكَ، لَا إِلَهَ إِلَّا اللَّهُ (ثلاثًا) اللَّهُ أَكْبَرُ كَبِيرًا (ثلاثًا)»

**[ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ, ವತಬಾರಕಸ್ಮುಕ ವತಆಲಾ ಜದ್ದುಕ, ವಲಾ ಇಲಾಹ ಗೈರುಕ, ಲಾಇಲಾಹ ಇಲ್ಲಲ್ಲಾಹ್ (ಮೂರು ಬಾರಿ) ಅಲ್ಲಾಹು ಅಕ್ಬರು ಕಬೀರಾ (ಮೂರು ಬಾರಿ)]**

"ಓ ಅಲ್ಲಾಹ್! ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತಾ ನಿನ್ನ ಸ್ತುತಿಯೊಂದಿಗೆ, ನಿನ್ನ ನಾಮವು ಅನುಗ್ರಹೀತವಾಗಿದೆ, ನಿನ್ನ ಔನ್ನತ್ಯವು ಅತ್ಯುನ್ನತವಾಗಿದೆ ಮತ್ತು ನೀನಲ್ಲದೆ ಆರಾಧಿಸಲು ಅರ್ಹರಾದವರು ಯಾರೂ ಇಲ್ಲ. ಅಲ್ಲಾಹನಲ್ಲದೆ ಆರಾಧಿಸಲರ್ಹ ರಾದವರು ಯಾರೂ ಇಲ್ಲ, ಅಲ್ಲಾಹು ಮಹಾನನೂ ಮಹೋನ್ನತನೂ ಆಗಿದ್ದಾನೆ."(163)

«اللَّهُ أَكْبَرُ كَبِيرًا، وَالْحَمْدُ لِلَّهِ كَثِيرًا، وَسُبْحَانَ اللَّهِ بُكْرَةً وَأَصِيلًا»

**(ಅಲ್ಲಾಹು ಅಕ್ಬರು ಕಬೀರನ್, ವಲ್‌ಹಮ್ದುಲಿಲ್ಲಾಹಿ ಕಸೀರನ್, ವಸುಬ್‌ಹಾನಲ್ಲಾಹಿ ಬುಕ್ರತನ್ ವಅಸೀಲಾ)**

"ಅಲ್ಲಾಹು ಮಹಾನನೂ ಮಹೋನ್ನತನೂ ಆಗಿದ್ದಾನೆ, ಅಲ್ಲಾಹನಿಗೆ ಅತ್ಯಧಿಕ ಸ್ತುತಿ, ಪ್ರಭಾತದಲ್ಲಿ ಮತ್ತು ಸಂಧ್ಯಾವೇಳೆಯಲ್ಲಿ ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡು ತ್ತೇನೆ."(164)

«الْحَمْدُ لِلَّهِ حَمْدًا كَثِيرًا طَيِّبًا مُبَارَكًا فِيهِ»

**(ಅಲ್‌ಹಮ್ದುಲಿಲ್ಲಾಹಿ ಹಮ್ದನ್ ಕಸೀರನ್ ತಯ್ಯಿಬನ್ ಮುಬಾರಕನ್ ಫೀಹ್)**

"ಅಲ್ಲಾಹನಿಗೆ ಸ್ತುತಿ, ಅತ್ಯಧಿಕವಾದ ಉತ್ತಮವಾದ ಅನುಗ್ರಹೀತವಾದ ಸ್ತುತಿ"(165)

اللَّهُمَّ لَكَ الْحَمْدُ، أَنْتَ نُورُ السَّمَاوَاتِ وَالْأَرْضِ، وَلَكَ الْحَمْدُ، أَنْتَ قَيَّامُ السَّمَاوَاتِ وَالْأَرْضِ، وَلَكَ الْحَمْدُ، أَنْتَ رَبُّ السَّمَاوَاتِ وَالْأَرْضِ، وَمَنْ فِيهِنَّ، أَنْتَ الْحَقُّ، وَوَعْدُكَ الْحَقُّ، وَقَوْلُكَ الْحَقُّ، وَلِقَاؤُكَ حَقٌّ، وَالْجَنَّةُ حَقٌّ، وَالنَّارُ حَقٌّ، وَالسَّاعَةُ حَقٌّ، اللَّهُمَّ لَكَ أَسْلَمْتُ، وَبِكَ آمَنْتُ، وَعَلَيْكَ تَوَكَّلْتُ، وَإِلَيْكَ أَنَبْتُ، وَبِكَ خَاصَمْتُ، وَإِلَيْكَ حَاكَمْتُ، فَاغْفِرْ

---

**163** ಇದನ್ನು ಅಬೂ ದಾವೂದ್ (1/265; ಹದೀಸ್ ನಂ. 775) ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ.

**164** ಇದನ್ನು ಮುಸ್ಲಿಮ್ (1/420; ಹದೀಸ್ ನಂ. 601) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ. ಸಹಾಬಿಯೋರ್ವರು ಹೇಳಿದ ಇದನ್ನು ಪ್ರವಾದಿ(ﷺ)ರವರು ಅಂಗೀಕರಿಸಿದ್ದಾರೆ.

**165** ಇದನ್ನು ಮುಸ್ಲಿಮ್ (1/419; ಹದೀಸ್ ನಂ. 600) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ. ಸಹಾಬಿಯೋರ್ವರು ಹೇಳಿದ ಇದನ್ನು ಪ್ರವಾದಿ(ﷺ)ರವರು ಅಂಗೀಕರಿಸಿದ್ದಾರೆ.

لِي مَا قَدَّمْتُ وَمَا أَخَّرْتُ، وَأَسْرَرْتُ وَأَعْلَنْتُ، أَنْتَ إِلَهِي لَا إِلَهَ إِلَّا أَنْتَ»

**(ಅಲ್ಲಾಹುಮ್ಮ ಲಕಲ್ ಹಮ್ದು, ಅನ್ತ ನೂರು ಸ್ಸಮಾವಾತಿ ವಲ್ ಅರ್‌ದಿ, ವಲಕಲ್ ಹಮ್ದು, ಅನ್ತ ಕಯ್ಯಾಮು ಸ್ಸಮಾವಾತಿ ವಲ್ ಅರ್‌ದಿ, ವಲಕಲ್ ಹಮ್ದು, ಅನ್ತ ರಬ್ಬು ಸ್ಸಮಾವಾತಿ ವಲ್ ಅರ್‌ದಿ, ವಮನ್ ಫೀಹಿನ್ನ, ಅನ್ತಲ್ ಹಕ್ಕು, ವವಅ್‌ದುಕಲ್ ಹಕ್ಕು, ವಕೌಲುಕಲ್ ಹಕ್ಕು, ವಲಿಕಾಉಕ ಹಕ್ಕುನ್, ವಲ್ ಜನ್ನತು ಹಕ್ಕುನ್, ವನ್ನಾರು ಹಕ್ಕುನ್, ವಸ್ಸಾಅತು ಹಕ್ಕುನ್, ಅಲ್ಲಾಹುಮ್ಮ ಲಕ ಅಸ್ಲಮ್ತು, ವಬಿಕ ಆಮನ್ತು, ವಅಲೈಕ ತವಕ್ಕಲ್ತು, ವಇಲೈಕ ಅನಬ್ತು, ವಬಿಕ ಖಾಸಮ್ತು, ವಇಲೈಕ ಹಾಕಮ್ತು, ಫಗ್‌ಫಿರ್ ಲೀ ಮಾ ಕದ್ದಮ್ತು ವಮಾ ಅಖ್ಖರ್ತು, ವಅಸ್ರರ್ತು ವಅಅ್‌ಲನ್ತು, ಅನ್ತ ಇಲಾಹೀ ಲಾ ಇಲಾಹ ಇಲ್ಲಾ ಅನ್ತ್)**

**“**ಓ ಅಲ್ಲಾಹ್! ನಿನಗೆ ಸ್ತುತಿ. ಆಕಾಶಗಳ ಮತ್ತು ಭೂಮಿಯ ಬೆಳಕು[166]ನೀನಾಗಿರುವೆ. ಮತ್ತು ನಿನಗೆ ಸ್ತುತಿ. ಆಕಾಶಗಳ, ಭೂಮಿಯ ನಿಯಂತ್ರಕನು ನೀನಾಗಿರುವೆ. ಮತ್ತು ನಿನಗೆ ಸ್ತುತಿ. ಆಕಾಶಗಳ, ಭೂಮಿಯ ಮತ್ತು ಅವುಗಳಲ್ಲಿರುವುದೆಲ್ಲದರ ಪ್ರಭುವು ನೀನಾಗಿರುವೆ. ನೀನು ಸತ್ಯವಾಗಿರುವೆ, ನಿನ್ನ ವಾಗ್ದಾನವು ಸತ್ಯವಾಗಿದೆ, ನಿನ್ನ ಮಾತು ಸತ್ಯವಾಗಿದೆ, ನಿನ್ನ ಭೇಟಿಯು ಸತ್ಯವಾಗಿದೆ, ಸ್ವರ್ಗವು ಸತ್ಯವಾಗಿದೆ, ನರಕವು ಸತ್ಯವಾಗಿದೆ, ಪುನರುತ್ಥಾನವು ಸತ್ಯವಾಗಿದೆ, ಓ ಅಲ್ಲಾಹ್! ನಿನಗೆ ನಾನು ಶರಣಾಗಿದ್ದೇನೆ, ನಿನ್ನಲ್ಲಿ ನಾನು ವಿಶ್ವಾಸವಿಟ್ಟಿದ್ದೇನೆ, ನಿನ್ನ ಮೇಲೆ ನಾನು ಭಾರವನ್ನರ್ಪಿಸಿದ್ದೇನೆ, ನಿನ್ನೆಡೆಗೆ ನಾನು (ಪಶ್ಚಾತ್ತಾಪದೊಂದಿಗೆ) ಮರಳಿದ್ದೇನೆ, ನಿನ್ನಿಂದ ನಾನು ತರ್ಕಿಸುತ್ತೇನೆ,[167] ನಾನು ನಿನ್ನನ್ನು ತೀರ್ಪುಗಾರನನ್ನಾಗಿಸುತ್ತೇನೆ.[168] ಆದ್ದರಿಂದ ನನ್ನ ಗತ ಮತ್ತು ಮುಂಬರುವ ಪಾಪಗಳನ್ನು ಕ್ಷಮಿಸು, ನಾನು ಬಚ್ಚಿಟ್ಟಿರುವುದನ್ನು ಮತ್ತು ಜಾಹೀರುಗೊಳಿಸಿರುವುದನ್ನು (ಕ್ಷಮಿಸು). ನೀನು ನನ್ನ ಆರಾಧ್ಯನಾಗಿರುವೆ. ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ.**”**[169]

---

**166** ವಿದ್ವಾಂಸರು ಹೇಳಿದ್ದಾರೆ: ಅರ್ಥಾತ್ ಆಕಾಶಗಳನ್ನು ಮತ್ತು ಭೂಮಿಯನ್ನು ಬೆಳಗುವವನು, ಅವುಗಳ ಬೆಳಕನ್ನು ಸೃಷ್ಟಿಸಿದವನು. ಅಬೂ ಉಬೈದ್ ಹೇಳಿದ್ದಾರೆ: ಅರ್ಥಾತ್ ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವವರು ನಿನ್ನ ಬೆಳಕಿನಿಂದ ಮಾರ್ಗದರ್ಶನವನ್ನು ಪಡೆಯುತ್ತಾರೆ. ಖತ್ತಾಬೀ ಹೇಳಿದ್ದಾರೆ: ಅರ್ಥಾತ್ ಆಕಾಶಗಳ ಮತ್ತು ಭೂಮಿಯ ಬೆಳಕು ಅಲ್ಲಾಹನಿಂದಾಗಿದೆ. ಅಲ್ಲಾಹು ಬೆಳಕನ್ನೊಳಗೊಂಡವನಾಗಿದ್ದಾನೆ ಎಂದು ಇದರರ್ಥವೆಂದೂ ಭಾವಿಸಲಾಗುತ್ತದೆ. ಬೆಳಕು ಅಲ್ಲಾಹನ ಸತ್ತೆಯ ವಿಶೇಷಣವಲ್ಲ ಅದು ಅವನ ಕರ್ಮದ ವಿಶೇಷಣವಾಗಿದೆ. ಅರ್ಥಾತ್ ಅವನು ಬೆಳಕಿನ ಸೃಷ್ಟಿಕರ್ತನಾಗಿದ್ದಾನೆ. ಇತರರು ಹೇಳಿದ್ದಾರೆ: ಅರ್ಥಾತ್ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ನಿಯಂತ್ರಕನಾಗಿದ್ದಾನೆ. (ಶರ್ಹು ಮುಸ್ಲಿಮ್ 6/54)

**167** ಅರ್ಥಾತ್ ನೀನು ನನಗೆ ನೀಡಿದ ಪುರಾವೆಗಳು ಮತ್ತು ಶಕ್ತಿಯಿಂದ ನಿನ್ನನ್ನು ಧಿಕ್ಕರಿಸುವವರೊಂದಿಗೆ ಮತ್ತು ನಿನ್ನನ್ನು ನಿಷೇಧಿಸುವವರೊಂದಿಗೆ ನಾನು ತರ್ಕಿಸುತ್ತೇನೆ.

**168** ಅರ್ಥಾತ್ ಯಾರಾದರೂ ಸತ್ಯವನ್ನು ನಿರಾಕರಿಸಿದರೆ ನಾನು ನಿನ್ನನ್ನು ನನ್ನ ಮತ್ತು ಅವನ ನಡುವೆ ತೀರ್ಪುಗಾರನನ್ನಾಗಿಸುತ್ತೇನೆ. ನಿನ್ನನ್ನಲ್ಲದೆ ಬೇರೆ ಯಾರನ್ನೂ ತೀರ್ಪುಗಾರನನ್ನಾಗಿಸುವುದಿಲ್ಲ. ಜಾಹಿಲೀ ಕಾಲದಲ್ಲಿ ಜನರು ವಿಗ್ರಹ, ಜ್ಯೋತಿಷ್ಯ, ದುಷ್ಟಶಕ್ತಿ ಮುಂತಾದವರೆಡೆಗೆ ತೀರ್ಪಿಗಾಗಿ ಸಮೀಪಿಸುತ್ತಿದ್ದರು. (ಶರ್ಹು ಮುಸ್ಲಿಮ್ 6/56)

**169** ಇದನ್ನು ಮುಸ್ಲಿಮ್ (1/532; ಹದೀಸ್ ನಂ. 769), ಅಬೂದಾವೂದ್ (1/264; ಹದೀಸ್ ನಂ. 771) ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

«اللَّهُمَّ رَبَّ جَبْرَائِيلَ وَمِيكَائِيلَ وَإِسْرَافِيلَ، فَاطِرَ السَّمَاوَاتِ وَالْأَرْضِ، عَالِمَ الْغَيْبِ وَالشَّهَادَةِ، أَنْتَ تَحْكُمُ بَيْنَ عِبَادِكَ فِيمَا كَانُوا فِيهِ يَخْتَلِفُونَ، اهْدِنِي لِمَا اخْتُلِفَ فِيهِ مِنَ الْحَقِّ بِإِذْنِكَ إِنَّكَ تَهْدِي مَنْ تَشَاءُ إِلَى صِرَاطٍ مُسْتَقِيمٍ»

**(ಅಲ್ಲಾಹುಮ್ಮ ರಬ್ಬ ಜಬ್ರಾಈಲ ವಮೀಕಾಈಲ ವಇಸ್ರಾಫೀಲ, ಫಾತಿರ ಸ್ಸಮಾವಾತಿ ವಲ್ ಅರ್ದಿ, ಆಲಿಮಲ್ ಗೈಬಿ ವಶ್ಶಹಾದತಿ, ಅನ್ತ ತಹ್ಕುಮು ಬೈನ ಇಬಾದಿಕ ಫೀಮಾ ಕಾನೂ ಫೀಹಿ ಯಖ್ತಲಿಫೂನ್, ಇಹ್ದಿನೀ ಲಿಮಖ್ತುಲಿಫ ಫೀಹಿ ಮಿನಲ್ ಹಕ್ಕಿ ಬಿಇದ್‌ನಿಕ ಇನ್ನಕ ತಹ್ದೀ ಮನ್ ತಶಾಉ ಇಲಾ ಸಿರಾತಿನ್ ಮುಸ್ತಕೀಮ್)**

"ಓ ಅಲ್ಲಾಹ್! ಜಿಬ್ರೀಲರ, ಮೀಕಾಈಲರ ಮತ್ತು ಇಸ್ರಾಫೀಲರ ಪ್ರಭುವೇ! ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನೇ! ಪರೋಕ್ಷ ಮತ್ತು ಪ್ರತ್ಯಕ್ಷವನ್ನು ಅರಿತವನೇ! ನಿನ್ನ ದಾಸರು ಯಾವೊಂದು ಕಾರ್ಯದಲ್ಲಿ ಭಿನ್ನರಾಗಿರುವರೋ ಅದರ ಕುರಿತು ಅವರ ನಡುವೆ ನೀನು ತೀರ್ಪು ನೀಡುವವನಾಗಿರುವೆ. ಅವರು ಭಿನ್ನರಾಗಿ ಹೋದ ಆ ಸತ್ಯದೆಡೆಗೆ ನನ್ನನ್ನು ಮುನ್ನಡೆಸು[170]. ನೀನಿಚ್ಛಿಸಿದವರನ್ನು ನೀನು ನೇರವಾದ ಮಾರ್ಗದೆಡೆಗೆ ಮುನ್ನಡೆಸುವವನಾಗಿರುವೆ."[171]

«اللَّهُ أَكْبَرُ (عشرًا) الْحَمْدُ لِلَّهِ (عشرًا) سُبْحَانَ اللَّهِ (عشرًا) لَا إِلَهَ إِلَّا اللَّهُ (عشرًا) أَسْتَغْفِرُ اللَّهَ (عشرًا) اللَّهُمَّ اغْفِرْ لِي وَاهْدِنِي وَارْزُقْنِي وَعَافِنِي، اللَّهُمَّ إِنِّي أَعُوذُ بِكَ مِنْ ضِيقِ يَوْمِ الْقِيَامَةِ»

**[ಅಲ್ಲಾಹು ಅಕ್ಬರ್ (ಹತ್ತು ಬಾರಿ) ಅಲ್‌ಹಮ್ದುಲಿಲ್ಲಾಹ್ (ಹತ್ತು ಬಾರಿ) ಸುಬ್‌ಹಾನಲ್ಲಾಹ್ (ಹತ್ತು ಬಾರಿ) ಲಾಇಲಾಹ ಇಲ್ಲಲ್ಲಾಹ್ (ಹತ್ತು ಬಾರಿ) ಅಸ್ತಗ್‌ಫಿರುಲ್ಲಾಹ್ (ಹತ್ತು ಬಾರಿ) ಅಲ್ಲಾಹುಮ್ಮಗ್‌ಫಿರ್ ಲೀ ವಹ್ದಿನೀ ವರ್‌ಝುಕ್‌ನೀ ವಆಫಿನೀ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ದೀಕಿ ಯೌಮಿಲ್ ಕಿಯಾಮಃ]**

"ಅಲ್ಲಾಹು ಮಹಾನನಾಗಿದ್ದಾನೆ, ಅಲ್ಲಾಹನಿಗೆ ಸ್ತುತಿ, ಅಲ್ಲಾಹನ ಪರಿಪಾವನತೆಯನ್ನು ನಾನು ಕೊಂಡಾಡುತ್ತೇನೆ, ಅಲ್ಲಾಹನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ, ಅಲ್ಲಾಹನೊಂದಿಗೆ ನಾನು ಕ್ಷಮೆಯನ್ನು ಬೇಡುತ್ತಿದ್ದೇನೆ. ಓ ಅಲ್ಲಾಹ್! ನನಗೆ ಕ್ಷಮೆ ನೀಡು, ನನ್ನನ್ನು (ಸನ್ಮಾರ್ಗದೆಡೆಗೆ) ಮುನ್ನಡೆಸು, ನನಗೆ ಅನ್ನಾಧಾರವನ್ನು ನೀಡು, ನನಗೆ ಸೌಖ್ಯವನ್ನು ನೀಡು. ಓ ಅಲ್ಲಾಹ್! ಅಂತ್ಯದಿನದ ಇಕ್ಕಟ್ಟುಗಳಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ."[172]

**170** ಅರ್ಥಾತ್ ಆ ಸತ್ಯದಲ್ಲಿ ನನ್ನನ್ನು ದೃಢವಾಗಿ ನೆಲೆಗೊಳಿಸು.

**171** ಇದನ್ನು ಮುಸ್ಲಿಮ್ (1/534; ಹದೀಸ್ ನಂ. 770) ಆಯಿಶಾರಿಂದ ವರದಿ ಮಾಡಿದ್ದಾರೆ.

**172** ಇದನ್ನು ಅಬೂ ದಾವೂದ್ (1/263; ಹದೀಸ್ ನಂ. 766) ಆಯಿಶಾರಿಂದ ವರದಿ ಮಾಡಿದ್ದಾರೆ.

«اللَّهُ أَكْبَرُ (ثلاثًا) ذُو الْمَلَكُوتِ وَالْجَبَرُوتِ وَالْكِبْرِيَاءِ وَالْعَظَمَةِ»

**[ಅಲ್ಲಾಹು ಅಕ್ಬರ್ (ಮೂರು ಬಾರಿ) ದುಲ್ ಮಲಕೂತಿ ವಲ್‌ಜಬರೂತಿ ವಲ್‌ಕಿಬ್ರಿಯಾಇ ವಲ್‌ಅದಮಃ]**

"ಅಲ್ಲಾಹು ಮಹಾನನಾಗಿದ್ದಾನೆ, ಅವನು ಆಧಿಪತ್ಯಗಳನ್ನು, ಪ್ರತಾಪಗಳನ್ನು, ಅಹಂಭಾವಗಳನ್ನು ಮತ್ತು ಮಹಾತ್ಮೆಗಳನ್ನು ಹೊಂದಿದವನಾಗಿದ್ದಾನೆ."[173]

## 25. ತಅವ್ವುದ್[174]

ಅಲ್ಲಾಹು ಹೇಳಿದ್ದಾನೆ:

﴿ فَإِذَا قَرَأْتَ ٱلْقُرْءَانَ فَٱسْتَعِذْ بِٱللَّهِ مِنَ ٱلشَّيْطَٰنِ ٱلرَّجِيمِ ٩٨ ﴾

**"ನೀನು ಕುರ್‌ಆನ್ ಓದಿದರೆ (ಓದಬಯಸಿದರೆ) ಶಪಿಸಲ್ಪಟ್ಟ ಶೈತಾನನಿಂದ ಅಲ್ಲಾಹನೊಂದಿಗೆ ಅಭಯ ಯಾಚಿಸು."[175]**

﴿ وَقُل رَّبِّ أَعُوذُ بِكَ مِنْ هَمَزَٰتِ ٱلشَّيَٰطِينِ ٩٧ وَأَعُوذُ بِكَ رَبِّ أَن يَحْضُرُونِ ٩٨ ﴾

**"ಮತ್ತು ಹೇಳು: ನನ್ನ ಪ್ರಭೂ! ನಾನು ನಿನ್ನೊಂದಿಗೆ ಶೈತಾನ್‌ಗಳ ದುಷ್ಪ್ರೇರಣೆಗಳಿಂದ ಅಭಯ ಯಾಚಿಸುತ್ತಿದ್ದೇನೆ. ಮತ್ತು ನನ್ನ ಪ್ರಭೂ! ಅವರು ನನ್ನ ಬಳಿ ಹಾಜರಾಗುವುದರಿಂದಲೂ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ."[176]**

ತಅವ್ವುದ್ ಮಾಡುವ ರೀತಿಗಳು:

«أَعُوذُ بِاللَّهِ مِنَ الشَّيْطَانِ مِنْ نَفْخِهِ وَنَفْثِهِ وَهَمْزِهِ»

**(ಅಊದು ಬಿಲ್ಲಾಹಿ ಮಿನ ಶ್ಶೈತಾನಿ ಮಿನ್ ನಫ್‌ಖಿಹೀ ವನಫ್ಸಿಹೀ ವಹಮ್‌ಝಿಹ್)**

"ಶೈತಾನನಿಂದ ಅವನ ನಫ್ಖ್‌ನಿಂದ, ಅವನ ನಫ್ಸ್‌ನಿಂದ ಮತ್ತು ಅವನ ಹಮ್ಝ್[177]ನಿಂದ ನಾನು ಅಲ್ಲಾಹನೊಂದಿಗೆ ಅಭಯ ಯಾಚಿಸುತ್ತಿದ್ದೇನೆ."[178]

**173** ಇದನ್ನು ಅಬೂ ದಾವೂದ್ (1/293; ಹದೀಸ್ ನಂ. 874) ಹುದೈಫಾರಿಂದ ವರದಿ ಮಾಡಿದ್ದಾರೆ.

**174** ಕುರ್‌ಆನ್ ಓದುವುದಕ್ಕೆ ಮುಂಚಿತವಾಗಿ ಮಾಡುವ ಅಭಯಯಾಚನೆ.

**175** ಕುರ್‌ಆನ್ 16/98

**176** ಕುರ್‌ಆನ್ 23/97–98

**177** ನಫ್ಖ್ ಎಂದರೆ ಅಹಂಭಾವ, ನಫ್ಸ್ ಎಂದರೆ ಕವಿತೆ ಮತ್ತು ಹಮ್ಝ್ ಎಂದರೆ ಮತಿಭ್ರಾಂತಿ.

**178** ಇದನ್ನು ಅಬೂ ದಾವೂದ್ (1/262; ಹದೀಸ್ ನಂ. 764) ಜುಬೈರ್ ಇಬ್ನ್ ಮುತ್‌ಇಮ್‌ರಿಂದ ವರದಿ ಮಾಡಿದ್ದಾರೆ.

«أَعُوذُ بِاللَّهِ السَّمِيعِ الْعَلِيمِ مِنَ الشَّيْطَانِ الرَّجِيمِ مِنْ هَمْزِهِ وَنَفْخِهِ وَنَفْثِهِ»

**(ಅಊದು ಬಿಲ್ಲಾಹಿ ಸ್ಸಮೀಇಲ್ ಅಲೀಮಿ ಮಿನ ಶ್ಶೈತಾನಿ ರ್‍ರಜೀಮಿ ಮಿನ್ ಹಮ್ಝಿಹೀ ವನಫ್‌ಖಿಹೀ ವನಫ್ಸಿಹ್)**

"ಶಪಿಸಲ್ಪಟ್ಟ ಶೈತಾನನಿಂದ ಅವನ ಹಮ್ಝ್‌ನಿಂದ, ಅವನ ನಫ್ಖ್‌ನಿಂದ ಮತ್ತು ಅವನ ನಫ್ಸ್‌ನಿಂದ ನಾನು ಅಲ್ಲಾಹನೊಂದಿಗೆ ಅಭಯ ಯಾಚಿಸುತ್ತಿದ್ದೇನೆ."(179)

## 26. ರುಕೂಅ್‌ನಲ್ಲಿ

ಅಲ್ಲಾಹು ಹೇಳಿದ್ದಾನೆ:

﴿ يَٰٓأَيُّهَا ٱلَّذِينَ ءَامَنُواْ ٱرۡكَعُواْ وَٱسۡجُدُواْ وَٱعۡبُدُواْ رَبَّكُمۡ وَٱفۡعَلُواْ ٱلۡخَيۡرَ لَعَلَّكُمۡ تُفۡلِحُونَ ۩ ٧٧ ﴾

**"ಓ ವಿಶ್ವಾಸವಿಟ್ಟವರೇ! ನೀವು ರುಕೂಅ್ ಮಾಡಿರಿ, ಸುಜೂದ್ ಮಾಡಿರಿ, ನಿಮ್ಮ ಪ್ರಭುವನ್ನು ಆರಾಧಿಸಿರಿ ಮತ್ತು ಒಳಿತನ್ನು ಮಾಡಿರಿ. ನೀವು ವಿಜಯಗಳಿಸಲೂ ಬಹುದು."(180)**

ಪ್ರವಾದಿ(ﷺ)ರವರು ಹೇಳಿದರು:

«فَأَمَّا الرُّكُوعُ فَعَظِّمُوا فِيهِ الرَّبَّ»

**"ರುಕೂಅ್‌ನಲ್ಲಿ ನೀವು ಪ್ರಭುವನ್ನು ಮಹತ್ವೀಕರಿಸಿರಿ."(181)**

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«سُبْحَانَ رَبِّيَ الْعَظِيمِ»

**(ಸುಬ್‌ಹಾನ ರಬ್ಬಿಯಲ್ ಅದೀಮ್)**

"ಮಹೋನ್ನತನಾದ ನನ್ನ ಪ್ರಭುವಿನ ಪರಿಪಾವನತೆಯನ್ನು ಕೊಂಡಾಡುತ್ತೇನೆ."(182)

«سُبُّوحٌ قُدُّوسٌ رَبُّ الْمَلَائِكَةِ وَالرُّوحِ»

**(ಸುಬ್ಬೂಹುನ್ ಕುದ್ದೂಸುನ್ ರಬ್ಬುಲ್ ಮಲಾಇಕತಿ ವರ್‍ರೂಹ್)**

---

**179** ಇದನ್ನು ಅಬೂ ದಾವೂದ್ (1/265; ಹದೀಸ್ ನಂ. 775) ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ.

**180** ಕುರ್‌ಆನ್ 22/77

**181** ಇದನ್ನು ಮುಸ್ಲಿಮ್ (1/348; ಹದೀಸ್ ನಂ. 479) ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

**182** ಇದನ್ನು ಅಬೂದಾವೂದ್ (1/292; ಹದೀಸ್ ನಂ. 871) ಹುದೈಫಾರಿಂದ ವರದಿ ಮಾಡಿದ್ದಾರೆ.

"ಪರಿಪಾವನನು, ಪವಿತ್ರನು, ಮಲಕ್‌ಗಳ ಮತ್ತು ರೂಹ್(ಜಿಬ್ರೀಲ್)ನ ಪ್ರಭು."(183)

«سُبْحَانَكَ اللَّهُمَّ رَبَّنَا وَبِحَمْدِكَ، اللَّهُمَّ اغْفِرْ لِي»

**(ಸುಬ್‌ಹಾನಕಲ್ಲಾಹುಮ್ಮ ರಬ್ಬನಾ ವಬಿಹಮ್ದಿಕ, ಅಲ್ಲಾಹುಮ್ಮಗ್‌ಫಿರ್ ಲೀ)**

"ಓ ಅಲ್ಲಾಹ್! ನಮ್ಮ ಪ್ರಭೂ! ನಿನ್ನ ಸ್ತುತಿಯೊಂದಿಗೆ ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತೇನೆ. ಓ ಅಲ್ಲಾಹ್! ನನಗೆ ಕ್ಷಮೆ ನೀಡು."(184)

«اللَّهُمَّ لَكَ رَكَعْتُ، وَبِكَ آمَنْتُ، وَلَكَ أَسْلَمْتُ، خَشَعَ لَكَ سَمْعِي وَبَصَرِي وَمُخِّي وَعَظْمِي وَعَصَبِي»

**(ಅಲ್ಲಾಹುಮ್ಮ ಲಕ ರಕಅ್‌ತು, ವಬಿಕ ಆಮನ್ತು, ವಲಕ ಅಸ್ಲಮ್ತು, ಖಶಅ ಲಕ ಸಮ್‌ಈ ವಬಸರೀ ವಮುಖ್ಖೀ ವಅದ್‌ಮೀ ವಅಸಬೀ)**

"ಓ ಅಲ್ಲಾಹ್! ನಾನು ನಿನಗೆ ತಲೆಬಾಗಿದ್ದೇನೆ, ನಿನ್ನ ಮೇಲೆ ವಿಶ್ವಾಸವಿರಿಸಿದ್ದೇನೆ, ನಿನಗೆ ಶರಣಾಗಿದ್ದೇನೆ, ನನ್ನ ಶ್ರವಣ, ದೃಷ್ಟಿ, ಮಿದುಳು, ಮೂಳೆ ಮತ್ತು ನರನಾಡಿಗಳು ನಿನಗೆ ವಿಧೇಯವಾಗಿವೆ."(185)

«اللَّهُمَّ لَكَ رَكَعْتُ، وَبِكَ آمَنْتُ، وَلَكَ أَسْلَمْتُ، وَعَلَيْكَ تَوَكَّلْتُ، أَنْتَ رَبِّي، خَشَعَ سَمْعِي وَبَصَرِي وَدَمِي وَلَحْمِي وَعَظْمِي وَعَصَبِي لِلَّهِ رَبِّ الْعَالَمِينَ»

**(ಅಲ್ಲಾಹುಮ್ಮ ಲಕ ರಕಅ್‌ತು, ವಬಿಕ ಆಮನ್ತು, ವಲಕ ಅಸ್ಲಮ್ತು, ವಅಲೈಕ ತವಕ್ಕಲ್ತು, ಅನ್ತ ರಬ್ಬೀ, ಖಶಅ ಸಮ್‌ಈ ವಬಸರೀ ವದಮೀ ವಲಹ್‌ಮೀ ವಅದ್‌ಮೀ ವಅಸಬೀ ಲಿಲ್ಲಾಹಿ ರಬ್ಬಿಲ್ ಆಲಮೀನ್)**

"ಓ ಅಲ್ಲಾಹ್! ನಾನು ನಿನಗೆ ತಲೆಬಾಗಿದ್ದೇನೆ, ನಿನ್ನ ಮೇಲೆ ವಿಶ್ವಾಸವಿರಿಸಿದ್ದೇನೆ, ನಿನಗೆ ಶರಣಾಗಿದ್ದೇನೆ, ನಿನ್ನ ಮೇಲೆ ಭಾರವನ್ನರ್ಪಿಸಿದ್ದೇನೆ, ನೀನು ನನ್ನ ಪ್ರಭುವಾಗಿರುವೆ, ನನ್ನ ಶ್ರವಣ, ದೃಷ್ಟಿ, ರಕ್ತ, ಮಾಂಸ, ಮೂಳೆ ಮತ್ತು ನರನಾಡಿಗಳು ಲೋಕಗಳ ಅಧಿಪತಿಯಾದ ಅಲ್ಲಾಹನಿಗೆ ವಿಧೇಯವಾಗಿವೆ."(186)

---

**183** ಇದನ್ನು ಮುಸ್ಲಿಮ್ (1/353; ಹದೀಸ್ ನಂ. 487) ಆಯಿಶಾರಿಂದ ವರದಿ ಮಾಡಿದ್ದಾರೆ.

**184** ಇದನ್ನು ಬುಖಾರಿ (1/281; ಹದೀಸ್ ನಂ. 784), ಮುಸ್ಲಿಮ್ (1/350; ಹದೀಸ್ ನಂ. 484) ಆಯಿಶಾರಿಂದ ವರದಿ ಮಾಡಿದ್ದಾರೆ.

**185** ಇದನ್ನು ಮುಸ್ಲಿಮ್ (1/534 ಹದೀಸ್ ನಂ. 771) ಅಲೀ ಇಬ್ನ್ ಅಬೀ ತಾಲಿಬ್‌ರಿಂದ ವರದಿ ಮಾಡಿದ್ದಾರೆ.

**186** ಇದನ್ನು ನಸಾಈ (2/192; ಹದೀಸ್ ನಂ. 1051) ಜಾಬಿರ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

«سُبْحَانَ ذِي الْجَبَرُوتِ وَالْمَلَكُوتِ وَالْكِبْرِيَاءِ وَالْعَظَمَةِ»

**(ಸುಬ್‌ಹಾನ ದಿಲ್ ಜಬರೂತಿ ವಲ್ ಮಲಕೂತಿ ವಲ್ ಕಿಬ್ರಿಯಾಇ ವಲ್ ಅದಮಃ)**

"ಪ್ರತಾಪಗಳನ್ನು, ಆಧಿಪತ್ಯಗಳನ್ನು, ಅಹಂಭಾವಗಳನ್ನು ಮತ್ತು ಮಹಾತ್ಮೆಗಳನ್ನು ಹೊಂದಿದ ಪರಿಪಾವನನು."(187)

## 27. ಇಅ್‌ತಿದಾಲ್‌ನಲ್ಲಿ

ಪ್ರವಾದಿ(ﷺ)ರವರು ಹೇಳಿದರು:

«إِذَا قَالَ الْإِمَامُ سَمِعَ اللَّهُ لِمَنْ حَمِدَهُ فَقُولُوا اللَّهُمَّ رَبَّنَا لَكَ الْحَمْدُ فَإِنَّهُ مَنْ وَافَقَ قَوْلُهُ قَوْلَ الْمَلَائِكَةِ غُفِرَ لَهُ مَا تَقَدَّمَ مِنْ ذَنْبِهِ»

**"ಇಮಾಮ್ ಸಮಿಅಲ್ಲಾಹು ಲಿಮನ್ ಹಮಿದಹ್ ಎಂದು ಹೇಳಿದರೆ ಅಲ್ಲಾಹುಮ್ಮ ರಬ್ಬನಾ ಲಕಲ್ ಹಮ್ದ್ ಎಂದು ಹೇಳಿರಿ. ಯಾರ ಮಾತು ಮಲಕ್‌ಗಳ ಮಾತುಗಳೊಂದಿಗೆ ಹೊಂದಾಣಿಕೆಯಾಗುತ್ತದೋ ಅವನ ಗತ ಪಾಪಗಳು ಕ್ಷಮಿಸಲ್ಪಡುವುದು."(188)**

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ رَبَّنَا لَكَ الْحَمْدُ، مِلْءَ السَّمَاوَاتِ وَمِلْءَ الْأَرْضِ، وَمِلْءَ مَا بَيْنَهُمَا، وَمِلْءَ مَا شِئْتَ مِنْ شَيْءٍ بَعْدُ»

**(ಅಲ್ಲಾಹುಮ್ಮ ರಬ್ಬನಾ ಲಕಲ್ ಹಮ್ದು, ಮಿಲ್‌ಅ ಸ್ಸಮಾವಾತಿ ವಮಿಲ್‌ಅಲ್ ಅರ್‌ದಿ, ವಮಿಲ್‌ಅ ಮಾ ಬೈನಹುಮಾ, ವಮಿಲ್‌ಅ ಮಾ ಶಿಅ್‌ತ ಮಿನ್ ಶೈಇನ್ ಬಅ್‌ದ್)**

"ಓ ಅಲ್ಲಾಹ್! ನಮ್ಮ ಪ್ರಭೂ! ಆಕಾಶಗಳು ತುಂಬುವಷ್ಟು, ಭೂಮಿ ತುಂಬುವಷ್ಟು, ಅವುಗಳೆರಡರ ಮಧ್ಯೆ ತುಂಬುವಷ್ಟು ಮತ್ತು ನೀನು ಇಚ್ಛಿಸುವ ಪ್ರತಿಯೊಂದು ವಸ್ತು ತುಂಬುವಷ್ಟು ನಿನಗೆ ಸ್ತುತಿ."(189)

«رَبَّنَا لَكَ الْحَمْدُ، مِلْءَ السَّمَاوَاتِ وَمِلْءَ الْأَرْضِ، وَمِلْءَ مَا شِئْتَ مِنْ شَيْءٍ بَعْدُ، أَهْلَ الثَّنَاءِ وَالْمَجْدِ، أَحَقُّ مَا قَالَ الْعَبْدُ، وَكُلُّنَا لَكَ عَبْدٌ، اللَّهُمَّ

**187** ಇದನ್ನು ನಸಾಈ (2/223; ಹದೀಸ್ ನಂ. 1132) ಔಫ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**188** ಇದನ್ನು ಬುಖಾರಿ (1/274; ಹದೀಸ್ ನಂ. 763), ಮುಸ್ಲಿಮ್ (1/306; ಹದೀಸ್ ನಂ. 409) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**189** ಇದನ್ನು ಮುಸ್ಲಿಮ್ (1/534 ಹದೀಸ್ ನಂ. 771) ಅಲೀ ಇಬ್ನ್ ಅಬೀ ತಾಲಿಬ್‌ರಿಂದ ವರದಿ ಮಾಡಿದ್ದಾರೆ.

لَا مَانِعَ لِمَا أَعْطَيْتَ، وَلَا مُعْطِيَ لِمَا مَنَعْتَ، وَلَا يَنْفَعُ ذَا الْجَدِّ مِنْكَ الْجَدُّ»

**(ಅಲ್ಲಾಹುಮ್ಮ ರಬ್ಬನಾ ಲಕಲ್ ಹಮ್ದು, ಮಿಲ್‌ಅ ಸ್ಸಮಾವಾತಿ ವಮಿಲ್‌ಅಲ್ ಅರ್‌ದಿ, ವಮಿಲ್‌ಅ ಮಾ ಶಿಅ್‌ತ ಮಿನ್ ಶೈಇನ್ ಬಅ್‌ದು, ಅಹ್ಲ ಸ್ಸನಾಇ ವಲ್ ಮಜ್‌ದಿ, ಅಹಕ್ಕು ಮಾ ಕಾಲಲ್ ಅಬ್ದು, ವಕುಲ್ಲುನಾ ಲಕ ಅಬ್ದುನ್, ಅಲ್ಲಾಹುಮ್ಮ ಲಾ ಮಾನಿಅ ಲಿಮಾ ಅಅ್‌ತಯ್ತ, ವಲಾ ಮುಅ್‌ತಿಯ ಲಿಮಾ ಮನಅ್‌ತ, ವಲಾ ಯನ್‌ಫಉ ದಲ್ ಜದ್ದಿ ಮಿನ್ಕಲ್ ಜದ್ದ್)**

“ಓ ಅಲ್ಲಾಹ್! ನಮ್ಮ ಪ್ರಭೂ! ಆಕಾಶಗಳು ತುಂಬುವಷ್ಟು, ಭೂಮಿ ತುಂಬುವಷ್ಟು ಮತ್ತು ನೀನು ಇಚ್ಛಿಸುವ ಪ್ರತಿಯೊಂದು ವಸ್ತು ತುಂಬುವಷ್ಟು ನಿನಗೆ ಸ್ತುತಿ. ಸ್ತುತಿ ಪ್ರಶಂಸೆಗಳ ಒಡೆಯನೇ! ದಾಸನು ಹೇಳಲು ಇದು ಅತ್ಯಂತ ಅರ್ಹವಾಗಿದೆ ಮತ್ತು ನಾವೆಲ್ಲರೂ ನಿನಗೆ ದಾಸರಾಗಿದ್ದೇವೆ. ಓ ಅಲ್ಲಾಹ್! ನೀನು ನೀಡಿದ್ದನ್ನು ತಡೆಯುವವರಿಲ್ಲ, ನೀನು ತಡೆದುದನ್ನು ನೀಡುವವರಿಲ್ಲ ಮತ್ತು ಸಿರಿವಂತನ ಯಾವುದೇ ಸಂಪತ್ತು ನಿನ್ನೆದುರು ಪ್ರಯೋಜನಕಾರಿಯಾಗಲಾರದು.”[190]

«اللَّهُمَّ لَكَ الْحَمْدُ، مِلْءَ السَّمَاءِ وَمِلْءَ الْأَرْضِ، وَمِلْءَ مَا شِئْتَ مِنْ شَيْءٍ بَعْدُ، اللَّهُمَّ طَهِّرْنِي بِالثَّلْجِ وَالْبَرَدِ وَالْمَاءِ الْبَارِدِ، اللَّهُمَّ طَهِّرْنِي مِنَ الذُّنُوبِ وَالْخَطَايَا، كَمَا يُنَقَّى الثَّوْبُ الْأَبْيَضُ مِنَ الْوَسَخِ»

**(ಅಲ್ಲಾಹುಮ್ಮ ಲಕಲ್ ಹಮ್ದು, ಮಿಲ್‌ಅ ಸ್ಸಮಾಇ ವಮಿಲ್‌ಅಲ್ ಅರ್‌ದಿ, ವಮಿಲ್‌ಅ ಮಾ ಶಿಅ್‌ತ ಮಿನ್ ಶೈಇನ್ ಬಅ್‌ದು, ಅಲ್ಲಾಹುಮ್ಮ ತಹ್ಹಿರ್‌ನೀ ಬಿಸ್ಸಲ್ಜಿ ವಲ್ ಬರದಿ ವಲ್ ಮಾಇಲ್ ಬಾರಿದಿ, ಅಲ್ಲಾಹುಮ್ಮ ತಹ್ಹಿರ್‌ನೀ ಮಿನ ದ್ದುನೂಬಿ ವಲ್ ಖತಾಯಾ, ಕಮಾ ಯುನಕ್ಕ ಸ್ಸೌಬುಲ್ ಅಬ್ಯದು ಮಿನಲ್ ವಸಖ್)**

“ಓ ಅಲ್ಲಾಹ್! ಆಕಾಶ ತುಂಬುವಷ್ಟು, ಭೂಮಿ ತುಂಬುವಷ್ಟು ಮತ್ತು ನೀನು ಇಚ್ಛಿಸುವ ಪ್ರತಿಯೊಂದು ವಸ್ತು ತುಂಬುವಷ್ಟು ನಿನಗೆ ಸ್ತುತಿ. ಓ ಅಲ್ಲಾಹ್! ಮಂಜು, ಹಿಮ ಮತ್ತು ತಣ್ಣೀರಿನಿಂದ ನನ್ನನ್ನು ಶುದ್ಧೀಕರಿಸು, ಓ ಅಲ್ಲಾಹ್! ಬಿಳಿ ಉಡುಪನ್ನು ಕೊಳೆಯಿಂದ ಶುದ್ಧೀಕರಿಸುವಂತೆ ಪಾಪಗಳು ಮತ್ತು ದೋಷಗಳಿಂದ ನನ್ನನ್ನು ಶುದ್ಧೀಕರಿಸು.”[191]

«لِرَبِّيَ الْحَمْدُ»

**(ಲಿರಬ್ಬಿಯಲ್ ಹಮ್ದ್)**

---

**190** ಇದನ್ನು ಮುಸ್ಲಿಮ್ (1/347; ಹದೀಸ್ ನಂ. 477) ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ.

**191** ಇದನ್ನು ಮುಸ್ಲಿಮ್ (1/346; ಹದೀಸ್ ನಂ. 476) ಅಬ್ದುಲ್ಲಾಹ್ ಇಬ್ನ್ ಅಬೀ ಔಫಾರಿಂದ ವರದಿ ಮಾಡಿದ್ದಾರೆ.

"ನನ್ನ ಪ್ರಭುವಿಗೆ ಸ್ತುತಿ."(192)

«رَبَّنَا وَلَكَ الْحَمْدُ حَمْدًا كَثِيرًا طَيِّبًا مُبَارَكًا فِيهِ»

**(ರಬ್ಬನಾ ವಲಕಲ್ ಹಮ್ದು ಹಮ್ದನ್ ತಯ್ಯಿಬನ್ ಮುಬಾರಕನ್ ಫೀಹ್)**

"ನಮ್ಮ ಪ್ರಭೂ! ಮತ್ತು ನಿನಗೆ ಸ್ತುತಿ, ಅಧಿಕವಾದ, ಉತ್ತಮವಾದ, ಅನುಗ್ರಹೀತವಾದ ಸ್ತುತಿ."(193)

## 28. ಸುಜೂದ್‌ನಲ್ಲಿ

ಅಲ್ಲಾಹು ಹೇಳಿದ್ದಾನೆ:

﴿ فَٱسْجُدُوا۟ لِلَّهِ وَٱعْبُدُوا۟ ۩ ﴿٦٢﴾ ﴾

**"ಆದ್ದರಿಂದ ಅಲ್ಲಾಹನಿಗೆ ಸುಜೂದ್ ಮಾಡಿರಿ ಮತ್ತು (ಅವನನ್ನು) ಆರಾಧಿಸಿರಿ."(194)**

﴿ وَلِلَّهِ يَسْجُدُ مَا فِى ٱلسَّمَٰوَٰتِ وَمَا فِى ٱلْأَرْضِ مِن دَآبَّةٍ وَٱلْمَلَٰٓئِكَةُ وَهُمْ لَا يَسْتَكْبِرُونَ ﴿٤٩﴾ ﴾

**"ಆಕಾಶಗಳಲ್ಲಿರುವ ಮತ್ತು ಭೂಮಿಯಲ್ಲಿರುವ ಪ್ರತಿಯೊಂದು ಜೀವಿಗಳು ಮತ್ತು ಮಲಕ್‌ಗಳು ಅಲ್ಲಾಹನಿಗೆ ಸುಜೂದ್ ಮಾಡುತ್ತಿದ್ದಾರೆ. ಅವರು ಅಹಂಭಾವವನ್ನು ತೋರುವುದಿಲ್ಲ."(195)**

ಪ್ರವಾದಿ(ﷺ)ರವರು ಹೇಳಿದರು:

«فَأَمَّا السُّجُودُ فَاجْتَهِدُوا فِي الدُّعَاءِ، فَقَمِنٌ أَنْ يُسْتَجَابَ لَكُمْ»

**"ಸುಜೂದ್‌ನಲ್ಲಿ ಪ್ರಾರ್ಥನೆಗಳೊಂದಿಗೆ ಪರಿಶ್ರಮಿಸಿರಿ, ನಿಮಗೆ ಉತ್ತರಿಸಲ್ಪಡಲು ಅದು ಅತ್ಯಂತ ಅರ್ಹವಾಗಿದೆ."(196)**

ಪ್ರವಾದಿ(ﷺ)ರವರು ಹೇಳಿದರು:

«أَقْرَبُ مَا يَكُونُ الْعَبْدُ مِنْ رَبِّهِ وَهُوَ سَاجِدٌ، فَأَكْثِرُوا الدُّعَاءَ»

---

**192** ಇದನ್ನು ಅಬೂದಾವೂದ್ (1/293; ಹದೀಸ್ ನಂ. 874) ಹುದೈಫಾರಿಂದ ವರದಿ ಮಾಡಿದ್ದಾರೆ.

**193** ಇದನ್ನು ಬುಖಾರಿ (1/275; ಹದೀಸ್ ನಂ. 766) ರಿಫಾಅಃ ಇಬ್ನ್ ರಾಫಿಅ್‌ರಿಂದ ವರದಿ ಮಾಡಿದ್ದಾರೆ.

**194** ಕುರ್‌ಆನ್ 53/62

**195** ಕುರ್‌ಆನ್ 16/49

**196** ಇದನ್ನು ಮುಸ್ಲಿಮ್ (1/348; ಹದೀಸ್ ನಂ. 479) ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

**"ದಾಸನು ತನ್ನ ಪ್ರಭುವಿನೊಂದಿಗೆ ಅತೀ ನಿಕಟನಾಗುವುದು ಅವನು ಸುಜೂದ್ ಮಾಡುವ ಸಂದರ್ಭದಲ್ಲಾಗಿದೆ. ಆದ್ದರಿಂದ (ಆ ಸಂದರ್ಭದಲ್ಲಿ) ಪ್ರಾರ್ಥನೆಯನ್ನು ಹೆಚ್ಚಿಸಿರಿ."**(197)

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«سُبْحَانَ رَبِّيَ الْأَعْلَى»

**(ಸುಬ್‌ಹಾನ ರಬ್ಬಿಯಲ್ ಅಅ್‌ಲಾ)**

"ಮಹೋನ್ನತನಾದ ನನ್ನ ಪ್ರಭುವಿನ ಪರಿಪಾವನತೆಯನ್ನು ಕೊಂಡಾಡುತ್ತೇನೆ."(198)

«سُبُّوحٌ قُدُّوسٌ رَبُّ الْمَلَائِكَةِ وَالرُّوحِ»

**(ಸುಬ್ಬೂಹುನ್ ಕುದ್ದೂಸುನ್ ರಬ್ಬುಲ್ ಮಲಾಇಕತಿ ವರ್‍ರೂಹ್)**

"ಪರಿಪಾವನನು, ಪವಿತ್ರನು, ಮಲಕ್‌ಗಳ ಮತ್ತು ರೂಹ್(ಜಿಬ್ರೀಲ್)ನ ಪ್ರಭು."(199)

«سُبْحَانَكَ اللَّهُمَّ رَبَّنَا وَبِحَمْدِكَ، اللَّهُمَّ اغْفِرْ لِي»

**(ಸುಬ್‌ಹಾನಕಲ್ಲಾಹುಮ್ಮ ರಬ್ಬನಾ ವಬಿಹಮ್ದಿಕ, ಅಲ್ಲಾಹುಮ್ಮಗ್‌ಫಿರ್ ಲೀ)**

"ಓ ಅಲ್ಲಾಹ್! ನಮ್ಮ ಪ್ರಭೂ! ನಿನ್ನ ಸ್ತುತಿಯೊಂದಿಗೆ ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತೇನೆ. ಓ ಅಲ್ಲಾಹ್! ನನಗೆ ಕ್ಷಮೆ ನೀಡು."(200)

«اللَّهُمَّ لَكَ سَجَدْتُ، وَبِكَ آمَنْتُ، وَلَكَ أَسْلَمْتُ، سَجَدَ وَجْهِي لِلَّذِي خَلَقَهُ وَصَوَّرَهُ، وَشَقَّ سَمْعَهُ وَبَصَرَهُ، تَبَارَكَ اللَّهُ أَحْسَنُ الْخَالِقِينَ»

**(ಅಲ್ಲಾಹುಮ್ಮ ಲಕ ಸಜದ್‌ತು, ವಬಿಕ ಆಮನ್ತು, ವಲಕ ಅಸ್ಲಮ್ತು, ಸಜದ ವಜ್‌ಹೀ ಲಿಲ್ಲದೀ ಖಲಕಹೂ ವಸವ್ವರಹೂ, ವಶಕ್ಕ ಸಮ್‌ಅಹೂ ವಬಸರಹೂ, ತಬಾರಕಲ್ಲಾಹು ಅಹ್ಸನುಲ್ ಖಾಲಿಕೀನ್)**

"ಓ ಅಲ್ಲಾಹ್! ನಾನು ನಿನಗೆ ಸಾಷ್ಟಾಂಗವೆರಗಿದ್ದೇನೆ, ನಿನ್ನ ಮೇಲೆ ವಿಶ್ವಾಸವಿರಿಸಿದ್ದೇನೆ, ನಿನಗೆ ಶರಣಾಗಿದ್ದೇನೆ, ನನ್ನ ಮುಖವು ಅದನ್ನು ಸೃಷ್ಟಿಸಿದ, ಅದಕ್ಕೆ ರೂಪವನ್ನು ನೀಡಿದ, ಅದರಲ್ಲಿ ಶ್ರವಣ ಮತ್ತು ದೃಷ್ಟಿಯನ್ನು ನಿರ್ಮಿಸಿದವನಿಗೆ ಸಾಷ್ಟಾಂಗವೆರಗಿದೆ. ಅತ್ಯಂತ ಸುಂದರವಾಗಿ ಸೃಷ್ಟಿಸುವ ಅಲ್ಲಾಹು ಅನುಗ್ರಹೀತನಾಗಿದ್ದಾನೆ."(201)

---

**197** ಇದನ್ನು ಮುಸ್ಲಿಮ್ (1/350; ಹದೀಸ್ ನಂ. 482) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**198** ಇದನ್ನು ಅಬೂ ದಾವೂದ್ (1/292; ಹದೀಸ್ ನಂ. 871) ಹುದೈಫಾರಿಂದ ವರದಿ ಮಾಡಿದ್ದಾರೆ.

**199** ಇದನ್ನು ಮುಸ್ಲಿಮ್ (1/353; ಹದೀಸ್ ನಂ. 487) ಆಯಿಶಾರಿಂದ ವರದಿ ಮಾಡಿದ್ದಾರೆ.

**200** ಇದನ್ನು ಬುಖಾರಿ (1/281; ಹದೀಸ್ ನಂ. 784), ಮುಸ್ಲಿಮ್ (1/350; ಹದೀಸ್ ನಂ. 484) ಆಯಿಶಾರಿಂದ ವರದಿ ಮಾಡಿದ್ದಾರೆ.

**201** ಇದನ್ನು ಮುಸ್ಲಿಮ್ (1/534; ಹದೀಸ್ ನಂ. 771) ಅಲೀ ಇಬ್ನ್ ಅಬೀ ತಾಲಿಬ್‌ರಿಂದ ವರದಿ ಮಾಡಿದ್ದಾರೆ.

«سُبْحَانَ ذِي الْجَبَرُوتِ وَالْمَلَكُوتِ وَالْكِبْرِيَاءِ وَالْعَظَمَةِ»

**(ಸುಬ್‌ಹಾನ ದಿಲ್ ಜಬರೂತಿ ವಲ್ ಮಲಕೂತಿ ವಲ್ ಕಿಬ್ರಿಯಾಇ ವಲ್ ಅದಮಃ)**

“ಪ್ರತಾಪಗಳನ್ನು, ಆಧಿಪತ್ಯಗಳನ್ನು, ಅಹಂಭಾವಗಳನ್ನು ಮತ್ತು ಮಹಾತ್ಮೆಗಳನ್ನು ಹೊಂದಿದ ಪರಿಪಾವನನು.”(202)

«اللَّهُمَّ إِنِّي أَعُوذُ بِرِضَاكَ مِنْ سَخَطِكَ، وَبِمُعَافَاتِكَ مِنْ عُقُوبَتِكَ، أَعُوذُ بِكَ مِنْكَ، لَا أُحْصِي ثَنَاءً عَلَيْكَ، أَنْتَ كَمَا أَثْنَيْتَ عَلَى نَفْسِكَ»

**(ಅಲ್ಲಾಹುಮ್ಮ ಇನ್ನೀ ಅಊದು ಬಿರಿದಾಕ ಮಿನ್ ಸಖತಿಕ, ವಬಿಮುಆಫಾತಿಕ ಮಿನ್ ಉಕೂಬತಿಕ, ವಅಊದು ಬಿಕ ಮಿನ್ಕ, ಲಾ ಉಹ್ಸೀ ಸನಾಅನ್ ಅಲೈಕ, ಅನ್ತ ಕಮಾ ಅಸ್ನೈತ ಅಲಾ ನಫ್ಸಿಕ್)**

“ಓ ಅಲ್ಲಾಹ್! ನಿನ್ನ ಕ್ರೋಧಕ್ಕೆದುರಾಗಿ ನಿನ್ನ ತೃಪ್ತಿಯೊಂದಿಗೆ, ನಿನ್ನ ಶಿಕ್ಷೆಗೆದುರಾಗಿ ನಿನ್ನ ಕ್ಷಮೆಯೊಂದಿಗೆ ನಾನು ಅಭಯ ಯಾಚಿಸುತ್ತೇನೆ. ನಿನಗೆದುರಾಗಿ ನಿನ್ನೊಂದಿಗೆ ನಾನು ಅಭಯ ಯಾಚಿಸುತ್ತೇನೆ. ನೀನು ನಿನ್ನನ್ನು ಸ್ವತಃ ಪ್ರಶಂಸಿಸಿದಂತೆ ನಿನ್ನ ಪ್ರಶಂಸೆಯನ್ನು ಎಣಿಸಿಕೊಳ್ಳುವುದು ನನಗೆ ಅಸಾಧ್ಯವಾಗಿದೆ.”(203)

«اللَّهُمَّ اغْفِرْ لِي ذَنْبِي كُلَّهُ دِقَّهُ وَجِلَّهُ»

**(ಅಲ್ಲಾಹುಮ್ಮಗ್‌ಫಿರ್ ಲೀ ದಮ್ಬೀ ಕುಲ್ಲಹೂ ದಿಕ್ಕಹೂ ವಜಿಲ್ಲಹ್)**

“ಓ ಅಲ್ಲಾಹ್! ಚಿಕ್ಕದೂ ದೊಡ್ಡದೂ ಆದ ನನ್ನ ಪಾಪಗಳೆಲ್ಲವನ್ನೂ ಕ್ಷಮಿಸು.”(204)

«سُبْحَانَكَ وَبِحَمْدِكَ، لَا إِلَهَ إِلَّا أَنْتَ»

**(ಸುಬ್‌ಹಾನಕ ವಬಿಹಮ್ದಿಕ, ಲಾ ಇಲಾಹ ಇಲ್ಲಾ ಅನ್ತ್)**

“ನಿನ್ನ ಸ್ತುತಿಯೊಂದಿಗೆ ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತೇನೆ, ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ.”(205)

«اللَّهُمَّ اغْفِرْ لِي مَا أَسْرَرْتُ وَمَا أَعْلَنْتُ»

**(ಅಲ್ಲಾಹುಮ್ಮಗ್‌ಫಿರ್ ಲೀ ಮಾ ಅಸ್ರರ್ತು ವಮಾ ಅಅ್‌ಲನ್ತ್)**

“ಓ ಅಲ್ಲಾಹ್! ನಾನು ಮರೆಯಾಗಿಸಿದ್ದನ್ನೂ, ಬಹಿರಂಗಗೊಳಿಸಿದ್ದನ್ನೂ ನನಗೆ

---

**202** ಇದನ್ನು ನಸಾಈ (2/223; ಹದೀಸ್ ನಂ. 1132) ಔಫ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**203** ಇದನ್ನು ಮುಸ್ಲಿಮ್ (1/352 ಹದೀಸ್ ನಂ. 486) ಆಯಿಶಾರಿಂದ ವರದಿ ಮಾಡಿದ್ದಾರೆ.

**204** ಇದನ್ನು ಮುಸ್ಲಿಮ್ (1/350 ಹದೀಸ್ ನಂ. 483) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**205** ಇದನ್ನು ಮುಸ್ಲಿಮ್ (1/351; ಹದೀಸ್ ನಂ. 485) ಆಯಿಶಾರಿಂದ ವರದಿ ಮಾಡಿದ್ದಾರೆ.

ಕ್ಷಮಿಸು.”[206]

«اللَّهُمَّ اجْعَلْ فِي قَلْبِي نُورًا، وَفِي سَمْعِي نُورًا، وَفِي بَصَرِي نُورًا، وَعَنْ يَمِينِي نُورًا، وَعَنْ شِمَالِي نُورًا، وَأَمَامِي نُورًا، وَخَلْفِي نُورًا، وَفَوْقِي نُورًا، وَتَحْتِي نُورًا، وَاجْعَلْنِي نُورًا»

**(ಅಲ್ಲಾಹುಮ್ಮಜ್‌ಅಲ್ ಫೀ ಕಲ್ಬೀ ನೂರನ್, ವಫೀ ಸಮ್‌ಈ ನೂರನ್, ವಫೀ ಬಸರೀ ನೂರನ್, ವಅನ್ ಯಮೀನೀ ನೂರನ್, ವಅನ್ ಶಿಮಾಲೀ ನೂರನ್, ವಅಮಾಮೀ ನೂರನ್, ವಖಲ್ಫೀ ನೂರನ್, ವಫೌಖೀ ನೂರನ್, ವತಹ್ತೀ ನೂರನ್, ವಜ್‌ಅಲ್‌ನೀ ನೂರನ್)**

“ಓ ಅಲ್ಲಾಹ್! ನನ್ನ ಹೃದಯದಲ್ಲಿ ಬೆಳಕನ್ನಿಡು, ನನ್ನ ಶ್ರವಣದಲ್ಲಿ ಬೆಳಕನ್ನಿಡು, ನನ್ನ ದೃಷ್ಟಿಯಲ್ಲಿ ಬೆಳಕನ್ನಿಡು, ನನ್ನ ಬಲಭಾಗದಲ್ಲಿ ಬೆಳಕನ್ನಿಡು, ನನ್ನ ಎಡಭಾಗದಲ್ಲಿ ಬೆಳಕನ್ನಿಡು, ನನ್ನ ಮುಂದೆ ಬೆಳಕನ್ನಿಡು, ನನ್ನ ಹಿಂದೆ ಬೆಳಕನ್ನಿಡು, ನನ್ನ ಮೇಲೆ ಬೆಳಕನ್ನಿಡು, ನನ್ನ ಕೆಳಗೆ ಬೆಳಕನ್ನಿಡು, ನನ್ನನ್ನು ಬೆಳಕನ್ನಾಗಿ ಮಾಡು.”[207]

## 29. ಎರಡು ಸುಜೂದ್‌ಗಳ ಮಧ್ಯೆ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ اغْفِرْ لِي وَارْحَمْنِي وَعَافِنِي وَاهْدِنِي وَارْزُقْنِي»

**(ಅಲ್ಲಾಹುಮ್ಮಗ್‌ಫಿರ್ ಲೀ ವರ್ಹಮ್‌ನೀ ವಆಫಿನೀ ವಹ್ದಿನೀ ವರ್ಝುಕ್‌ನೀ)**

“ಓ ಅಲ್ಲಾಹ್! ನನ್ನನ್ನು ಕ್ಷಮಿಸು, ನನಗೆ ಕರುಣೆತೋರು, ನನಗೆ ಸೌಖ್ಯ ನೀಡು, ನನ್ನನ್ನು ಮುನ್ನಡೆಸು ಮತ್ತು ನನಗೆ ಅನ್ನಾಧಾರವನ್ನು ನೀಡು.”[208]

«رَبِّ اغْفِرْ لِي رَبِّ اغْفِرْ لِي»

**(ರಬ್ಬಿಗ್‌ಫಿರ್ ಲೀ, ರಬ್ಬಿಗ್‌ಫಿರ್ ಲೀ)**

“ನನ್ನ ಪ್ರಭೂ! ನನ್ನನ್ನು ಕ್ಷಮಿಸು, ನನ್ನ ಪ್ರಭೂ! ನನ್ನನ್ನು ಕ್ಷಮಿಸು.”[209]

---

**206** ಇದನ್ನು ನಸಾಈ (2/220; ಹದೀಸ್ ನಂ. 1124) ಆಯಿಶಾರಿಂದ ವರದಿ ಮಾಡಿದ್ದಾರೆ.

**207** ಇದನ್ನು ಮುಸ್ಲಿಮ್ (1/525; ಹದೀಸ್ ನಂ. 763) ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

**208** ಇದನ್ನು ಅಬೂ ದಾವೂದ್ (1/286; ಹದೀಸ್ ನಂ. 850) ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

**209** ಇದನ್ನು ಇಬ್ನ್ ಮಾಜ (1/289; ಹದೀಸ್ ನಂ. 897) ಹುದೈಫಾರಿಂದ ವರದಿ ಮಾಡಿದ್ದಾರೆ.

## 30. ತಶಹ್ಹುದ್‌ನಲ್ಲಿ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«التَّحِيَّاتُ لِلَّهِ، وَالصَّلَوَاتُ وَالطَّيِّبَاتُ، السَّلَامُ عَلَيْكَ أَيُّهَا النَّبِيُّ وَرَحْمَةُ اللَّهِ وَبَرَكَاتُهُ، السَّلَامُ عَلَيْنَا، وَعَلَى عِبَادِ اللَّهِ الصَّالِحِينَ، أَشْهَدُ أَنْ لَا إِلَهَ إِلَّا اللَّهُ، وَأَشْهَدُ أَنَّ مُحَمَّدًا عَبْدُهُ وَرَسُولُهُ»

**(ಅತ್ತಹಿಯ್ಯಾತು ಲಿಲ್ಲಾಹಿ, ವಸ್ಸಲವಾತು ವತ್ತಯ್ಯಿಬಾತು, ಅಸ್ಸಲಾಮು ಅಲೈಕ ಅಯ್ಯುಹ ನ್ನಬಿಯ್ಯು ವರಹ್ಮತುಲ್ಲಾಹಿ ವಬರಕಾತುಹು, ಅಸ್ಸಲಾಮು ಅಲೈನಾ, ವಅಲಾ ಇಬಾದಿಲ್ಲಾಹಿ ಸ್ಸಾಲಿಹೀನ, ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು, ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹ್)**

"ಅಭಿವಂದನೆಗಳು, ಪ್ರಾರ್ಥನೆಗಳು ಮತ್ತು ಸತ್ಕರ್ಮಗಳೆಲ್ಲವೂ ಅಲ್ಲಾಹನಿಗೆ. ಓ ಪ್ರವಾದಿಯವರೇ! ತಮ್ಮ ಮೇಲೆ ಅಲ್ಲಾಹನ ಶಾಂತಿ, ಕರುಣೆ ಮತ್ತು ಅನುಗ್ರಹಗಳು ಸದಾ ಇರಲಿ. ನಮ್ಮ ಮೇಲೆ ಮತ್ತು ಅಲ್ಲಾಹನ ಸಜ್ಜನರಾದ ದಾಸರ ಮೇಲೆ ಶಾಂತಿಯಿರಲಿ. ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಮುಹಮ್ಮದ್ ಅವನ ದಾಸನೂ ಸಂದೇಶವಾಹಕನೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ"[210]

«التَّحِيَّاتُ الْمُبَارَكَاتُ الصَّلَوَاتُ الطَّيِّبَاتُ لِلَّهِ، السَّلَامُ عَلَيْكَ أَيُّهَا النَّبِيُّ وَرَحْمَةُ اللَّهِ وَبَرَكَاتُهُ، السَّلَامُ عَلَيْنَا، وَعَلَى عِبَادِ اللَّهِ الصَّالِحِينَ، أَشْهَدُ أَنْ لَا إِلَهَ إِلَّا اللَّهُ، وَأَشْهَدُ أَنَّ مُحَمَّدًا رَسُولُ اللَّهِ»

**(ಅತ್ತಹಿಯ್ಯಾತುಲ್ ಮುಬಾರಕಾತು ಸ್ಸಲವಾತು ತ್ತಯ್ಯಿಬಾತು ಲಿಲ್ಲಾಹಿ, ಅಸ್ಸಲಾಮು ಅಲೈಕ ಅಯ್ಯುಹ ನ್ನಬಿಯ್ಯು ವರಹ್ಮತುಲ್ಲಾಹಿ ವಬರಕಾತುಹು, ಅಸ್ಸಲಾಮು ಅಲೈನಾ, ವಅಲಾ ಇಬಾದಿಲ್ಲಾಹಿ ಸ್ಸಾಲಿಹೀನ, ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು, ವಅಶ್‌ಹದು ಅನ್ನ ಮುಹಮ್ಮದನ್ ರಸೂಲುಲ್ಲಾಹ್)**

"ಅಭಿವಂದನೆಗಳು, ಅನುಗ್ರಹಗಳು, ಪ್ರಾರ್ಥನೆಗಳು ಮತ್ತು ಸತ್ಕರ್ಮಗಳೆಲ್ಲವೂ ಅಲ್ಲಾಹನಿಗೆ. ಓ ಪ್ರವಾದಿಯವರೇ! ತಮ್ಮ ಮೇಲೆ ಅಲ್ಲಾಹನ ಶಾಂತಿ, ಕರುಣೆ ಮತ್ತು ಅನುಗ್ರಹಗಳು ಸದಾ ಇರಲಿ. ನಮ್ಮ ಮೇಲೆ ಮತ್ತು ಅಲ್ಲಾಹನ ಸಜ್ಜನರಾದ ದಾಸರ ಮೇಲೆ ಶಾಂತಿಯಿರಲಿ. ಅಲ್ಲಾಹನ ಹೊರತು ಆರಾಧಿಸಲರ್ಹರಾದವರು

---

**210** ಇದನ್ನು (ಬುಖಾರಿ 1/286; ಹದೀಸ್ ನಂ. 797), ಮುಸ್ಲಿಮ್ (1/301; ಹದೀಸ್ ನಂ. 402) ಅಬ್ದುಲ್ಲಾಹ್ ಇಬ್ನ್ ಮಸ್‌ಊದ್‌ರಿಂದ ವರದಿ ಮಾಡಿದ್ದಾರೆ.

ಯಾರೂ ಇಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಮುಹಮ್ಮದ್ ಅವನ ಸಂದೇಶವಾಹಕರಾಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ"(211)

«التَّحِيَّاتُ لِلَّهِ، الصَّلَوَاتُ الطَّيِّبَاتُ، السَّلَامُ عَلَيْكَ أَيُّهَا النَّبِيُّ وَرَحْمَةُ اللَّهِ وَبَرَكَاتُهُ، السَّلَامُ عَلَيْنَا، وَعَلَى عِبَادِ اللَّهِ الصَّالِحِينَ، أَشْهَدُ أَنْ لَا إِلَهَ إِلَّا اللَّهُ وَحْدَهُ لَا شَرِيكَ لَهُ، وَأَشْهَدُ أَنَّ مُحَمَّدًا عَبْدُهُ وَرَسُولُهُ»

**(ಅತ್ತಹಿಯ್ಯಾತು ಲಿಲ್ಲಾಹಿ, ಸ್ಸಲವಾತು ತ್ತಯ್ಯಿಬಾತು, ಅಸ್ಸಲಾಮು ಅಲೈಕ ಅಯ್ಯುಹ ನ್ನಬಿಯ್ಯು ವರಹ್ಮತುಲ್ಲಾಹಿ ವಬರಕಾತುಹು, ಅಸ್ಸಲಾಮು ಅಲೈನಾ, ವಅಲಾ ಇಬಾದಿಲ್ಲಾಹಿ ಸ್ಸಾಲಿಹೀನ, ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹ್)**

"ಅಭಿವಂದನೆಗಳು, ಪ್ರಾರ್ಥನೆಗಳು, ಸತ್ಕರ್ಮಗಳೆಲ್ಲವೂ ಅಲ್ಲಾಹನಿಗೆ. ಓ ಪ್ರವಾದಿಯವರೇ! ತಮ್ಮ ಮೇಲೆ ಅಲ್ಲಾಹನ ಶಾಂತಿ, ಕರುಣೆ ಮತ್ತು ಅನುಗ್ರಹಗಳು ಸದಾ ಇರಲಿ. ನಮ್ಮ ಮೇಲೆ ಮತ್ತು ಅಲ್ಲಾಹನ ಸಜ್ಜನರಾದ ದಾಸರ ಮೇಲೆ ಶಾಂತಿಯಿರಲಿ. ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲವೆಂದೂ, ಅವನು ಏಕೈಕನೂ ಸಹಭಾಗಿರಹಿತನೂ ಆಗಿರುವನೆಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಮುಹಮ್ಮದ್ ಅವನ ದಾಸನೂ ಸಂದೇಶವಾಹಕನೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ"(212)

«التَّحِيَّاتُ الطَّيِّبَاتُ الصَّلَوَاتُ الزَّاكِيَاتُ لِلَّهِ، السَّلَامُ عَلَى النَّبِيِّ وَرَحْمَةُ اللَّهِ، السَّلَامُ عَلَيْنَا وَعَلَى عِبَادِ اللَّهِ الصَّالِحِينَ، أَشْهَدُ أَنْ لَا إِلَهَ إِلَّا اللَّهُ، وَأَشْهَدُ أَنَّ مُحَمَّدًا عَبْدُهُ وَرَسُولُهُ»

**(ಅತ್ತಹಿಯ್ಯಾತು ತ್ತಯ್ಯಿಬಾತು ಸ್ಸಲವಾತು ಝ್ಝಾಕಿಯಾತು ಲಿಲ್ಲಾಹಿ, ಅಸ್ಸಲಾಮು ಅಲನ್ನಬಿಯ್ಯಿ ವರಹ್ಮತುಲ್ಲಾಹಿ, ಅಸ್ಸಲಾಮು ಅಲೈನಾ, ವಅಲಾ ಇಬಾದಿಲ್ಲಾಹಿ ಸ್ಸಾಲಿಹೀನ್, ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು, ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹ್)**

"ಅಭಿವಂದನೆಗಳು, ಸತ್ಕರ್ಮಗಳು, ಪ್ರಾರ್ಥನೆಗಳು, ಪಾವನತೆಗಳೆಲ್ಲವೂ ಅಲ್ಲಾಹನಿಗೆ. ಪ್ರವಾದಿಯವರ ಮೇಲೆ ಅಲ್ಲಾಹನ ಶಾಂತಿ ಮತ್ತು ಕರುಣೆ ಸದಾ ಇರಲಿ. ನಮ್ಮ ಮೇಲೆ ಮತ್ತು ಅಲ್ಲಾಹನ ಸಜ್ಜನರಾದ ದಾಸರ ಮೇಲೆ ಶಾಂತಿಯಿರಲಿ. ಅಲ್ಲಾಹನ

**211** ಇದನ್ನು ಮುಸ್ಲಿಮ್ (1/302; ಹದೀಸ್ ನಂ. 403) ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ

**212** ಇದನ್ನು ಅಬೂದಾವೂದ್ (1/319; ಹದೀಸ್ ನಂ. 971) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಮುಹಮ್ಮದ್ ಅವನ ದಾಸನೂ ಸಂದೇಶವಾಹಕನೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ"(213)

## 31. ತಶಹ್ಹುದ್‌ನ ನಂತರ ಪ್ರವಾದಿ(ﷺ)ರವರ ಮೇಲೆ ಸಲಾತ್

ಸಲಾತ್ ಹೇಳುವ ರೀತಿಗಳು:

«اللَّهُمَّ صَلِّ عَلَى مُحَمَّدٍ وَأَزْوَاجِهِ وَذُرِّيَّتِهِ كَمَا صَلَّيْتَ عَلَى آلِ إِبْرَاهِيمَ، وَبَارِكْ عَلَى مُحَمَّدٍ وَأَزْوَاجِهِ وَذُرِّيَّتِهِ كَمَا بَارَكْتَ عَلَى آلِ إِبْرَاهِيمَ، إِنَّكَ حَمِيدٌ مَجِيدٌ»

**(ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವಅಝ್ವಾಜಿಹೀ ವದುರ್‍ರಿಯ್ಯತಿಹೀ ಕಮಾ ಸಲ್ಲೈತ ಅಲಾ ಆಲಿ ಇಬ್ರಾಹೀಮ, ವಬಾರಿಕ್ ಅಲಾ ಮುಹಮ್ಮದಿನ್ ವಅಝ್ವಾಜಿಹೀ ವದುರ್‍ರಿಯ್ಯತಿಹೀ ಕಮಾ ಬಾರಕ್ತ ಅಲಾ ಆಲಿ ಇಬ್ರಾಹೀಮ, ಇನ್ನಕ ಹಮೀದುನ್ ಮಜೀದ್)**

لَنَا وَٱرۡحَمۡنَآۚ أَنتَ مَوۡلَىٰنَا فَٱنصُرۡنَا عَلَى ٱلۡقَوۡمِ ٱلۡكَٰفِرِينَ ٢٨٦ ﴾

**(ಆಮನ ರ್ರಸೂಲು ಬಿಮಾ ಉನ್ಝಿಲ ಇಲೈಹಿ ಮಿರ್‌ರಬ್ಬಿಹೀ ವಲ್ ಮುಅ್‌ಮಿನೂನ್, ಕುಲ್ಲುನ್ ಆಮನ ಬಿಲ್ಲಾಹಿ ವಮಲಾಇಕತಿಹೀ ವಕುತುಬಿಹೀ ವರುಸುಲಿಹೀ, ಲಾ ನುಫರ್ರಿಕು ಬೈನ ಅಹದಿ ಮ್ಮಿರ್ರುಸುಲಿಹೀ, ವಕಾಲೂ ಸಮಿಅ್‌ನಾ ವಅತಅ್‌ನಾ, ಗುಫ್ರಾನಕ ರಬ್ಬನಾ ವಇಲೈಕಲ್ ಮಸೀರ್. ಲಾ ಯುಕಲ್ಲಿಫುಲ್ಲಾಹು ನಫ್ಸನ್ ಇಲ್ಲಾ ವುಸ್‌ಅಹಾ, ಲಹಾ ಮಾ ಕಸಬತ್ ವಅಲೈಹಾ ಮಕ್ತಸಬತ್, ರಬ್ಬನಾ ಲಾ ತುಆಖಿದ್‌ನಾ ಇನ್ನಸೀನಾ ಅವ್ ಅಖ್ತಅ್‌ನಾ, ರಬ್ಬನಾ ವಲಾ ತಹ್ಮಿಲ್ ಅಲೈನಾ ಇಸ್ರನ್ ಕಮಾ ಹಮಲ್ತಹೂ ಅಲಲ್ಲದೀನ ಮಿನ್ ಕಬ್ಲಿನಾ, ರಬ್ಬನಾ ವಲಾ ತುಹಮ್ಮಿಲ್‌ನಾ ಮಾ ಲಾ ತಾಕತ ಲನಾ ಬಿಹೀ, ವಅ್‌ಫು ಅನ್ನಾ ವಗ್ಫಿರ್ ಲನಾ ವರ್‌ಹಮ್‌ನಾ ಅನ್ತ ಮೌಲಾನಾ ಫನ್ಸುರ್‌ನಾ ಅಲಲ್ ಕೌಮಿಲ್**

281 ಇದನ್ನು ಬುಖಾರಿ (2/812; ಹದೀಸ್ ನಂ. 2187) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**ಕಾಫಿರೀನ್)**

"ತನ್ನೆಡೆಗೆ ತನ್ನ ಪ್ರಭುವಿನಿಂದ ಅವತೀರ್ಣಗೊಂಡದ್ದರಲ್ಲಿ ಪ್ರವಾದಿಯವರು ವಿಶ್ವಾಸವಿಟ್ಟಿದ್ದಾರೆ ಮತ್ತು ವಿಶ್ವಾಸಿಗಳು ಕೂಡ. ಅವರೆಲ್ಲರೂ ಅಲ್ಲಾಹನಲ್ಲಿ, ಅವನ ಮಲಕ್‌ಗಳಲ್ಲಿ, ಅವನ ಗ್ರಂಥಗಳಲ್ಲಿ, ಅವನ ಸಂದೇಶವಾಹಕರುಗಳಲ್ಲಿ ವಿಶ್ವಾಸವಿಟ್ಟಿದ್ದಾರೆ. ಅವನ ಸಂದೇಶವಾಹಕರುಗಳಲ್ಲಿ ಯಾರೊಬ್ಬರ ನಡುವೆಯೂ ನಾವು ವ್ಯತ್ಯಾಸವನ್ನು ಮಾಡುವುದಿಲ್ಲ. ಅವರು ಹೇಳುವರು: ನಾವು ಆಲಿಸಿದ್ದೇವೆ ಮತ್ತು ಅನುಸರಿಸಿದ್ದೇವೆ. ನಮ್ಮ ಪ್ರಭೂ! ನಿನ್ನಲ್ಲಿ ಕ್ಷಮಾಪಣೆಯನ್ನು ಬೇಡುತ್ತೇವೆ. ಮರಳುವಿಕೆಯು ನಿನ್ನೆಡೆಗಾಗಿದೆ. ಒಂದು ದೇಹಕ್ಕಿರುವ ಸಾಮರ್ಥ್ಯದ ಹೊರತಾಗಿ ಅಲ್ಲಾಹು ಅದರ ಮೇಲೆ ಏನನ್ನೂ ಕಡ್ಡಾಯಗೊಳಿಸುವುದಿಲ್ಲ. ಅದು ಸಂಪಾದಿಸಿದ (ಪುಣ್ಯವು) ಅದಕ್ಕಾಗಿದೆ ಮತ್ತು ಅದು ಸಂಪಾದಿಸಿದ (ಪಾಪವು) ಅದರ ಮೇಲಾಗಿದೆ. ನಮ್ಮ ಪ್ರಭೂ! ನಾವು ಮರೆತುದಕ್ಕಾಗಿ ಮತ್ತು ಪ್ರಮಾದವೆಸಗಿದ್ದಕ್ಕಾಗಿ ನಮ್ಮನ್ನು ಶಿಕ್ಷಿಸದಿರು. ನಮ್ಮ ಪ್ರಭೂ! ನಮ್ಮ ಪೂರ್ವಿಕರ ಮೇಲೆ ನೀನು ಭಾರವನ್ನು ಹೊರಿಸಿದಂತೆ ನಮ್ಮ ಮೇಲೆ ನೀನು ಹೊರಿಸದಿರು. ನಮ್ಮ ಪ್ರಭೂ! ನಮಗೆ ಹೊರಲು ಸಾಧ್ಯವಿಲ್ಲದ್ದನ್ನು ನೀನು ನಮ್ಮ ಮೇಲೆ ಹೊರಿಸದಿರು. ನಮ್ಮನ್ನು ಮನ್ನಿಸು, ನಮಗೆ ಕ್ಷಮೆ ನೀಡು ಮತ್ತು ನಮಗೆ ಕರುಣೆ ತೋರು. ನೀನು ನಮ್ಮ ರಕ್ಷಕನಾಗಿರುವೆ. ಆದ್ದರಿಂದ ಅವಿಶ್ವಾಸಿಗಳ ವಿರುದ್ಧ ನಮಗೆ ಸಹಾಯ ಮಾಡು."(282)

﴿قُلْ يَـٰٓأَيُّهَا ٱلْكَـٰفِرُونَ ۝١ لَآ أَعْبُدُ مَا تَعْبُدُونَ ۝٢ وَلَآ أَنتُمْ عَـٰبِدُونَ مَآ أَعْبُدُ ۝٣ وَلَآ أَنَا۠ عَابِدٌ مَّا عَبَدتُّمْ ۝٤ وَلَآ أَنتُمْ عَـٰبِدُونَ مَآ أَعْبُدُ ۝٥ لَكُمْ دِينُكُمْ وَلِىَ دِينِ ۝٦﴾

**(ಕುಲ್ ಯಾ ಅಯ್ಯುಹಲ್ ಕಾಫಿರೂನ್, ಲಾ ಅಅ್‌ಬುದು ಮಾ ತಅ್‌ಬುದೂನ್, ವಲಾ ಅನ್ತುಮ್ ಆಬಿದೂನ ಮಾ ಅಅ್‌ಬುದು, ವಲಾ ಅನ ಆಬಿದು ಮ್ಮಾ ಅಬತ್ತುಮ್, ವಲಾ ಅನ್ತುಮ್ ಆಬಿದೂನ ಮಾ ಅಅ್‌ಬುದು, ಲಕುಮ್ ದೀನುಕುಮ್ ವಲಿಯ ದೀನ್)**

"ಹೇಳು: ಓ ಅವಿಶ್ವಾಸಿಗಳೇ! ನೀವು ಆರಾಧಿಸುವವುಗಳನ್ನು ನಾನು ಆರಾಧಿಸುವುದಿಲ್ಲ. ಮತ್ತು ನಾನು ಆರಾಧಿಸುವವನನ್ನು ನೀವು ಆರಾಧಿಸುವುದಿಲ್ಲ. ಮತ್ತು ನಾನು ನೀವು ಆರಾಧಿಸಿದವುಗಳ ಆರಾಧಕನಲ್ಲ. ಮತ್ತು ನಾನು ಆರಾಧಿಸುವವನನ್ನು ನೀವು ಆರಾಧಿಸುವುದಿಲ್ಲ. ನಿಮಗೆ ನಿಮ್ಮ ಧರ್ಮ, ನನಗೆ ನನ್ನ ಧರ್ಮ."(283)

«اللَّهُمَّ قِنِي عَذَابَكَ يَوْمَ تَبْعَثُ عِبَادَكَ»

**(ಅಲ್ಲಾಹುಮ್ಮ ಕಿನೀ ಅದಾಬಕ ಯೌಮ ತಬ್‌ಅಸು ಇಬಾದಕ್)**

---

**282** ಇದನ್ನು ಬುಖಾರಿ (4/1472; ಹದೀಸ್ ನಂ. 3786), ಮುಸ್ಲಿಮ್ (1/554; ಹದೀಸ್ ನಂ. 807) ಅಬೂ ಮಸ್‌ಊದ್‌ರಿಂದ ವರದಿ ಮಾಡಿದ್ದಾರೆ.

**283** ಇದನ್ನು ಅಬೂದಾವೂದ್ (2/733; ಹದೀಸ್ ನಂ. 5055), ತಿರ್ಮಿದಿ (5/474; ಹದೀಸ್ ನಂ. 3403) ನೌಫಲ್‌ರಿಂದ ವರದಿ ಮಾಡಿದ್ದಾರೆ.

"ಓ ಅಲ್ಲಾಹ್! ನೀನು ನಿನ್ನ ದಾಸರನ್ನು ಪುನರುಜ್ಜೀವನಗೊಳಿಸುವ ದಿನದಂದು ನಿನ್ನ ಶಿಕ್ಷೆಯಿಂದ ನನ್ನನ್ನು ರಕ್ಷಿಸು."(284)

«اللَّهُمَّ رَبَّ السَّمَاوَاتِ وَرَبَّ الْأَرْضِ وَرَبَّ الْعَرْشِ الْعَظِيمِ، رَبَّنَا وَرَبَّ كُلِّ شَيْءٍ، فَالِقَ الْحَبِّ وَالنَّوَى، وَمُنْزِلَ التَّوْرَاةِ وَالْإِنْجِيلِ وَالْفُرْقَانِ، أَعُوذُ بِكَ مِنْ شَرِّ كُلِّ شَيْءٍ أَنْتَ آخِذٌ بِنَاصِيَتِهِ، اللَّهُمَّ أَنْتَ الْأَوَّلُ فَلَيْسَ قَبْلَكَ شَيْءٌ، وَأَنْتَ الْآخِرُ فَلَيْسَ بَعْدَكَ شَيْءٌ، وَأَنْتَ الظَّاهِرُ فَلَيْسَ فَوْقَكَ شَيْءٌ، وَأَنْتَ الْبَاطِنُ فَلَيْسَ دُونَكَ شَيْءٌ، اقْضِ عَنَّا الدَّيْنَ وَأَغْنِنَا مِنَ الْفَقْرِ»

**(ಅಲ್ಲಾಹುಮ್ಮ ರಬ್ಬ ಸ್ಸಮಾವಾತಿ ವರಬ್ಬಲ್ ಅರ್ದಿ ವರಬ್ಬಲ್ ಅರ್ಶಿಲ್ ಅದೀಮ್, ರಬ್ಬನಾ ವರಬ್ಬ ಕುಲ್ ಶೈಇನ್, ಫಾಲಿಕಲ್ ಹಬ್ಬಿ ವನ್ನವಾ, ವಮುನ್ಝಿಲ ತ್ತೌರಾತಿ ವಲ್ ಇಂಜೀಲಿ ವಲ್ ಫುರ್ಕಾನ್, ಅಊದು ಬಿಕ ಮಿನ್ ಶರ್‍ರಿ ಕುಲ್ಲಿ ಶೈಇನ್ ಅನ್ತ ಆಖಿದುನ್ ಬಿನಾಸಿಯತಿಹೀ, ಅಲ್ಲಾಹುಮ್ಮ ಅನ್ತಲ್ ಅವ್ವಲು ಫಲೈಸ ಕಬ್ಲಕ ಶೈಉನ್, ವಅನ್ತಲ್ ಆಖಿರು ಫಲೈಸ ಬಅ್‌ದಕ ಶೈಉನ್, ವಅನ್ತ ದ್ದಾಹಿರು ಫಲೈಸ ಫೌಕಕ ಶೈಉನ್, ವಅನ್ತಲ್ ಬಾತಿನು ಫಲೈಸ ದೂನಕ ಶೈಉನ್, ಇಕ್ದಿ ಅನ್ನ ದ್ದಯ್ನ ವಅಗ್ನಿನಾ ಮಿನಲ್ ಫಕ್ರ್)**

"ಓ ಅಲ್ಲಾಹ್! ಆಕಾಶಗಳ ಒಡೆಯನೇ! ಭೂಮಿಯ ಒಡೆಯನೇ! ಮತ್ತು ಮಹೋನ್ನತವಾದ ಸಿಂಹಾಸನದ ಒಡೆಯನೇ! ನಮ್ಮ ಒಡೆಯನೇ! ಮತ್ತು ಎಲ್ಲ ವಸ್ತುಗಳ ಒಡೆಯನೇ! ದವಸ ಧಾನ್ಯಗಳನ್ನು ಸೀಳುವವನೇ! ತೌರಾತ್, ಇಂಜೀಲ್ ಮತ್ತು ಫುರ್ಕಾನನ್ನು ಅವತೀರ್ಣಗೊಳಿಸಿದವನೇ! ನೀನು ಅದರ ಮುಂಗುರುಳನ್ನು ಹಿಡಿದುಕೊಂಡಿರುವ ಪ್ರತಿಯೊಂದು ವಸ್ತುವಿನ ಕೆಡುಕಿನಿಂದ ನಾನು ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ. ಓ ಅಲ್ಲಾಹ್! ನೀನು ಆದಿಯಾಗಿರುವೆ, ನಿನಗಿಂತ ಮೊದಲು ಏನೂ ಇಲ್ಲ. ನೀನು ಅಂತ್ಯನಾಗಿರುವೆ, ನಿನ್ನ ನಂತರ ಏನೂ ಇಲ್ಲ. ನೀನು ಬಹಿರಂಗನಾಗಿರುವೆ, ನಿನ್ನ ಮೇಲೆ ಏನೂ ಇಲ್ಲ. ನೀನು ಅಂತರಂಗವಾಗಿರುವೆ, ನಿನ್ನ ಸಮೀಪ ಏನೂ ಇಲ್ಲ. ನಮ್ಮಿಂದ ಸಾಲಗಳನ್ನು ತೀರಿಸು ಮತ್ತು ದಾರಿದ್ರ್ಯದಿಂದ ನಮ್ಮನ್ನು ಶ್ರೀಮಂತಗೊಳಿಸು."(285)

«الْحَمْدُ لِلَّهِ الَّذِي أَطْعَمَنَا وَسَقَانَا، وَكَفَانَا وَآوَانَا، فَكَمْ مِمَّنْ لَا كَافِيَ لَهُ وَلَا مُؤْوِيَ»

**(ಅಲ್‌ಹಮ್ದು ಲಿಲ್ಲಾಹಿಲ್ಲದೀ ಅತ್‌ಅಮನಾ ವಸಕಾನಾ, ವಕಫಾನಾ ವಆವಾನಾ,**

---

**284** ಇದನ್ನು ಅಬೂದಾವೂದ್ (2/731; ಹದೀಸ್ ನಂ. 5045) ಹಫ್ಸಾರಿಂದ ವರದಿ ಮಾಡಿದ್ದಾರೆ.
**285** ಇದನ್ನು ಮುಸ್ಲಿಮ್ (4/2084; ಹದೀಸ್ ನಂ. 2713) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**ಫಕಮ್ ಮಿಮ್ಮನ್ ಲಾ ಕಾಫಿಯ ಲಹೂ ವಲಾ ಮುಅ್‌ವೀ)**

"ನಮಗೆ ತಿನ್ನಿಸಿದ, ನಮಗೆ ಕುಡಿಸಿದ, ನಮಗೆ ಸಂತೃಪ್ತಿಗೊಳಿಸಿದ ಮತ್ತು ನಮಗೆ ಆಶ್ರಯವೊದಗಿಸಿದ ಅಲ್ಲಾಹನಿಗೆ ಸ್ತುತಿ. ಸಂತೃಪ್ತಿಯಾಗಲಿ ಆಶ್ರಯವಾಗಲಿ ಒದಗಿಸಲ್ಪಡದವರಲ್ಲಿ ಸೇರಿದ ಅದೆಷ್ಟು ಜನರಿದ್ದಾರೆ."(286)

«الْحَمْدُ لِلَّهِ الَّذِي كَفَانِي وَآوَانِي، وَأَطْعَمَنِي وَسَقَانِي، وَالَّذِي مَنَّ عَلَيَّ فَأَفْضَلَ، وَالَّذِي أَعْطَانِي فَأَجْزَلَ، الْحَمْدُ لِلَّهِ عَلَى كُلِّ حَالٍ، اللَّهُمَّ رَبَّ كُلِّ شَيْءٍ وَمَلِيكَهُ، وَإِلَهَ كُلِّ شَيْءٍ، أَعُوذُ بِكَ مِنَ النَّارِ»

**(ಅಲ್‌ಹಮ್ದು ಲಿಲ್ಲಾಹಿಲ್ಲದೀ ಕಫಾನೀ ವಆವಾನೀ, ವಅತ್‌ಅಮನೀ ವಸಕಾನೀ, ವಲ್ಲದೀ ಮನ್ನ ಅಲಯ್ಯ ಫಅಫ್‌ದಲ, ವಲ್ಲದೀ ಅಅ್‌ತಾನೀ ಫಅಜ್‌ಝಲ, ಅಲ್‌ಹಮ್ದು ಲಿಲ್ಲಾಹಿ ಅಲಾ ಕುಲ್ಲಿ ಹಾಲ್. ಅಲ್ಲಾಹುಮ್ಮ ರಬ್ಬ ಕುಲ್ಲಿ ಶೈಇನ್ ವಮಲೀಕಹೂ, ವಇಲಾಹ ಕುಲ್ಲಿ ಶೈಇನ್, ಅಊದು ಬಿಕ ಮಿನ ನ್ನಾರ್)**

"ನನಗೆ ಸಂತೃಪ್ತಿಯೊದಗಿಸಿದ, ನನಗೆ ಆಶ್ರಯವೊದಗಿಸಿದ, ನನಗೆ ತಿನ್ನಿಸಿದ, ನನಗೆ ಕುಡಿಸಿದ ಅಲ್ಲಾಹನಿಗೆ ಸ್ತುತಿ. ಅವನು ನನ್ನ ಮೇಲೆ ಔದಾರ್ಯ ತೋರಿದ್ದಾನೆ ಮತ್ತು (ಅದರಲ್ಲಿ) ಶ್ರೇಷ್ಠವಾಗಿಸಿದ್ದಾನೆ. ಅವನು ನನಗೆ ನೀಡಿದ್ದಾನೆ ಮತ್ತು (ಅದರಲ್ಲಿ) ಉದಾರಿಯಾಗಿದ್ದಾನೆ. ಎಲ್ಲಾ ಸ್ಥಿತಿಯಲ್ಲೂ ಅಲ್ಲಾಹನಿಗೆ ಸ್ತುತಿ. ಓ ಅಲ್ಲಾಹ್! ಪ್ರತಿಯೊಂದು ವಸ್ತುವಿನ ಒಡೆಯನೇ! ಮತ್ತು ಆಧೀನದಲ್ಲಿರಿಸಿದವನೇ! ಪ್ರತಿಯೊಂದು ವಸ್ತುವಿನ ದೇವನೇ! ನರಕದಿಂದ ನಾನು ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ."(287)

«اللَّهُمَّ خَلَقْتَ نَفْسِي وَأَنْتَ تَتَوَفَّاهَا، لَكَ مَمَاتُهَا وَمَحْيَاهَا، إِنْ أَحْيَيْتَهَا فَاحْفَظْهَا، وَإِنْ أَمَتَّهَا فَاغْفِرْ لَهَا، اللَّهُمَّ إِنِّي أَسْأَلُكَ الْعَافِيَةَ»

**(ಅಲ್ಲಾಹುಮ್ಮ ಖಲಕ್ತ ನಫ್ಸೀ ವಅನ್ತ ತತವಫ್ಫಾಹಾ, ಲಕ ಮಮಾತುಹಾ ವಮಹ್ಯಾಹಾ, ಇನ್ ಅಹ್ಯಯ್ತಹಾ ಫಹ್‌ಫದ್‌ಹಾ, ವಇನ್ ಅಮತ್ತಹಾ ಫಗ್ಫಿರ್ ಲಹಾ, ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಆಫಿಯಃ)**

"ಓ ಅಲ್ಲಾಹ್! ನನ್ನ ದೇಹವನ್ನು ನೀನು ಸೃಷ್ಟಿಸಿರುವೆ ಮತ್ತು ಅದನ್ನು ನೀನು ಮೃತಪಡಿಸುವೆ. ಅದರ ಮರಣ ಮತ್ತು ಅದರ ಬದುಕು ನಿನಗಾಗಿದೆ. ನೀನದನ್ನು ಬದುಕಿಸಿದರೆ ಅದನ್ನು ರಕ್ಷಿಸು. ನೀನದನ್ನು ಮೃತಪಡಿಸಿದರೆ ಅದಕ್ಕೆ ಕ್ಷಮೆ ನೀಡು. ಓ ಅಲ್ಲಾಹ್! ನಾನು ನಿನ್ನೊಂದಿಗೆ ಸೌಖ್ಯವನ್ನು ಬೇಡುತ್ತಿದ್ದೇನೆ."(288)

---

**286** ಇದನ್ನು ಮುಸ್ಲಿಮ್ (4/2085; ಹದೀಸ್ ನಂ. 2715) ಅನಸ್‌ರಿಂದ ವರದಿ ಮಾಡಿದ್ದಾರೆ.

**287** ಇದನ್ನು ಅಬೂದಾವೂದ್ (2/734; ಹದೀಸ್ ನಂ. 5058) ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**288** ಇದನ್ನು ಮುಸ್ಲಿಮ್ (4/2083; ಹದೀಸ್ ನಂ. 2712) ಇಬ್ನ್ ಉಮರ್‌ರಿಂದ ವರದಿ

«اللَّهُمَّ فَاطِرَ السَّمَاوَاتِ وَالْأَرْضِ، عَالِمَ الْغَيْبِ وَالشَّهَادَةِ، رَبَّ كُلِّ شَيْءٍ وَمَلِيكَهُ، أَشْهَدُ أَنْ لَا إِلَهَ إِلَّا أَنْتَ، أَعُوذُ بِكَ مِنْ شَرِّ نَفْسِي وَشَرِّ الشَّيْطَانِ وَشِرْكِهِ»

**(ಅಲ್ಲಾಹುಮ್ಮ ಫಾತಿರ ಸ್ಸಮಾವಾತಿ ವಲ್ ಅರ್ದಿ, ಆಲಿಮಲ್ ಗೈಬಿ ವಶ್ಶಹಾದತಿ, ರಬ್ಬ ಕುಲ್ಲಿ ಶೈಇನ್ ವಮಲೀಕಹೂ, ಅಶ್‌ಹದು ಅನ್ ಲಾ ಇಲಾಹ ಇಲ್ಲಾ ಅನ್ತ, ಅಊದು ಬಿಕ ಮಿನ್ ಶರ್‍ರಿ ನಫ್ಸೀ ವಶರ್‍ರಿ ಶ್ಶೈತಾನಿ ವಶಿರ್ಕಿಹ್)**

**“**ಓ ಅಲ್ಲಾಹ್! ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನೇ! ದೃಶ್ಯ ಮತ್ತು ಅದೃಶ್ಯಗಳನ್ನು ಅರಿತವನೇ! ಸರ್ವ ವಸ್ತುಗಳ ಪ್ರಭು ಮತ್ತು ಅಧಿಪತಿಯೇ! ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ. ನನ್ನ ದೇಹದ ಕೆಡುಕಿನಿಂದ, ಶೈತಾನನ ಕೆಡುಕಿನಿಂದ ಮತ್ತು ಅವನ ಸಹಭಾಗಿತ್ವದಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ.**”**(289)

اللَّهُ أَكْبَرُ (أربعًا وثلاثين) سُبْحَانَ اللَّهِ (ثلاثًا وثلاثين) الْحَمْدُ لِلَّهِ (ثلاثًا وثلاثين )

**[ಅಲ್ಲಾಹು ಅಕ್ಬರ್ (ಮೂವತ್ತ ನಾಲ್ಕು ಬಾರಿ), ಸುಬ್‌ಹಾನಲ್ಲಾಹ್ (ಮೂವತ್ತ ಮೂರು ಬಾರಿ), ಅಲ್‌ಹಮ್ದುಲಿಲ್ಲಾಹ್ (ಮೂವತ್ತ ಮೂರು ಬಾರಿ)]**

**“**ಅಲ್ಲಾಹು ಮಹಾನನಾಗಿದ್ದಾನೆ, ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ, ಅಲ್ಲಾಹನಿಗೆ ಸ್ತುತಿ.**”**(290)

«اللَّهُمَّ أَسْلَمْتُ وَجْهِي إِلَيْكَ، وَفَوَّضْتُ أَمْرِي إِلَيْكَ، وَأَلْجَأْتُ ظَهْرِي إِلَيْكَ، رَغْبَةً وَرَهْبَةً إِلَيْكَ، لَا مَلْجَأَ وَلَا مَنْجَا مِنْكَ إِلَّا إِلَيْكَ، آمَنْتُ بِكِتَابِكَ الَّذِي أَنْزَلْتَ، وَبِنَبِيِّكَ الَّذِي أَرْسَلْتَ»

**(ಅಲ್ಲಾಹುಮ್ಮ ಅಸ್ಲಮ್ತು ವಜ್‌ಹೀ ಇಲೈಕ, ವಫವ್ವದ್‌ತು ಅಮ್ರೀ ಇಲೈಕ, ವಅಲ್ಜಅ್‌ತು ದಹ್ರೀ ಇಲೈಕ, ರಗ್ಬತನ್ ವರಹ್ಬತನ್ ಇಲೈಕ, ಲಾ ಮಲ್ಜಅ ವಲಾ ಮನ್ಜಾ ಮಿನ್ಕ ಇಲ್ಲಾ ಇಲೈಕ, ಆಮನ್ತು ಬಿಕಿತಾಬಿಕಲ್ಲದೀ ಅನ್ಝಲ್ತ ವನಬಿಯ್ಯಿಕಲ್ಲದೀ ಅರ್ಸಲ್ತ್)**

**“**ಓ ಅಲ್ಲಾಹ್! ನನ್ನ ದೇಹವನ್ನು ನಿನ್ನೆಡೆಗೆ ಶರಣಾಗಿಸಿದ್ದೇನೆ. ನನ್ನ ಕಾರ್ಯವನ್ನು

---

ಮಾಡಿದ್ದಾರೆ.

**289** ಇದನ್ನು ಅಬೂದಾವೂದ್ (2/737; ಹದೀಸ್ ನಂ. 5067) ಅಬೂ ಬಕ್ರ್ ಅಸ್ಸಿದ್ದೀಕ್‌ರಿಂದ ವರದಿ ಮಾಡಿದ್ದಾರೆ.

**290** ಇದನ್ನು ಬುಖಾರಿ (3/1133; ಹದೀಸ್ ನಂ. 2945), ಮುಸ್ಲಿಮ್ (4/2091; ಹದೀಸ್ ನಂ. 2727) ಅಲೀ ಇಬ್ನ್ ಅಬೀ ತಾಲಿಬ್‌ರಿಂದ ವರದಿ ಮಾಡಿದ್ದಾರೆ.

ನಿನ್ನೆಡೆಗೆ ಅರ್ಪಿಸಿದ್ದೇನೆ. ನನ್ನ ಬೆನ್ನನ್ನು ನಿನ್ನೆಡೆಗೆ ಆಶ್ರಿತಗೊಳಿಸಿದ್ದೇನೆ. ಹಂಬಲ ಮತ್ತು ಭಯದೊಂದಿಗೆ ನಿನ್ನೆಡೆಗೆ. ನಿನ್ನೆಡೆಗಲ್ಲದೆ ನಿನಗೆದುರಾಗಿ ಯಾವ ಆಶ್ರಯವಾಗಲಿ, ರಕ್ಷಣೆಯಾಗಲಿ ಇಲ್ಲ. ನೀನು ಅವತೀರ್ಣಗೊಳಿಸಿದ ಗ್ರಂಥದಲ್ಲಿ ಮತ್ತು ನೀನು ನಿಯೋಗಿಸಿದ ಪ್ರವಾದಿಯಲ್ಲಿ ವಿಶ್ವಾಸವಿಟ್ಟಿದ್ದೇನೆ.”(291)

## 40. ರಾತ್ರಿ ನಿದ್ದೆಯಿಂದ ಎಚ್ಚೆತ್ತರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«لَا إِلَهَ إِلَّا اللَّهُ وَحْدَهُ شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ، الْحَمْدُ لِلَّهِ وَسُبْحَانَ اللَّهِ وَلَا إِلَهَ إِلَّا اللَّهُ وَاللَّهُ أَكْبَرُ، وَلَا حَوْلَ وَلَا قُوَّةَ إِلَّا بِاللَّهِ، رَبِّ اغْفِرْ لِي»

**(ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್, ಅಲ್‌ಹಮ್ದುಲಿಲ್ಲಾಹಿ ವಸುಬ್‌ಹಾನಲ್ಲಾಹಿ ವಲಾಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್ಬರ್, ವಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹಿ, ರಬ್ಬಿಗ್‌ಫಿರ್ ಲೀ)**

“ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ, ಅವನು ಏಕೈಕನೂ ಸಹಭಾಗಿರಹಿತನೂ ಆಗಿರುವನು, ಆಧಿಪತ್ಯವು ಅವನಿಗಾಗಿದೆ ಮತ್ತು ಸ್ತುತಿಯು ಅವನಿಗಾಗಿದೆ, ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ, ಅಲ್ಲಾಹನಿಗೆ ಸ್ತುತಿ, ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ, ಅಲ್ಲಾಹನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ, ಅಲ್ಲಾಹು ಮಹಾನನಾಗಿದ್ದಾನೆ, ಅಲ್ಲಾಹನ ಹೊರತು ಶಕ್ತಿಯಾಗಲಿ ಸಾಮರ್ಥ್ಯವಾಗಲಿ ಇಲ್ಲ, ಪ್ರಭೂ! ನನಗೆ ಕ್ಷಮೆ ನೀಡು.”(292)

## 41. ರಾತ್ರಿ ಅತ್ತಿತ್ತ ಹೊರಳಾಡಿದರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«لَا إِلَهَ إِلَّا اللَّهُ الْوَاحِدُ الْقَهَّارُ، رَبُّ السَّمَاوَاتِ وَالْأَرْضِ وَمَا بَيْنَهُمَا

---

**291** ಇದನ್ನು ಬುಖಾರಿ (1/97; ಹದೀಸ್ ನಂ. 244), ಮುಸ್ಲಿಮ್ (4/2081; ಹದೀಸ್ ನಂ. 2710) ಬರಾಅ್ ಇಬ್ನ್ ಆಝಿಬ್‌ರಿಂದ ವರದಿ ಮಾಡಿದ್ದಾರೆ. ತನ್ನ ದಿನದ ಮಾತುಗಳಲ್ಲಿ ಇದನ್ನು ಕೊನೆಯದಾಗಿಸಬೇಕೆಂದು ಪ್ರವಾದಿ(ﷺ)ರವರು ಹೇಳಿದ್ದಾರೆ.

**292** ಇದನ್ನು ಬುಖಾರಿ (1/387; ಹದೀಸ್ ನಂ. 1103) ಉಬಾದಃ ಇಬ್ನು ಸ್ವಾಮಿತ್‌ರಿಂದ ವರದಿ ಮಾಡಿದ್ದಾರೆ.

الْعَزِيزُ الْغَفَّارُ»

**(ಲಾ ಇಲಾಹ ಇಲ್ಲಲ್ಲಾಹುಲ್ ವಾಹಿದುಲ್ ಕಹ್ಹಾರ್, ರಬ್ಬು ಸ್ಸಮಾವಾತಿ ವಲ್‌ಅರ್ದಿ ವಮಾ ಬೈನಹುಮಲ್ ಅಝೀಝುಲ್ ಗಫ್ಫಾರ್)**

**“**ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ, ಅವನು ಏಕೈಕನೂ ಸರ್ವಾಧಿಕಾರಿಯೂ ಆಗಿದ್ದಾನೆ. ಅವನು ಆಕಾಶಗಳ, ಭೂಮಿಯ ಮತ್ತು ಅವುಗಳ ನಡುವೆಯಿರುವುದರ ಪ್ರಭುವೂ, ಪ್ರತಾಪಶಾಲಿಯೂ, ಅತ್ಯಂತ ಕ್ಷಮಿಸುವವನೂ ಆಗಿದ್ದಾನೆ.**”**[293]

## 42. ಒಳ್ಳೆಯ ಅಥವಾ ಕೆಟ್ಟ ಕನಸನ್ನು ಕಂಡರೆ

ಪ್ರವಾದಿ(ﷺ)ರವರು ಹೇಳಿದರು:

«إِذَا رَأَى أَحَدُكُمْ رُؤْيَا يُحِبُّهَا فَإِنَّمَا هِيَ مِنَ اللَّهِ، فَلْيَحْمَدِ اللَّهَ عَلَيْهَا وَلْيُحَدِّثْ بِهَا، وَإِذَا رَأَى غَيْرَ ذَلِكَ مِمَّا يَكْرَهُ فَإِنَّمَا هِيَ مِنَ الشَّيْطَانِ، فَلْيَسْتَعِذْ مِنْ شَرِّهَا وَلَا يَذْكُرْهَا لِأَحَدٍ فَإِنَّهَا لَا تَضُرُّهُ»

**“ನಿಮ್ಮಲ್ಲಿ ಯಾರಾದರೂ ತಾನು ಇಷ್ಟಪಡುವ ಕನಸನ್ನು ಕಂಡರೆ ಅದು ಕೇವಲ ಅಲ್ಲಾಹನಿಂದಾಗಿದೆ. ಆದ್ದರಿಂದ ಅವನು ಅದಕ್ಕಾಗಿ ಅಲ್ಲಾಹನನ್ನು ಸ್ತುತಿಸಲಿ ಮತ್ತು ಅದನ್ನು (ಇತರರಿಗೆ) ತಿಳಿಸಲಿ. ಅವನು ಅದರ ಹೊರತು ತಾನು ಅಸಹ್ಯಪಡುವುದನ್ನು ಕಂಡರೆ ಅದು ಕೇವಲ ಶೈತಾನನಿಂದಾಗಿದೆ. ಆದ್ದರಿಂದ ಅವನು ಅದರ ಕೆಡುಕಿನಿಂದ ಅಲ್ಲಾಹನಲ್ಲಿ ಅಭಯ ಬೇಡಲಿ. ಅದನ್ನು ಯಾರೊಬ್ಬನಿಗೂ ತಿಳಿಸದಿರಲಿ. ಆಗ ಅದು ಅವನಿಗೆ ಉಪದ್ರವಿಸಲಾರದು.”**[294]

ಪ್ರವಾದಿ(ﷺ)ರವರು ಹೇಳಿದರು:

«الرُّؤْيَا مِنَ اللَّهِ، وَالْحُلْمُ مِنَ الشَّيْطَانِ، فَإِذَا رَأَى أَحَدُكُمْ شَيْئًا يَكْرَهُهُ فَلْيَنْفِثْ حِينَ يَسْتَيْقِظُ ثَلَاثَ مَرَّاتٍ، وَيَتَعَوَّذْ مِنْ شَرِّهَا فَإِنَّهَا لَا تَضُرُّهُ»

**“ಒಳ್ಳೆಯ ಕನಸು ಅಲ್ಲಾಹನ ಬಳಿಯಿಂದಾಗಿದೆ ಮತ್ತು ಕೆಟ್ಟ ಕನಸು ಶೈತಾನನ ಬಳಿಯಿಂದಾಗಿದೆ. ಆದ್ದರಿಂದ ನಿಮ್ಮಲ್ಲೋರ್ವನು ತಾನು ಅಸಹ್ಯಪಡುವ ಏನನ್ನಾದರೂ ಕಂಡರೆ ಅವನು ಎಚ್ಚರಗೊಳ್ಳುವಾಗ ಮೂರು ಬಾರಿ ಉಗಿಯಲಿ ಮತ್ತು ಅದರ ಕೆಡುಕಿನಿಂದ**

**293** ಇದನ್ನು ಹಾಕಿಮ್ ತನ್ನ ‘ಮುಸ್ತದ್ರಕ್’ನಲ್ಲಿ (1/735; ಹದೀಸ್ ನಂ. 2019) ಆಯಿಶಾರಿಂದ ವರದಿ ಮಾಡಿದ್ದಾರೆ.

**294** ಇದನ್ನು ಬುಖಾರಿ (6/2563; ಹದೀಸ್ ನಂ. 6584) ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ.

**(ಅಲ್ಲಾಹನೊಂದಿಗೆ) ಅಭಯ ಬೇಡಲಿ. ಆಗ ಅದು ಅವನಿಗೆ ಉಪದ್ರವಿಸಲಾರದು."[295]**

ಪ್ರವಾದಿ(ﷺ)ರವರು ಹೇಳಿದರು:

«إِذَا رَأَى أَحَدُكُمُ الرُّؤْيَا يَكْرَهُهَا فَلْيَبْصُقْ عَلَى يَسَارِهِ ثَلَاثًا، وَلْيَسْتَعِذْ بِاللَّهِ مِنَ الشَّيْطَانِ ثَلَاثًا، وَلْيَتَحَوَّلْ عَنْ جَنْبِهِ الَّذِى كَانَ عَلَيْهِ»

**"ನಿಮ್ಮಲ್ಲೋರ್ವನು ತಾನು ಅಸಹ್ಯಪಡುವ ಕನಸನ್ನು ಕಂಡರೆ ಅವನು ತನ್ನ ಎಡಭಾಗಕ್ಕೆ ಮೂರು ಬಾರಿ ಉಗಿಯಲಿ ಮತ್ತು ಶೈತಾನನಿಂದ ಅಲ್ಲಾಹನಲ್ಲಿ ಮೂರು ಬಾರಿ ಅಭಯ ಬೇಡಲಿ ಮತ್ತು ತಾನು ಸರಿದಿರುವ ಮಗ್ಗುಲದಿಂದ (ಇನ್ನೊಂದು ಮಗ್ಗುಲಕ್ಕೆ) ಸರಿಯಲಿ."[296]**

## 43. ರಾತ್ರಿಯ ಕೊನೆಯ ಹಂತದಲ್ಲಿ

ಅಲ್ಲಾಹು ಹೇಳಿದ್ದಾನೆ:

﴿ وَبِٱلْأَسْحَارِ هُمْ يَسْتَغْفِرُونَ ١٨ ﴾

**"ಅವರು (ವಿಶ್ವಾಸಿಗಳು) ರಾತ್ರಿಯ ಕೊನೆಯ ಹಂತದಲ್ಲಿ ಪಾಪಮೋಚನೆಯನ್ನು ಬೇಡುತ್ತಿರುವರು."[297]**

﴿ وَٱلْمُسْتَغْفِرِينَ بِٱلْأَسْحَارِ ١٧ ﴾

**"ಮತ್ತು ರಾತ್ರಿಯ ಕೊನೆಯ ಹಂತದಲ್ಲಿ ಪಾಪಮೋಚನೆಯನ್ನು ಬೇಡುವವರು."[298]**

ಪ್ರವಾದಿ(ﷺ)ರವರು ಹೇಳಿದರು:

«يَتَنَزَّلُ رَبُّنَا تَبَارَكَ وَتَعَالَى كُلَّ لَيْلَةٍ إِلَى السَّمَاءِ الدُّنْيَا حِينَ يَبْقَى ثُلُثُ اللَّيْلِ الْآخِرُ فَيَقُولُ: مَنْ يَدْعُونِي فَأَسْتَجِيبَ لَهُ؟ مَنْ يَسْأَلُنِي فَأُعْطِيَهُ؟ مَنْ يَسْتَغْفِرُنِي فَأَغْفِرَ لَهُ؟»

**"ಪ್ರತಿ ರಾತ್ರಿಯಲ್ಲಿ, ರಾತ್ರಿಯ ಮೂರನೇ ಒಂದರ ಕೊನೆಯ ಭಾಗ ಬಾಕಿಯಿರುವಾಗ ನಮ್ಮ ಪ್ರಭು ಭೂಮಿಯೊಂದಿಗೆ ನಿಕಟವಾಗಿರುವ ಆಕಾಶಕ್ಕೆ ಇಳಿದು ಬಂದು ಹೇಳುವನು:**

**295** ಇದನ್ನು ಬುಖಾರಿ (5/2169; ಹದೀಸ್ ನಂ. 5415), ಮುಸ್ಲಿಮ್ (4/1771; ಹದೀಸ್ ನಂ. 2261) ಅಬೂ ಕತಾದಃರಿಂದ ವರದಿ ಮಾಡಿದ್ದಾರೆ.

**296** ಇದನ್ನು ಮುಸ್ಲಿಮ್ (4/1772; ಹದೀಸ್ ನಂ. 2262) ಜಾಬಿರ್‌ರಿಂದ ವರದಿ ಮಾಡಿದ್ದಾರೆ.

**297** ಕುರ್‌ಆನ್ 51/18

**298** ಕುರ್‌ಆನ್ 3/17

ನನ್ನನ್ನು ಕರೆಯುವವನು ಯಾರು ಅವನಿಗೆ ನಾನು ಉತ್ತರವನ್ನು ನೀಡುವೆನು. ನನ್ನೊಂದಿಗೆ ಬೇಡುವವನು ಯಾರು ಅವನಿಗೆ ನಾನು (ಅವನು ಬೇಡಿದ್ದನ್ನು) ನೀಡುವೆನು. ನನ್ನೊಂದಿಗೆ ಪಾಪಮುಕ್ತಿಯನ್ನು ಬೇಡುವವನು ಯಾರು ಅವನಿಗೆ ನಾನು ಕ್ಷಮಿಸುವೆನು."(299)

ಪ್ರವಾದಿ(ﷺ)ರವರು ಹೇಳಿದರು:

«يَنْزِلُ اللَّهُ إِلَى سَمَاءِ الدُّنْيَا كُلَّ لَيْلَةٍ، حِينَ يَمْضِى ثُلُثُ اللَّيْلِ الْأَوَّلُ، فَيَقُولُ: أَنَا الْمَلِكُ، أَنَا الْمَلِكُ، مَنْ ذَا الَّذِي يَدْعُونِي فَأَسْتَجِيبَ لَهُ، مَنْ ذَا الَّذِي يَسْأَلُنِي فَأُعْطِيَهُ، مَنْ ذَا الَّذِي يَسْتَغْفِرُنِي فَأَغْفِرَ لَهُ، فَلَا يَزَالُ كَذَلِكَ حَتَّى يُضِيءَ الْفَجْرُ»

"ಪ್ರತಿ ರಾತ್ರಿಯಲ್ಲಿ, ರಾತ್ರಿಯ ಮೂರನೇ ಒಂದರ ಮೊದಲ ಭಾಗ ಸರಿಯುತ್ತಿರುವಂತೆ ಅಲ್ಲಾಹು ಭೂಮಿಯೊಂದಿಗೆ ನಿಕಟವಾಗಿರುವ ಆಕಾಶಕ್ಕೆ ಇಳಿದು ಬಂದು ಹೇಳುವನು: ನಾನು ಅಧಿಪತಿಯಾಗಿದ್ದೇನೆ, ನಾನು ಅಧಿಪತಿಯಾಗಿದ್ದೇನೆ. ನನ್ನನ್ನು ಕರೆಯುವವನು ಯಾರು ಅವನಿಗೆ ನಾನು ಉತ್ತರವನ್ನು ನೀಡುವೆನು. ನನ್ನೊಂದಿಗೆ ಬೇಡುವವನು ಯಾರು ಅವನಿಗೆ ನಾನು (ಅವನು ಬೇಡಿದ್ದನ್ನು) ನೀಡುವೆನು. ನನ್ನೊಂದಿಗೆ ಪಾಪಮುಕ್ತಿಯನ್ನು ಬೇಡುವವನು ಯಾರು ಅವನಿಗೆ ನಾನು ಕ್ಷಮಿಸುವೆನು. ಪ್ರಭಾತವು ಬೆಳಗುವವರೆಗೆ ಅವನು ಹೀಗೆ ಹೇಳುತ್ತಿರುವನು."(300)

ಪ್ರವಾದಿ(ﷺ)ರವರು ಹೇಳಿದರು:

«إِنَّ فِي اللَّيْلِ لَسَاعَةً، لَا يُوَافِقُهَا رَجُلٌ مُسْلِمٌ يَسْأَلُ اللَّهَ خَيْرًا مِنْ أَمْرِ الدُّنْيَا وَالْآخِرَةِ، إِلَّا أَعْطَاهُ إِيَّاهُ، وَذَلِكَ كُلَّ لَيْلَةٍ»

"ರಾತ್ರಿಯಲ್ಲಿ ಒಂದು ಅವಧಿಯಿದೆ. ಐಹಿಕ ಮತ್ತು ಪಾರಲೌಕಿಕವಾದ ವಿಷಯಗಳಲ್ಲಿ ಉತ್ತಮವಾದುದನ್ನು ಅಲ್ಲಾಹನೊಂದಿಗೆ ಬೇಡುವ ಮುಸ್ಲಿಮನು ಇದರೊಂದಿಗೆ (ಈ ಅವಧಿಯೊಂದಿಗೆ) ಸಮನ್ವಯಗೊಳ್ಳಲಾರನು, ಅವನದನ್ನು ಅವನಿಗೆ (ಬೇಡಿದವನಿಗೆ) ನೀಡದೆ. ಮತ್ತು ಇದು ಪ್ರತಿರಾತ್ರಿಯಲ್ಲೂ ಇದೆ."(301)

عَنْ أَبِى أُمَامَةَ رَضِيَ اللَّهُ عَنْهُ قَالَ: قِيلَ لِرَسُولِ اللَّهِ صَلَّى اللَّهُ عَلَيْهِ وَسَلَّمَ: أَيُّ الدُّعَاءِ أَسْمَعُ؟ قَالَ: «جَوْفُ اللَّيْلِ الْآخِرِ وَدُبُرُ الصَّلَوَاتِ

**299** ಇದನ್ನು ಬುಖಾರಿ (1/384; ಹದೀಸ್ ನಂ. 1094), ಮುಸ್ಲಿಮ್ (1/521; ಹದೀಸ್ ನಂ. 758) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**300** ಇದನ್ನು ಮುಸ್ಲಿಮ್ (1/521; ಹದೀಸ್ ನಂ. 758) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**301** ಇದನ್ನು ಮುಸ್ಲಿಮ್ (1/521; ಹದೀಸ್ ನಂ. 757) ಜಾಬಿರ್‌ರಿಂದ ವರದಿ ಮಾಡಿದ್ದಾರೆ.

ٱلْمَكْتُوبَاتِ»

“ಅಬೂ ಉಮಾಮ(رضي الله عنه)ರಿಂದ ವರದಿ: ಅಲ್ಲಾಹನ ಸಂದೇಶವಾಹಕ(ﷺ)ರೊಂದಿಗೆ (ಈ ರೀತಿ) ಕೇಳಲ್ಪಟ್ಟಿತು: ಯಾವ (ವೇಳೆಯ) ಪ್ರಾರ್ಥನೆಯು (ಅಲ್ಲಾಹು) ಆಲಿಸಲು ಹೆಚ್ಚು ಅರ್ಹವಾಗಿದೆ? ಅವರು(ﷺ) ಹೇಳಿದರು: ರಾತ್ರಿಯ ಕೊನೆಯ ಹಂತದ ಮಧ್ಯಭಾಗ ಮತ್ತು ಕಡ್ಡಾಯ ನಮಾಝ್‌ಗಳ ನಂತರ.”(302)

## 44. ಅಲ್ ಅಸ್ಮಾಉಲ್ ಹುಸ್ನಾ

ಅಲ್ಲಾಹು ಹೇಳಿದ್ದಾನೆ:

﴿ وَلِلَّهِ ٱلْأَسْمَآءُ ٱلْحُسْنَىٰ فَٱدْعُوهُ بِهَا ﴾

“ಸುಂದರವಾದ ನಾಮಗಳು ಅಲ್ಲಾಹನದ್ದಾಗಿವೆ. ಆದ್ದರಿಂದ ಅವುಗಳೊಂದಿಗೆ ಅವನನ್ನು ಕರೆಯಿರಿ.”(303)

﴿ قُلِ ٱدْعُواْ ٱللَّهَ أَوِ ٱدْعُواْ ٱلرَّحْمَٰنَ أَيًّا مَّا تَدْعُواْ فَلَهُ ٱلْأَسْمَآءُ ٱلْحُسْنَىٰ ﴾

“ಹೇಳು, ಅಲ್ಲಾಹನನ್ನು ಕರೆಯಿರಿ ಅಥವಾ ಅರ್ರಹ್ಮಾನ್‌ನನ್ನು ಕರೆಯಿರಿ. ನೀವು ಯಾರನ್ನು ಕರೆದರೂ ಅವನಿಗೆ ಸುಂದರವಾದ ನಾಮಗಳಿವೆ.”(304)

﴿ هُوَ ٱللَّهُ ٱلَّذِى لَآ إِلَٰهَ إِلَّا هُوَ عَٰلِمُ ٱلْغَيْبِ وَٱلشَّهَٰدَةِ هُوَ ٱلرَّحْمَٰنُ ٱلرَّحِيمُ ﴿٢٢﴾ هُوَ ٱللَّهُ ٱلَّذِى لَآ إِلَٰهَ إِلَّا هُوَ ٱلْمَلِكُ ٱلْقُدُّوسُ ٱلسَّلَٰمُ ٱلْمُؤْمِنُ ٱلْمُهَيْمِنُ ٱلْعَزِيزُ ٱلْجَبَّارُ ٱلْمُتَكَبِّرُ سُبْحَٰنَ ٱللَّهِ عَمَّا يُشْرِكُونَ ﴿٢٣﴾ هُوَ ٱللَّهُ ٱلْخَٰلِقُ ٱلْبَارِئُ ٱلْمُصَوِّرُ لَهُ ٱلْأَسْمَآءُ ٱلْحُسْنَىٰ يُسَبِّحُ لَهُۥ مَا فِى ٱلسَّمَٰوَٰتِ وَٱلْأَرْضِ وَهُوَ ٱلْعَزِيزُ ٱلْحَكِيمُ ﴿٢٤﴾ ﴾

“ಅವನು ಅಲ್ಲಾಹು. ಅವನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ. ಅವನು ಅರ್ರಹ್ಮಾನ್ ಮತ್ತು ಅರ್ರಹೀಮ್ ಆಗಿದ್ದಾನೆ. ಅವನು ಅಲ್ಲಾಹು. ಅವನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ. ಅವನು ಅಲ್‌ಮಲಿಕ್, ಅಲ್‌ಕುದ್ದೂಸ್, ಅಸ್ಸಲಾಮ್, ಅಲ್‌ಮುಅ್‌ಮಿನ್, ಅಲ್‌ಮುಹೈಮಿನ್, ಅಲ್‌ಅಝೀಝ್, ಅಲ್‌ಜಬ್ಬಾರ್, ಅಲ್‌ಮುತಕಬ್ಬಿರ್ ಆಗಿದ್ದಾನೆ. ನೀವು ಸಹಭಾಗಿಗಳನ್ನು ಉಂಟುಮಾಡುವುದರಿಂದ

302 ಇದನ್ನು ತಿರ್ಮಿದಿ (5/526; ಹದೀಸ್ ನಂ. 3499) ವರದಿ ಮಾಡಿದ್ದಾರೆ.

303 ಕುರ್‌ಆನ್ 7/180

304 ಕುರ್‌ಆನ್ 17/110

ಅಲ್ಲಾಹು ಪರಮ ಪಾವನನಾಗಿದ್ದಾನೆ. ಅವನಾಗಿದ್ದಾನೆ ಅಲ್ಲಾಹ್! ಅಲ್‌ಖಾಲಿಕ್, ಅಲ್‌ಬಾರಿಅ್, ಅಲ್‌ಮುಸವ್ವಿರ್. ಅವನಿಗೆ ಸುಂದರವಾದ ನಾಮಗಳಿವೆ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವವರು ಅವನ ಪರಿಪಾವನತೆಯನ್ನು ಕೊಂಡಾಡುತ್ತಾರೆ. ಅವನು ಅಲ್‌ಅಝೀಝ್ ಮತ್ತು ಅಲ್‌ಹಕೀಮ್ ಆಗಿದ್ದಾನೆ."(305)

﴿ ٱللَّهُ لَآ إِلَٰهَ إِلَّا هُوَ ۖ لَهُ ٱلْأَسْمَآءُ ٱلْحُسْنَىٰ ﴿٨﴾ ﴾

"ಅಲ್ಲಾಹ್! ಅವನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ. ಅವನಿಗೆ ಸುಂದರವಾದ ನಾಮಗಳಿವೆ."(306)

ಪ್ರವಾದಿ(ﷺ)ರವರು ಹೇಳಿದರು:

«لِلَّهِ تِسْعَةٌ وَتِسْعُونَ إِسْمًا – مِائَةٌ إِلَّا وَاحِدًا – مَنْ حَفِظَهَا دَخَلَ الْجَنَّةَ، وَهُوَ وِتْرٌ يُحِبُّ الْوِتْرَ»

"ಅಲ್ಲಾಹನಿಗೆ ತೊಂಬತ್ತೊಂಬತ್ತು ಹೆಸರುಗಳಿವೆ, ನೂರರಿಂದ ಒಂದು ಕಡಿಮೆ. ಯಾರಾದರೂ ಅವುಗಳನ್ನು ಕಂಠಪಾಠ ಮಾಡಿದರೆ ಅವನು ಸ್ವರ್ಗವನ್ನು ಪ್ರವೇಶಿಸಿದನು. ಅವನು ಒಂಟಿಯಾಗಿದ್ದಾನೆ ಮತ್ತು ಬೆಸ ಸಂಖ್ಯೆಯನ್ನು ಅವನು ಇಷ್ಟಪಡುತ್ತಾನೆ."(307)

## 45. ಕುರ್‌ಆನ್ ಪಾರಾಯಣ

ಅಲ್ಲಾಹು ಹೇಳಿದ್ದಾನೆ

﴿ فَإِذَا قَرَأْتَ ٱلْقُرْءَانَ فَٱسْتَعِذْ بِٱللَّهِ مِنَ ٱلشَّيْطَٰنِ ٱلرَّجِيمِ ﴿٩٨﴾ ﴾

"ನೀನು ಕುರ್‌ಆನನ್ನು ಓದಿದರೆ (ಅರ್ಥಾತ್ ಓದತೊಡಗುವಾಗ) ಶಪಿಸಲ್ಪಟ್ಟ ಶೈತಾನನಿಂದ ಅಲ್ಲಾಹನೊಂದಿಗೆ ಅಭಯ ಯಾಚಿಸು."(308)

﴿ ٱقْرَأْ بِٱسْمِ رَبِّكَ ٱلَّذِى خَلَقَ ﴿١﴾ ﴾

"ಸೃಷ್ಟಿಸಿದ ನಿನ್ನ ಪ್ರಭುವಿನ ನಾಮದಿಂದ ಓದು."(309)

﴿ وَإِذَا قُرِئَ ٱلْقُرْءَانُ فَٱسْتَمِعُوا۟ لَهُۥ وَأَنصِتُوا۟ لَعَلَّكُمْ تُرْحَمُونَ ﴿٢٠٤﴾ ﴾

**305** ಕುರ್‌ಆನ್ 52/22–24

**306** ಕುರ್‌ಆನ್ 20/8

**307** ಇದನ್ನು ಬುಖಾರಿ (5/2354; ಹದೀಸ್ ನಂ. 6047), ಮುಸ್ಲಿಮ್ (4/2062; ಹದೀಸ್ ನಂ. 2677) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**308** ಕುರ್‌ಆನ್ 16/98

**309** ಕುರ್‌ಆನ್ 96/1

"ಕುರ್‌ಆನ್ ಪಾರಾಯಣ ಮಾಡಲ್ಪಟ್ಟಾಗ ಅದನ್ನು ಆಲಿಸಿರಿ ಮತ್ತು ಮೌನವಾಗಿರಿ, ನೀವು ಕರುಣೆತೋರಲ್ಪಡಲೂ ಬಹುದು."(310)

﴿ إِنَّ ٱلَّذِينَ يَتْلُونَ كِتَـٰبَ ٱللَّهِ وَأَقَامُوا۟ ٱلصَّلَوٰةَ وَأَنفَقُوا۟ مِمَّا رَزَقْنَـٰهُمْ سِرًّا وَعَلَانِيَةً يَرْجُونَ تِجَـٰرَةً لَّن تَبُورَ ﴿٢٩﴾ ﴾

"ಅಲ್ಲಾಹನ ಗ್ರಂಥವನ್ನು ಪಾರಾಯಣ ಮಾಡುವವರು, ನಮಾಝನ್ನು ಸಂಸ್ಥಾಪಿಸುವವರು, ನಾವು ನೀಡಿದ ಅನ್ನಾಧಾರಗಳಿಂದ ರಹಸ್ಯವಾಗಿ ಮತ್ತು ಬಹಿರಂಗವಾಗಿ ವ್ಯಯಿಸುವವರು ಎಂದೂ ನಷ್ಟಕ್ಕೀಡಾಗದ ವ್ಯಾಪಾರವನ್ನು ಆಶಿಸುವವರಾಗಿದ್ದಾರೆ."(311)

﴿ كِتَـٰبٌ أَنزَلْنَـٰهُ إِلَيْكَ مُبَـٰرَكٌ لِّيَدَّبَّرُوٓا۟ ءَايَـٰتِهِۦ وَلِيَتَذَكَّرَ أُو۟لُوا۟ ٱلْأَلْبَـٰبِ ﴿٢٩﴾ ﴾

"ಅನುಗ್ರಹೀತವಾದ ಗ್ರಂಥ, ನಾವದನ್ನು ನಿನ್ನೆಡೆಗೆ ಅವತೀರ್ಣಗೊಳಿಸಿದೆವು. ಅವರು ಅದರ ದೃಷ್ಟಾಂತಗಳ ಕುರಿತು ಚಿಂತಿಸುವುದಕ್ಕಾಗಿ ಮತ್ತು ಬುದ್ಧಿವಂತರು ಅದರಿಂದ ಉಪದೇಶವನ್ನು ಪಡೆಯುವುದಕ್ಕಾಗಿ."(312)

﴿ وَلَقَدْ يَسَّرْنَا ٱلْقُرْءَانَ لِلذِّكْرِ فَهَلْ مِن مُّدَّكِرٍ ﴿١٧﴾ ﴾

"ಸ್ಮರಿಸುವುದಕ್ಕಾಗಿ ನಾವು ಕುರ್‌ಆನನ್ನು ಸುಲಭೀಕರಿದ್ದೇವೆ. ಆದ್ದರಿಂದ ಉಪದೇಶವನ್ನು ಪಡೆಯುವವರು ಯಾರಾದರೂ ಇದ್ದಾರೆಯೇ?"(313)

﴿ وَإِذَا قَرَأْتَ ٱلْقُرْءَانَ جَعَلْنَا بَيْنَكَ وَبَيْنَ ٱلَّذِينَ لَا يُؤْمِنُونَ بِٱلْـَٔاخِرَةِ حِجَابًا مَّسْتُورًا ﴿٤٥﴾ ﴾

"ನೀನು ಕುರ್‌ಆನನ್ನು ಓದಿದರೆ ನಿನ್ನ ಮತ್ತು ವಿಶ್ವಾಸವಿಡದವರ ಮಧ್ಯೆ ನಾವು ಮರೆಮಾಚಲ್ಪಟ್ಟ ಅಡ್ಡತಡೆಯನ್ನು ಇಡುವೆವು."(314)

﴿ وَرَتِّلِ ٱلْقُرْءَانَ تَرْتِيلًا ﴿٤﴾ ﴾

"ನೀನು ಕುರ್‌ಆನನ್ನು ಸಾವಧಾನವಾಗಿ ಓದು."(315)

﴿ ٱللَّهُ نَزَّلَ أَحْسَنَ ٱلْحَدِيثِ كِتَـٰبًا مُّتَشَـٰبِهًا مَّثَانِىَ تَقْشَعِرُّ مِنْهُ جُلُودُ ٱلَّذِينَ

**310** ಕುರ್‌ಆನ್ 7/204
**311** ಕುರ್‌ಆನ್ 35/29
**312** ಕುರ್‌ಆನ್ 38/29
**313** ಕುರ್‌ಆನ್ 54/17
**314** ಕುರ್‌ಆನ್ 17/45
**315** ಕುರ್‌ಆನ್ 73/4

يَخْشَوْنَ رَبَّهُمْ ثُمَّ تَلِينُ جُلُودُهُمْ وَقُلُوبُهُمْ إِلَىٰ ذِكْرِ ٱللَّهِ ۚ ذَٰلِكَ هُدَى ٱللَّهِ يَهْدِى بِهِۦ مَن يَشَآءُ ۚ وَمَن يُضْلِلِ ٱللَّهُ فَمَا لَهُۥ مِنْ هَادٍ ﴿٢٣﴾

**"ಸಾದೃಶ್ಯವಾಗಿರುವ, ಪುನರಾವರ್ತಿಸುವ ಅತ್ಯಂತ ಸುಂದರವಾದ ಸಂದೇಶವನ್ನು ಅಲ್ಲಾಹು ಗ್ರಂಥರೂಪದಲ್ಲಿ ಅವತೀರ್ಣಗೊಳಿಸಿದ್ದಾನೆ. ತಮ್ಮ ಪ್ರಭುವನ್ನು ಭಯಪಡುವವರ ಚರ್ಮಗಳು ಅದರಿಂದ ನಡುಗುತ್ತವೆ. ನಂತರ ಅವರ ಚರ್ಮಗಳು ಮತ್ತು ಹೃದಯಗಳು ಅಲ್ಲಾಹನ ಸ್ಮರಣೆಯೆಡೆಗೆ ನಯವಾಗುತ್ತವೆ. ಅದಾಗಿದೆ ಅಲ್ಲಾಹನ ಮಾರ್ಗದರ್ಶನ. ತಾನಿಚ್ಛಿಸಿದವರನ್ನು ಅವನು ಅದರಿಂದ ಮುನ್ನಡೆಸುತ್ತಾನೆ. ಅಲ್ಲಾಹು ಯಾರನ್ನಾದರೂ ದಾರಿಗೆಡಿಸಿದರೆ ಅವನನ್ನು ಮನ್ನಡೆಸುವವನಾಗಿ ಯಾರೂ ಇಲ್ಲ."**[316]

ಪ್ರವಾದಿ(ﷺ)ರವರು ಹೇಳಿದರು:

«خَيْرُكُمْ مَنْ تَعَلَّمَ الْقُرْآنَ وَعَلَّمَهُ»

**"ನಿಮ್ಮಲ್ಲಿ ಕುರ್‌ಆನನ್ನು ಕಲಿತವರು ಮತ್ತು ಕಲಿಸಿದವರು ಅತ್ಯುತ್ತಮರಾಗಿದ್ದಾರೆ."**[317]

ಪ್ರವಾದಿ(ﷺ)ರವರು ಹೇಳಿದರು:

«الْمَاهِرُ بِالْقُرْآنِ مَعَ السَّفَرَةِ الْكِرَامِ الْبَرَرَةِ، وَالَّذِي يَقْرَأُ الْقُرْآنَ وَيَتَتَعْتَعُ فِيهِ وَهُوَ عَلَيْهِ شَاقٌّ لَهُ أَجْرَانِ»

**"ಕುರ್‌ಆನಿನಲ್ಲಿ ಪಳಗಿದವನು ಮಾನ್ಯರಾಗಿರುವ, ಸಚ್ಚರಿತರಾಗಿರುವ ದೂತರೊಂದಿಗೆ (ಅರ್ಥಾತ್ ಮಲಕ್‌ಗಳೊಂದಿಗೆ) ಇರುವನು. ತಡವರಿಸುತ್ತಾ ಕುರ್‌ಆನನ್ನು ಓದುವವನು, ಅದು ಅವನಿಗೆ ಕಷ್ಟಕರವಾಗಿರುವುದರಿಂದ, ಅವನಿಗೆ ಎರಡು ಪುಣ್ಯಗಳಿವೆ."**[318]

عَنْ أَبِى هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «أَيُحِبُّ أَحَدُكُمْ إِذَا رَجَعَ إِلَى أَهْلِهِ أَنْ يَجِدَ فِيهِ ثَلَاثَ خَلِفَاتٍ عِظَامٍ سِمَانٍ؟» قُلْنَا نَعَمْ، قَالَ: «فَثَلَاثُ آيَاتٍ يَقْرَأُ بِهِنَّ أَحَدُكُمْ فِي صَلَاتِهِ خَيْرٌ لَهُ

---

**316** ಕುರ್‌ಆನ್ 39/23

**317** ಇದನ್ನು ಬುಖಾರಿ (4/1919; ಹದೀಸ್ ನಂ. 4739) ಉಸ್ಮಾನ್ ಇಬ್ನ್ ಅಫ್ಫಾನ್‌ರಿಂದ ವರದಿ ಮಾಡಿದ್ದಾರೆ.

**318** ಇದನ್ನು ಬುಖಾರಿ (4/1882; ಹದೀಸ್ ನಂ. 4653), ಮುಸ್ಲಿಮ್ (1/549; ಹದೀಸ್ ನಂ. 798) ಆಯಿಶಾರಿಂದ ವರದಿ ಮಾಡಿದ್ದಾರೆ. ಕುರ್‌ಆನಿನಲ್ಲಿ ಪಳಗಿದವನು ಎಂದರೆ ಕುರ್‌ಆನನ್ನು ನಿರಾಳವಾಗಿ ಓದುವವನು. ಕುರ್‌ಆನನ್ನು ಅದರ ಸ್ಪಷ್ಟವಾದ ಶಬ್ದೋಚ್ಚಾರಗಳೊಂದಿಗೆ ನಿರಂತರವಾಗಿ ಓದುತ್ತಿರುವವನಿಗೆ ಮಾತ್ರವೇ ಅದನ್ನು ನಿರಾಳವಾಗಿ ಓದಲು ಸಾಧ್ಯ. ಕುರ್‌ಆನನ್ನು ತಡವರಿಸುತ್ತಾ ಓದುವವನು ಎಂದರೆ ಅದರ ಶಬ್ದೋಚ್ಚಾರಗಳನ್ನು ಸರಿಯಾಗಿ ಓದಲು ಸಾಧ್ಯವಾಗದಿದ್ದರೂ ಸಾವಕಾಶವಾಗಿ ಸ್ಪಷ್ಟವಾಗಿ ಓದಲು ಬಹಳ ಪ್ರಯಾಸದಿಂದ ಪ್ರಯತ್ನಿಸುವವನು ಎಂದರ್ಥ.

مِنْ ثَلَاثِ خَلِفَاتٍ عِظَامٍ سِمَانٍ»

**“ಅಬೂ ಹುರೈರಾ(ﷺ)ರಿಂದ: ಅಲ್ಲಾಹನ ಸಂದೇಶವಾಹಕ(ﷺ)ರವರು ಹೇಳಿದರು: ನಿಮ್ಮಲ್ಲೋರ್ವನು ತನ್ನ ನಿವಾಸಕ್ಕೆ ಮರಳಿದರೆ ಅಲ್ಲಿ ಮೂರು ಗರ್ಭಧರಿಸಿದ ದಷ್ಟಪುಷ್ಟವಾದ ಒಂಟೆಗಳನ್ನು ಕಾಣಲು ಇಷ್ಟಪಡುವನೇ? ನಾವು ಹೇಳಿದೆವು: ಹೌದು. ಅವರು ಹೇಳಿದರು: ನಿಮ್ಮಲ್ಲೋರ್ವನು ತನ್ನ ನಮಾಝ್‌ನಲ್ಲಿ ಓದುವ ಮೂರು ಆಯತ್‌ಗಳು ಮೂರು ಗರ್ಭಧರಿಸಿದ ದಷ್ಟಪುಷ್ಟವಾದ ಒಂಟೆಗಳಿಗಿಂತಲೂ ಉತ್ತಮವಾಗಿದೆ.”(319)**

ಪ್ರವಾದಿ(ﷺ)ರವರು ಹೇಳಿದರು:

«وَمَا اجْتَمَعَ قَوْمٌ فِي بَيْتٍ مِنْ بُيُوتِ اللَّهِ يَتْلُونَ كِتَابَ اللَّهِ وَيَتَدَارَسُونَهُ بَيْنَهُمْ إِلَّا نَزَلَتْ عَلَيْهِمُ السَّكِينَةُ وَغَشِيَتْهُمُ الرَّحْمَةُ وَحَفَّتْهُمُ الْمَلَائِكَةُ وَذَكَرَهُمُ اللَّهُ فِيمَنْ عِنْدَهُ»

**“ಒಂದು ಸಮೂಹವು ಅಲ್ಲಾಹನ ಭವನಗಳಲ್ಲಿ ಸೇರಿದ ಭವನವೊಂದರಲ್ಲಿ ಒಟ್ಟು ಸೇರಿ, ಅಲ್ಲಾಹನ ಗ್ರಂಥವನ್ನು ಓದುತ್ತಾ ಅದನ್ನು ತಮ್ಮಲ್ಲಿ ಪರಸ್ಪರ ಕಲಿಸುತ್ತಲೂ ಕಲಿಯುತ್ತಲೂ ಇರಲಾರರು, ಅವರ ಮೇಲೆ ಶಾಂತಿಯು ಇಳಿದು, ಕಾರುಣ್ಯವು ಅವರನ್ನು ಹೊದೆದು, ಮಲಕ್‌ಗಳು ಅವರನ್ನು ಆವರಿಸಿ, ಅಲ್ಲಾಹು ತನ್ನ ಬಳಿಯಿರುವವರಲ್ಲಿ ಅವರ ಕುರಿತು ಪ್ರಸ್ತಾಪಿಸದೆ.”(320)**

عَنِ الْبَرَاءِ بْنِ عَازِبٍ رَضِيَ اللَّهُ عَنْهُ قَالَ: كَانَ رَجُلٌ يَقْرَأُ سُورَةَ الْكَهْفِ وَعِنْدَهُ فَرَسٌ مَرْبُوطٌ بِشَطْنَيْنِ، فَتَغَشَّتْهُ سَحَابَةٌ فَجَعَلَتْ تَدُورُ وَتَدْنُو، وَجَعَلَ فَرَسُهُ يَنْفِرُ مِنْهَا، فَلَمَّا أَصْبَحَ أَتَى النَّبِيَّ صَلَّى اللَّهُ عَلَيْهِ وَسَلَّمَ فَذَكَرَ ذَلِكَ لَهُ، فَقَالَ: «تِلْكَ السَّكِينَةُ تَنَزَّلَتْ لِلْقُرْآنِ»

**“ಬರಾಅ್ ಇಬ್ನ್ ಆಝಿಬ್(ﷺ)ರಿಂದ: ಓರ್ವ ವ್ಯಕ್ತಿಯು ಸೂರಃ ಅಲ್‌ಕಹ್ಫ್ ಅನ್ನು ಓದುತ್ತಿದ್ದರು. ಅವರ ಬಳಿ ಕುದುರೆಯೊಂದು ಎರಡು ಹಗ್ಗಗಳಿಂದ ಕಟ್ಟಲ್ಪಟ್ಟಿತ್ತು. ಆಗ (ಆಕಾಶದಲ್ಲಿ) ಮೋಡವು ಆವರಿಸಿ ಅದು ಸುತ್ತುತ್ತಲೂ ಹತ್ತಿರವಾಗುತ್ತಲೂ ಇತ್ತು. ಕುದುರೆಯು ಭಯದಿಂದ ಕೂಗುತ್ತಿತ್ತು. ಬೆಳಗಾದಾಗ ಆ ವ್ಯಕ್ತಿ ಪ್ರವಾದಿ(ﷺ)ರವರ ಬಳಿ ಬಂದು ಇದನ್ನು ತಿಳಿಸಿದರು. ಆಗ ಅವರು ಹೇಳಿದರು: ಅದು ಕುರ್‌ಆನ್‌ಗೋಸ್ಕರ ಇಳಿದು ಬಂದ ಶಾಂತಿಯಾಗಿದೆ.”(321)**

---

**319** ಇದನ್ನು ಮುಸ್ಲಿಮ್ (1/552; ಹದೀಸ್ ನಂ. 802) ವರದಿ ಮಾಡಿದ್ದಾರೆ.

**320** ಇದನ್ನು ಮುಸ್ಲಿಮ್ (4/2074; ಹದೀಸ್ ನಂ. 2699) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**321** ಇದನ್ನು ಬುಖಾರಿ (4/1914; ಹದೀಸ್ ನಂ. 4724), ಮುಸ್ಲಿಮ್ (1/547; ಹದೀಸ್ ನಂ.

ಪ್ರವಾದಿ(ﷺ)ರವರು ಹೇಳಿದರು:

«إِنَّمَا مَثَلُ صَاحِبِ الْقُرْآنِ كَمَثَلِ صَاحِبِ الْإِبِلِ الْمُعَلَّقَةِ، إِنْ عَاهَدَ عَلَيْهَا أَمْسَكَهَا، وَإِنْ أَطْلَقَهَا ذَهَبَتْ»

**"ಕುರ್‌ಆನಿನ ಒಡೆಯನ ಉಪಮೆಯು ಕಟ್ಟಿಹಾಕಲ್ಪಟ್ಟ ಒಂಟೆಯ ಒಡೆಯನ ಉಪಮೆಯಂತಿದೆ. ಅವನು ಅದರ ಬಗ್ಗೆ ನಿಗಾವಹಿಸಿದರೆ ಅದನ್ನು ಹಿಡಿದಿಡುವನು. ಅವನು ಅದನ್ನು ಬಿಟ್ಟುಬಿಟ್ಟರೆ ಅದು ಹೊರಟುಹೋಗುವುದು."(322)**

ಪ್ರವಾದಿ(ﷺ)ರವರು ಹೇಳಿದರು:

«مَنْ قَرَأَ حَرْفًا مِنْ كِتَابِ اللَّهِ فَلَهُ بِهِ حَسَنَةٌ، وَالْحَسَنَةُ بِعَشْرِ أَمْثَالِهَا، لَا أَقُولُ ألم حَرْفٌ، وَلَكِنْ أَلِفٌ حَرْفٌ، وَلَامٌ حَرْفٌ، وَمِيمٌ حَرْفٌ»

**"ಯಾರಾದರೂ ಅಲ್ಲಾಹನ ಗ್ರಂಥದಿಂದ ಒಂದು ಅಕ್ಷರವನ್ನು ಓದಿದರೆ ಅವನಿಗೆ ಅದರಲ್ಲಿ ಒಂದು ಪುಣ್ಯವಿದೆ. ಮತ್ತು ಒಂದು ಪುಣ್ಯವು ಅದರ ಹತ್ತು ಪಟ್ಟು ಇದೆ. ಅಲಿಫ್ ಲಾಮ್ ಮೀಮ್ (ಒಂದೇ) ಅಕ್ಷರವೆಂದು ನಾನು ಹೇಳುವುದಿಲ್ಲ. ಆದರೆ ಅಲಿಫ್ ಒಂದು ಅಕ್ಷರವಾಗಿದೆ, ಲಾಮ್ ಒಂದು ಅಕ್ಷರವಾಗಿದೆ, ಮೀಮ್ ಒಂದು ಅಕ್ಷರವಾಗಿದೆ."(323)**

## 46. ಪ್ರವಾದಿ(ﷺ)ರವರ ಮೇಲೆ ಸಲಾತ್

ಅಲ್ಲಾಹು ಹೇಳಿದ್ದಾನೆ:

﴿ إِنَّ ٱللَّهَ وَمَلَـٰٓئِكَتَهُۥ يُصَلُّونَ عَلَى ٱلنَّبِىِّ ۚ يَـٰٓأَيُّهَا ٱلَّذِينَ ءَامَنُوا۟ صَلُّوا۟ عَلَيْهِ وَسَلِّمُوا۟ تَسْلِيمًا ﴿٥٦﴾ ﴾

**"ಅಲ್ಲಾಹು ಮತ್ತು ಅವನ ಮಲಕ್‌ಗಳು ಪ್ರವಾದಿಯವರ ಮೇಲೆ ಸಲಾತ್ ಹೇಳುತ್ತಾರೆ. ಓ ವಿಶ್ವಾಸಿಗಳೇ! ನೀವು ಕೂಡ ಅವರ ಮೇಲೆ ಸಲಾತ್ ಮತ್ತು ಸಲಾಮ್‌ಗಳನ್ನು ಹೇಳಿರಿ."(324)**

ಪ್ರವಾದಿ(ﷺ)ರವರು ಹೇಳಿದರು:

---

795) ವರದಿ ಮಾಡಿದ್ದಾರೆ.

**322** ಇದನ್ನು ಬುಖಾರಿ (4/1920; ಹದೀಸ್ ನಂ. 4743), ಮುಸ್ಲಿಮ್ (1/543; ಹದೀಸ್ ನಂ. 789) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**323** ಇದನ್ನು ತಿರ್ಮಿದಿ (5/175; ಹದೀಸ್ ನಂ. 2910) ಅಬ್ದುಲ್ಲಾಹ್ ಇಬ್ನ್ ಮಸ್‌ಊದ್‌ರಿಂದ ವರದಿ ಮಾಡಿದ್ದಾರೆ.

**324** ಕುರ್‌ಆನ್ 33/56

«مَنْ صَلَّى عَلَيَّ وَاحِدَةً صَلَّى اللَّهُ عَلَيْهِ عَشْرًا»

**"ಯಾರಾದರೂ ನನ್ನ ಮೇಲೆ ಒಂದು ಸಲಾತ್ ಹೇಳಿದರೆ ಅಲ್ಲಾಹು ಅವನ ಮೇಲೆ ಹತ್ತು ಸಲಾತ್‌ಗಳನ್ನು ಹೇಳುವನು."**(325)

ಪ್ರವಾದಿ(ﷺ)ರವರು ಹೇಳಿದರು:

«مَنْ صَلَّى عَلَيَّ صَلَاةً وَاحِدَةً صَلَّى اللَّهُ عَلَيْهِ عَشْرَ صَلَوَاتٍ وَحُطَّتْ عَنْهُ عَشْرُ خَطِيئَاتٍ وَرُفِعَتْ لَهُ عَشْرُ دَرَجَاتٍ»

**"ಯಾರಾದರೂ ನನ್ನ ಮೇಲೆ ಒಂದು ಸಲಾತ್ ಹೇಳಿದರೆ ಅಲ್ಲಾಹು ಅವನ ಮೇಲೆ ಹತ್ತು ಸಲಾತ್‌ಗಳನ್ನು ಹೇಳುವನು ಮತ್ತು ಅವನಿಂದ ಹತ್ತು ಪಾಪಗಳು ಕ್ಷಮಿಸಲ್ಪಡುವುವು ಮತ್ತು ಅವನಿಗೆ ಹತ್ತು ದರ್ಜೆಗಳನ್ನು ಏರಿಸಲ್ಪಡುವುದು."**(326)

ಪ್ರವಾದಿ(ﷺ)ರವರು ಹೇಳಿದರು:

«الْبَخِيلُ الَّذِى مَنْ ذُكِرْتُ عِنْدَهُ فَلَمْ يُصَلِّ عَلَيَّ»

**"ಓರ್ವನ ಬಳಿ ನನ್ನ (ಹೆಸರ)ನ್ನು ಪ್ರಸ್ತಾಪಿಸಲ್ಪಟ್ಟಿದ್ದೂ ಕೂಡ ಅವನು ನನ್ನ ಮೇಲೆ ಸಲಾತ್ ಹೇಳದಿದ್ದರೆ ಅವನಾಗಿದ್ದಾನೆ ಜಿಪುಣನು."**(327)

عَنْ كَعْبِ بْنِ عُجْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «احْضُرُوا الْمِنبَرَ» فَحَضَرْنَا، فَلَمَّا ارْتَقَى الدَّرَجَةَ قَالَ: «آمِينَ»، فَلَمَّا ارْتَقَى الدَّرَجَةَ الثَّانِيَةَ قَالَ: «آمِينَ»، فَلَمَّا ارْتَقَى الدَّرَجَةَ الثَّالِثَةَ قَالَ: «آمِينَ»، فَلَمَّا نَزَلَ قُلْنَا: يَا رَسُولَ اللَّهِ، لَقَدْ سَمِعْنَا مِنْكَ الْيَوْمَ شَيْئًا مَا كُنَّا نَسْمَعُهُ، قَالَ: «إِنَّ جِبْرِيلَ عَرَضَ لِى فَقَالَ: بُعْدًا لِمَنْ أَدْرَكَ رَمَضَانَ فَلَمْ يُغْفَرْ لَهُ، قُلْتُ: آمِينَ، فَلَمَّا رَقِيتُ الثَّانِيَةَ قَالَ: بُعْدًا لِمَنْ ذُكِرْتَ عِنْدَهُ فَلَمْ يُصَلِّ عَلَيْكَ، قُلْتُ: آمِينَ، فَلَمَّا رَقِيتُ الثَّالِثَةَ قَالَ: بُعْدًا لِمَنْ أَدْرَكَ أَبَوَاهُ الْكِبَرَ عِنْدَهُ أَوْ أَحَدَهُمَا فَلَمْ يُدْخِلَاهُ الْجَنَّةَ، قُلْتُ: آمِينَ»

---

**325** ಇದನ್ನು ಮುಸ್ಲಿಮ್ (1/306; ಹದೀಸ್ ನಂ. 408) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.
**326** ಇದನ್ನು ನಸಾಈ (3/50; ಹದೀಸ್ ನಂ. 1297) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.
**327** ಇದನ್ನು ತಿರ್ಮಿದಿ (5/551; ಹದೀಸ್ ನಂ. 3546) ಅಲೀ ಇಬ್ನ್ ಅಬೀ ತಾಲಿಬ್‌ರಿಂದ ವರದಿ ಮಾಡಿದ್ದಾರೆ.

**"ಕಅ್‌ಬ್ ಇಬ್ನ್ ಉಜ್ರಃ(ﷺ)ರಿಂದ: ಅಲ್ಲಾಹನ ಸಂದೇಶವಾಹಕ(ﷺ)ರವರು ಹೇಳಿದರು: 'ಮಿಂಬರ್‌ಗೆ ಸನ್ನಿಹಿತರಾಗಿರಿ'. ನಾವು ಸನ್ನಿಹಿತರಾದೆವು. ಅವರು (ಮಿಂಬರ್‌ನ) ಮೊದಲನೆ ಮೆಟ್ಟಿಲನ್ನು ಏರಿದಾಗ ಹೇಳಿದರು: ಆಮೀನ್. ನಂತರ ಎರಡನೆ ಮೆಟ್ಟಿಲನ್ನು ಏರಿದಾಗ ಹೇಳಿದರು: ಆಮೀನ್. ನಂತರ ಮೂರನೆ ಮೆಟ್ಟಿಲನ್ನು ಏರಿದಾಗ ಹೇಳಿದರು: ಆಮೀನ್. ನಂತರ ಅವರು ಇಳಿದಾಗ ನಾವು ಕೇಳಿದೆವು: ಓ ಅಲ್ಲಾಹನ ಸಂದೇಶ ವಾಹಕರೇ! ನಾವು ಇಂದು ತಮ್ಮಿಂದ ಈವರೆಗೂ ಆಲಿಸದಿರುವುದನ್ನು ಆಲಿಸಿದ್ದೇವೆ. ಅವರು ಹೇಳಿದರು: ಜಿಬ್ರೀಲ್ ನನ್ನ ಬಳಿ ಬಂದು ಹೇಳಿದರು: ಓರ್ವನು ರಮದಾನ್ ತಿಂಗಳನ್ನು ತಲುಪಿ ಕೂಡ ಅವನಿಗೆ ಕ್ಷಮಿಸಲ್ಪಡದಿದ್ದರೆ ಅವನಿಗೆ ನಾಶವಿರಲಿ. ನಾನು ಹೇಳಿದೆ: ಆಮೀನ್. ನಂತರ ನಾನು ಎರಡನೆ ಮೆಟ್ಟಿಲನ್ನು ಏರಿದಾಗ ಅವರು (ಜಿಬ್ರೀಲ್) ಹೇಳಿದರು: ಓರ್ವನ ಬಳಿ ತಮ್ಮ (ಹೆಸರ)ನ್ನು ಪ್ರಸ್ತಾಪಿಸಲ್ಪಟ್ಟಿದ್ದೂ ಕೂಡ ಅವನು ತಮ್ಮ ಮೇಲೆ ಸಲಾತ್ ಹೇಳದಿದ್ದರೆ ಅವನಿಗೆ ನಾಶವಿರಲಿ. ನಾನು ಹೇಳಿದೆ: ಆಮೀನ್. ನಂತರ ನಾನು ಮೂರನೆ ಮೆಟ್ಟಿಲನ್ನು ಏರಿದಾಗ ಅವರು (ಜಿಬ್ರೀಲ್) ಹೇಳಿದರು: ಓರ್ವನ ಮಾತಾ ಪಿತರು ಅಥವಾ ಅವರಲ್ಲೊಬ್ಬರು ಅವನ ಜೀವಿತಕಾಲದಲ್ಲೇ ವೃದ್ಧಾಪ್ಯವನ್ನು ತಲುಪಿದ್ದು ಕೂಡ ಅವರಿಬ್ಬರು ಅವನನ್ನು ಸ್ವರ್ಗಕ್ಕೆ ಪ್ರವೇಶಗೊಳಿಸದಿದ್ದರೆ ಅವನಿಗೆ ನಾಶವಿರಲಿ. ನಾನು ಹೇಳಿದೆ: ಆಮೀನ್."**[328]

ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳುವ ರೀತಿಗಳನ್ನು **'ತಶಹ್ಹುದ್‌ನ ನಂತರ ಪ್ರವಾದಿ(ﷺ)ರವರ ಮೇಲಿನ ಸಲಾತ್'** ಎಂಬ ಅಧ್ಯಾಯವನ್ನು ನೋಡಿರಿ.[329]

## 47. ದುಆಉಲ್ ಇಸ್ತಿಖಾರಃ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ إِنِّي أَسْتَخِيرُكَ بِعِلْمِكَ، وَأَسْتَقْدِرُكَ بِقُدْرَتِكَ، وَأَسْأَلُكَ مِنْ فَضْلِكَ الْعَظِيمِ، فَإِنَّكَ تَقْدِرُ وَلَا أَقْدِرُ، وَتَعْلَمُ وَلَا أَعْلَمُ، وَأَنْتَ عَلَّامُ الْغُيُوبِ، اللَّهُمَّ إِنْ كُنْتَ تَعْلَمُ أَنَّ هَذَا الْأَمْرَ خَيْرٌ لِي فِي دِينِي وَمَعَاشِي وَعَاقِبَةِ أَمْرِي، فَاقْدُرْهُ لِي وَيَسِّرْهُ لِي ثُمَّ بَارِكْ لِي فِيهِ، وَإِنْ كُنْتَ تَعْلَمُ أَنَّ هَذَا الْأَمْرَ شَرٌّ لِي فِي دِينِي وَمَعَاشِي وَعَاقِبَةِ أَمْرِي، فَاصْرِفْهُ عَنِّي وَاصْرِفْنِي عَنْهُ، وَاقْدُرْ لِي الْخَيْرَ حَيْثُ كَانَ، ثُمَّ أَرْضِنِي بِهِ»

**(ಅಲ್ಲಾಹುಮ್ಮ ಇನ್ನೀ ಅಸ್ತಖೀರುಕ ಬಿಇಲ್ಮಿಕ, ವಅಸ್ತಕ್ದಿರುಕ ಬಿಕುದ್ರತಿಕ, ವಅಸ್‌ಅಲುಕ**

---

**328** ಇದನ್ನು ಹಾಕಿಮ್ ತನ್ನ 'ಮುಸ್ತದ್ರಕ್'ನಲ್ಲಿ (4/170; ಹದೀಸ್ ನಂ. 7256) ವರದಿ ಮಾಡಿದ್ದಾರೆ.
**329** ಅಧ್ಯಾಯ 31 ಪುಟ 86

**ಮಿನ್ ಫದ್ಲಿಕಲ್ ಅದೀಮ್. ಫಇನ್ನಕ ತಕ್ದಿರು ವಲಾ ಅಕ್ದಿರು, ವತಅ್‌ಲಮು ವಲಾ ಅಅ್‌ಲಮು, ವಅನ್ತ ಅಲ್ಲಾಮುಲ್ ಗುಯೂಬ್. ಅಲ್ಲಾಹುಮ್ಮ ಇನ್ ಕುನ್ತ ತಅ್‌ಲಮು ಅನ್ನ ಹಾದಲ್ ಅಮ್ರ ಖೈರುನ್ ಲೀ ಫೀ ದೀನೀ ವಮಆಶೀ ವಆಕಿಬತಿ ಅಮ್ರೀ, ಫಕ್ದುರ್‌ಹು ಲೀ ವಯಸ್ಸಿರ್‌ಹು ಲೀ, ಸುಮ್ಮ ಬಾರಿಕ್ ಲೀ ಫೀಹ್. ವಇನ್ ಕುನ್ತ ತಅ್‌ಲಮು ಅನ್ನ ಹಾದಲ್ ಅಮ್ರ ಶರ್‍ರುನ್ ಲೀ ಫೀ ದೀನೀ, ವಮಆಶೀ ವಆಕಿಬತಿ ಅಮ್ರೀ, ಫಸ್ರಿಫ್‌ಹು ಅನ್ನೀ ವಸ್ರಿಫ್‌ನೀ ಅನ್‌ಹು, ವಕ್ದುರ್ ಲಿಲ್‌ಖೈರ ಹೈಸು ಕಾನ, ಸುಮ್ಮ ಅರ್ದಿನೀ ಬಿಹ್)**

"ಓ ಅಲ್ಲಾಹ್! ನಿನ್ನ ಪರಿಜ್ಞಾನದಿಂದ ನಾನು ಒಳಿತನ್ನು ಬೇಡುತ್ತಿರುವೆನು, ನಿನ್ನ ಸಾಮರ್ಥ್ಯದಿಂದ ನಾನು ಶಕ್ತಿಯನ್ನು ಬೇಡುತ್ತಿರುವೆನು ಮತ್ತು ನಿನ್ನ ಮಹೋನ್ನತವಾದ ಔದಾರ್ಯದಿಂದ ನಾನು ನಿನ್ನೊಂದಿಗೆ ಬೇಡುತ್ತಿರುವೆನು. ಖಂಡಿತವಾಗಿಯೂ ನೀನು ಸಮರ್ಥನಾಗಿರುವೆ ಮತ್ತು ನಾನು ಸಮರ್ಥನಲ್ಲ. ಖಂಡಿತವಾಗಿಯೂ ನೀನು ತಿಳಿದವನಾಗಿರುವೆ ಮತ್ತು ನಾನು ತಿಳಿದವನಲ್ಲ. ನೀನು ಅದೃಶ್ಯಗಳ ಪರಿಪೂರ್ಣ ಪರಿಜ್ಞಾನ ವಿರುವವನಾಗಿರುವೆ. ಓ ಅಲ್ಲಾಹ್! ಈ ಕಾರ್ಯವು ನನ್ನ ಧರ್ಮದ, ಜೀವನದ ಮತ್ತು ನನ್ನ ಅಂತ್ಯಕಾಲದ ದೃಷ್ಟಿಕೋನದಿಂದ ನನಗೆ ಒಳಿತಾಗಿದೆಯೆಂದು ನೀನು ತಿಳಿದಿದ್ದರೆ ಅದಕ್ಕಾಗಿ ನನಗೆ ಸಾಮರ್ಥ್ಯವನ್ನು ನೀಡು, ಅದನ್ನು ನನಗೆ ಸುಲಭೀಕರಿಸು ಮತ್ತು ನಂತರ ಅದರಲ್ಲಿ ನನಗೆ ಅನುಗ್ರಹವನ್ನು ನೀಡು. ಈ ಕಾರ್ಯವು ನನ್ನ ಧರ್ಮದ, ಜೀವನದ ಮತ್ತು ನನ್ನ ಅಂತ್ಯಕಾಲದ ದೃಷ್ಟಿಕೋನದಿಂದ ನನಗೆ ಕೆಡುಕಾಗಿದೆಯೆಂದು ನೀನು ತಿಳಿದಿದ್ದರೆ ಅದನ್ನು ನನ್ನಿಂದ ದೂರೀಕರಿಸು ಮತ್ತು ನನ್ನನ್ನು ಅದರಿಂದ ದೂರೀಕರಿಸು ಮತ್ತು ಒಳಿತು ಅದೆಲ್ಲೇ ಇರಲಿ ನನಗೆ ಅದನ್ನು ಪಡೆಯುವ ಸಾಮರ್ಥ್ಯವನ್ನು ನೀಡು ಮತ್ತು ಅದರಲ್ಲಿ ನನಗೆ ತೃಪ್ತಿಯನ್ನು ನೀಡು."(330)

## 48. ದುಃಖ, ವ್ಯಥೆ, ತೊಂದರೆಗಳು ಎದುರಾದಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«لَا إِلَهَ إِلَّا اللَّهُ الْعَظِيمُ الْحَلِيمُ، لَا إِلَهَ إِلَّا اللَّهُ رَبُّ الْعَرْشِ الْعَظِيمِ، لَا إِلَهَ إِلَّا اللَّهُ رَبُّ السَّمَاوَاتِ وَرَبُّ الْأَرْضِ، وَرَبُّ الْعَرْشِ الْكَرِيمِ»

**(ಲಾ ಇಲಾಹ ಇಲ್ಲಲ್ಲಾಹುಲ್ ಅದೀಮುಲ್ ಹಲೀಮ್, ಲಾ ಇಲಾಹ ಇಲ್ಲಲ್ಲಾಹು ರಬ್ಬುಲ್ ಅರ್ಶಿಲ್ ಅದೀಮ್, ಲಾ ಇಲಾಹ ಇಲ್ಲಲ್ಲಾಹು ರಬ್ಬು ಸ್ಸಮಾವಾತಿ ವರಬ್ಬುಲ್ ಅರ್ದಿ, ವರಬ್ಬುಲ್ ಅರ್ಶಿಲ್ ಕರೀಮ್)**

"ಅಲ್ಲಾಹನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ, ಅವನು ಮಹೋನ್ನತನೂ ಸಹನಶೀಲನೂ ಆಗಿದ್ದಾನೆ. ಅಲ್ಲಾಹನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ, ಅವನು ಅತ್ಯುನ್ನತವಾದ ಸಿಂಹಾಸನದ ಅಧಿಪತಿಯಾಗಿದ್ದಾನೆ. ಅಲ್ಲಾಹನಲ್ಲದೆ

**330** ಇದನ್ನು ಬುಖಾರಿ (1/391; ಹದೀಸ್ ನಂ. 1109) ಜಾಬಿರ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

ಆರಾಧಿಸಲರ್ಹರಾದವರು ಯಾರೂ ಇಲ್ಲ, ಅವನು ಆಕಾಶಗಳ ಅಧಿಪತಿಯೂ ಭೂಮಿಯ ಅಧಿಪತಿಯೂ ಆಗಿದ್ದಾನೆ, ಮತ್ತು ಮಾನ್ಯವಾದ ಸಿಂಹಾಸನದ ಅಧಿಪತಿಯೂ ಆಗಿದ್ದಾನೆ."(331)

«اللَّهُمَّ رَحْمَتَكَ أَرْجُو، فَلَا تَكِلْنِي إِلَى نَفْسِي طَرْفَةَ عَيْنٍ، وَأَصْلِحْ لِي شَأْنِي كُلَّهُ، لَا إِلَهَ إِلَّا أَنْتَ»

**(ಅಲ್ಲಾಹುಮ್ಮ ರಹ್ಮತಕ ಅರ್ಜೂ, ಫಲಾ ತಕಿಲ್‌ನೀ ಇಲಾ ನಫ್ಸೀ ತರ್ಫತ ಐನ್. ವಅಸ್ಲಿಹ್‌ಲೀ ಶಅ್‌ನೀ ಕುಲ್ಲಹೂ ಲಾ ಇಲಾಹ ಇಲ್ಲಾ ಅನ್ತ್)**

"ಓ ಅಲ್ಲಾಹ್! ನಿನ್ನ ಕರುಣೆಯನ್ನು ನಾನು ಆಶಿಸುತ್ತಿದ್ದೇನೆ. ಆದ್ದರಿಂದ ಕಣ್ಣೆವೆಯಿಕ್ಕುವಷ್ಟು ಸಮಯ ಕೂಡ ನನ್ನನ್ನು ನನ್ನ ದೇಹದ ಹಂಗಿನಲ್ಲಿ ಬಿಡಬೇಡ. ನನ್ನ ಎಲ್ಲಾ ಕಾರ್ಯಗಳನ್ನೂ ನನಗೆ ಸುಧಾರಿಸಿ ಕೊಡು. ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ."(332)

«اللَّهُ اللَّهُ رَبِّى لَا أُشْرِكُ بِهِ شَيْئًا»

**(ಅಲ್ಲಾಹು ಅಲ್ಲಾಹು ರಬ್ಬೀ ಲಾ ಉಶ್ರಿಕು ಬಿಹೀ ಶೈಅಃ)**

"ಅಲ್ಲಾಹ್ ಅಲ್ಲಾಹ್ ನನ್ನ ಪ್ರಭುವಾಗಿದ್ದಾನೆ. ಅವನೊಂದಿಗೆ ನಾನು ಏನನ್ನೂ ಸಹಭಾಗಿಯನ್ನಾಗಿಸುವುದಿಲ್ಲ."(333)

«اللَّهُمَّ إِنِّي عَبْدُكَ وَابْنُ عَبْدِكَ وَابْنُ أَمَتِكَ نَاصِيَتِي بِيَدِكَ مَاضٍ فِيَّ حُكْمُكَ عَدْلٌ فِيَّ قَضَاؤُكَ أَسْأَلُكَ بِكُلِّ اسْمٍ هُوَ لَكَ سَمَّيْتَ بِهِ نَفْسَكَ أَوْ عَلَّمْتَهُ أَحَدًا مِنْ خَلْقِكَ أَوْ أَنْزَلْتَهُ فِي كِتَابِكَ أَوْ اسْتَأْثَرْتَ بِهِ فِي عِلْمِ الْغَيْبِ عِنْدَكَ أَنْ تَجْعَلَ الْقُرْآنَ رَبِيعَ قَلْبِي وَنُورَ صَدْرِي وَجِلَاءَ حُزْنِي وَذَهَابَ هَمِّي»

**(ಅಲ್ಲಾಹುಮ್ಮ ಇನ್ನೀ ಅಬ್ದುಕ, ವಬ್ನು ಅಬ್ದಿಕ, ವಬ್ನು ಅಮತಿಕ, ನಾಸಿಯತೀ ಬಿಯದಿಕ, ಮಾದಿನ್ ಫಿಯ್ಯ ಹುಕ್ಮುಕ, ಅದ್ಲುನ್ ಫಿಯ್ಯ ಕದಾಉಕ, ಅಸ್‌ಅಲುಕ ಬಿಕುಲ್ಲಿ ಇಸ್ಮಿನ್**

331 ಇದನ್ನು ಬುಖಾರಿ (5/2336; ಹದೀಸ್ ನಂ. 5986), ಮುಸ್ಲಿಮ್ (4/2092; ಹದೀಸ್ ನಂ. 2730) ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

332 ಇದನ್ನು ಅಬೂದಾವೂದ್ (2/745; ಹದೀಸ್ ನಂ. 5090) ಅಬೂ ಬಕ್ರಃರಿಂದ ವರದಿ ಮಾಡಿದ್ದಾರೆ.

333 ಇದನ್ನು ಅಬೂದಾವೂದ್ (1/477; ಹದೀಸ್ ನಂ. 1525), ಇಬ್ನ್ ಮಾಜ (2/1277; ಹದೀಸ್ ನಂ. 3882) ಅಸ್ಮಾಅ್ ಬಿನ್ತ್ ಉಮೈಸ್‌ರಿಂದ ವರದಿ ಮಾಡಿದ್ದಾರೆ.

**ಹುವ ಲಕ, ಸಮ್ಮಯ್ತ ಬಿಹೀ ನಫ್ಸಕ, ಅವ್ ಅಲ್ಲಮ್ತಹೂ ಅಹದನ್ ಮಿನ್ ಖಲ್ಕಿಕ, ಅವ್ ಅನ್ಝಲ್ತಹೂ ಫೀ ಕಿತಾಬಿಕ, ಅವಿಸ್ತಅ್‌ಸರ್ತ ಬಿಹೀ ಫೀ ಇಲ್ಮಿಲ್ ಗೈಬಿ ಇನ್ದಕ, ಅನ್ ತಜ್‌ಅಲಲ್ ಕುರ್‌ಆನ ರಬೀಅ ಕಲ್ಬೀ, ವನೂರ ಸದ್ರೀ, ವಜಿಲಾಅ ಹುಝ್‌ನೀ, ವದಹಾಬ ಹಮ್ಮೀ)**

**"**ಓ ಅಲ್ಲಾಹ್! ನಾನು ನಿನ್ನ ದಾಸನಾಗಿದ್ದೇನೆ, ನಿನ್ನ ದಾಸನ ಮಗನಾಗಿದ್ದೇನೆ, ನಿನ್ನ ದಾಸಿಯ ಮಗನಾಗಿದ್ದೇನೆ, ನನ್ನ ಮುಂಗುರುಳು ನಿನ್ನ ಕೈಯಲ್ಲಿದೆ, ನನ್ನ ಮೇಲೆ ನಿನ್ನ ತೀರ್ಪು ಜಾರಿಯಾಗುತ್ತಿದೆ, ನನ್ನ ಮೇಲೆ ನಿನ್ನ ವಿಧಿಯು ನ್ಯಾಯಪೂರ್ವಕವಾಗಿದೆ, ನೀನು ನಿನ್ನನ್ನು ಸ್ವತಃ ಹೆಸರಿಸಿದ, ಅಥವಾ ನಿನ್ನ ಸೃಷ್ಟಿಗಳಲ್ಲಿ ಯಾರೊಬ್ಬನಿಗಾದರೂ ಕಲಿಸಿದ, ಅಥವಾ ನಿನ್ನ ಗ್ರಂಥದಲ್ಲಿ ನೀನು ಅವತೀರ್ಣಗೊಳಿಸಿದ, ಅಥವಾ ನಿನ್ನ ಬಳಿಯಲ್ಲಿರುವ ಅದೃಶ್ಯಜ್ಞಾನದಲ್ಲಿ ನೀನು ಬಾಕಿಯುಳಿಸಿದ, ನಿನಗಿರುವ ಎಲ್ಲಾ ಹೆಸರುಗಳಿಂದಲೂ ಕುರ್‌ಆನನ್ನು ನನ್ನ ಹೃದಯದ ವಸಂತವಾಗಿಸಬೇಕೆಂದು, ನನ್ನ ಎದೆಯ ಬೆಳಕಾಗಿಸಬೇಕೆಂದು, ನನ್ನ ದುಃಖದ ನಿವಾರಕವಾಗಿಸಬೇಕೆಂದು ಮತ್ತು ನನ್ನ ವ್ಯಥೆಯ ನಿವಾರಕವಾಗಿಸಬೇಕೆಂದು ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ.**"**[334]

«اللَّهُمَّ إِنِّي أَعُوذُ بِكَ مِنَ الْهَمِّ وَالْحَزَنِ وَالْعَجْزِ وَالْكَسَلِ وَالْبُخْلِ وَالْجُبْنِ وَضَلَعِ الدَّيْنِ وَغَلَبَةِ الرِّجَالِ»

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಹಮ್ಮಿ ವಲ್ ಹಝುನಿ, ವಲ್ ಅಜ್‌ಝಿ ವಲ್ ಕಸಲಿ, ವಲ್ ಬುಖ್ಲಿ ವಲ್ ಜುಬ್ನಿ, ವದಲಇ ದ್ದೈನಿ ವಗಲಬತಿ ರ್‍ರಿಜಾಲ್)**

**"**ಓ ಅಲ್ಲಾಹ್! ನಾನು ನಿನ್ನೊಂದಿಗೆ ದುಃಖದಿಂದ ಮತ್ತು ವ್ಯಥೆಯಿಂದ, ಅಸಹಾಯಕತೆಯಿಂದ ಮತ್ತು ಸೋಮಾರಿತನದಿಂದ, ಜಿಪುಣತೆಯಿಂದ ಮತ್ತು ಜಿಗುಟುತನದಿಂದ, ಋಣಬಾಧೆಯಿಂದ ಮತ್ತು ಜನರ ಆಕ್ರಮಣದಿಂದ ಅಭಯ ಯಾಚಿಸುತ್ತಿದ್ದೇನೆ.**"**[335]

«لَا إِلَهَ إِلَّا أَنْتَ سُبْحَانَكَ إِنِّي كُنْتُ مِنَ الظَّالِمِينَ»

**(ಲಾ ಇಲಾಹ ಇಲ್ಲಾ ಅನ್ತ ಸುಬ್‌ಹಾನಕ ಇನ್ನೀ ಕುನ್ತು ಮಿನ ದ್ದಾಲಿಮೀನ್)**

**"**ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ. ನಿನ್ನ ಪರಿಪಾವನತೆಯನ್ನು ನಾನು ಕೊಂಡಾಡುತ್ತೇನೆ. ಖಂಡಿತವಾಗಿಯೂ ನಾನು ಅಕ್ರಮಿಗಳಲ್ಲಿ ಸೇರಿದವ ನಾಗಿದ್ದೆ.**"**[336]

---

**334** ಇದನ್ನು ಅಹ್ಮದ್ (1/452; ಹದೀಸ್ ನಂ. 4318) ಅಬ್ದುಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

**335** ಇದನ್ನು ಬುಖಾರಿ (3/1059; ಹದೀಸ್ ನಂ. 2736) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**336** ಇದನ್ನು ತಿರ್ಮಿದಿ (5/529; ಹದೀಸ್ ನಂ. 3505) ಸಅ್‌ದ್ ಇಬ್ನ್ ಅಬೀ ವಕ್ಕಾಸ್‌ರಿಂದ ವರದಿ ಮಾಡಿದ್ದಾರೆ.

## 49. ಸಾಲದಿಂದ ಮುಕ್ತನಾಗಲು

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ اكْفِنِي بِحَلَالِكَ عَنْ حَرَامِكَ وَأَغْنِنِي بِفَضْلِكَ عَمَّنْ سِوَاكَ»

**(ಅಲ್ಲಾಹುಮ್ಮಕ್ಫಿನೀ ಬಿಹಲಾಲಿಕ ಅನ್ ಹರಾಮಿಕ ವಅಗ್ನಿನೀ ಬಿಫದ್ಲಿಕ ಅಮ್ಮನ್ ಸಿವಾಕ್)**

**"**ಓ ಅಲ್ಲಾಹ್! ನಿನ್ನ ಹರಾಮ್‌ಗೆ ಬದಲು ನಿನ್ನ ಹಲಾಲ್‌ನಿಂದ ನನ್ನನ್ನು ಪರ್ಯಾಪ್ತಗೊಳಿಸು ಮತ್ತು ನಿನ್ನ ಹೊರತಾಗಿರುವವರ ಬದಲು ನಿನ್ನ ಔದಾರ್ಯದಿಂದ ನನ್ನನ್ನು ಶ್ರೀಮಂತಗೊಳಿಸು.**"**[337]

## 50. ಭಯವುಂಟಾದರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«أَعُوذُ بِكَلِمَاتِ اللَّهِ التَّامَّةِ مِنْ غَضَبِهِ، وَشَرِّ عِبَادِهِ، وَمِنْ هَمَزَاتِ الشَّيَاطِينِ، وَأَنْ يَحْضُرُونِ»

**(ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮತಿ ಮಿನ್ ಗದಬಿಹೀ, ವಶರ್‍ರಿ ಇಬಾದಿಹೀ, ವಮಿನ್ ಹಮಝಾತಿ ಶ್ಶಯಾತೀನಿ ವಅನ್ ಯಹ್ದುರೂನ್)**

**"**ಅಲ್ಲಾಹನ ಪರಿಪೂರ್ಣವಾದ ವಚನಗಳೊಂದಿಗೆ ಅವನ ಕ್ರೋಧದಿಂದ, ಅವನ ದಾಸರ ಕೆಡುಕುಗಳಿಂದ ಮತ್ತು ಶೈತಾನನ ದುರ್ಬೋಧನೆಗಳಿಂದ ಮತ್ತು ಅವರು ನನ್ನ ಬಳಿ ಹಾಜರಾಗುವುದರಿಂದ ನಾನು ಅಭಯ ಯಾಚಿಸುತ್ತಿದ್ದೇನೆ**"**[338]

## 51. ಶತ್ರುಗಳನ್ನು ಭಯಪಟ್ಟರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ إِنَّا نَجْعَلُكَ فِي نُحُورِهِمْ وَنَعُوذُ بِكَ مِنْ شُرُورِهِمْ»

**(ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಮ್, ವನಊದುಬಿಕ ಮಿನ್**

---

**337** ಇದನ್ನು ತಿರ್ಮಿದಿ (5/560; ಹದೀಸ್ ನಂ. 3563) ಅಲೀ ಇಬ್ನ್ ಅಬೀ ತಾಲಿಬ್‌ರಿಂದ ವರದಿ ಮಾಡಿದ್ದಾರೆ.

**338** ಇದನ್ನು ಅಬೂದಾವೂದ್ (2/405; ಹದೀಸ್ ನಂ. 3893), ತಿರ್ಮಿದಿ (5/541; ಹದೀಸ್ ನಂ. 3528) ಅಬ್ದುಲ್ಲಾಹ್ ಇಬ್ನ್ ಅಮ್ರ್‌ರಿಂದ ವರದಿ ಮಾಡಿದ್ದಾರೆ.

ಶುರೂರಿಹಿಮ್)

"ಓ ಅಲ್ಲಾಹ್! ನಾವು ನಿನ್ನನ್ನು ಅವರ ಸಮಕ್ಷಮದಲ್ಲಿ ಇಡುತ್ತಿದ್ದೇವೆ ಮತ್ತು ಅವರ ಕೆಡುಕುಗಳಿಂದ ನಾವು ನಿನ್ನೊಂದಿಗೆ ಅಭಯ ಬೇಡುತ್ತಿದ್ದೇವೆ"[339]

## 52. ಶೈತಾನನನ್ನು ಭಯಪಟ್ಟರೆ ಅಥವಾ ಪೈಶಾಚಿಕ ದುರ್ಬೋಧನೆಗಳುಂಟಾದರೆ

ಅಲ್ಲಾಹು ಹೇಳಿದ್ದಾನೆ:

﴿ وَإِمَّا يَنزَغَنَّكَ مِنَ ٱلشَّيۡطَٰنِ نَزۡغٞ فَٱسۡتَعِذۡ بِٱللَّهِۚ إِنَّهُۥ سَمِيعٌ عَلِيمٌ ٢٠٠ ﴾

**"ನಿನಗೆ ಶೈತಾನನಿಂದ ಏನಾದರೂ ದುರ್ಬೋಧನೆಯುಂಟಾದರೆ ಅಲ್ಲಾಹನೊಂದಿಗೆ ಅಭಯ ಯಾಚಿಸು. ಅವನು ಆಲಿಸುವವನೂ, ಅರಿಯುವವನೂ ಆಗಿದ್ದಾನೆ."**[340]

﴿ وَإِذَا قَرَأۡتَ ٱلۡقُرۡءَانَ جَعَلۡنَا بَيۡنَكَ وَبَيۡنَ ٱلَّذِينَ لَا يُؤۡمِنُونَ بِٱلۡأٓخِرَةِ حِجَابٗا مَّسۡتُورٗا ٤٥ ﴾

**"ನೀನು ಕುರ್‌ಆನನ್ನು ಓದಿದರೆ ನಿನ್ನ ಮತ್ತು ವಿಶ್ವಾಸವಿಡದವರ ಮಧ್ಯೆ ನಾವು ಮರೆಮಾಚಲ್ಪಟ್ಟ ಅಡ್ಡತಡೆಯನ್ನು ಇಡುವೆವು."**[341]

﴿ وَقُل رَّبِّ أَعُوذُ بِكَ مِنۡ هَمَزَٰتِ ٱلشَّيَٰطِينِ ٩٧ وَأَعُوذُ بِكَ رَبِّ أَن يَحۡضُرُونِ ٩٨ ﴾

**"ಮತ್ತು ಹೇಳು: ನನ್ನ ಪ್ರಭೂ! ನಾನು ಶೈತಾನ್‌ಗಳ ದುರ್ಬೋಧನೆಗಳಿಂದ ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ. ಮತ್ತು ಅವರು ನನ್ನ ಬಳಿ ಹಾಜರಾಗುವುದಿಂದಲೂ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ."**[342]

عَنْ أَبِي الْعَلَاءِ رَضِيَ اللَّهُ عَنْهُ قَالَ: أَنَّ عُثْمَانَ بْنَ أَبِي الْعَاصِ أَتَى النَّبِيَّ صَلَّى اللَّهُ عَلَيْهِ وَسَلَّمَ فَقَالَ: يَا رَسُولَ اللَّهِ، إِنَّ الشَّيْطَانَ قَدْ حَالَ بَيْنِي وَبَيْنَ صَلَاتِي وَقِرَاءَتِي، يُلَبِّسُهَا عَلَيَّ، فَقَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «ذَاكَ شَيْطَانٌ يُقَالُ لَهُ خِنْزَبٌ، فَإِذَا أَحْسَسْتَهُ فَتَعَوَّذْ بِاللَّهِ مِنْهُ، وَاتْفُلْ عَلَى

**339** ಇದನ್ನು ಅಬೂದಾವೂದ್ (1/480; ಹದೀಸ್ ನಂ. 1537) ಅಬೂ ಮೂಸಾರಿಂದ ವರದಿ ಮಾಡಿದ್ದಾರೆ.

**340** ಕುರ್‌ಆನ್ 7/200

**341** ಕುರ್‌ಆನ್ 17/45

**342** ಕುರ್‌ಆನ್ 23/97–98

يَسَارِكَ ثَلاثًا» قَالَ: فَفَعَلْتُ ذَلِكَ فَأَذْهَبَهُ اللَّهُ عَنِّي

**“ಅಬುಲ್ ಅಲಾಅ್(ﷺ)ರಿಂದ: ಉಸ್ಮಾನ್ ಇಬ್ನ್ ಅಬಿಲ್ ಆಸ್(ﷺ)ರವರು ಪ್ರವಾದಿ(ﷺ)ರವರ ಬಳಿ ಬಂದು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ! ಶೈತಾನನು, ನನ್ನ ಮತ್ತು ನನ್ನ ನಮಾಝ್‌ನ ಹಾಗೂ ನನ್ನ ಪಾರಾಯಣದ ಮಧ್ಯೆ ಅಡ್ಡಬರುತ್ತಾ ನನ್ನನ್ನು ಗಲಿಬಿಲಿಗೊಳಿಸುತ್ತಿದ್ದಾನೆ. ಆಗ ಅಲ್ಲಾಹನ ಸಂದೇಶವಾಹಕ(ﷺ)ರವರು ಹೇಳಿದರು: ಅವನು ಶೈತಾನನಾಗಿದ್ದಾನೆ. ಅವನನ್ನು ಖಿನ್ಝಬ್ ಎಂದು ಕರೆಯಲಾಗುತ್ತದೆ. ನೀನು ಅವನಿಂದ ಏನಾದರೂ ಭ್ರಮಿಸಿದರೆ ಅಲ್ಲಾಹನೊಂದಿಗೆ ಅಭಯ ಯಾಚಿಸು ಮತ್ತು ನಿನ್ನ ಎಡಬದಿಗೆ ಮೂರು ಬಾರಿ ಉಗಿ. ಅವರು (ಉಸ್ಮಾನ್) ಹೇಳಿದರು: ನಾನು ಹಾಗೆ ಮಾಡಿದೆ, ಆಗ ಅಲ್ಲಾಹು ಅವನನ್ನು ನನ್ನಿಂದ ದೂರಗೊಳಿಸಿದನು.”[343]**

ಪ್ರವಾದಿ(ﷺ)ರವರು ಹೇಳಿದರು:

«إِنَّ الشَّيْطَانَ إِذَا نُودِيَ بِالصَّلَاةِ وَلَّى وَلَهُ حُصَاصٌ»

**“ನಮಾಝ್‌ಗಾಗಿ ಅದಾನ್ ನೀಡಲಾದರೆ ಶೈತಾನನು ಹಿಂದಿರುಗಿ ಓಡುವನು, ಹುಸಾಸ್[344]ನೊಂದಿಗೆ.”[345]**

ಪ್ರವಾದಿ(ﷺ)ರವರು ಹೇಳಿದರು:

«يَأْتِي الشَّيْطَانُ أَحَدَكُمْ فَيَقُولُ: مَنْ خَلَقَ كَذَا؟ مَنْ خَلَقَ كَذَا؟ حَتَّى يَقُولَ: مَنْ خَلَقَ رَبَّكَ؟ فَإِذَا بَلَغَهُ فَلْيَسْتَعِذْ بِاللَّهِ وَلْيَنْتَهِ»

**“ಶೈತಾನನು ನಿಮ್ಮಲ್ಲೋರ್ವನ ಬಳಿ ಬಂದು ಕೇಳುವನು: ಇದನ್ನು ಯಾರು ಸೃಷ್ಟಿಸಿದನು? ಇದನ್ನು ಯಾರು ಸೃಷ್ಟಿಸಿದನು? ಹೀಗೆ ನಿನ್ನ ಪ್ರಭುವನ್ನು ಯಾರು ಸೃಷ್ಟಿಸಿದನು? ಎಂಬವರೆಗೆ ಅವನು ಕೇಳುತ್ತಿರುವನು. ಅವನು ಅಲ್ಲಿಗೆ ತಲುಪಿದರೆ ಅವನು ಅಲ್ಲಾಹನೊಂದಿಗೆ ಅಭಯ ಯಾಚಿಸಲಿ ಮತ್ತು (ಮಾತನಾಡುವುದನ್ನು) ನಿಲ್ಲಿಸಲಿ.”[346]**

ಪ್ರವಾದಿ(ﷺ)ರವರು ಹೇಳಿದರು:

«لَا يَزَالُ النَّاسُ يَتَسَاءَلُونَ حَتَّى يُقَالَ: هَذَا، خَلَقَ اللَّهُ الْخَلْقَ، فَمَنْ خَلَقَ اللَّهُ؟ فَمَنْ وَجَدَ مِنْ ذَلِكَ شَيْئًا فَلْيَقُلْ: آمَنْتُ بِاللَّهِ وَرُسُلِهِ»

---

**343** ಇದನ್ನು ಮುಸ್ಲಿಮ್ (4/1728; ಹದೀಸ್ ನಂ. 2203) ವರದಿ ಮಾಡಿದ್ದಾರೆ.

**344** ಹುಸಾಸ್ ಎಂದರೆ ಗುದದ್ವಾರದಿಂದ ಹೊರಡುವ ಗಾಳಿಯೆಂದೂ, ಅತ್ಯಂತ ವೇಗವಾಗಿ ಓಡುವುದು ಎಂದೂ ವ್ಯಾಖ್ಯಾನಿಸಲಾಗಿದೆ. ಮೊದಲನೆಯ ವ್ಯಾಖ್ಯಾನವು ಹೆಚ್ಚು ಸೂಕ್ತವಾಗಿದೆ.

**345** ಇದನ್ನು ಮುಸ್ಲಿಮ್ (1/291; ಹದೀಸ್ ನಂ. 389) ವರದಿ ಮಾಡಿದ್ದಾರೆ.

**346** ಇದನ್ನು ಬುಖಾರಿ (3/1194; ಹದೀಸ್ ನಂ. 3102), ಮುಸ್ಲಿಮ್ (1/119; ಹದೀಸ್ ನಂ. 134) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

“ಜನರು ಪರಸ್ಪರ ಹೀಗೆ ಕೇಳುತ್ತಿರಲಾರರು, ಇದು, ಅಲ್ಲಾಹು ಸೃಷ್ಟಿಗಳನ್ನು ಸೃಷ್ಟಿಸಿದ್ದಾನೆ. ಹಾಗಾದರೆ ಅಲ್ಲಾಹನನ್ನು ಸೃಷ್ಟಿಸಿದವನು ಯಾರು? ಎಂದು ಕೇಳುವವರೆಗೆ. ಯಾರಾದರೂ ಹೀಗೇನಾದರೂ ಕಂಡರೆ ನಾನು ಅಲ್ಲಾಹನಲ್ಲೂ ಅವನ ಸಂದೇಶವಾಹಕರಲ್ಲೂ ವಿಶ್ವಾಸವಿಟ್ಟಿದ್ದೇನೆ ಎಂದು ಹೇಳಲಿ.”(347)

عَنْ أَبِي الدَّرْدَاءِ رَضِيَ اللَّهُ عَنْهُ قَالَ: قَامَ رَسُولُ اللَّهِ صَلَّى اللَّهُ عَلَيْهِ وَسَلَّمَ فَسَمِعْنَاهُ يَقُولُ: «أَعُوذُ بِاللَّهِ مِنْكَ» ثُمَّ قَالَ: «أَلْعَنُكَ بِلَعْنَةِ اللَّهِ» (ثَلَاثًا)، وَبَسَطَ يَدَهُ كَأَنَّهُ يَتَنَاوَلُ شَيْئًا، فَلَمَّا فَرَغَ مِنَ الصَّلَاةِ قُلْنَا: يَا رَسُولَ اللَّهِ، قَدْ سَمِعْنَاكَ تَقُولُ فِي الصَّلَاةِ شَيْئًا لَمْ نَسْمَعْكَ تَقُولُهُ قَبْلَ ذَلِكَ، وَرَأَيْنَاكَ بَسَطْتَ يَدَكَ، قَالَ: «إِنَّ عَدُوَّ اللَّهِ إِبْلِيسَ جَاءَ بِشِهَابٍ مِنْ نَارٍ لِيَجْعَلَهُ فِي وَجْهِي، فَقُلْتُ: أَعُوذُ بِاللَّهِ مِنْكَ ثَلَاثَ مَرَّاتٍ، ثُمَّ قُلْتُ: أَلْعَنُكَ بِلَعْنَةِ اللَّهِ التَّامَّةِ، فَلَمْ يَسْتَأْخِرْ، ثَلَاثَ مَرَّاتٍ، ثُمَّ أَرَدْتُ أَخْذَهُ، وَاللَّهِ لَوْ لَا دَعْوَةُ أَخِينَا سُلَيْمَانَ عَلَيْهِ السَّلَامُ لَأَصْبَحَ مُوثَقًا يَلْعَبُ بِهِ وِلْدَانُ أَهْلِ الْمَدِينَةِ»

“ಅಬು ದ್ದರ್ದಾಅ್‌(رضي الله عنه)ರಿಂದ: ಪ್ರವಾದಿ(ﷺ)ರವರು ನಮಾಝ್‌ಗಾಗಿ ನಿಂತರು. ನಂತರ ಅಊದು ಬಿಲ್ಲಾಹಿ ಮಿನ್ಕ (ನಾನು ಅಲ್ಲಾಹನೊಂದಿಗೆ ನಿನ್ನಿಂದ ಅಭಯ ಯಾಚಿಸುತ್ತಿದ್ದೇನೆ) ಎಂದು ಹೇಳುವುದನ್ನು ನಾವು ಆಲಿಸಿದೆವು. ನಂತರ ಅವರು ಮೂರು ಬಾರಿ ಹೇಳಿದರು: ಅಲ್‌ಅನುಕ ಬಿಲಅ್‌ನತಿಲ್ಲಾಹ್ (ಅಲ್ಲಾಹನ ಶಾಪದೊಂದಿಗೆ ನಾನು ನಿನ್ನನ್ನು ಶಪಿಸುತ್ತಿದ್ದೇನೆ). ನಂತರ ಯಾವುದೋ ವಸ್ತುವನ್ನು ಹಿಡಿಯುವಂತೆ ತಮ್ಮ ಕೈಯನ್ನು ಚಾಚಿದರು. ಹಾಗೆ ಅವರು ನಮಾಝ್‌ನಿಂದ ವಿಮುಕ್ತರಾದಾಗ ನಾವು ಕೇಳಿದೆವು: ಓ ಅಲ್ಲಾಹನ ಸಂದೇಶವಾಹಕರೇ! ನೀವು ನಮಾಝ್‌ನಲ್ಲಿ ಏನೋ ಹೇಳುತ್ತಿದ್ದಂತೆ ನಾವು ಆಲಿಸಿದೆವು, ಇದಕ್ಕೆ ಮುಂಚೆ ನೀವದನ್ನು ಹೇಳುತ್ತಿರುವುದಾಗಿ ನಾವು ಆಲಿಸಿಯೇ ಇಲ್ಲ. ಮತ್ತು ನೀವು ನಿಮ್ಮ ಕೈಯನ್ನು ಚಾಚಿದಿರಿ. ಅವರು ಹೇಳಿದರು: ಅಲ್ಲಾಹನ ಶತ್ರುವಾದ ಇಬ್ಲೀಸನು ಬೆಂಕಿಯ ಉಂಡೆಯೊಂದಿಗೆ ಅದನ್ನು ನನ್ನ ಮುಖಕ್ಕೆ ಹಾಕುವುದಕ್ಕಾಗಿ ಬಂದನು. ಆಗ ನಾನು ಮೂರು ಬಾರಿ ಅಊದು ಬಿಲ್ಲಾಹಿ ಮಿನ್ಕ ಎಂದು ಹೇಳಿದೆ. ನಂತರ ಅಲ್‌ಅನುಕ ಬಿಲಅ್‌ನತಿಲ್ಲಾಹಿ ತ್ತಾಮ್ಮಃ ಎಂದು ಮೂರು ಬಾರಿ ಹೇಳಿದೆ. ನಂತರ ಅವನನ್ನು ಹಿಡಿಯಲು ಬಯಸಿದೆ. ಅಲ್ಲಾಹನಾಣೆ! ನಮ್ಮ ಸಹೋದರನಾದ ಸುಲೈಮಾನ್(عليه السلام)ರವರ ಪ್ರಾರ್ಥನೆಯು ಇಲ್ಲದಿರುತ್ತಿದ್ದರೆ ಮದೀನಾ ನಿವಾಸಿಗಳ ಮಕ್ಕಳು ಆಟವಾಡುವುದಕ್ಕಾಗಿ ಅವನು (ಇಬ್ಲೀಸನು) ಕಟ್ಟಲ್ಪಟ್ಟ ರೀತಿಯಲ್ಲಿ ಬೆಳಗನ್ನು ಕಾಣುತ್ತಿದ್ದನು.”(348)

---

**347** ಇದನ್ನು ಮುಸ್ಲಿಮ್ (1/119; ಹದೀಸ್ ನಂ. 134) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.
**348** ಇದನ್ನು ಮುಸ್ಲಿಮ್ (1/385; ಹದೀಸ್ ನಂ. 542) ಅಬು ದ್ದರ್ದಾಅ್‌ರಿಂದ ವರದಿ ಮಾಡಿದ್ದಾರೆ.

## 53. ಆಪತ್ತು ಸಂಭವಿಸಿದರೆ

ಅಲ್ಲಾಹು ಹೇಳಿದ್ದಾನೆ:

﴿ وَلَنَبۡلُوَنَّكُم بِشَيۡءٖ مِّنَ ٱلۡخَوۡفِ وَٱلۡجُوعِ وَنَقۡصٖ مِّنَ ٱلۡأَمۡوَٰلِ وَٱلۡأَنفُسِ وَٱلثَّمَرَٰتِۗ وَبَشِّرِ ٱلصَّٰبِرِينَ ١٥٥ ٱلَّذِينَ إِذَآ أَصَٰبَتۡهُم مُّصِيبَةٞ قَالُوٓاْ إِنَّا لِلَّهِ وَإِنَّآ إِلَيۡهِ رَٰجِعُونَ ١٥٦ أُوْلَٰٓئِكَ عَلَيۡهِمۡ صَلَوَٰتٞ مِّن رَّبِّهِمۡ وَرَحۡمَةٞۖ وَأُوْلَٰٓئِكَ هُمُ ٱلۡمُهۡتَدُونَ ١٥٧ ﴾

**"ಭಯ, ಹಸಿವು ಮತ್ತು ಸಂಪತ್ತು, ಶರೀರ ಹಾಗೂ ಫಲಗಳ ಕೊರತೆ ಮುಂತಾದ ಪ್ರತಿಯೊಂದು ವಸ್ತುವಿನಿಂದಲೂ ನಾವು ನಿಮ್ಮನ್ನು ಪರೀಕ್ಷಿಸುವೆವು. ತಮಗೆ ದುರಂತಗಳು ಎರಗಿದಾಗ ಇನ್ನಾ ಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್ (ನಾವು ಅಲ್ಲಾಹನದ್ದಾಗಿದ್ದೇವೆ ಮತ್ತು ನಾವು ಅವನೆಡೆಗೆ ಮರಳುವವರಾಗಿದ್ದೇವೆ) ಎಂದು ಹೇಳುವ ಸಹನಾಶೀಲರಿಗೆ ಶುಭವಾರ್ತೆಯನ್ನು ತಿಳಿಸು. ಅವರ ಮೇಲೆ ಅಲ್ಲಾಹನ ಸಲಾತ್ ಮತ್ತು ರಹ್ಮತ್‌ಗಳಿವೆ. ಮತ್ತು ಅವರಾಗಿದ್ದಾರೆ ಮಾರ್ಗದರ್ಶನವನ್ನು ಪಡೆದವರು."[349]**

ಪ್ರವಾದಿ(ﷺ)ರವರು ಹೇಳಿದರು:

«عَجَبًا لِأَمْرِ الْمُؤْمِنِ، إِنَّ أَمْرَهُ كُلَّهُ لَهُ خَيْرٌ، وَلَيْسَ ذَلِكَ لِأَحَدٍ إِلَّا لِلْمُؤْمِنِ، إِنْ أَصَابَتْهُ سَرَّاءُ شَكَرَ، فَكَانَ خَيْرًا لَهُ، وَإِنْ أَصَابَتْهُ ضَرَّاءُ صَبَرَ، فَكَانَ خَيْرًا لَهُ»

**"ವಿಶ್ವಾಸಿಯ ಕಾರ್ಯವು ಅದ್ಭುತವಾಗಿದೆ. ಅವನ ಕಾರ್ಯಗಳೆಲ್ಲವೂ ಅವನಿಗೆ ಒಳಿತಾಗಿವೆ. ಅದು ವಿಶ್ವಾಸಿಯ ಹೊರತು ಇತರ ಯಾರಿಗೂ ಇಲ್ಲ. ಅವನಿಗೆ ಸಂತೋಷ ವುಂಟಾದರೆ ಅವನು ಕೃತಜ್ಞತೆಯನ್ನು ಸಲ್ಲಿಸುತ್ತಾನೆ. ಅದು ಅವನಿಗೆ ಒಳಿತಾಗಿದೆ. ಅವನಿಗೆ ದುಃಖವುಂಟಾದರೆ ಅವನು ಸಹನೆವಹಿಸುತ್ತಾನೆ. ಅದು ಅವನಿಗೆ ಒಳಿತಾಗಿದೆ."[350]**

ಪ್ರವಾದಿ(ﷺ)ರವರು ಹೇಳಿದರು:

«الْمُؤْمِنُ الْقَوِيُّ خَيْرٌ وَأَحَبُّ إِلَى اللَّهِ مِنَ الْمُؤْمِنِ الضَّعِيفِ، وَفِي كُلٍّ خَيْرٌ، احْرِصْ عَلَى مَا يَنْفَعُكَ وَاسْتَعِنْ بِاللَّهِ، وَلَا تَعْجِزْ، وَإِنْ أَصَابَكَ شَيْءٌ فَلَا تَقُلْ: لَوْ أَنِّي فَعَلْتُ كَانَ كَذَا وَكَذَا، وَلَكِنْ قُلْ: قَدَرُ اللَّهِ، وَمَا شَاءَ فَعَلَ، فَإِنَّ لَوْ تَفْتَحُ عَمَلَ الشَّيْطَانِ»

---

**349** ಕುರ್‌ಆನ್ 2/155–157

**350** ಇದನ್ನು ಮುಸ್ಲಿಮ್ (4/2295; ಹದೀಸ್ ನಂ. 2999) ಸುಹೈಬ್‌ರಿಂದ ವರದಿ ಮಾಡಿದ್ದಾರೆ.

**“ಪ್ರಬಲನಾದ ವಿಶ್ವಾಸಿಯು ದುರ್ಬಲನಾದ ವಿಶ್ವಾಸಿಗಿಂತ ಉತ್ತಮನೂ ಅಲ್ಲಾಹನಿಗೆ ಹೆಚ್ಚು ಪ್ರೀತಿಯುಳ್ಳವನೂ ಆಗಿದ್ದಾನೆ. ಅವರೆಲ್ಲರಲ್ಲಿಯೂ ಒಳಿತುಗಳಿವೆ. ನಿನಗೆ ಪ್ರಯೋಜನ ನೀಡುವುದನ್ನು ನೀನು ಹಂಬಲಿಸು ಮತ್ತು ಅಲ್ಲಾಹನೊಂದಿಗೆ ಸಹಾಯ ಬೇಡು. ನೀನು ದುರ್ಬಲನಾಗಬೇಡ. ನಿನಗೇನಾದರೂ ಸಂಭವಿಸಿದರೆ ಒಂದು ವೇಳೆ ನಾನು ಹೀಗೆ ಮಾಡಿದರೆ ಹೀಗೆ ಹೀಗೆ ಆಗುತ್ತಿತ್ತು ಎಂದು ಹೇಳಬೇಡ. ಕದರುಲ್ಲಾಹ್ ವಮಾ ಶಾಅ ಫಅಲ್ (ಅಲ್ಲಾಹು ವಿಧಿಸಿದ್ದಾಗಿದೆ, ಅವನು ಇಚ್ಛಿಸಿದ್ದನ್ನು ಅವನು ಮಾಡುತ್ತಾನೆ) ಎಂದು ಹೇಳು. ಯಾಕೆಂದರೆ ‘ಒಂದು ವೇಳೆ’ ಎಂಬ ಮಾತು ಶೈತಾನನ ಕರ್ಮವನ್ನು ತೆರೆಯುತ್ತದೆ.”[351]**

ಈ ವಿಷಯದಲ್ಲಿ ವರದಿಯಾದ ದಿಕ್ರ್:

«إِنَّا لِلَّهِ وَإِنَّا إِلَيْهِ رَاجِعُونَ، اللَّهُمَّ أْجُرْنِى فِى مُصِيبَتِى وَأَخْلِفْ لِى خَيْرًا مِنْهَا»

**(ಇನ್ನಾ ಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್, ಅಲ್ಲಾಹುಮ್ಮ ಅ್‌ಜುರ್‌ನೀ ಫೀ ಮುಸೀಬತೀ ವಅಖ್ಲಿಫ್ ಲೀ ಖೈರನ್ ಮಿನ್‌ಹಾ )**

“ನಾವು ಅಲ್ಲಾಹನದ್ದಾಗಿದ್ದೇವೆ ಮತ್ತು ನಾವು ಅವನೆಡೆಗೆ ಮರಳುವವರಾಗಿದ್ದೇವೆ. ಓ ಅಲ್ಲಾಹ್! ನನ್ನ ಈ ದುರಂತಕ್ಕಾಗಿ ನನಗೆ ಪ್ರತಿಫಲ ನೀಡು. ಮತ್ತು ಇದಕ್ಕೆ ಬದಲಾಗಿ ಉತ್ತಮವಾದುದನ್ನು ನನಗೆ ನೀಡು.”[352]

## 54. ಮಕ್ಕಳನ್ನು ಅಲ್ಲಾಹನ ಸಂರಕ್ಷಣೆಯಲ್ಲಿಡುವುದು

عَنْ أَبِي هُرَيْرَةَ رَضِيَ اللَّهُ عَنْهُ عَنِ النَّبِيِّ صَلَّى اللَّهُ عَلَيْهِ وَسَلَّمَ قَالَ: «الْعَيْنُ حَقٌّ» وَنَهَى عَنِ الْوَشْمِ

**“ಅಬೂ ಹುರೈರಾ(رضي الله عنه)ರಿಂದ: ಪ್ರವಾದಿ(ﷺ)ರವರು ಹೇಳಿದರು: ದೃಷ್ಟಿಯು ಸತ್ಯವಾಗಿದೆ. ಮತ್ತು ಅವರು (ಪ್ರವಾದಿ(ﷺ)ರವರು) ಮಚ್ಚೆ ಹಾಕುವುದನ್ನು ವಿರೋಧಿಸಿದ್ದಾರೆ.”[353]**

عَنْ أُمِّ سَلَمَةَ رَضِيَ اللَّهُ عَنْهَا أَنَّ النَّبِيَّ صَلَّى اللَّهُ عَلَيْهِ وَسَلَّمَ رَأَى فِى بَيْتِهَا جَارِيَةً فِى وَجْهِهَا سَفْعَةٌ فَقَالَ: «اسْتَرْقُوا لَهَا فَإِنَّ بِهَا النَّظْرَةَ»

**351** ಇದನ್ನು ಮುಸ್ಲಿಮ್ (4/2052; ಹದೀಸ್ ನಂ. 2664) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**352** ಇದನ್ನು ಮುಸ್ಲಿಮ್ (2/631; ಹದೀಸ್ ನಂ. 918) ಉಮ್ಮು ಸಲಮಾರಿಂದ ವರದಿ ಮಾಡಿದ್ದಾರೆ.

**353** ಇದನ್ನು ಬುಖಾರಿ (5/2167; ಹದೀಸ್ ನಂ. 5408), ಮುಸ್ಲಿಮ್ (4/1719; ಹದೀಸ್ ನಂ. 2187) ವರದಿ ಮಾಡಿದ್ದಾರೆ.

**“ಉಮ್ಮು ಸಲಮಾ(رضي الله عنها)ರಿಂದ: ಪ್ರವಾದಿ(ﷺ)ರವರು ಆಕೆಯ ಮನೆಯಲ್ಲಿ ಓರ್ವ ಹುಡುಗಿಯನ್ನು ನೋಡಿದರು. ಆಕೆಯ ಮುಖದಲ್ಲಿ ಒಂದು ಮಚ್ಚೆ ಇತ್ತು. ಪ್ರವಾದಿ(ﷺ) ರವರು ಹೇಳಿದರು: ಅವಳಿಗೆ ಮಂತ್ರಿಸಿ, ಅವಳಿಗೆ ದೃಷ್ಟಿ ತಾಗಿದೆ.”[354]**

ಈ ವಿಷಯದಲ್ಲಿ ವರದಿಯಾದ ದಿಕ್ರ್:

«أَعُوذُ بِكَلِمَاتِ اللَّهِ التَّامَّةِ، مِنْ كُلِّ شَيْطَانٍ وَهَامَّةٍ، وَمِنْ كُلِّ عَيْنٍ لَامَّةٍ»

**(ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮಃ, ಮಿನ್ ಕುಲ್ಲಿ ಶೈತಾನಿನ್ ವಹಾಮ್ಮಃ, ವಮಿನ್ ಕುಲ್ಲಿ ಐನಿನ್ ಲಾಮ್ಮಃ)**

“ಅಲ್ಲಾಹನ ಪರಿಪೂರ್ಣ ವಚನಗಳೊಂದಿಗೆ ನಾನು ಅಭಯ ಯಾಚಿಸುತ್ತಿದ್ದೇನೆ. ಶೈತಾನನಿಂದ ಮತ್ತು ಹಾಮ್ಮತ್[355]ನಿಂದ ಮತ್ತು ಸರ್ವ ರೀತಿಯ ಅಕ್ಷೇಪಣೀಯ ದೃಷ್ಟಿಗಳಿಂದ.”[356]

## 55. ರೋಗದಿಂದ ಬಳಲಿದಾಗ

ಪ್ರವಾದಿ(ﷺ)ರವರು ಹೇಳಿದರು:

«أَكْثِرُوا ذِكْرَ هَادِمِ اللَّذَّاتِ» يَعْنِي الْمَوْتَ

**“ಅಸ್ವಾದಗಳ ವಿನಾಶಕನ ಸ್ಮರಣೆಯನ್ನು ಅಧಿಕಗೊಳಿಸಿರಿ ಅರ್ಥಾತ್ ಮರಣ.”[357]**

ಪ್ರವಾದಿ(ﷺ)ರವರು ಹೇಳಿದರು:

«لَا يَتَمَنَّيَنَّ أَحَدُكُمْ الْمَوْتَ مِنْ ضُرٍّ أَصَابَهُ، فَإِنْ كَانَ لَا بُدَّ فَاعِلًا فَلْيَقُلْ:
اللَّهُمَّ أَحْيِنِي مَا كَانَتِ الْحَيَاةُ خَيْرًا لِي، وَتَوَفَّنِي إِذَا كَانَتِ الْوَفَاةُ خَيْرًا لِي»

**“ತನಗೆ ಎರಗಿದ ಕೆಡುಕಿನಿಂದಾಗಿ ನಿಮ್ಮಲ್ಲಿ ಯಾರೊಬ್ಬನೂ ಮರಣವನ್ನು ಆಶಿಸದಿರಲಿ. ಅವನು ಹಾಗೆ ಮಾಡಲೇ ಬೇಕೆಂದಾದರೆ ಅವನು ಹೇಳಲಿ: ಓ ಅಲ್ಲಾಹ್! ಬದುಕು ನನಗೆ ಒಳಿತಾಗಿರುವ ತನಕ ನನ್ನನ್ನು ಬದುಕಿಸು ಮತ್ತು ಮರಣವು ನನಗೆ ಒಳಿತಾದಾಗ ನನ್ನನ್ನು ಮೃತಪಡಿಸು.”[358]**

---

**354** ಇದನ್ನು ಬುಖಾರಿ (5/2167; ಹದೀಸ್ ನಂ. 5407), ಮುಸ್ಲಿಮ್ (4/1725; ಹದೀಸ್ ನಂ. 2187) ವರದಿ ಮಾಡಿದ್ದಾರೆ.

**355** ವಿಷಜಂತುಗಳು ಅಥವಾ ಕೆಡುಕನ್ನು ಮಾಡುವ ಸೃಷ್ಟಿಗಳು.

**356** ಇದನ್ನು ಬುಖಾರಿ (3/1233; ಹದೀಸ್ ನಂ. 3191) ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

**357** ಇದನ್ನು ತಿರ್ಮಿದಿ (4/553; ಹದೀಸ್ ನಂ. 2307) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**358** ಇದನ್ನು ಬುಖಾರಿ (5/2146; ಹದೀಸ್ ನಂ. 5347), ಮುಸ್ಲಿಮ್ (4/2064; ಹದೀಸ್ ನಂ. 2680) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

ಈ ವಿಷಯದಲ್ಲಿ ವರದಿಯಾದ ದಿಕ್ರ್:

«بِسْمِ اللَّهِ» (ثلاثًا) «أَعُوذُ بِاللَّهِ وَقُدْرَتِهِ مِنْ شَرِّ مَا أَجِدُ وَأُحَاذِرُ» (سبع مرات)

**[ಬಿಸ್ಮಿಲ್ಲಾಹ್ (ಮೂರು ಬಾರಿ) ಅಊದು ಬಿಲ್ಲಾಹಿ ವಕುದ್ರತಿಹೀ ಮಿನ್ ಶರ್‍ರಿ ಮಾ ಅಜಿದು ವಉಹಾದಿರು (ಏಳು ಬಾರಿ)]**

"ಅಲ್ಲಾಹನ ನಾಮದಿಂದ. ನಾನು ಕಾಣುತ್ತಿರುವ ಮತ್ತು ಬಳಲುತ್ತಿರುವ ಕೆಡುಕಿನಿಂದ ನಾನು ಅಲ್ಲಾಹನೊಂದಿಗೆ ಮತ್ತು ಅವನ ಸಾಮರ್ಥ್ಯದೊಂದಿಗೆ ಅಭಯ ಯಾಚಿಸುತ್ತಿದ್ದೇನೆ."(359)

عَنْ عَائِشَةَ رَضِيَ اللَّهُ عَنْهَا أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ كَانَ إِذَا اشْتَكَى يَقْرَأُ عَلَى نَفْسِهِ بِالْمُؤَوِّذَاتِ وَيَنْفُثُ، فَلَمَّا اشْتَدَّ وَجْعُهُ كُنْتُ أَقْرَأُ عَلَيْهِ وَأَمْسَحُ بِيَدِهِ رَجَاءَ بَرَكَتِهَا»

**"ಆಯಿಶಾ(ರ)ರಿಂದ: ಪ್ರವಾದಿ(ﷺ)ರವರಿಗೆ ಏನಾದರೂ ನೋವುಂಟಾದರೆ ಅವರು ತಮ್ಮ ಶರೀರದ ಮೇಲೆ ಮುಅವ್ವಿದಾತ್‌ಗಳನ್ನು ಓದಿ ಊದುತ್ತಿದ್ದರು. ಅವರ ನೋವು ಕಠಿಣವಾದಾಗ ನಾನು ಅವರ ಮೇಲೆ ಓದಿ ಅವರ ಕೈಯಿಂದ ಅವರನ್ನು ಸವರುತ್ತಿದ್ದೆ, ಅದರ ಬರ್ಕತ್ ಪಡೆಯುವ ಆಗ್ರಹದಿಂದ."(360)**

## 56. ರೋಗಿಯನ್ನು ಸಂದರ್ಶಿಸುವಾಗ

ಪ್ರವಾದಿ(ﷺ)ರವರು ಹೇಳಿದರು:

«إِذَا حَضَرْتُمُ الْمَرِيضَ أَوِ الْمَيِّتَ، فَقُولُوا خَيْرًا، فَإِنَّ الْمَلَائِكَةَ يُؤَمِّنُونَ عَلَى مَا تَقُولُونَ»

**"ನೀವು ರೋಗಿಯ ಅಥವಾ ಮೃತದೇಹದ ಸಾನಿಧ್ಯಕ್ಕೆ ಬಂದರೆ ಉತ್ತಮವಾದುದನ್ನೇ ಹೇಳಿರಿ. ಯಾಕೆಂದರೆ ನೀವು ಹೇಳುತ್ತಿರುವುದಕ್ಕೆ ಮಲಕ್‌ಗಳು ಆಮೀನ್ ಹೇಳುತ್ತಿರುತ್ತಾರೆ."(361)**

---

**359** ಇದನ್ನು ಮುಸ್ಲಿಮ್ (4/1728; ಹದೀಸ್ ನಂ. 2202) ಉಸ್ಮಾನ್ ಇಬ್ನ್ ಅಬಿಲ್ ಆಸ್‌ರಿಂದ ವರದಿ ಮಾಡಿದ್ದಾರೆ. ಈ ರೀತಿ ಹೇಳುವಾಗ ನೋವಿರುವ ಸ್ಥಳದಲ್ಲಿ ಕೈಯನ್ನಿಡಬೇಕು.

**360** ಇದನ್ನು ಬುಖಾರಿ (4/1916; ಹದೀಸ್ ನಂ. 4728), ಮುಸ್ಲಿಮ್ (4/1723; ಹದೀಸ್ ನಂ. 2192) ವರದಿ ಮಾಡಿದ್ದಾರೆ.

**361** ಇದನ್ನು ಮುಸ್ಲಿಮ್ (2/633; ಹದೀಸ್ ನಂ. 919) ಉಮ್ಮು ಸಲಮಾರಿಂದ ವರದಿ ಮಾಡಿದ್ದಾರೆ.

ಪ್ರವಾದಿ(ﷺ)ರವರು ಹೇಳಿದರು:

«مَا مِنْ مُسْلِمٍ يَعُودُ مُسْلِمًا غُدْوَةً إِلَّا صَلَّى عَلَيْهِ سَبْعُونَ أَلْفَ مَلَكٍ حَتَّى يُمْسِيَ وَإِنْ عَادَهُ عَشِيَّةً إِلَّا صَلَّى عَلَيْهِ سَبْعُونَ أَلْفَ مَلَكٍ حَتَّى يُصْبِحَ وَكَانَ لَهُ خَرِيفٌ فِي الْجَنَّةِ»

**"ಮುಸ್ಲಿಮನಾದ ರೋಗಿಯನ್ನು ಮುಸ್ಲಿಮನೊಬ್ಬನು ಬೆಳಗ್ಗಿನ ವೇಳೆಯಲ್ಲಿ ಸಂದರ್ಶಿಸಲಾರನು ಅವನ ಮೇಲೆ ಸಂಜೆಯವರೆಗೆ ಎಪ್ಪತ್ತು ಸಾವಿರ ಮಲಕ್‌ಗಳು ಸಲಾತ್ ಹೇಳದ ಹೊರತು. ಅವನೇನಾದರು ಸಂಜೆವೇಳೆಯಲ್ಲಿ ಸಂದರ್ಶಿಸಿದರೆ ಎಪ್ಪತ್ತು ಸಾವಿರ ಮಲಕ್‌ಗಳು ಅವನ ಮೇಲೆ ಬೆಳಗ್ಗಿನವರೆಗೆ ಸಲಾತ್ ಹೇಳದಿರಲಾರರು. ಮತ್ತು ಅವನಿಗೆ ಸ್ವರ್ಗದಲ್ಲಿ ಒಂದು ತೋಟವಿರುವುದು."[362]**

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ اشْفِ سَعْدًا» (ثلاثًا)

**(ಅಲ್ಲಾಹುಮ್ಮಶ್ಫಿ ಸಅ್‌ದನ್) (ಮೂರು ಬಾರಿ)**

"ಓ ಅಲ್ಲಾಹ್! ನೀನು ಸಅ್‌ದ್[363]ರನ್ನು ಗುಣಪಡಿಸು."[364]

«أَسْأَلُ اللَّهَ الْعَظِيمَ، رَبَّ الْعَرْشِ الْعَظِيمِ أَنْ يَشْفِيكَ» (سبعًا)

**(ಅಸ್‌ಅಲುಲ್ಲಾಹಲ್ ಅದೀಮ್, ರಬ್ಬಲ್ ಅರ್ಶಿಲ್ ಅದೀಮ್ ಅನ್ ಯಶ್ಫೀಕ್) (ಏಳು ಬಾರಿ)**

"ಅತ್ಯುನ್ನತನಾದ ಅಲ್ಲಾಹನೊಂದಿಗೆ, ಅತ್ಯುನ್ನತವಾದ ಸಿಂಹಾಸನದ ಒಡೆಯನೊಂದಿಗೆ ನಾನು ಬೇಡುತ್ತಿದ್ದೇನೆ, ಅವನು ನಿನ್ನನ್ನು ಗುಣಪಡಿಸಲೆಂದು."[365]

«اللَّهُمَّ اشْفِ عَبْدَكَ يَنْكَأُ لَكَ عَدُوًّا، أَوْ يَمْشِى لَكَ إِلَى صَلَاةٍ»

**(ಅಲ್ಲಾಹುಮ್ಮಶ್ಫಿ ಅಬ್ದಕ ಯನ್ಕಉ ಲಕ ಅದುವ್ವನ್, ಅವ್ ಯಮ್ಶೀ ಲಕ ಇಲಾ ಸಲಾತಿನ್)**

---

**362** ಇದನ್ನು ತಿರ್ಮಿದಿ (3/300; ಹದೀಸ್ ನಂ. 969) ಅಲೀ ಇಬ್ನ್ ಅಬೀ ತಾಲಿಬ್‌ರಿಂದ ವರದಿ ಮಾಡಿದ್ದಾರೆ.

**363** ಪ್ರವಾದಿ(ﷺ)ರವರು ರೋಗಿಯಾಗಿದ್ದ ಸಅ್‌ದ್‌ರನ್ನು ಸಂದರ್ಶಿಸಿದಾಗ ಇದನ್ನು ಹೇಳಿದ್ದರು. ಇಲ್ಲಿ ಸಅ್‌ದ್ ಎಂಬುದಕ್ಕೆ ಬದಲಾಗಿ ರೋಗಿಯ ಹೆಸರನ್ನು ಬಳಸಬಹುದು.

**364** ಇದನ್ನು ಮುಸ್ಲಿಮ್ (3/1250; ಹದೀಸ್ ನಂ. 1628) ಸಅ್‌ದ್ ಇಬ್ನ್ ಅಬೀ ವಕ್ಕಾಸ್‌ರಿಂದ ವರದಿ ಮಾಡಿದ್ದಾರೆ.

**365** ಇದನ್ನು ಅಬೂದಾವೂದ್ (2/204; ಹದೀಸ್ ನಂ. 3106), ತಿರ್ಮಿದಿ (4/410; ಹದೀಸ್ ನಂ. 2083) ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

"ಓ ಅಲ್ಲಾಹ್! ನಿನ್ನ ದಾಸನಿಗೆ ನೀನು ಗುಣಪಡಿಸು. ಅವನು ನಿನಗೋಸ್ಕರ ಶತ್ರುವನ್ನು ವಧಿಸುವವನಾಗಿದ್ದಾನೆ ಅಥವಾ ನಿನಗೋಸ್ಕರ ನಮಾಝ್‌ನೆಡೆಗೆ ಚಲಿಸುವವನಾಗಿದ್ದಾನೆ."[366]

«لَا بَأْسَ، طَهُورٌ إِنْ شَاءَ اللَّهُ تَعَالَى»

**(ಲಾ ಬಅ್ಸ, ತುಹೂರುನ್ ಇನ್ ಶಾ ಅಲ್ಲಾಹು ತಆಲಾ)**

"ಪರವಾಗಿಲ್ಲ, ಅಲ್ಲಾಹು ಇಚ್ಛಿಸಿದರೆ ಅದೊಂದು ಶುದ್ಧೀಕರಣವಾಗಿದೆ."[367]

## 57. ರೋಗಿಗಾಗಿ ಮಂತ್ರಿಸುವುದು

ಪ್ರವಾದಿ(ﷺ)ರವರು ಹೇಳಿದರು:

«لَا بَأْسَ بِالرُّقَى مَا لَمْ يَكُنْ فِيهِ شِرْكٌ»

**"ಮಂತ್ರದಿಂದ ತೊಂದರೆಯಿಲ್ಲ, ಅದರಲ್ಲಿ ಶಿರ್ಕ್ ಇಲ್ಲದಿರುವವರೆಗೆ."[368]**

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ رَبَّ النَّاسِ، أَذْهِبِ الْبَأْسَ وَاشْفِهِ، وَأَنْتَ الشَّافِي، لَا شِفَاءَ إِلَّا شِفَاؤُكَ، شِفَاءً لَا يُغَادِرُ سَقَمًا»

**(ಅಲ್ಲಾಹುಮ್ಮ ರಬ್ಬ ನ್ನಾಸ್, ಅದ್‌ಹಿಬಿಲ್ ಬಅ್ಸ ವಶ್ಫಿಹೀ, ವಅನ್ತ ಶ್ಶಾಫೀ, ಲಾ ಶಿಫಾಅ ಇಲ್ಲಾ ಶಿಫಾಉಕ, ಶಿಫಾಅನ್ ಲಾ ಯುಗಾದಿರು ಸಕಮಾ)**

"ಓ ಅಲ್ಲಾಹ್! ಜನರ ಒಡೆಯನೇ! ರೋಗವನ್ನು ದೂರೀಕರಿಸು ಮತ್ತು ಅದನ್ನು ಗುಣಪಡಿಸು. ನೀನಾಗಿರುವೆ ಗುಣಪಡಿಸುವವನು. ನಿನ್ನ ಶಮನವಲ್ಲದೆ ಬೇರೆ ಶಮನವಿಲ್ಲ. (ನಿನ್ನ) ಶಮನವು ಯಾವುದೇ ರೋಗವನ್ನು ಬಾಕಿಯಾಗಿಸಲಾರದು."[369]

«اللَّهُمَّ رَبَّ النَّاسِ، مُذْهِبَ الْبَأْسِ، اشْفِ أَنْتَ الشَّافِي، لَا شَافِيَ إِلَّا أَنْتَ، شِفَاءً لَا يُغَادِرُ سَقَمًا»

---

**366** ಇದನ್ನು ಅಬೂದಾವೂದ್ (2/204; ಹದೀಸ್ ನಂ. 3107) ಅಬ್ದುಲ್ಲಾಹ್ ಇಬ್ನ್ ಅಮ್ರ್‌ರಿಂದ ವರದಿ ಮಾಡಿದ್ದಾರೆ.

**367** ಇದನ್ನು ಬುಖಾರಿ (3/1324; ಹದೀಸ್ ನಂ. 3420) ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

**368** ಇದನ್ನು ಮುಸ್ಲಿಮ್ (4/1727; ಹದೀಸ್ ನಂ. 2200) ಔಫ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ. ಅರ್ಥಾತ್ ಶಿರ್ಕ್ ಇಲ್ಲದಿರುವ ಮಂತ್ರಗಳಿಂದ ಮಂತ್ರಿಸುವುದಕ್ಕೆ ವಿರೋಧವಿಲ್ಲ.

**369** ಇದನ್ನು ಬುಖಾರಿ (5/2168; ಹದೀಸ್ ನಂ. 5411) ಆಯಿಶಾರಿಂದ ವರದಿ ಮಾಡಿದ್ದಾರೆ.

**(ಅಲ್ಲಾಹುಮ್ಮ ರಬ್ಬ ನ್ನಾಸ್, ಮುದ್‌ಹಿಬಲ್ ಬಅ್ಸ್, ಇಶ್ಫಿ ಅನ್ತ ಶ್ಶಾಫೀ, ಲಾ ಶಾಫಿಯ ಇಲ್ಲಾ ಅನ್ತ, ಶಿಫಾಅನ್ ಲಾ ಯುಗಾದಿರು ಸಕಮಾ)**

"ಓ ಅಲ್ಲಾಹ್! ಜನರ ಒಡೆಯನೇ! ರೋಗಗಳ ನಿವಾರಕನೇ! ಗುಣಪಡಿಸು, ನೀನಾಗಿರುವೆ ಗುಣಪಡಿಸುವವನು. ನೀನಲ್ಲದೆ ಗುಣಪಡಿಸುವವನಿಲ್ಲ. (ನಿನ್ನ) ಶಮನವು ಯಾವುದೇ ರೋಗವನ್ನು ಬಾಕಿಯಾಗಿಸಲಾರದು."(370)

«بِسْمِ اللَّهِ تُرْبَةُ أَرْضِنَا، وَرِيقَةُ بَعْضِنَا، يُشْفَى سَقِيمُنَا بِإِذْنِ رَبِّنَا»

**(ಬಿಸ್ಮಿಲ್ಲಾಹಿ ತುರ್ಬತು ಅರ್ದಿನಾ, ವರೀಕತು ಬಅ್‌ದಿನಾ, ಯುಶ್ಫಾ ಸಕೀಮುನಾ ಬಿಇದ್‌ನಿ ರಬ್ಬಿನಾ)**

"ಅಲ್ಲಾಹನ ನಾಮದಿಂದ, ನಮ್ಮ ಭೂಮಿಯ ಮಣ್ಣು ಮತ್ತು ನಮ್ಮಲ್ಲಿ ಕೆಲವರ ಜೊಲ್ಲು, ನಮ್ಮ ಪ್ರಭುವಿನ ಅನುಮತಿಯಿಂದ ನಮ್ಮಲ್ಲಿ ರೋಗಿಯಾದವರನ್ನು ಗುಣಪಡಿಸುವುದು."(371)

بِسْمِ اللَّهِ يُبْرِيكَ، وَمِنْ كُلِّ دَاءٍ يَشْفِيكَ، وَمِنْ شَرِّ حَاسِدٍ إِذَا حَسَدَ، وَشَرِّ كُلِّ ذِي عَيْنٍ»

**(ಬಿಸ್ಮಿಲ್ಲಾಹಿ ಯುಬ್ರೀಕ, ವಮಿನ್ ಕುಲ್ಲಿ ದಾಇನ್ ಯಶ್ಫೀಕ, ವಮಿನ್ ಶರ್‍ರಿ ಹಾಸಿದಿನ್ ಇದಾ ಹಸದ, ವಶರ್‍ರಿ ಕುಲ್ಲಿ ದೀ ಐನ್)**

"ಅಲ್ಲಾಹನ ನಾಮದಿಂದ, ಅವನು ನಿನ್ನನ್ನು ಗುಣಪಡಿಸುವನು ಮತ್ತು ಎಲ್ಲಾ ರೋಗಗಳಿಂದಲೂ ಅವನು ನಿನ್ನನ್ನು ಗುಣಪಡಿಸುವನು. ಅಸೂಯೆಯಿರುವವನು ಅಸೂಯೆಪಡುವಾಗ ಅವನ ಕೆಡುಕಿನಿಂದ ಮತ್ತು ಎಲ್ಲಾ ದೃಷ್ಟಿಗಾರರ ಕೆಡುಕಿನಿಂದ (ಅವನು ನಿನ್ನನ್ನು ಗುಣಪಡಿಸುವನು)."(372)

«بِسْمِ اللَّهِ أَرْقِيكَ، مِنْ كُلِّ شَيْءٍ يُؤْذِيكَ، مِنْ شَرِّ كُلِّ نَفْسٍ أَوْ عَيْنٍ حَاسِدٍ، اللَّهُ يَشْفِيكَ، بِسْمِ اللَّهِ أَرْقِيكَ»

**(ಬಿಸ್ಮಿಲ್ಲಾಹಿ ಅರ್ಕೀಕ, ಮಿನ್ ಕುಲ್ಲಿ ಶೈಇನ್ ಯುಅ್‌ದೀಕ, ಮಿನ್ ಶರ್‍ರಿ ಕುಲ್ಲಿ ನಫ್ಸಿನ್ ಅವ್ ಐನಿನ್ ಹಾಸಿದಿನ್, ಅಲ್ಲಾಹು ಯಶ್ಫೀಕ, ಬಿಸ್ಮಿಲ್ಲಾಹಿ ಅರ್ಕೀಕ್)**

"ಅಲ್ಲಾಹನ ನಾಮದಿಂದ ನಾನು ನಿನಗೆ ಮಂತ್ರಿಸುತ್ತಿದ್ದೇನೆ. ನಿನ್ನನ್ನು ಉಪದ್ರವಿಸುವ ಎಲ್ಲಾ ಕೆಡುಕುಗಳಿಂದ, ಅಸೂಯೆಯಿರುವ ಎಲ್ಲಾ ಶರೀರಗಳ ಅಥವಾ ದೃಷ್ಟಿಗಳ

---

**370** ಇದನ್ನು ಬುಖಾರಿ (5/2167; ಹದೀಸ್ ನಂ. 5411) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**371** ಇದನ್ನು ಬುಖಾರಿ (5/2168; ಹದೀಸ್ ನಂ. 5414), ಮುಸ್ಲಿಮ್ (4/1724; ಹದೀಸ್ ನಂ. 2194) ಆಯಿಶಾರಿಂದ ವರದಿ ಮಾಡಿದ್ದಾರೆ.

**372** ಇದನ್ನು ಮುಸ್ಲಿಮ್ (4/1718; ಹದೀಸ್ ನಂ. 2185) ಆಯಿಶಾರಿಂದ ವರದಿ ಮಾಡಿದ್ದಾರೆ.

ಕೆಡುಕಿನಿಂದ, ಅಲ್ಲಾಹು ನಿನ್ನನ್ನು ಗುಣಪಡಿಸಲಿ. ಅಲ್ಲಾಹನ ನಾಮದಿಂದ ನಾನು ನಿನಗೆ ಮಂತ್ರಿಸುತ್ತಿದ್ದೇನೆ."[373]

## 58. ಮರಣಾಸನ್ನನಾದಾಗ

ಅಲ್ಲಾಹು ಹೇಳಿದ್ದಾನೆ:

﴿ كُلُّ نَفْسٍ ذَآئِقَةُ ٱلْمَوْتِ ۗ وَإِنَّمَا تُوَفَّوْنَ أُجُورَكُمْ يَوْمَ ٱلْقِيَـٰمَةِ ۖ فَمَن زُحْزِحَ عَنِ ٱلنَّارِ وَأُدْخِلَ ٱلْجَنَّةَ فَقَدْ فَازَ ۗ وَمَا ٱلْحَيَوٰةُ ٱلدُّنْيَآ إِلَّا مَتَـٰعُ ٱلْغُرُورِ ﴿١٨٥﴾ ﴾

"ಎಲ್ಲಾ ಶರೀರಗಳು ಮರಣದ ರುಚಿಯನ್ನು ಸವಿಯುವುದು. ಅಂತ್ಯದಿನದಂದು ನಿಮ್ಮ ಪ್ರತಿಫಲವನ್ನು ನಿಮಗೆ ಪೂರ್ಣವಾಗಿ ನೀಡಲ್ಪಡುವುದು. ಯಾರಾದರೂ ನರಕದಿಂದ ದೂರೀಕರಿಸಲ್ಪಟ್ಟು, ಸ್ವರ್ಗಕ್ಕೆ ಪ್ರವೇಶಗೊಳಿಸಲ್ಪಟ್ಟರೆ ಅವನು ಜಯಗಳಿಸಿದನು. ಐಹಿಕ ಜೀವನವು ವಂಚನಾತ್ಮಕವಾದ ಸವಲತ್ತುಗಳ ಹೊರತು ಬೇರೇನೂ ಅಲ್ಲ."[374]

﴿ يَـٰٓأَيُّهَا ٱلَّذِينَ ءَامَنُوا۟ ٱتَّقُوا۟ ٱللَّهَ حَقَّ تُقَاتِهِۦ وَلَا تَمُوتُنَّ إِلَّا وَأَنتُم مُّسْلِمُونَ ﴿١٠٢﴾ ﴾

"ಓ ವಿಶ್ವಾಸಿಗಳೇ! ಅಲ್ಲಾಹನನ್ನು ಭಯಪಡಬೇಕಾದ ರೀತಿಯಲ್ಲಿ ಭಯಪಡಿರಿ. ನೀವು ಮುಸ್ಲಿಮರಾಗಿರುವ ಹೊರತು ಮರಣವನ್ನಪ್ಪದಿರಿ."[375]

﴿ وَوَصَّىٰ بِهَآ إِبْرَٰهِـۧمُ بَنِيهِ وَيَعْقُوبُ يَـٰبَنِىَّ إِنَّ ٱللَّهَ ٱصْطَفَىٰ لَكُمُ ٱلدِّينَ فَلَا تَمُوتُنَّ إِلَّا وَأَنتُم مُّسْلِمُونَ ﴿١٣٢﴾ ﴾

"ಇಬ್ರಾಹೀಮ್ ಮತ್ತು ಯಅ್‌ಕೂಬ್ (ಮರಣವೇಳೆಯಲ್ಲಿ) ತಮ್ಮ ಮಕ್ಕಳಿಗೆ ಇದರಿಂದ ಉಪದೇಶಿಸಿದರು: ಓ ನನ್ನ ಮಕ್ಕಳೇ! ಅಲ್ಲಾಹು ನಿಮಗೆ ಧರ್ಮವನ್ನು ಆರಿಸಿಕೊಟ್ಟಿದ್ದಾನೆ. ಆದ್ದರಿಂದ ಮುಸ್ಲಿಮರಾಗಿರುವ ಹೊರತು ನೀವು ಮರಣವನ್ನಪ್ಪದಿರಿ."[376]

﴿ وَلَيْسَتِ ٱلتَّوْبَةُ لِلَّذِينَ يَعْمَلُونَ ٱلسَّيِّـَٔاتِ حَتَّىٰٓ إِذَا حَضَرَ أَحَدَهُمُ ٱلْمَوْتُ قَالَ إِنِّى تُبْتُ ٱلْـَٔـٰنَ وَلَا ٱلَّذِينَ يَمُوتُونَ وَهُمْ كُفَّارٌ ۚ أُو۟لَـٰٓئِكَ أَعْتَدْنَا لَهُمْ عَذَابًا أَلِيمًا ﴿١٨﴾ ﴾

---

**373** ಇದನ್ನು ಮುಸ್ಲಿಮ್ (4/1718; ಹದೀಸ್ ನಂ. 2186) ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ.

**374** ಕುರ್‌ಆನ್ 3/185

**375** ಕುರ್‌ಆನ್ 3/102

**376** ಕುರ್‌ಆನ್ 2/132

**“ಪಾಪಕೃತ್ಯಗಳನ್ನು ಮಾಡುವವರಿಗೆ, ಅವರಲ್ಲೊಬ್ಬನಿಗೆ ಮರಣವು ಸನ್ನಿಹಿತವಾದಾಗ ಅವನು ಹೇಳುವನು: ನಾನು ಈಗ ತೌಬಾ ಮಾಡುತ್ತಿದ್ದೇನೆ, ಅಂತಹವರಿಗೆ ತೌಬಾ ಇಲ್ಲ. (ಹಾಗೆಯೇ) ಅವಿಶ್ವಾಸಿಗಳಾಗಿ ಮೃತಪಡುವವರಿಗೆ ಕೂಡ (ತೌಬಾ ಇಲ್ಲ). ಅವರಿಗೆ ನಾವು ಯಾತನಾಮಯವಾದ ಶಿಕ್ಷೆಯನ್ನು ಸಿದ್ಧಗೊಳಿಸಿದ್ದೇವೆ.”**[377]

ಪ್ರವಾದಿ(ﷺ)ರವರು ಹೇಳಿದರು:

«مَنْ كَانَ آخِرُ كَلَامِهِ لَا إِلَهَ إِلَّا اللَّهُ دَخَلَ الْجَنَّةَ»

**“ಯಾರ ಕೊನೆಯ ಮಾತು ಲಾ ಇಲಾಹ ಇಲ್ಲಲ್ಲಾಹ್ ಆಗಿರುವುದೋ ಅವನು ಸ್ವರ್ಗವನ್ನು ಪ್ರವೇಶಿಸಿದನು.”**[378]

ಪ್ರವಾದಿ(ﷺ)ರವರು ಹೇಳಿದರು:

«لَا يَمُوتَنَّ أَحَدُكُمْ إِلَّا وَهُوَ يُحْسِنُ الظَّنَّ بِاللَّهِ عَزَّ وَجَلَّ»

**“ನಿಮ್ಮಲ್ಲಿ ಓರ್ವನೂ ಮರಣವನ್ನಪ್ಪಬಾರದು, ಅಲ್ಲಾಹನೊಂದಿಗೆ ಸದ್ಭಾವನೆಯನ್ನು ಇಟ್ಟುಕೊಂಡಿರುವವನಾಗಿರುವ ಹೊರತು.”**[379]

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ اغْفِرْ لِي، وَارْحَمْنِي، وَأَلْحِقْنِي بِالرَّفِيقِ الْأَعْلَى»

**(ಅಲ್ಲಾಹುಮ್ಮಗ್ಫಿರ್ ಲೀ, ವರ್‌ಹಮ್‌ನೀ, ವಅಲ್‌ಹಿಕ್‌ನೀ ಬಿರ್‍ರಫೀಕಿಲ್ ಅಅ್‌ಲಾ)**

“ಓ ಅಲ್ಲಾಹ್! ನನಗೆ ಕ್ಷಮೆ ನೀಡು, ನನಗೆ ಕರುಣೆ ತೋರು ಮತ್ತು ಅತ್ಯುನ್ನತನಾದ ಜೊತೆಗಾರನೊಂದಿಗೆ ನನ್ನನ್ನು ಸೇರಿಸು.”[380]

«لَا إِلَهَ إِلَّا اللَّهُ وَاللَّهُ أَكْبَرُ، لَا إِلَهَ إِلَّا اللَّهُ وَحْدَهُ لَا شَرِيكَ لَهُ، لَا إِلَهَ إِلَّا اللَّهُ لَهُ الْمُلْكُ وَلَهُ الْحَمْدُ، لَا إِلَهَ إِلَّا اللَّهُ وَلَا حَوْلَ وَلَا قُوَّةَ إِلَّا بِاللَّهِ»

**(ಲಾ ಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್ಬರ್, ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹ್, ಲಾ ಇಲಾಹ ಇಲ್ಲಲ್ಲಾಹು ಲಹುಲ್ ಮುಲ್ಕು ವಲಹುಲ್ ಹಮ್ದ್, ಲಾ ಇಲಾಹ ಇಲ್ಲಲ್ಲಾಹು ವಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್)**

“ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ ಮತ್ತು ಅಲ್ಲಾಹು

---

**377** ಕುರ್‌ಆನ್ 4/18

**378** ಇದನ್ನು ಅಬೂದಾವೂದ್ (2/207; ಹದೀಸ್ ನಂ. 3116) ಮುಆದ್ ಇಬ್ನ್ ಜಬಲ್‌ರಿಂದ ವರದಿ ಮಾಡಿದ್ದಾರೆ.

**379** ಇದನ್ನು ಮುಸ್ಲಿಮ್ (4/2205; ಹದೀಸ್ ನಂ. 2877) ಜಾಬಿರ್‌ರಿಂದ ವರದಿ ಮಾಡಿದ್ದಾರೆ.

**380** ಇದನ್ನು ಬುಖಾರಿ (4/1614; ಹದೀಸ್ ನಂ. 4176) ಆಯಿಶಾರಿಂದ ವರದಿ ಮಾಡಿದ್ದಾರೆ.

ಮಹಾನನಾಗಿದ್ದಾನೆ. ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ ಅವನು ಏಕೈಕನಾಗಿದ್ದಾನೆ ಮತ್ತು ಅವನಿಗೆ ಸಹಭಾಗಿಯಾಗಿ ಯಾರೂ ಇಲ್ಲ. ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ ಆಧಿಪತ್ಯವು ಅವನದಾಗಿದೆ ಮತ್ತು ಸ್ತುತಿಯು ಅವನಿಗಾಗಿದೆ. ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ ಅಲ್ಲಾಹನಲ್ಲಿ ಹೊರತು ಯಾವುದೇ ಶಕ್ತಿಯಾಗಲಿ, ಸಾಮರ್ಥ್ಯವಾಗಲಿ ಇಲ್ಲ.”[381]

## 59. ಮರಣಾಸನ್ನನಾದ ವ್ಯಕ್ತಿಗೆ

ಪ್ರವಾದಿ(ﷺ)ರವರು ಹೇಳಿದರು:

«لَقِّنُوا مَوْتَاكُمْ لَا إِلَهَ إِلَّا اللَّهُ»

**“ನಿಮ್ಮಲ್ಲಿ ಮರಣವನ್ನಪ್ಪಿದವರಿಗೆ[382] ಲಾ ಇಲಾಹ ಇಲ್ಲಲ್ಲಹ್ ಅನ್ನು ಬೋಧಿಸಿರಿ.”[383]**

## 60. ಮೃತ ವ್ಯಕ್ತಿಯ ಕಣ್ಣುಗಳನ್ನು ಮುಚ್ಚುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ اغْفِرْ لِأَبِي سَلَمَةَ وَارْفَعْ دَرَجَتَهُ فِى الْمَهْدِيِّينَ، وَاخْلُفْهُ فِى عَقِبِهِ فِى الْغَابِرِينَ، وَاغْفِرْ لَنَا وَلَهُ يَا رَبَّ الْعَالَمِينَ، وَافْسَحْ لَهُ فِى قَبْرِهِ، وَنَوِّرْ لَهُ فِيهِ»

**(ಅಲ್ಲಾಹುಮ್ಮಗ್ಫಿರ್ ಲಿಅಬೀ ಸಲಮಾ, ವರ್‌ಫಅ್ ದರಜತಹು ಫಿಲ್ ಮಹ್ದಿಯ್ಯೀನ್, ವಖ್ಲುಫ್‌ಹೂ ಫೀ ಅಕಿಬಿಹೀ ಫಿಲ್ ಗಾಬಿರೀನ್, ವಗ್ಫಿರ್ ಲನಾ ವಲಹೂ ಯಾ ರಬ್ಬಲ್ ಆಲಮೀನ್, ವಫ್ಸಹ್ ಲಹೂ ಫೀ ಕಬ್ರಿಹೀ, ವನವ್ವಿರ್ ಲಹೂ ಫೀಹ್)**

“ಓ ಅಲ್ಲಾಹ್! ನೀನು ಅಬೂ ಸಲಮಾ[384]ರಿಗೆ ಕ್ಷಮೆನೀಡು. ಸನ್ಮಾರ್ಗಿಗಳಲ್ಲಿ ಅವರ ದರ್ಜೆಯನ್ನು ಉನ್ನತೀಕರಿಸು. ಅವರ ಹಿಂದೆ ಬಾಕಿಯಾದವರಿಗೆ ಅವರ ಉತ್ತರಾಧಿಕಾರಿಯಾಗು. ಓ ಜಗತ್ತುಗಳ ಒಡೆಯನೇ! ನಮಗೂ ಅವರಿಗೂ ಕ್ಷಮೆ ನೀಡು. ಅವರ

**381** ಇದನ್ನು ತಿರ್ಮಿದಿ (5/492; ಹದೀಸ್ ನಂ. 3430), ಇಬ್ನ್ ಮಾಜ (2/1246; ಹದೀಸ್ ನಂ. 3794) ಅಬೂ ಹುರೈರಾ ಮತ್ತು ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ.

**382** ಅರ್ಥಾತ್ ಮರಣದಂಚಿನಲ್ಲಿರುವವರಿಗೆ.

**383** ಇದನ್ನು ಮುಸ್ಲಿಮ್ (2/631; ಹದೀಸ್ ನಂ. 916) ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ.

**384** ಅಬೂ ಸಲಮಾರವರು ಮೃತಪಟ್ಟಾಗ ಪ್ರವಾದಿ(ﷺ)ರವರು ಇದನ್ನು ಹೇಳಿದ್ದರು. ಅಬೂ ಸಲಮಾ ಎಂಬಲ್ಲಿ ಮೃತವ್ಯಕ್ತಿಯ ಹೆಸರನ್ನು ಬಳಸಬಹುದು.

ಗೋರಿಯಲ್ಲಿ ಅವರಿಗೆ ವಿಶಾಲತೆಯನ್ನು ನೀಡು ಮತ್ತು ಅದರಲ್ಲಿ ಅವರಿಗೆ ಬೆಳಕನ್ನು ನೀಡು."[385]

## 61. ಮೃತ ವ್ಯಕ್ತಿಯನ್ನು ಸಂದರ್ಶಿಸುವಾಗ

ಪ್ರವಾದಿ(ﷺ)ರವರು ಹೇಳಿದರು:

«إِذَا حَضَرْتُمُ الْمَرِيضَ أَوِ الْمَيِّتَ، فَقُولُوا خَيْرًا، فَإِنَّ الْمَلَائِكَةَ يُؤَمِّنُونَ عَلَى مَا تَقُولُونَ»

**"ನೀವು ರೋಗಿಯ ಅಥವಾ ಮೃತದೇಹದ ಸಾನಿಧ್ಯಕ್ಕೆ ಬಂದರೆ ಉತ್ತಮವಾದುದನ್ನೇ ಹೇಳಿರಿ. ಯಾಕೆಂದರೆ ನೀವು ಹೇಳುತ್ತಿರುವುದಕ್ಕೆ ಮಲಕ್‌ಗಳು ಆಮೀನ್ ಹೇಳುತ್ತಿರುತ್ತಾರೆ."[386]**

عَنْ عَائِشَةَ رَضِيَ اللَّهُ عَنْهَا قَالَتْ: أَنَّ النَّبِيَّ صَلَّى اللَّهُ عَلَيْهِ وَسَلَّمَ قَبَّلَ عُثْمَانَ بْنَ مَظْعُونٍ وَهُوَ مَيِّتٌ وَهُوَ يَبْكِي

**"ಆಯಿಶಾ(رضي الله عنها)ರಿಂದ: ಪ್ರವಾದಿ(ﷺ)ರವರು ಅಳುತ್ತಾ ಉಸ್ಮಾನ್ ಇಬ್ನ್ ಮದ್‌ಊನ್‌ರವರ ಮೃತದೇಹವನ್ನು ಚುಂಬಿಸಿದರು."[387]**

ಈ ವಿಷಯದಲ್ಲಿ ವರದಿಯಾದ ದಿಕ್ರ್:

«إِنَّ الْعَيْنَ تَدْمَعُ، وَالْقَلْبَ يَحْزَنُ، وَلَا نَقُولُ إِلَّا مَا يَرْضَى رَبُّنَا، وَإِنَّا بِفِرَاقِكَ يَا إِبْرَاهِيمُ لَمَحْزُونُونَ»

**(ಇನ್ನಲ್ ಐನ ತದ್ಮಉ, ವಲ್ ಕಲ್ಬ ಯಹ್‌ಝನು, ವಲಾ ನಕೂಲು ಇಲ್ಲಾ ಮಾ ಯರ್ದಾ ರಬ್ಬುನಾ, ವಇನ್ನಾ ಬಿಫಿರಾಕಿಕ ಯಾ ಇಬ್ರಾಹೀಮು ಲಮಹ್‌ಝೂನೂನ್)**

**"**ಕಣ್ಣಿಂದ ನೀರು ಬರುತ್ತದೆ, ಹೃದಯವು ದುಃಖಿಸುತ್ತದೆ, ಆದರೆ ನಮ್ಮ ಪ್ರಭು ತೃಪ್ತಿಪಡುವಂತದ್ದು ಹೊರತು ಬೇರೇನೂ ನಾವು ಹೇಳಲಾರೆವು. ಓ ಇಬ್ರಾಹೀಮ್![388], ನಿನ್ನ ಅಗಲಿಕೆಯಿಂದ ನಾವು ದುಃಖಿತರಾಗಿದ್ದೇವೆ."[389]

**385** ಇದನ್ನು ಮುಸ್ಲಿಮ್ (2/634; ಹದೀಸ್ ನಂ. 920) ಉಮ್ಮು ಸಲಮಾರಿಂದ ವರದಿ ಮಾಡಿದ್ದಾರೆ.
**386** ಇದನ್ನು ಮುಸ್ಲಿಮ್ (2/633; ಹದೀಸ್ ನಂ. 919) ಉಮ್ಮು ಸಲಮಾರಿಂದ ವರದಿ ಮಾಡಿದ್ದಾರೆ.
**387** ಇದನ್ನು ತಿರ್ಮಿದಿ (3/314; ಹದೀಸ್ ನಂ. 989) ಆಯಿಶಾರಿಂದ ವರದಿ ಮಾಡಿದ್ದಾರೆ.
**388** ಪ್ರವಾದಿ(ﷺ)ರವರು ತಮ್ಮ ಮಗ ಇಬ್ರಾಹೀಮ್‌ರವರು ಮೃತಪಟ್ಟಾಗ ಇದನ್ನು ಹೇಳಿದ್ದರು.
**389** ಇದನ್ನು ಬುಖಾರಿ (1/439; ಹದೀಸ್ ನಂ. 1241), ಮುಸ್ಲಿಮ್ (4/1807; ಹದೀಸ್ ನಂ. 2315) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

## 62. ಮರಣ ವಾರ್ತೆಯನ್ನು ಶ್ರವಿಸಿದಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«إِنَّا لِلَّهِ وَإِنَّا إِلَيْهِ رَاجِعُونَ، اللَّهُمَّ أْجُرْنِي فِي مُصِيبَتِي وَأَخْلِفْ لِي خَيْرًا مِنْهَا»

**(ಇನ್ನಾ ಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್, ಅಲ್ಲಾಹುಮ್ಮ ಅ್‌ಜುರ್‌ನೀ ಫೀ ಮುಸೀಬತೀ ವಅಖ್ಲಿಫ್ ಲೀ ಖೈರನ್ ಮಿನ್‌ಹಾ)**

"ನಾವು ಅಲ್ಲಾಹನದ್ದಾಗಿದ್ದೇವೆ ಮತ್ತು ನಾವು ಅವನೆಡೆಗೆ ಮರಳುವವರಾಗಿದ್ದೇವೆ. ಓ ಅಲ್ಲಾಹ್! ನನ್ನ ಈ ದುರಂತಕ್ಕಾಗಿ ನನಗೆ ಪ್ರತಿಫಲ ನೀಡು. ಮತ್ತು ಇದಕ್ಕೆ ಬದಲಾಗಿ ಉತ್ತಮವಾದುದನ್ನು ನನಗೆ ನೀಡು."(390)

«إِنَّا لِلَّهِ وَإِنَّا إِلَيْهِ رَاجِعُونَ، اللَّهُمَّ عِنْدَكَ أَحْتَسِبُ مُصِيبَتِي، فَأْجُرْنِي فِيهَا وَأَبْدِلْنِي بِهَا خَيْرًا مِنْهَا»

**(ಇನ್ನಾ ಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್, ಅಲ್ಲಾಹುಮ್ಮ ಇನ್ದಕ ಅಹ್ತಸಿಬು ಮುಸೀಬತೀ, ಫಅ್‌ಜುರ್‌ನೀ ಫೀಹಾ ವಅಬ್ದಿಲ್‌ನೀ ಬಿಹಾ ಖೈರನ್ ಮಿನ್‌ಹಾ)**

"ನಾವು ಅಲ್ಲಾಹನದ್ದಾಗಿದ್ದೇವೆ ಮತ್ತು ನಾವು ಅವನೆಡೆಗೆ ಮರಳುವವರಾಗಿದ್ದೇವೆ. ಓ ಅಲ್ಲಾಹ್! ನನ್ನ ಈ ದುರಂತಕ್ಕಾಗಿ ನಾನು ನಿನ್ನ ಬಳಿ ಪ್ರತಿಫಲವನ್ನು ಆಶಿಸುತ್ತಿದ್ದೇನೆ. ಆದ್ದರಿಂದ ಅದಕ್ಕಾಗಿ ನನಗೆ ಪ್ರತಿಫಲವನ್ನು ನೀಡು ಮತ್ತು ಅದರ ಬದಲಿಗೆ ನನಗೆ ಅದಕ್ಕಿಂತಲೂ ಉತ್ತಮವಾದುದನ್ನು ನೀಡು."(391)

## 63. ತಅ್‌ಝಿಯಃ(392)

ಪ್ರವಾದಿ(ﷺ)ರವರು ಹೇಳಿದರು:

«مَنْ عَزَّى أَخَاهُ الْمُؤْمِنَ فِى مُصِيبَتِهِ كَسَاهُ اللَّهُ حُلَّةً خَضْرَاءَ يَحْبُرُ بِهَا يَوْمَ الْقِيَامَةِ»

**"ತನ್ನ ವಿಶ್ವಾಸಿಯಾದ ಸಹೋದರನ ದುರಂತದಲ್ಲಿ ಅವನಿಗೆ ಯಾರಾದರೂ**

---

**390** ಇದನ್ನು ಮುಸ್ಲಿಮ್ (2/631; ಹದೀಸ್ ನಂ. 918) ಉಮ್ಮು ಸಲಮಾರಿಂದ ವರದಿ ಮಾಡಿದ್ದಾರೆ.

**391** ಇದನ್ನು ಅಬೂದಾವೂದ್ (2/208; ಹದೀಸ್ ನಂ. 3119) ಉಮ್ಮು ಸಲಮಾರಿಂದ ವರದಿ ಮಾಡಿದ್ದಾರೆ.

**392** ಸಂತಾಪಸೂಚನೆ ಅಥವಾ ಸಾಂತ್ವನ ಹೇಳುವುದು.

**ತಲ್‌ಝಿಯತ್ ಮಾಡಿದರೆ ಅಲ್ಲಾಹು ಅವನಿಗೆ ಹಸಿರು ವಸ್ತ್ರವನ್ನು ಉಡಿಸುವನು. ಅಂತ್ಯದಿನದಂದು ಅವನು ಅದನ್ನು ಉಟ್ಟುಕೊಂಡಿರುವನು."**[393]

ಈ ವಿಷಯದಲ್ಲಿ ವರದಿಯಾದ ದಿಕ್ರ್:

«إِنَّ لِلَّهِ مَا أَخَذَ وَلَهُ مَا أَعْطَى وَكُلٌّ عِنْدَهُ بِأَجَلٍ مُسَمًّى»

**(ಇನ್ನ ಲಿಲ್ಲಾಹಿ ಮಾ ಅಖದ, ವಲಹೂ ಮಾ ಅಅ್‌ತಾ, ವಕುಲ್ಲುನ್ ಇನ್ದಹೂ ಬಿಅಜಲಿನ್ ಮುಸಮ್ಮಾ)**

"ಅಲ್ಲಾಹು ಪಡಕೊಂಡದ್ದು ಅವನದಾಗಿದೆ, ಅವನು ನೀಡಿದ್ದೂ ಅವನದಾಗಿದೆ ಮತ್ತು ಸರ್ವವೂ ಅವನ ಬಳಿ ನಿಶ್ಚಿತ ಅವಧಿಯೊಂದಿಗಿದೆ."[394]

## 64. ಜನಾಝ ನಮಾಝ್‌ನಲ್ಲಿ

ಪ್ರವಾದಿ(ﷺ)ರವರು ಹೇಳಿದರು:

«إِذَا صَلَّيْتُمْ عَلَى الْمَيِّتِ فَأَخْلِصُوا لَهُ الدُّعَاءَ»

**"ನೀವು ಮೃತದೇಹದ ಮೇಲೆ ನಮಾಝ್ ಮಾಡಿದರೆ ಅವನಿಗೋಸ್ಕರ ನಿಮ್ಮ ಪ್ರಾರ್ಥನೆಯನ್ನು ನಿಷ್ಕಳಂಕಗೊಳಿಸಿರಿ."**[395]

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ اغْفِرْ لَهُ وَارْحَمْهُ، وَاعْفُ عَنْهُ وَعَافِهِ، وَأَكْرِمْ نُزُلَهُ، وَوَسِّعْ مَدْخَلَهُ، وَاغْسِلْهُ بِمَاءٍ وَثَلْجٍ وَبَرَدٍ، وَنَقِّهِ مِنَ الْخَطَايَا كَمَا يُنَقَّى الثَّوْبُ الْأَبْيَضُ مِنَ الدَّنَسِ، وَأَبْدِلْهُ دَارًا خَيْرًا مِنْ دَارِهِ، وَأَهْلًا خَيْرًا مِنْ أَهْلِهِ، وَزَوْجًا خَيْرًا مِنْ زَوْجِهِ، وَقِهِ فِتْنَةَ الْقَبْرِ وَعَذَابَ النَّارِ»

**(ಅಲ್ಲಾಹುಮ್ಮಗ್ಫಿರ್ ಲಹೂ ವರ್‌ಹಮ್‌ಹೂ, ವಅ್‌ಫು ಅನ್‌ಹು ವಆಫಿಹೀ, ವಅಕ್ರಿಮ್**

---

**393** ಇದನ್ನು ಖತೀಬ್ ತನ್ನ 'ತಾರೀಖ್ ಬಗ್ದಾದ್'ನಲ್ಲಿ (7/397; ಹದೀಸ್ ನಂ. 3935), ಇಬ್ನ್ ಅಸಾಕಿರ್ ತನ್ನ 'ತಾರೀಖ್ ದಿಮಶ್ಕ್'ನಲ್ಲಿ (52/218; ಹದೀಸ್ ನಂ. 10994) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**394** ಇದನ್ನು ಬುಖಾರಿ (1/431; ಹದೀಸ್ ನಂ. 1224), ಮುಸ್ಲಿಮ್ (2/635; ಹದೀಸ್ ನಂ. 923) ಉಸಾಮಃ ಇಬ್ನ್ ಝೈದ್‌ರಿಂದ ವರದಿ ಮಾಡಿದ್ದಾರೆ. ನಂತರ ಮೃತವ್ಯಕ್ತಿಯ ಬಂಧುಗಳೊಂದಿಗೆ ಸಹನೆವಹಿಸುವಂತೆ ಮತ್ತು ಅಲ್ಲಾಹನಿಂದ ಪ್ರತಿಫಲವನ್ನು ಅಪೇಕ್ಷಿಸುವಂತೆ ವಿನಂತಿಸಬೇಕು.

**395** ಇದನ್ನು ಅಬೂದಾವೂದ್ (2/228; ಹದೀಸ್ ನಂ. 3199), ಇಬ್ನ್ ಮಾಜ (1/480; ಹದೀಸ್ ನಂ. 1497) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**ನುಝುಲಹೂ, ವವಸ್ಸಿಅ್ ಮದ್ಖಲಹೂ, ವಗ್ಸಿಲ್‌ಹು ಬಿಮಾಇನ್ ವಸಲ್ಜಿನ್ ವಬರದಿನ್, ವನಕ್ಕಿಹೀ ಮಿನಲ್ ಖತಾಯಾ ಕಮಾ ಯುನಕ್ಕ ಸೌಬುಲ್ ಅಬ್ಯದು ಮಿನ ದ್ದನಸ್, ವಅಬ್ದಿಲ್‌ಹೂ ದಾರನ್ ಖೈರನ್ ಮಿನ್ ದಾರಿಹೀ, ವಅಹ್ಲನ್ ಖೈರನ್ ಮಿನ್ ಅಹ್ಲಿಹೀ, ವಝೌಜನ್ ಖೈರನ್ ಮಿನ್ ಝೌಜಿಹೀ, ವಕಿಹೀ ಫಿತ್ನತಲ್ ಕಬ್ರಿ ವಅದಾಬ ನ್ನಾರ್)**

“ಓ ಅಲ್ಲಾಹ್! ಇವನಿಗೆ ಕ್ಷಮೆನೀಡು, ಇವನಿಗೆ ಕರುಣೆ ತೋರು, ಇವನಿಗೆ ಕ್ಷಮಿಸು, ಇವನ ಪಾಪಗಳನ್ನು ಮನ್ನಿಸು, ಇವನ ವಾಸಸ್ಥಳವನ್ನು ಮಾನ್ಯಗೊಳಿಸು, ಇವನ ಪ್ರವೇಶಸ್ಥಳವನ್ನು ವಿಶಾಲಗೊಳಿಸು, ಇವನನ್ನು ನೀರಿನಿಂದ, ಮಂಜುಗಡ್ಡೆಯಿಂದ, ಮತ್ತು ಹಿಮದಿಂದ ಶುಚೀಕರಿಸು, ಇವನನ್ನು ಪಾಪಗಳಿಂದ ಶುದ್ಧೀಕರಿಸು ಶ್ವೇತವಸ್ತ್ರವನ್ನು ಮಾಲಿನ್ಯದಿಂದ ಶುದ್ಧೀಕರಿಸುವಂತೆ, ಇವನ ಮನೆಗಿಂತಲೂ ಉತ್ತಮವಾದ ಮನೆಯನ್ನು, ಇವನ ಕುಟುಂಬಕ್ಕಿಂತಲೂ ಉತ್ತಮವಾದ ಕುಟುಂಬವನ್ನು, ಇವನ ಸಂಗಾತಿಗಿಂತಲೂ ಉತ್ತಮವಾದ ಸಂಗಾತಿಯನ್ನು ಇವನಿಗೆ ಪ್ರತಿಯಾಗಿ ನೀಡು. ಇವನನ್ನು ಗೋರಿಯ ಪರೀಕ್ಷೆಗಳಿಂದ ಮತ್ತು ನರಕದ ಶಿಕ್ಷೆಯಿಂದ ರಕ್ಷಿಸು.”(396)

«اللَّهُمَّ اغْفِرْ لِحَيِّنَا وَمَيِّتِنَا، وَصَغِيرِنَا وَكَبِيرِنَا، وَذَكَرِنَا وَأُنْثَانَا، وَشَاهِدِنَا وَغَائِبِنَا، اللَّهُمَّ مَنْ أَحْيَيْتَهُ مِنَّا فَأَحْيِهِ عَلَى الْإِسْلَامِ، وَمَنْ تَوَفَّيْتَهُ مِنَّا فَتَوَفَّهُ عَلَى الْإِيمَانِ، اللَّهُمَّ لَا تَحْرِمْنَا أَجْرَهُ وَلَا تَفْتِنَّا بَعْدَهُ»

**(ಅಲ್ಲಾಹುಮ್ಮಗ್ಫಿರ್ ಲಿಹಯ್ಯಿನಾ ವಮಯ್ಯಿತಿನಾ, ವಸಗೀರಿನಾ ವಕಬೀರಿನಾ, ವದಕರಿನಾ ವಉನ್ಸಾನಾ, ವಶಾಹಿದಿನಾ ವಗಾಇಬಿನಾ, ಅಲ್ಲಾಹುಮ್ಮ ಮನ್ ಅಹ್ಯಯ್ತಹೂ ಮಿನ್ನಾ ಫಅಹ್ಯಿಹೀ ಅಲಲ್ ಇಸ್ಲಾಮ್, ವಮನ್ ತವಫ್ಫಯ್ತಹೂ ಮಿನ್ನಾ ಫತವಫ್ಫಹೂ ಅಲಲ್ ಈಮಾನ್, ಅಲ್ಲಾಹುಮ್ಮ ಲಾ ತಹ್ರಿಮ್‌ನಾ ಅಜ್ರಹೂ ವಲಾ ತಫ್ತಿನ್ನಾ ಬಅ್‌ದಹೂ)**

“ಓ ಅಲ್ಲಾಹ್! ನಮ್ಮಲ್ಲಿ ಬದುಕಿರುವವರಿಗೆ ಮತ್ತು ಮೃತಪಟ್ಟವರಿಗೆ, ನಮ್ಮಲ್ಲಿ ಚಿಕ್ಕ ವರಿಗೆ ಮತ್ತು ದೊಡ್ಡವರಿಗೆ, ಪುರುಷರಿಗೆ ಮತ್ತು ಸ್ತ್ರೀಯರಿಗೆ, ಸನಿಹದಲ್ಲಿರುವವರಿಗೆ ಮತ್ತು ದೂರದಲ್ಲಿರುವವರಿಗೆ ಕ್ಷಮೆನೀಡು. ಓ ಅಲ್ಲಾಹ್! ನಮ್ಮಲ್ಲಿ ಯಾರನ್ನು ನೀನು ಜೀವಂತವಾಗಿರಿಸಿದ್ದಿಯೋ ಅವನನ್ನು ಇಸ್ಲಾಮಿನಲ್ಲಿ ಜೀವಂತವಾಗಿರಿಸು. ನಮ್ಮಲ್ಲಿ ಯಾರನ್ನು ನೀನು ಮೃತಪಡಿಸಿದ್ದಿಯೋ ಅವರನ್ನು ಈಮಾನಿನಲ್ಲಿ ಮೃತಪಡಿಸು. ಓ ಅಲ್ಲಾಹ್! ನಮಗೆ ಅವನ ಪ್ರತಿಫಲವನ್ನು ತಡೆಯದಿರು ಮತ್ತು ಅವನ ನಂತರ ನಮ್ಮನ್ನು ಪರೀಕ್ಷಿಸದಿರು.”(397)

«اللَّهُمَّ إِنَّ فُلَانَ بْنَ فُلَانٍ فِي ذِمَّتِكَ، وَحَبْلِ جِوَارِكَ، فَقِهِ فِتْنَةَ الْقَبْرِ

**396** ಇದನ್ನು ಮುಸ್ಲಿಮ್ (2/662; ಹದೀಸ್ ನಂ. 963) ಔಫ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**397** ಇದನ್ನು ಅಬೂದಾವೂದ್ (2/229; ಹದೀಸ್ ನಂ. 3201), ತಿರ್ಮಿದಿ (3/343; ಹದೀಸ್ ನಂ. 1024) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

وَعَذَابَ النَّارِ، وَأَنْتَ أَهْلُ الْوَفَاءِ وَالْحَمْدِ، اللَّهُمَّ فَاغْفِرْ لَهُ وَارْحَمْهُ، إِنَّكَ أَنْتَ الْغَفُورُ الرَّحِيمُ»

**(ಅಲ್ಲಾಹುಮ್ಮ ಇನ್ನ ಫುಲಾನಬ್ನ ಫುಲಾನಿನ್ ಫೀ ದಿಮ್ಮತಿಕ, ವಹಬ್ಲಿ ಜವಾರಿಕ, ಫಕಿಹೀ ಫಿತ್ನತಲ್ ಕಬ್ರಿ ವಅದಾಬ ನ್ನಾರ್, ವಅನ್ತ ಅಹ್ಲುಲ್ ವಫಾಇ ವಲ್‌ಹಮ್ದ್, ಅಲ್ಲಾಹುಮ್ಮ ಫಗ್ಫಿರ್ ಲಹೂ ವರ್‌ಹಮ್‌ಹೂ, ಇನ್ನಕ ಅನ್ತಲ್ ಗಫೂರು ರ್ರಹೀಮ್)**

**“**ಓ ಅಲ್ಲಾಹ್! ಇಂತಿಂತಹನ ಮಗನಾದ ಇಂತಿಂತಹನು ನಿನ್ನ ವಶದಲ್ಲಿದ್ದಾನೆ ಮತ್ತು ನಿನ್ನ ಸಂರಕ್ಷಣೆಯಲ್ಲಿದ್ದಾನೆ. ಆದ್ದರಿಂದ ಅವನನ್ನು ಗೋರಿಯ ಪರೀಕ್ಷೆಯಿಂದ ಮತ್ತು ನರಕದ ಶಿಕ್ಷೆಯಿಂದ ರಕ್ಷಿಸು. ನೀನು ವಾಗ್ದಾನ ನೆರವೇರಿಸುವವನೂ ಸುತ್ಯರ್ಹನೂ ಆಗಿರುವೆ. ಓ ಅಲ್ಲಾಹ್! ಆದ್ದರಿಂದ ಅವನಿಗೆ ಕ್ಷಮೆನೀಡು ಮತ್ತು ಕರುಣೆ ತೋರು. ಖಂಡಿತವಾಗಿಯೂ ನೀನು ಕ್ಷಮಿಸುವವನೂ ಕರುಣಾಮಯಿಯೂ ಆಗಿರುವೆ.**”**[398]

«اللَّهُمَّ عَبْدُكَ وَابْنُ أَمَتِكَ، احْتَاجَ إِلَى رَحْمَتِكَ، وَأَنْتَ غَنِيٌّ عَنْ عَذَابِهِ، إِنْ كَانَ مُحْسِنًا فَزِدْ فِي إِحْسَانِهِ، وَإِنْ كَانَ مُسِيئًا فَتَجَاوَزْ عَنْهُ»

**(ಅಲ್ಲಾಹುಮ್ಮ ಅಬ್ದುಕ ವಬ್ನು ಅಮತಿಕ, ಇಹ್ತಾಜ ಇಲಾ ರಹ್ಮತಿಕ, ವಅನ್ತ ಗನಿಯ್ಯುನ್ ಅನ್ ಅದಾಬಿಹೀ, ಇನ್ ಕಾನ ಮುಹ್ಸಿನನ್ ಫಝಿದ್ ಫೀ ಇಹ್ಸಾನಿಹೀ, ವಇನ್ ಕಾನ ಮುಸೀಅನ್ ಫತಜಾವಝ್ ಅನ್‌ಹೂ)**

**“**ಓ ಅಲ್ಲಾಹ್! ನಿನ್ನ ದಾಸ ಮತ್ತು ನಿನ್ನ ದಾಸಿಯ ಮಗ ನಿನ್ನ ಕರುಣೆಯನ್ನು ಬಯಸುತ್ತಿದ್ದಾನೆ. ಅವನನ್ನು ಶಿಕ್ಷಿಸುವುದರಿಂದ ನೀನು ಸಮೃದ್ಧನಾಗಿರುವೆ. ಅವನು ಸತ್ಕರ್ಮಿಯಾಗಿದ್ದರೆ ಅವನ ಸತ್ಕರ್ಮದಲ್ಲಿ ಆಧಿಕ್ಯವನ್ನು ನೀಡು ಮತ್ತು ಅವನು ದುಷ್ಕರ್ಮಿಯಾಗಿದ್ದರೆ ಅವನಿಗೆ ಕ್ಷಮೆ ನೀಡು.**”**[399]

«اللَّهُمَّ إِنَّهُ عَبْدُكَ وَابْنُ عَبْدِكَ وَابْنُ أَمَتِكَ، كَانَ يَشْهَدُ أَنْ لَا إِلَهَ إِلَّا أَنْتَ، وَأَنَّ مُحَمَّدًا عَبْدُكَ وَرَسُولُكَ، وَأَنْتَ أَعْلَمُ بِهِ، اللَّهُمَّ إِنْ كَانَ مُحْسِنًا فَزِدْ فِي إِحْسَانِهِ، وَإِنْ كَانَ مُسِيئًا فَتَجَاوَزْ عَنْ سَيِّئَاتِهِ، اللَّهُمَّ لَا تَحْرِمْنَا أَجْرَهُ وَلَا تَفْتِنَّا بَعْدَهُ»

**(ಅಲ್ಲಾಹುಮ್ಮ ಇನ್ನಹೂ ಅಬ್ದುಕ ವಬ್ನು ಅಬ್ದಿಕ ವಬ್ನು ಅಮತಿಕ, ಕಾನ ಯಶ್‌ಹದು ಅನ್ ಲಾ ಇಲಾಹ ಇಲ್ಲಾ ಅನ್ತ, ವಅನ್ನ ಮುಹಮ್ಮದನ್ ಅಬ್ದುಕ ವರಸೂಲುಕ, ವಅನ್ತ**

**398** ಇದನ್ನು ಅಬೂದಾವೂದ್ (2/229; ಹದೀಸ್ ನಂ. 3202) ವಾಸಿಲಃ ಇಬ್ನುಲ್ ಅಸ್ಕಅ್‌ರಿಂದ ವರದಿ ಮಾಡಿದ್ದಾರೆ.

**399** ಇದನ್ನು ಹಾಕಿಮ್ ತನ್ನ ‘ಮುಸ್ತದ್ರಕ್’ನಲ್ಲಿ (1/511; ಹದೀಸ್ ನಂ. 1328) ಯಝೀದ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

**ಅಲ್‌ಲಮು ಬಿಹೀ, ಅಲ್ಲಾಹುಮ್ಮ ಇನ್ ಕಾನ ಮುಹ್ಸಿನನ್ ಫಝಿದ್ ಫೀ ಇಹ್ಸಾನಿಹೀ, ವಇನ್ ಕಾನ ಮುಸೀಅನ್ ಫತಜಾವಝ್ ಅನ್ ಸಯ್ಯಿಆತಿಹೀ, ಅಲ್ಲಾಹುಮ್ಮ ಲಾ ತಹ್ರಿಮ್‌ನಾ ಅಜ್ರಹೂ ವಲಾ ತಫ್ತಿನ್ನಾ ಬಅ್‌ದಹೂ)**

**"**ಓ ಅಲ್ಲಾಹ್! ಇವನು ನಿನ್ನ ದಾಸನಾಗಿದ್ದಾನೆ, ನಿನ್ನ ದಾಸನ ಮಗನಾಗಿದ್ದಾನೆ ಮತ್ತು ನಿನ್ನ ದಾಸಿಯ ಮಗನಾಗಿದ್ದಾನೆ. ಇವನು ನಿನ್ನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ ಮತ್ತು ಮುಹಮ್ಮದ್ ನಿನ್ನ ದಾಸ ಮತ್ತು ಸಂದೇಶವಾಹಕ ಆಗಿದ್ದಾರೆಂದು ಸಾಕ್ಷ್ಯ ವಹಿಸುತ್ತಿದ್ದವನಾಗಿದ್ದಾನೆ. ಇದನ್ನು ನೀನು ಚೆನ್ನಾಗಿ ತಿಳಿದಿರುವೆ. ಓ ಅಲ್ಲಾಹ್! ಇವನು ಸತ್ಕರ್ಮಿಯಾಗಿದ್ದರೆ ಅವನ ಸತ್ಕರ್ಮದಲ್ಲಿ ಆಧಿಕ್ಯವನ್ನು ನೀಡು ಮತ್ತು ಇವನು ದುಷ್ಕರ್ಮಿಯಾಗಿದ್ದರೆ ಇವನ ದುಷ್ಕರ್ಮಗಳನ್ನು ಕ್ಷಮಿಸು. ಓ ಅಲ್ಲಾಹ್! ಇವನ ಪ್ರತಿಫಲವನ್ನು ನಮಗೆ ತಡೆಯದಿರು ಮತ್ತು ಇವನ ನಂತರ ನಮ್ಮನ್ನು ಪರೀಕ್ಷಿಸದಿರು.**"**[400]

## 65. ಮೃತದೇಹವನ್ನು ಗೋರಿಯೊಳಗಡೆ ಇಡುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«بِسْمِ اللَّهِ وَعَلَى سُنَّةِ رَسُولِ اللَّهِ»

**(ಬಿಸ್ಮಿಲ್ಲಾಹಿ ವಅಲಾ ಸುನ್ನತಿ ರಸೂಲಿಲ್ಲಾಹ್)**

**"**ಅಲ್ಲಾಹನ ನಾಮದಿಂದ ಮತ್ತು ಅಲ್ಲಾಹನ ಸಂದೇಶವಾಹಕರ ಚರ್ಯೆಯಲ್ಲಿ.**"**[401]

«بِسْمِ اللَّهِ وَعَلَى مِلَّةِ رَسُولِ اللَّهِ»

**(ಬಿಸ್ಮಿಲ್ಲಾಹಿ ವಅಲಾ ಮಿಲ್ಲತಿ ರಸೂಲಿಲ್ಲಾಹ್)**

**"**ಅಲ್ಲಾಹನ ನಾಮದಿಂದ ಮತ್ತು ಅವನ ಸಂದೇಶವಾಹಕರ ಧರ್ಮದಲ್ಲಿ.**"**[402]

## 66. ದಫನದ ನಂತರ

ಪ್ರವಾದಿ(ﷺ)ರವರು ಹೇಳಿದರು:

«اسْتَغْفِرُوا لِأَخِيكُمْ وَسَلُوا لَهُ التَّثْبِيتَ، فَإِنَّهُ الْآنَ يُسْأَلُ»

**"ನೀವು ನಿಮ್ಮ ಸಹೋದರನಿಗಾಗಿ ಕ್ಷಮೆಯನ್ನು ಯಾಚಿಸಿರಿ ಮತ್ತು ಅವನಿಗೋಸ್ಕರ**

---

**400** ಇದನ್ನು ಮಾಲಿಕ್ ತನ್ನ 'ಮುವತ್ತ'ದಲ್ಲಿ (1/228; ಹದೀಸ್ ನಂ. 535) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**401** ಇದನ್ನು ಅಬೂದಾವೂದ್ (2/232; ಹದೀಸ್ ನಂ. 3213), ತಿರ್ಮಿದಿ (3/364; ಹದೀಸ್ ನಂ. 1046) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**402** ಇದನ್ನು ತಿರ್ಮಿದಿ (3/364; ಹದೀಸ್ ನಂ. 1046), ಇಬ್ನ್ ಮಾಜ (1/494; ಹದೀಸ್ ನಂ. 1550) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**ದೃಢತೆಯನ್ನು ಬೇಡಿರಿ. ಯಾಕೆಂದರೆ ಅವನೀಗ ಪ್ರಶ್ನಿಸಲ್ಪಡುತ್ತಾನೆ.”**[403]

## 67. ಗೋರಿ ಸಂದರ್ಶಿಸುವಾಗ

ಪ್ರವಾದಿ(ﷺ)ರವರು ಹೇಳಿದರು:

«وَنَهَيْتُكُمْ عَنْ زِيَارَةِ الْقُبُورِ، فَزُورُوهَا، وَلَا تَقُولُوا مَا يُسْخِطُ الرَّبَّ»

**“ಮತ್ತು ನಾನು ನಿಮ್ಮನ್ನು ಗೋರಿ ಸಂದರ್ಶನದಿಂದ ವಿರೋಧಿಸಿದ್ದೆ. ಆದ್ದರಿಂದ ಈಗ ನೀವು ಸಂದರ್ಶಿಸಿರಿ. ಆದರೆ ಪ್ರಭುವನ್ನು ಕೋಪಿಸುವಂತಹ ಏನನ್ನೂ ಹೇಳದಿರಿ.”**[404]

ಪ್ರವಾದಿ(ﷺ)ರವರು ಹೇಳಿದರು:

«لَا تَسُبُّوا الْأَمْوَاتَ فَإِنَّهُمْ قَدْ أَفْضَوْا إِلَى مَا قَدَّمُوا»

**“ಮೃತಪಟ್ಟವರನ್ನು ನಿಂದಿಸದಿರಿ. ಯಾಕೆಂದರೆ ಅವರು ತಾವು ಮಾಡಿದ್ದ (ಕರ್ಮ) ಗಳೊಂದಿಗೆ ಗತಿಸಿದ್ದಾರೆ.”**[405]

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«السَّلَامُ عَلَيْكُمْ دَارَ قَوْمٍ مُؤْمِنِينَ، وَأَتَاكُمْ مَا تُوعَدُونَ غَدًا، مُؤَجَّلُونَ، وَإِنَّا إِنْ شَاءَ اللَّهُ بِكُمْ لَاحِقُونَ ، اللَّهُمَّ اغْفِرْ لِأَهْلِ بَقِيعِ الْغَرْقَدِ»

**(ಅಸ್ಸಲಾಮು ಅಲೈಕುಮ್ ದಾರ ಕೌಮಿನ್ ಮುಅ್‌ಮಿನೀನ್, ವಅತಾಕುಮ್ ಮಾ ತೂಅದೂನ ಗದನ್ ಮುಅಜ್ಜಲೂನ್, ವಇನ್ನಾ ಇನ್ ಶಾ ಅಲ್ಲಾಹು ಬಿಕುಮ್ ಲಾಹಿಕೂನ್, ಅಲ್ಲಾಹುಮ್ಮಗ್ಫಿರ್ ಲಿಅಹ್ಲಿ ಬಕೀಇಲ್ ಗರ್ಕದ್)**

“ಗೋರಿಯಲ್ಲಿರುವ ವಿಶ್ವಾಸಿ ಸಮೂಹವೇ! ನಿಮ್ಮ ಮೇಲೆ ಶಾಂತಿಯಿರಲಿ. ನಿಮಗೆ ವಾಗ್ದಾನ ನೀಡಲ್ಪಟ್ಟದ್ದನ್ನು ಅವನು ನಿಮಗೆ ನಾಳೆ ನೀಡುವನು. ನೀವು ನಮಗಿಂತ ಮುಂಚೆ ಹೋದವರಾಗಿರುವಿರಿ ಮತ್ತು ಅಲ್ಲಾಹು ಬಯಸಿದರೆ ನಾವು ನಿಮ್ಮೊಂದಿಗೆ ಸೇರುವೆವು. ಓ ಅಲ್ಲಾಹ್! ಬಕೀಉಲ್ ಗರ್ಕದ್[406]ನ ನಿವಾಸಿಗಳಿಗೆ ನೀನು ಕ್ಷಮೆ

**403** ಇದನ್ನು ಅಬೂದಾವೂದ್ (2/234; ಹದೀಸ್ ನಂ. 3221) ಉಸ್ಮಾನ್ ಇಬ್ನ್ ಅಫ್ಫಾನ್‌ರಿಂದ ವರದಿ ಮಾಡಿದ್ದಾರೆ. ತಸ್ಬೀತನ್ನು ವಿವರಿಸುವಂತಹ ಯಾವುದೇ ಹದೀಸ್ ಕೂಡ ವರದಿಯಾಗಿಲ್ಲ. ಹದೀಸ್‌ನಲ್ಲಿರುವ ಅದೇಶಕ್ಕನುಸಾರವಾಗಿ ‘ಅಲ್ಲಾಹುಮ್ಮಗ್ಫಿರ್ ಲಹೂ ವಸಬ್ಬಿತ್‌ಹೂ ಇನ್ದ ಸ್ಸುಆಲ್’ (ಓ ಅಲ್ಲಾಹ್! ಇವನಿಗೆ ಕ್ಷಮೆ ನೀಡು ಮತ್ತು ಪ್ರಶ್ನಿಸುವ ಸಂದರ್ಭದಲ್ಲಿ ಇವನನ್ನು ದೃಢಗೊಳಿಸು) ಎಂದು ಪ್ರಾರ್ಥಿಸಬಹುದಾಗಿದೆ

**404** ಇದನ್ನು ಬಝ್ಝಾರ್ ಅಬೂ ಸಈದ್ ಅಲ್‌ಖುದ್ರೀರಿಂದ ವರದಿ ಮಾಡಿದ್ದಾರೆ. ನೋಡಿ: ಮಜ್ಮಉ ಝ್ಝವಾಇದ್ (3/58; ಹದೀಸ್ ನಂ. 4301)

**405** ಇದನ್ನು ಬುಖಾರಿ (1/470; ಹದೀಸ್ ನಂ. 1329) ಆಯಿಶಾರಿಂದ ವರದಿ ಮಾಡಿದ್ದಾರೆ.

**406** ಅರ್ಥಾತ್ ಮದೀನಾದ ದಫನಭೂಮಿ.

ನೀಡು.”[407]

«السَّلَامُ عَلَى أَهْلِ الدِّيَارِ مِنَ الْمُؤْمِنِينَ وَالْمُسْلِمِينَ، وَيَرْحَمُ اللَّهُ الْمُسْتَقْدِمِينَ مِنَّا وَالْمُسْتَأْخِرِينَ، وَإِنَّا إِنْ شَاءَ اللَّهُ بِكُمْ لَاحِقُونَ»

**(ಅಸ್ಸಲಾಮು ಅಲಾ ಅಹ್ಲಿ ದ್ದಿಯಾರಿ ಮಿನಲ್ ಮುಅ್‌ಮಿನೀನ ವಲ್ ಮುಸ್ಲಿಮೀನ್, ವಯರ್ಹಮುಲ್ಲಾಹುಲ್ ಮುಸ್ತಕ್ದಿಮೀನ ಮಿನ್ನಾ ವಲ್ ಮುಸ್ತಅ್‌ಖಿರೀನ್, ವಇನ್ನಾ ಇನ್ ಶಾ ಅಲ್ಲಾಹು ಬಿಕುಮ್ ಲಾಹಿಕೂನ್)**

“ವಿಶ್ವಾಸಿಗಳಲ್ಲಿ ಮತ್ತು ಮುಸ್ಲಿಮರಲ್ಲಿ ಸೇರಿದ ಗೋರಿಗಳ ನಿವಾಸಿಗಳೇ! ನಿಮ್ಮ ಮೇಲೆ ಶಾಂತಿಯಿರಲಿ. ನಮ್ಮಲ್ಲಿ ಮೊದಲಿನವರಿಗೆ ಮತ್ತು ನಂತರದವರಿಗೆ ಅಲ್ಲಾಹು ಕರುಣೆ ತೋರಲಿ. ಮತ್ತು ಅಲ್ಲಾಹು ಬಯಸಿದರೆ ನಾವು ನಿಮ್ಮೊಂದಿಗೆ ಸೇರುವೆವು.”[408]

«السَّلَامُ عَلَى أَهْلِ الدِّيَارِ مِنَ الْمُؤْمِنِينَ وَالْمُسْلِمِينَ، وَإِنَّا إِنْ شَاءَ اللَّهُ لَاحِقُونَ، أَسْأَلُ اللَّهَ لَنَا وَلَكُمُ الْعَافِيَةَ»

**(ಅಸ್ಸಲಾಮು ಅಲಾ ಅಹ್ಲ ದ್ದಿಯಾರಿ ಮಿನಲ್ ಮುಅ್‌ಮಿನೀನ ವಲ್ ಮುಸ್ಲಿಮೀನ್, ವಇನ್ನಾ ಇನ್ ಶಾ ಅಲ್ಲಾಹು ಲಲಾಹಿಕೂನ್, ಅಸ್‌ಅಲುಲ್ಲಾಹ ಲನಾ ವಲಕುಮುಲ್ ಆಫಿಯಃ)**

“ವಿಶ್ವಾಸಿಗಳಲ್ಲಿ ಮತ್ತು ಮುಸ್ಲಿಮರಲ್ಲಿ ಸೇರಿದ ಗೋರಿಗಳ ನಿವಾಸಿಗಳೇ! ನಿಮ್ಮ ಮೇಲೆ ಶಾಂತಿಯಿರಲಿ. ಅಲ್ಲಾಹು ಬಯಸಿದರೆ ನಾವು ನಿಮ್ಮೊಂದಿಗೆ ಸೇರುವೆವು. ನಮಗೋಸ್ಕರ ಮತ್ತು ನಿಮಗೋಸ್ಕರ ನಾನು ಅಲ್ಲಾಹನೊಂದಿಗೆ ಸೌಖ್ಯವನ್ನು ಬೇಡುತ್ತಿದ್ದೇನೆ.”[409]

## 68. ಶುಕ್ರವಾರದಂದು

ಅಲ್ಲಾಹು ಹೇಳಿದ್ದಾನೆ:

﴿يَٰٓأَيُّهَا ٱلَّذِينَ ءَامَنُوٓاْ إِذَا نُودِىَ لِلصَّلَوٰةِ مِن يَوۡمِ ٱلۡجُمُعَةِ فَٱسۡعَوۡاْ إِلَىٰ ذِكۡرِ ٱللَّهِ وَذَرُواْ ٱلۡبَيۡعَۚ ذَٰلِكُمۡ خَيۡرٞ لَّكُمۡ إِن كُنتُمۡ تَعۡلَمُونَ ۝٩ فَإِذَا قُضِيَتِ ٱلصَّلَوٰةُ فَٱنتَشِرُواْ فِى ٱلۡأَرۡضِ وَٱبۡتَغُواْ مِن فَضۡلِ ٱللَّهِ وَٱذۡكُرُواْ ٱللَّهَ كَثِيرٗا لَّعَلَّكُمۡ تُفۡلِحُونَ ۝١٠﴾

**“ಓ ವಿಶ್ವಾಸಿಗಳೇ! ಶುಕ್ರವಾರದಂದು ನಮಾಝ್‌ಗಾಗಿ ಕರೆಯಲ್ಪಟ್ಟರೆ ನೀವು ಅಲ್ಲಾಹನ ಸ್ಮರಣೆಯೆಡೆಗೆ ಧಾವಿಸಿರಿ ಮತ್ತು ವ್ಯಾಪಾರವನ್ನು ಬಿಟ್ಟುಬಿಡಿರಿ. ನೀವು ಅರಿತವರಾಗಿದ್ದರೆ**

**407** ಇದನ್ನು ಮುಸ್ಲಿಮ್ (2/669; ಹದೀಸ್ ನಂ. 974) ಆಯಿಶಾರಿಂದ ವರದಿ ಮಾಡಿದ್ದಾರೆ.
**408** ಇದನ್ನು ಮುಸ್ಲಿಮ್ (2/669; ಹದೀಸ್ ನಂ. 974) ಆಯಿಶಾರಿಂದ ವರದಿ ಮಾಡಿದ್ದಾರೆ.
**409** ಇದನ್ನು ಮುಸ್ಲಿಮ್ (2/671; ಹದೀಸ್ ನಂ. 975) ಆಯಿಶಾರಿಂದ ವರದಿ ಮಾಡಿದ್ದಾರೆ.

ಅದು ನಿಮಗೆ ಉತ್ತಮವಾಗಿದೆ. ನಮಾಝ್ ನಿರ್ವಹಿಸಲ್ಪಟ್ಟರೆ ನಂತರ ಭೂಮಿಯಲ್ಲಿ ಹರಡಿ ಹೋಗಿರಿ ಮತ್ತು ಅಲ್ಲಾಹನ ಔದಾರ್ಯದಿಂದ ಬೇಡಿಕೊಳ್ಳಿರಿ. ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸಿರಿ. ನೀವು ವಿಜಯಿಗಳಾಗಲೂ ಬಹುದು."[410]

ಪ್ರವಾದಿ(ﷺ)ರವರು ಹೇಳಿದರು:

«خَيْرُ يَوْمٍ طَلَعَتْ عَلَيْهِ الشَّمْسُ يَوْمُ الْجُمُعَةِ، فِيهِ خُلِقَ آدَمُ، وَفِيهِ أُدْخِلَ الْجَنَّةَ، وَفِيهِ أُخْرِجَ مِنْهَا، وَلَا تَقُومُ السَّاعَةُ إِلَّا فِي يَوْمِ الْجُمُعَةِ»

**"ಸೂರ್ಯನು ಉದಯಿಸಿದ ದಿನಗಳಲ್ಲಿ ಉತ್ತಮವಾದ ದಿನವು ಶುಕ್ರವಾರವಾಗಿದೆ. ಆ ದಿನದಲ್ಲಿ ಆದಮ್ ಸೃಷ್ಟಿಸಲ್ಪಟ್ಟರು, ಆ ದಿನದಲ್ಲಿ ಅವರು ಸ್ವರ್ಗಕ್ಕೆ ಪ್ರವೇಶಗೊಳಿಸಲ್ಪಟ್ಟರು, ಆ ದಿನದಲ್ಲಿ ಅವರು ಅಲ್ಲಿಂದ ಹೊರಹಾಕಲ್ಪಟ್ಟರು ಮತ್ತು ಪ್ರಳಯವು ಶುಕ್ರವಾರದಂದು ಹೊರತು ಉಂಟಾಗಲಾರದು."**[411]

ಪ್ರವಾದಿ(ﷺ)ರವರು ಹೇಳಿದರು:

«فِيهِ سَاعَةٌ لَا يُوَافِقُهَا عَبْدٌ مُسْلِمٌ وَهُوَ قَائِمٌ يُصَلِّي يَسْأَلُ اللَّهَ تَعَالَى شَيْئًا إِلَّا أَعْطَاهُ إِيَّاهُ»

**"ಅದರಲ್ಲಿ (ಶುಕ್ರವಾರದಂದು) ಒಂದು ವೇಳೆಯಿದೆ, ಮುಸ್ಲಿಮನಾದ ದಾಸನು ನಿಂತು ನಮಾಝ್ ಮಾಡುತ್ತಾ ಅಲ್ಲಾಹನೊಂದಿಗೆ ಬೇಡುತ್ತಾ ಆ ವೇಳೆಯೊಂದಿಗೆ ಸಮನ್ವಯಗೊಳ್ಳಲಾರನು ಅಲ್ಲಾಹು ಅವನ ಬೇಡಿಕೆಯನ್ನು ಅವನಿಗೆ ನೀಡದೆ."**[412]

ಪ್ರವಾದಿ(ﷺ)ರವರು ಹೇಳಿದರು:

«إِنَّ مِنْ أَفْضَلِ أَيَّامِكُمْ يَوْمُ الْجُمُعَةِ، فَأَكْثِرُوا عَلَيَّ مِنَ الصَّلَاةِ فِيهِ، فَإِنَّ صَلَاتَكُمْ مَعْرُوضَةٌ عَلَيَّ»

**"ನಿಮ್ಮ ದಿನಗಳಲ್ಲಿ ಹೆಚ್ಚು ಶ್ರೇಷ್ಠವಾದುದು ಶುಕ್ರವಾರವಾಗಿದೆ. ಆದ್ದರಿಂದ ಅದರಲ್ಲಿ ನನ್ನ ಮೇಲಿನ ಸಲಾತನ್ನು ಅಧಿಕಗೊಳಿಸಿರಿ. ಯಾಕೆಂದರೆ ನಿಮ್ಮ ಸಲಾತ್ ನನ್ನ ಮೇಲೆ ಪ್ರದರ್ಶಿಸಲ್ಪಡುತ್ತದೆ."**[413]

---

**410** ಕುರ್‌ಆನ್ 62/9–10

**411** ಇದನ್ನು ಮುಸ್ಲಿಮ್ (2/585; ಹದೀಸ್ ನಂ. 854) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**412** ಇದನ್ನು ಬುಖಾರಿ (1/316; ಹದೀಸ್ ನಂ. 893), ಮುಸ್ಲಿಮ್ (2/583; ಹದೀಸ್ ನಂ. 852) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**413** ಇದನ್ನು ಅಬೂ ದಾವೂದ್ (1/342; ಹದೀಸ್ ನಂ. 1047) ಔಸ್ ಇಬ್ನ್ ಔಸ್‌ರಿಂದ ವರದಿ ಮಾಡಿದ್ದಾರೆ.

# 69. ಗ್ರಹಣ ವೇಳೆಯಲ್ಲಿ

ಅಲ್ಲಾಹು ಹೇಳಿದ್ದಾನೆ:

﴿ وَمِنْ ءَايَٰتِهِ ٱلَّيْلُ وَٱلنَّهَارُ وَٱلشَّمْسُ وَٱلْقَمَرُ ۚ لَا تَسْجُدُوا۟ لِلشَّمْسِ وَلَا لِلْقَمَرِ وَٱسْجُدُوا۟ لِلَّهِ ٱلَّذِى خَلَقَهُنَّ إِن كُنتُمْ إِيَّاهُ تَعْبُدُونَ ﴿٣٧﴾ فَإِنِ ٱسْتَكْبَرُوا۟ فَٱلَّذِينَ عِندَ رَبِّكَ يُسَبِّحُونَ لَهُۥ بِٱلَّيْلِ وَٱلنَّهَارِ وَهُمْ لَا يَسْـَٔمُونَ ۩ ﴿٣٨﴾ ﴾

**"ಮತ್ತು ಅವನ ದೃಷ್ಟಾಂತಗಳಲ್ಲಿ ಸೇರಿದ್ದಾಗಿವೆ ರಾತ್ರಿ, ಹಗಲು, ಸೂರ್ಯ ಮತ್ತು ಚಂದ್ರ. ಸೂರ್ಯನಿಗಾಗಲಿ ಚಂದ್ರನಿಗಾಗಲಿ ಸುಜೂದ್ ಮಾಡಬೇಡಿರಿ. ಅವುಗಳನ್ನು ಸೃಷ್ಟಿಸಿದ ಅಲ್ಲಾಹನಿಗೆ ಸುಜೂದ್ ಮಾಡಿರಿ. ನೀವು ಅವನನ್ನು ಆರಾಧಿಸುವವರಾಗಿದ್ದರೆ. ಅವರೇನಾದರೂ ಅಹಂಭಾವವನ್ನು ತೋರಿದರೆ ನಿನ್ನ ಪ್ರಭುವಿನ ಬಳಿಯಿರುವವರು ರಾತ್ರಿ ಮತ್ತು ಹಗಲು ಅವನ ತಸ್ಬೀಹ್ ಹೇಳುತ್ತಿರುತ್ತಾರೆ. ಅವರೆಂದೂ ಆಯಾಸಗೊಳ್ಳಲಾರರು."**(414)

ಪ್ರವಾದಿ(ﷺ)ರವರು ಹೇಳಿದರು:

«إِنَّ الشَّمْسَ وَالْقَمَرَ آيَتَانِ مِنْ آيَاتِ اللَّهِ، لَا يَنْخَسِفَانِ لِمَوْتِ أَحَدٍ وَلَا لِحَيَاتِهِ، فَإِذَا رَأَيْتُمْ ذَلِكَ فَاذْكُرُوا اللَّهَ وَكَبِّرُوا وَصَلُّوا وَتَصَدَّقُوا، يَا أُمَّةَ مُحَمَّدٍ، وَاللَّهِ مَا مِنْ أَحَدٍ أَغْيَرُ مِنَ اللَّهِ أَنْ يَزْنِيَ عَبْدُهُ أَوْ تَزْنِيَ أَمَتُهُ، يَا أُمَّةَ مُحَمَّدٍ، وَاللَّهِ لَوْ تَعْلَمُونَ مَا أَعْلَمُ لَضَحِكْتُمْ قَلِيلًا وَلَبَكَيْتُمْ كَثِيرًا»

**"ಸೂರ್ಯ ಮತ್ತು ಚಂದ್ರ ಅಲ್ಲಾಹನ ದೃಷ್ಟಾಂತಗಳಲ್ಲಿ ಸೇರಿದ ಎರಡು ದೃಷ್ಟಾಂತಗಳಾಗಿವೆ. ಅವು ಯಾವೊಬ್ಬನ ಮರಣಕ್ಕಾಗಲಿ ಜೀವನಕ್ಕಾಗಲಿ ಗ್ರಹಣಕ್ಕೀಡಾಗುವುದಿಲ್ಲ. ಆದ್ದ-ರಿಂದ ನೀವು ಅದನ್ನು (ಗ್ರಹಣವನ್ನು) ಕಂಡರೆ ಅಲ್ಲಾಹನನ್ನು ಸ್ಮರಿಸಿರಿ, ತಕ್ಬೀರ್ ಹೇಳಿರಿ, ನಮಾಝ್ ಮಾಡಿರಿ ಮತ್ತು ಸದಕಾ ನೀಡಿರಿ. ಓ ಮುಹಮ್ಮದ್‌ರವರ ಸಮುದಾಯವೇ! ಅಲ್ಲಾಹನಾಣೆ, ತನ್ನ ದಾಸನು ವ್ಯಭಿಚರಿಸುವುದನ್ನು ಅಥವಾ ತನ್ನ ದಾಸಿಯು ವ್ಯಭಿಚರಿಸುವುದನ್ನು ಅಲ್ಲಾಹನಿಗಿಂತಲೂ ಕಠಿಣವಾಗಿ ಅಸಹ್ಯಪಡುವವರು ಯಾರೂ ಇಲ್ಲ. ಓ ಮುಹಮ್ಮದ್‌ರವರ ಸಮುದಾಯವೇ! ಅಲ್ಲಾಹನಾಣೆ, ನಾನು ತಿಳಿದಿರುವುದನ್ನು ನೀವು ತಿಳಿದಿದ್ದರೆ ನೀವು ಸ್ವಲ್ಪವೇ ನಗುತ್ತಿದ್ದಿರಿ ಮತ್ತು ಹೆಚ್ಚು ಹೆಚ್ಚು ಅಳುತ್ತಿದ್ದಿರಿ."**(415)

---

**414** ಕುರ್‌ಆನ್ 41/37–38

**415** ಇದನ್ನು ಬುಖಾರಿ (1/354; ಹದೀಸ್ ನಂ. 997), ಮುಸ್ಲಿಮ್ (2/618; ಹದೀಸ್ ನಂ. 901) ಆಯಿಶಾರಿಂದ ವರದಿ ಮಾಡಿದ್ದಾರೆ.

## 70. ಮಳೆನೀರಿಗಾಗಿ

ಅಲ್ಲಾಹು ಹೇಳಿದ್ದಾನೆ:

﴿ فَقُلْتُ ٱسْتَغْفِرُوا۟ رَبَّكُمْ إِنَّهُۥ كَانَ غَفَّارًا ﴿١٠﴾ يُرْسِلِ ٱلسَّمَآءَ عَلَيْكُم مِّدْرَارًا ﴿١١﴾ ﴾

**"ನೀವು ನಿಮ್ಮ ಪ್ರಭುವಿನೊಂದಿಗೆ ಕ್ಷಮೆಯನ್ನು ಬೇಡಿರಿ. ಅವನು ಅತ್ಯಂತ ಕ್ಷಮಿಸುವವನಾಗಿದ್ದಾನೆ. ನಿಮಗೋಸ್ಕರ ಧಾರಾಕಾರವಾಗಿ ಮಳೆ ಸುರಿಸುವವನಾಗಿದ್ದಾನೆ."**[416]

﴿ أَفَرَءَيْتُمُ ٱلْمَآءَ ٱلَّذِى تَشْرَبُونَ ﴿٦٨﴾ ءَأَنتُمْ أَنزَلْتُمُوهُ مِنَ ٱلْمُزْنِ أَمْ نَحْنُ ٱلْمُنزِلُونَ ﴿٦٩﴾ لَوْ نَشَآءُ جَعَلْنَٰهُ أُجَاجًا فَلَوْلَا تَشْكُرُونَ ﴿٧٠﴾ ﴾

**"ನೀವು ಕುಡಿಯುತ್ತಿರುವ ನೀರನ್ನು ನೀವು ನೋಡುವುದಿಲ್ಲವೇ? ಅದನ್ನು ಮೋಡಗಳಿಂದ ಇಳಿಸಿದ್ದು ನೀವೋ ಅಥವಾ ನಾವೋ ಇಳಿಸಿದವರು? ನಾವು ಬಯಸಿದರೆ ಅದನ್ನು ಉಪ್ಪುನೀರನ್ನಾಗಿ ಮಾಡುತ್ತಿದ್ದೆವು. ಆದರೂ ನೀವು ಕೃತಜ್ಞತೆ ತೋರುವುದಿಲ್ಲವೇ?"**[417]

ಪ್ರವಾದಿ(ﷺ)ರವರು ಹೇಳಿದರು:

«مِفْتَاحُ الْغَيْبِ خَمْسٌ، لَا يَعْلَمُهَا إِلَّا اللَّهُ، لَا يَعْلَمُ أَحَدٌ مَا يَكُونُ فِي غَدٍ، وَلَا يَعْلَمُ أَحَدٌ مَا يَكُونُ فِي الْأَرْحَامِ، وَلَا تَعْلَمُ نَفْسٌ مَاذَا تَكْسِبُ غَدًا، وَلَا تَدْرِي نَفْسٌ بِأَيِّ أَرْضٍ تَمُوتُ، وَمَا يَدْرِي أَحَدٌ مَتَى يَجِيءُ الْمَطَرُ»

**"ಅದೃಶ್ಯದ ಕೀಲಿಕೈ ಐದು (ಕಾರ್ಯ)ಗಳಾಗಿವೆ. ಅಲ್ಲಾಹನ ಹೊರತು ಅವುಗಳನ್ನು ಯಾರೂ ತಿಳಿದಿಲ್ಲ. ನಾಳೆ ತಾನು ಏನಾಗುವೆನೆಂದು ಒಬ್ಬನೂ ತಿಳಿದಿಲ್ಲ. ಗರ್ಭಾಶಯದೊಳಗೆ ಏನಿದೆಯೆಂದು ಒಬ್ಬನೂ ತಿಳಿದಿಲ್ಲ. ನಾಳೆ ತಾನು ಏನನ್ನು ಸಂಪಾದಿಸುವೆನೆಂದು ಯಾವೊಂದು ಶರೀರವೂ ತಿಳಿದಿಲ್ಲ. ತಾನು ಯಾವ ಭೂಮಿಯಲ್ಲಿ ಮೃತಪಡುವೆನೆಂದು ಯಾವೊಂದು ಶರೀರವೂ ತಿಳಿದಿಲ್ಲ. ಮಳೆಯು ಯಾವಾಗ ಸುರಿಯುವುದೆಂದು ಯಾವೊಬ್ಬನೂ ತಿಳಿದಿಲ್ಲ."**[418]

ಪ್ರವಾದಿ(ﷺ)ರವರು ಹೇಳಿದರು:

«إِنَّكُمْ شَكَوْتُمْ جَدْبَ دِيَارِكُمْ وَاسْتِئْخَارَ الْمَطَرِ عَنْ إِبَّانِ زَمَانِهِ عَنْكُمْ وَقَدْ أَمَرَكُمُ اللَّهُ عَزَّ وَجَلَّ أَنْ تَدْعُوهُ وَوَعَدَكُمْ أَنْ يَسْتَجِيبَ لَكُمْ»

---

**416** ಕುರ್‌ಆನ್ 71/10–11

**417** ಕುರ್‌ಆನ್ 56/68–70

**418** ಇದನ್ನು ಬುಖಾರಿ (1/351; ಹದೀಸ್ ನಂ. 992) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**"ನೀವು ನಿಮ್ಮ ನಾಡುಗಳ ಕ್ಷಾಮವನ್ನು ಮತ್ತು ಮಳೆಯು ಅದರ ಸಮಯದಿಂದ ಹಿಂದಿಕ್ಕಲ್ಪಟ್ಟಿರುವುದರ ಕುರಿತು ನೀವು ನನ್ನಲ್ಲಿ ದೂರಿದ್ದೀರಿ. ಅಲ್ಲಾಹು ತನ್ನಲ್ಲಿ ಪ್ರಾರ್ಥಿಸಬೇಕೆಂದು ನಿಮ್ಮೊಂದಿಗೆ ಆದೇಶಿಸಿದ್ದಾನೆ ಮತ್ತು ತಾನು ಉತ್ತರ ನೀಡುವೆನೆಂದು ವಾಗ್ದಾನ ಮಾಡಿದ್ದಾನೆ."**[419]

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ أَغِثْنَا، اللَّهُمَّ أَغِثْنَا، اللَّهُمَّ أَغِثْنَا»

**(ಅಲ್ಲಾಹುಮ್ಮ ಅಗಿಸ್‌ನಾ, ಅಲ್ಲಾಹುಮ್ಮ ಅಗಿಸ್‌ನಾ, ಅಲ್ಲಾಹುಮ್ಮ ಅಗಿಸ್‌ನಾ)**

"ಓ ಅಲ್ಲಾಹ್! ನಮಗೆ ಮಳೆ ಸುರಿಸು. ಓ ಅಲ್ಲಾಹ್! ನಮಗೆ ಮಳೆ ಸುರಿಸು. ಓ ಅಲ್ಲಾಹ್! ನಮಗೆ ಮಳೆ ಸುರಿಸು."[420]

«اللَّهُمَّ اسْقِنَا غَيْثًا مُغِيثًا، مَرِيئًا مَرِيعًا، نَافِعًا غَيْرَ ضَارٍّ، عَاجِلًا غَيْرَ آجِلٍ»

**(ಅಲ್ಲಾಹುಮ್ಮಗಿಸ್‌ನಾ ಗೈಸನ್ ಮುಗೀಸನ್, ಮರೀಅನ್ ಮರೀಅನ್, ನಾಫಿಅನ್ ಗೈರ ದಾರ್ರಿನ್, ಆಜಿಲನ್ ಗೈರ ಆಜಿಲಿನ್)**

"ಓ ಅಲ್ಲಾಹ್! ನಮಗೆ ಸಹಕಾರಿಯಾಗಿರುವ, ಪರಿಪೂರ್ಣವಾಗಿರುವ, ಆರೋಗ್ಯಕರವಾಗಿರುವ, ಉಪಕಾರಪ್ರದವಾದ, ಉಪದ್ರವಕಾರಿಯಲ್ಲದ ಮಳೆಯನ್ನು ಬೇಗನೇ ಸುರಿಸು, ತಡವಾಗಿ ಅಲ್ಲ."[421]

«اللَّهُمَّ اسْقِ عِبَادَكَ وَبَهَائِمَكَ وَانْشُرْ رَحْمَتَكَ وَأَحْيِ بَلَدَكَ الْمَيِّتَ»

**(ಅಲ್ಲಾಹುಮ್ಮಸ್ಕಿ ಇಬಾದಕ ವಬಹಾಇಮಕ ವನ್ಶುರ್ ರಹ್ಮತಕ ವಅಹ್ಯಿ ಬಲದಕಲ್ ಮಯ್ಯಿತ್)**

"ಓ ಅಲ್ಲಾಹ್! ನಿನ್ನ ದಾಸರಿಗೆ ಮತ್ತು ನಿನ್ನ ಜಾನುವಾರುಗಳಿಗೆ ಮಳೆಸುರಿಸು. ನಿನ್ನ ಕರುಣೆಯನ್ನು ಹರಡಿಸು ಮತ್ತು ಮೃತಪಟ್ಟ ನಿನ್ನ ಭೂಮಿಯನ್ನು ಜೀವಂತಗೊಳಿಸು."[422]

## 71. ಮಳೆ ಸುರಿಯುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ صَيِّبًا نَافِعًا»

---

**419** ಇದನ್ನು ಅಬೂ ದಾವೂದ್ (1/374; ಹದೀಸ್ ನಂ. 1173) ಆಯಿಶಾರಿಂದ ವರದಿ ಮಾಡಿದ್ದಾರೆ.

**420** ಇದನ್ನು ಬುಖಾರಿ (1/344; ಹದೀಸ್ ನಂ. 968), ಮುಸ್ಲಿಮ್ (2/612; ಹದೀಸ್ ನಂ. 897) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**421** ಇದನ್ನು ಅಬೂದಾವೂದ್ (1/374; ಹದೀಸ್ ನಂ. 1169) ಜಾಬಿರ್‌ರಿಂದ ವರದಿ ಮಾಡಿದ್ದಾರೆ.

**422** ಇದನ್ನು ಅಬೂದಾವೂದ್ (1/375; ಹದೀಸ್ ನಂ. 1176) ಅಮ್ರ್ ಇಬ್ನ್‌ರಿಂದ ವರದಿ ಮಾಡಿದ್ದಾರೆ.

**(ಅಲ್ಲಾಹುಮ್ಮ ಸಯ್ಯಿಬನ್ ನಾಫಿಅನ್)**

**"**ಓ ಅಲ್ಲಾಹ್! ಉಪಕಾರಪ್ರದವಾದ ಮಳೆಯಾಗಿರಲಿ.**"**[423]

## 72. ಮಳೆ ಸುರಿದು ನಿಂತ ನಂತರ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«مُطِرْنَا بِفَضْلِ اللَّهِ وَرَحْمَتِهِ»

**(ಮುತಿರ್‌ನಾ ಬಿಫದ್ಲಿಲ್ಲಾಹಿ ವರಹ್ಮತಿಹೀ)**

**"**ಅಲ್ಲಾಹನ ಔದಾರ್ಯದಿಂದ ಮತ್ತು ಕರುಣೆಯಿಂದ ನಮಗೆ ಮಳೆ ಸುರಿಯಿತು.**"**[424]

## 73. ಅತಿವೃಷ್ಟಿಯಿಂದಾಗಿ ನಾಶನಷ್ಟಗಳನ್ನು ಭಯಪಟ್ಟರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ حَوَالِينَا وَلَا عَلَيْنَا، اللَّهُمَّ عَلَى الْآكَامِ وَالظِّرَابِ وَبُطُونِ الْأَوْدِيَةِ وَمَنَابِتِ الشَّجَرِ»

**(ಅಲ್ಲಾಹುಮ್ಮ ಹವಾಲೀನಾ ವಲಾ ಅಲೈನಾ, ಅಲ್ಲಾಹುಮ್ಮ ಅಲಲ್ ಆಕಾಮಿ ವದ್ದಿರಾಬಿ, ವಬುತೂನಿಲ್ ಔದಿಯತಿ, ವಮನಾಬಿತಿ ಶ್ಶಜರ್)**

**"**ಓ ಅಲ್ಲಾಹ್! ನಮ್ಮ ಸುತ್ತಮುತ್ತಲು, ನಮ್ಮ ಮೇಲಲ್ಲ. ಓ ಅಲ್ಲಾಹ್! ಹುಲ್ಲುಗಾವಲುಗಳ ಮೇಲೆ, ಗುಡ್ಡಗಳ ಮೇಲೆ, ಕಣಿವೆಗಳ ಮೇಲೆ ಮತ್ತು ಮರಬುಡಗಳ ಮೇಲೆ (ಮಳೆ ಸುರಿರಿಯಲಿ).**"**[425]

## 74. ಜೋರಾಗಿ ಗಾಳಿ ಬೀಸಿದಾಗ

ಅಲ್ಲಾಹು ಹೇಳಿದ್ದಾನೆ:

﴿ وَهُوَ ٱلَّذِى يُرْسِلُ ٱلرِّيَٰحَ بُشْرًۢا بَيْنَ يَدَىْ رَحْمَتِهِۦ ۖ حَتَّىٰٓ إِذَآ أَقَلَّتْ سَحَابًا

**423** ಇದನ್ನು ಬುಖಾರಿ (1/349; ಹದೀಸ್ ನಂ. 985) ಆಯಿಶಾರಿಂದ ವರದಿ ಮಾಡಿದ್ದಾರೆ.

**424** ಇದನ್ನು ಬುಖಾರಿ (1/290; ಹದೀಸ್ ನಂ. 810) ಝೈದ್ ಇಬ್ನ್ ಖಾಲಿದ್ ಅಲ್‌ಜುಹನೀರಿಂದ ವರದಿ ಮಾಡಿದ್ದಾರೆ.

**425** ಇದನ್ನು ಬುಖಾರಿ (1/344; ಹದೀಸ್ ನಂ. 968), ಮುಸ್ಲಿಮ್ (2/612; ಹದೀಸ್ ನಂ. 897) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

ثِقَالًا سُقْنَـٰهُ لِبَلَدٍ مَّيِّتٍ فَأَنزَلْنَا بِهِ ٱلْمَآءَ فَأَخْرَجْنَا بِهِۦ مِن كُلِّ ٱلثَّمَرَٰتِ ۚ كَذَٰلِكَ نُخْرِجُ ٱلْمَوْتَىٰ لَعَلَّكُمْ تَذَكَّرُونَ ﴿٥٧﴾ ﴾

"ತನ್ನ ಅನುಗ್ರಹದ ಮುಂದಿನಿಂದ ಶುಭವಾರ್ತೆಯಾಗಿ ಗಾಳಿಯನ್ನು ನಿಯೋಗಿಸುವವನು ಅವನಾಗಿದ್ದಾನೆ. ಅದು ಭಾರವಾದ ಮೋಡಗಳನ್ನು ಎತ್ತಿದಾಗ ನಾವದನ್ನು ಮೃತಪಟ್ಟ ನಾಡಿನೆಡೆಗೆ ಚಲಿಸುವಂತೆ ಮಾಡುವೆವು. ಹಾಗೆ ಅದರಿಂದ ನಾವು ನೀರನ್ನು ಇಳಿಸಿದೆವು. ಮತ್ತು ಅದರಿಂದ ಎಲ್ಲ ರೀತಿಯ ಫಲಗಳನ್ನು ಹೊರತರುವೆವು. ನಾವು ಇದೇ ರೀತಿ ಮೃತಪಟ್ಟವರನ್ನು ಹೊರತರುವೆವು. ಅವರು ಉದ್ಬೋಧಿತರಾಗಲೂ ಬಹುದು."(426)

ಅಲ್ಲಾಹು ಹೇಳಿದ್ದಾನೆ:

﴿ وَأَمَّا عَادٌ فَأُهْلِكُوا۟ بِرِيحٍ صَرْصَرٍ عَاتِيَةٍ ﴿٦﴾ سَخَّرَهَا عَلَيْهِمْ سَبْعَ لَيَالٍ وَثَمَـٰنِيَةَ أَيَّامٍ حُسُومًا فَتَرَى ٱلْقَوْمَ فِيهَا صَرْعَىٰ كَأَنَّهُمْ أَعْجَازُ نَخْلٍ خَاوِيَةٍ ﴿٧﴾ فَهَلْ تَرَىٰ لَهُم مِّنۢ بَاقِيَةٍ ﴿٨﴾ ﴾

"ಮತ್ತು ಆದ್ (ಜನಾಂಗ), ಅವರು ಅತಿಭೀಕರವಾದ ಬಿರುಗಾಳಿಯಿಂದಾಗಿ ನಾಶಗೊಳಿಸಲ್ಪಟ್ಟರು. ಅವನು (ಅಲ್ಲಾಹು) ಅದನ್ನು ಅವರ ಮೇಲೆ ನಿರಂತರವಾದ ಏಳು ರಾತ್ರಿ ಮತ್ತು ಎಂಟು ಹಗಲುಗಳ ಕಾಲ ವಿಧೇಯಗೊಳಿಸಿದನು. ನೀನು ಆ ಜನರನ್ನು ಮಗುಚಿ ಬಿದ್ದವರಾಗಿ ಕಾಣುವೆ, ಅವರು ಟೊಳ್ಳು ಖರ್ಜೂರದ ಮರಗಳೋ ಎಂಬಂತೆ. ಅವರಲ್ಲಿ ಯಾರಾದರೂ ಬಾಕಿಯುಳಿದಿದ್ದಾಗಿ ನೀನು ಕಂಡಿದ್ದೀಯಾ?"(427)

ಅಲ್ಲಾಹು ಹೇಳಿದ್ದಾನೆ:

﴿ فَلَمَّا رَأَوْهُ عَارِضًا مُّسْتَقْبِلَ أَوْدِيَتِهِمْ قَالُوا۟ هَـٰذَا عَارِضٌ مُّمْطِرُنَا ۚ بَلْ هُوَ مَا ٱسْتَعْجَلْتُم بِهِۦ ۖ رِيحٌ فِيهَا عَذَابٌ أَلِيمٌ ﴿٢٤﴾ ﴾

"ಅವರು ಅದನ್ನು (ಅಲ್ಲಾಹನ ಶಿಕ್ಷೆಯನ್ನು) ತಮ್ಮ ಕಣಿವೆಗಳ ಬಳಿಗೆ ಆಗಮಿಸುವ ಮೋಡವಾಗಿ ಕಂಡಾಗ ಹೇಳಿದರು: 'ಈ ಮೋಡವು ನಮಗೆ ಮಳೆಯನ್ನು ಸುರಿಸುವುದು'. ಪ್ರತ್ಯುತಃ ಅದು ನೀವು ಏನನ್ನು ಅವಸರಿಸಿದ್ದೀರೋ ಅದಾಗಿದೆ. (ಅರ್ಥಾತ್) ಗಾಳಿ, ಅದರಲ್ಲಿ ಯಾತನಾಮಯ ಶಿಕ್ಷೆಯಿದೆ."(428)

ಪ್ರವಾದಿ(ﷺ)ರವರು ಹೇಳಿದರು:

«الرِّيحُ مِنْ رَوْحِ اللَّهِ، تَأْتِي بِالرَّحْمَةِ وَتَأْتِي بِالْعَذَابِ، فَإِذَا رَأَيْتُمُوهَا فَلَا

**426** ಕುರ್‌ಆನ್ 7/57
**427** ಕುರ್‌ಆನ್ 69/6–8
**428** ಕುರ್‌ಆನ್ 46/24

تَسُبُّوهَا، وَسَلُوا اللَّهَ خَيْرَهَا وَاسْتَعِيذُوا بِاللَّهِ مِنْ شَرِّهَا»

**“ಗಾಳಿಯು ಅಲ್ಲಾಹನ ಅನುಗ್ರಹದಲ್ಲಿ ಸೇರಿದ್ದಾಗಿದೆ. ಅದು ಕರುಣೆಯನ್ನು ತರುತ್ತದೆ ಮತ್ತು ಶಿಕ್ಷೆಯನ್ನೂ ತರುತ್ತದೆ. ನೀವು ಅದನ್ನು ಕಂಡಾಗ ಅದನ್ನು ಹಿಯಾಳಿಸಬೇಡಿರಿ. ಅಲ್ಲಾಹನೊಂದಿಗೆ ಅದರ ಒಳಿತನ್ನು ಬೇಡಿಕೊಳ್ಳಿರಿ ಮತ್ತು ಅಲ್ಲಾಹನೊಂದಿಗೆ ಅದರ ಕೆಡುಕಿನಿಂದ ಅಭಯ ಯಾಚಿಸಿರಿ.”(429)**

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ إِنِّي أَسْأَلُكَ خَيْرَهَا وَخَيْرَ مَا فِيهَا، وَخَيْرَ مَا أُرْسِلَتْ بِهِ، وَأَعُوذُ بِكَ مِنْ شَرِّهَا، وَشَرِّ مَا فِيهَا، وَشَرِّ مَا أُرْسِلَتْ بِهِ»

**(ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಖೈರಹಾ, ವಖೈರ ಮಾ ಫೀಹಾ, ವಖೈರ ಮಾ ಉರ್ಸಿಲತ್ ಬಿಹೀ, ವಅಊದು ಬಿಕ ಮಿನ್ ಶರ್‍ರಿಹಾ, ವಶರ್‍ರಿ ಮಾ ಫೀಹಾ, ವಶರ್‍ರಿ ಮಾ ಉರ್ಸಿಲತ್ ಬಿಹೀ)**

“ಓ ಅಲ್ಲಾಹ್! ನಾನು ಅದರ (ಗಾಳಿಯ) ಒಳಿತನ್ನು, ಅದರಲ್ಲಿರುವ ಒಳಿತನ್ನು ಮತ್ತು ಅದು ಯಾವುದರೊಂದಿಗೆ ನಿಯೋಗಿಸಲ್ಪಟ್ಟಿದೆಯೋ ಅದರ ಒಳಿತನ್ನು ನಿನ್ನಲ್ಲಿ ಬೇಡುತ್ತಿದ್ದೇನೆ. ನಾನು ಅದರ ಕೆಡುಕಿನಿಂದ, ಅದರಲ್ಲಿರುವ ಕೆಡುಕಿನಿಂದ ಮತ್ತು ಅದು ಯಾವುದರೊಂದಿಗೆ ನಿಯೋಗಿಸಲ್ಪಟ್ಟಿದೆಯೋ ಅದರ ಕೆಡುಕಿನಿಂದ ಅಭಯ ಯಾಚಿಸುತ್ತಿದ್ದೇನೆ.”(430)

«اللَّهُمَّ إِنَّا نَسْأَلُكَ مِنْ خَيْرِ هَذِهِ الرِّيحِ، وَخَيْرِ مَا فِيهَا، وَخَيْرِ مَا أُمِرَتْ بِهِ، وَنَعُوذُ بِكَ مِنْ شَرِّ هَذِهِ الرِّيحِ، وَشَرِّ مَا فِيهَا، وَشَرِّ مَا أُمِرَتْ بِهِ»

**(ಅಲ್ಲಾಹುಮ್ಮ ಇನ್ನಾ ನಸ್‌ಅಲುಕ ಮಿನ್ ಖೈರಿ ಹಾದಿಹಿ ರ್‍ರೀಹಿ, ವಖೈರಿ ಮಾ ಫೀಹಾ, ವಖೈರಿ ಮಾ ಉಮಿರತ್ ಬಿಹೀ, ವನಊದು ಬಿಕ ಮಿನ್ ಶರ್‍ರಿ ಹಾದಿಹಿ ರ್‍ರೀಹಿ, ವಶರ್‍ರಿ ಮಾ ಫೀಹಾ, ವಶರ್‍ರಿ ಮಾ ಉಮಿರತ್ ಬಿಹೀ)**

“ಓ ಅಲ್ಲಾಹ್! ಈ ಗಾಳಿಯ ಒಳಿತಿನಿಂದ, ಇದರಲ್ಲಿರುವ ಒಳಿತಿನಿಂದ, ಇದು ಯಾವುದಕ್ಕಾಗಿ ಆದೇಶಿಸಲ್ಪಟ್ಟಿದೆಯೋ ಅದರ ಒಳಿತಿನಿಂದ ನಾವು ನಿನ್ನೊಂದಿಗೆ ಬೇಡುತ್ತಿದ್ದೇವೆ. ಈ ಗಾಳಿಯ ಕೆಡುಕಿನಿಂದ, ಇದರಲ್ಲಿರುವ ಕೆಡುಕಿನಿಂದ, ಇದು ಯಾವುದಕ್ಕಾಗಿ ಆದೇಶಿಸಲ್ಪಟ್ಟಿದೆಯೋ ಅದರ ಕೆಡುಕಿನಿಂದ ನಾವು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇವೆ.”(431)

---

**429** ಇದನ್ನು ಅಬೂದಾವೂದ್ (2/747; ಹದೀಸ್ ನಂ. 5097) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**430** ಇದನ್ನು ಮುಸ್ಲಿಮ್ (2/616; ಹದೀಸ್ ನಂ. 899) ಆಯಿಶಾರಿಂದ ವರದಿ ಮಾಡಿದ್ದಾರೆ.

**431** ಇದನ್ನು ತಿರ್ಮಿದಿ (4/521; ಹದೀಸ್ ನಂ. 2252) ಉಬಯ್ಯ್ ಇಬ್ನ್ ಕಅ್‌ಬ್‌ರಿಂದ ವರದಿ ಮಾಡಿದ್ದಾರೆ.

## 75. ಗುಡುಗಿನ ಶಬ್ಧವನ್ನು ಆಲಿಸಿದಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«سُبْحَانَ الَّذِي يُسَبِّحُ الرَّعْدُ بِحَمْدِهِ وَالْمَلَائِكَةُ مِنْ خِيفَتِهِ»

**(ಸುಬ್‌ಹಾನಲ್ಲದೀ ಯುಸಬ್ಬಿಹು ರ್‍ರಅ್‌ದು ಬಿಹಮ್ದಿಹೀ ವಲ್‌ಮಲಾಇಕತು ಮಿನ್ ಖೀಫತಿಹೀ)**

“ಗುಡುಗು ಸ್ತುತಿಯೊಂದಿಗೆ ಮತ್ತು ಮಲಕ್‌ಗಳು ಭಯದಿಂದ ಪ್ರಕೀರ್ತನೆ ಮಾಡುವ ಅಲ್ಲಾಹು ಪರಿಪಾವನನಾಗಿದ್ದಾನೆ.”[432]

## 76. ಚಂದ್ರದರ್ಶನವಾದಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ أَهِلَّهُ عَلَيْنَا بِالْيُمْنِ وَالْإِيمَانِ وَالسَّلَامَةِ وَالْإِسْلَامِ رَبِّى وَرَبُّكَ اللَّهُ»

**(ಅಲ್ಲಾಹುಮ್ಮ ಅಹಿಲ್ಲಹೂ ಅಲೈನಾ ಬಿಲ್‌ಯುಮ್ನಿ ವಲ್‌ಈಮಾನಿ ವಸ್ಸಲಾಮತಿ ವಲ್‌ಇಸ್ಲಾಮಿ ರಬ್ಬೀ ವರಬ್ಬುಕಲ್ಲಾಹ್)**

“ಓ ಅಲ್ಲಾಹ್! ನಮ್ಮ ಮೇಲೆ ನಿರ್ಭಯತೆಯಿಂದ, ವಿಶ್ವಾಸದಿಂದ, ಸಂರಕ್ಷಣೆಯಿಂದ ಮತ್ತು ಶರಣಾಗತಿಯಿಂದ ಚಂದ್ರದರ್ಶನಗೊಳಿಸು. ನನ್ನ ಪ್ರಭು ಮತ್ತು ನಿನ್ನ ಪ್ರಭು ಅಲ್ಲಾಹನಾಗಿದ್ದಾನೆ.”[433]

## 77. ಉಪವಾಸವಿರುವಾಗ ಯಾರಾದರೂ ಅಸಭ್ಯವಾಗಿ ವರ್ತಿಸಿದರೆ

ಪ್ರವಾದಿ(ﷺ)ರವರು ಹೇಳಿದರು:

«مَنْ لَمْ يَدَعْ قَوْلَ الزُّورِ وَالْعَمَلَ بِهِ فَلَيْسَ لِلَّهِ حَاجَةٌ فِي أَنْ يَدَعَ طَعَامَهُ وَشَرَابَهُ»

---

**432** ಇದನ್ನು ಮಾಲಿಕ್ ತನ್ನ ‘ಮುವತ್ತ’ದಲ್ಲಿ (2/992; ಹದೀಸ್ ನಂ. 1801) ಆಮಿರ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

**433** ಇದನ್ನು ತಿರ್ಮಿದಿ (5/504; ಹದೀಸ್ ನಂ. 3451) ತಲ್ಹಾ ಇಬ್ನ್ ಉಬೈದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

**“ಯಾರು ಸುಳ್ಳು ಮಾತುಗಳನ್ನು ಮತ್ತು ಅದರಿಂದಿರುವ ಪ್ರವರ್ತನಗಳನ್ನು ತೊರೆಯುವುದಿಲ್ಲವೋ ಅವನು ತನ್ನ ಆಹಾರವನ್ನು ಮತ್ತು ಪಾನೀಯವನ್ನು ತೊರೆಯಬೇಕೆಂಬ ಯಾವ ಅಗತ್ಯವೂ ಅಲ್ಲಾಹನಿಗಿಲ್ಲ.”**(434)

ಈ ವಿಷಯದಲ್ಲಿ ವರದಿಯಾದ ದಿಕ್ರ್:

«إِنِّى صَائِمٌ، إِنِّى صَائِمٌ»

**(ಇನ್ನೀ ಸಾಇಮುನ್, ಇನ್ನೀ ಸಾಇಮುನ್)**

“ನಾನು ಉಪವಾಸಿಗನಾಗಿರುವೆನು, ನಾನು ಉಪವಾಸಿಗನಾಗಿರುವೆನು”(435)

## 78. ಉಪವಾಸ ತೊರೆಯುವಾಗ

ಪ್ರವಾದಿ(ﷺ)ರವರು ಹೇಳಿದರು:

«يَقُولُ اللَّهُ عَزَّ وَجَلَّ الصَّوْمُ لِي وَأَنَا أَجْزِي بِهِ يَدَعُ شَهْوَتَهُ وَأَكْلَهُ وَشُرْبَهُ مِنْ أَجْلِي وَالصَّوْمُ جُنَّةٌ وَلِلصَّائِمِ فَرْحَتَانِ فَرْحَةٌ حِينَ يُفْطِرُ وَفَرْحَةٌ حِينَ يَلْقَى رَبَّهُ وَلَخُلُوفُ فَمِ الصَّائِمِ أَطْيَبُ عِنْدَ اللَّهِ مِنْ رِيحِ الْمِسْكِ»

**“ಅಲ್ಲಾಹು ಹೇಳುತ್ತಾನೆ: ಉಪವಾಸವು ನನಗಿರುವುದಾಗಿದೆ ಮತ್ತು ಅದಕ್ಕೆ ನಾನು ಪ್ರತಿಫಲವನ್ನು ನೀಡುವೆನು. ಅವನು ತನ್ನ ಸ್ವೇಚ್ಛೆಯನ್ನೂ, ಅಹಾರವನ್ನೂ, ಪಾನೀಯವನ್ನೂ ನನಗೋಸ್ಕರ ತೊರೆಯುತ್ತಾನೆ. ಉಪವಾಸವು ಗುರಾಣಿಯಾಗಿದೆ. ಉಪವಾಸಿಗನಿಗೆ ಎರಡು ಸಂತೋಷಗಳಿವೆ. ಉಪವಾಸ ತೊರೆಯುವಾಗ ಉಂಟಾಗುವ ಸಂತೋಷ ಮತ್ತು ತನ್ನ ಪ್ರಭುವನ್ನು ಭೇಟಿಯಾಗುವಾಗ ಉಂಟಾಗುವ ಸಂತೋಷ. ಉಪವಾಸಿಗನ ಬಾಯಿಯ ದುರ್ಗಂಧವು ಅಲ್ಲಾಹನ ಬಳಿ ಕಸ್ತೂರಿಯ ಸುವಾಸನೆಗಿಂತಲೂ ಹೆಚ್ಚು ಪರಿಮಳವುಳ್ಳದ್ದಾಗಿದೆ.”**(436)

ಈ ವಿಷಯದಲ್ಲಿ ವರದಿಯಾದ ದಿಕ್ರ್:

«ذَهَبَ الظَّمَأُ وَابْتَلَّتِ الْعُرُوقُ وَثَبَتَ الْأَجْرُ إِنْ شَاءَ اللَّهُ»

**(ದಹಬ ದ್ದಮಉ ವಬ್ತಲ್ಲತಿಲ್ ಉರೂಕು ವಸಬತಲ್ ಅಜ್ರು ಇನ್ ಶಾ ಅಲ್ಲಾಹ್)**

“ದಾಹವು ನೀಗಿತು, ನರನಾಡಿಗಳು ತೇವಗೊಂಡವು ಮತ್ತು ಅಲ್ಲಾಹು ಬಯಸಿದರೆ

---

**434** ಇದನ್ನು ಬುಖಾರಿ (2/673; ಹದೀಸ್ ನಂ. 1804) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**435** ಇದನ್ನು ಬುಖಾರಿ (2/670; ಹದೀಸ್ ನಂ. 1795), ಮುಸ್ಲಿಮ್ (2/806; ಹದೀಸ್ ನಂ. 1151) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**436** ಇದನ್ನು ಬುಖಾರಿ (2/673; ಹದೀಸ್ ನಂ. 1804) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

ಪ್ರತಿಫಲವು ನಿಶ್ಚಿತವಾಯಿತು."(437)

## 79. ಈ ರಾತ್ರಿ ಲೈಲತುಲ್ ಕದ್ರ್ ಆಗಿರಬಹುದೆಂದು ಭಾಸವಾದರೆ

ಅಲ್ಲಾಹು ಹೇಳಿದ್ದಾನೆ:

﴿لَيْلَةُ ٱلْقَدْرِ خَيْرٌ مِّنْ أَلْفِ شَهْرٍ ﴿٣﴾﴾

**"ಲೈಲತುಲ್ ಕದ್ರ್ ಸಾವಿರ ತಿಂಗಳುಗಳಿಗಿಂತಲೂ ಉತ್ತಮವಾಗಿದೆ."(438)**

ಪ್ರವಾದಿ(ﷺ)ರವರು ಹೇಳಿದರು:

«مَنْ يَقُمْ لَيْلَةَ الْقَدْرِ إِيمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ»

**"ಲೈಲತುಲ್ ಕದ್ರ್‌ನಂದು ಯಾರು ವಿಶ್ವಾಸದೊಂದಿಗೆ ಮತ್ತು ಪ್ರತಿಫಲಾಪೇಕ್ಷೆಯೊಂದಿಗೆ ನಮಾಝ್ ಮಾಡುತ್ತಾನೋ ಅವನ ಗತ ಪಾಪಗಳು ಕ್ಷಮಿಸಲ್ಪಟ್ಟಿವೆ."(439)**

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ إِنَّكَ عَفُوٌّ، تُحِبُّ الْعَفْوَ، فَاعْفُ عَنِّي»

**(ಅಲ್ಲಾಹುಮ್ಮ ಇನ್ನಕ ಅಫ್‌ವುನ್ ತುಹಿಬ್ಬುಲ್ ಅಫ್ವ ಫಅ್‌ಫು ಅನ್ನೀ)**

"ಓ ಅಲ್ಲಾಹ್! ನೀನು ಕ್ಷಮಿಸುವವನಾಗಿರುವೆ, ಕ್ಷಮೆಯನ್ನು ಇಷ್ಟಪಡುವವನಾಗಿರುವೆ, ಆದ್ದರಿಂದ ನನಗೆ ಕ್ಷಮೆ ನೀಡು."(440)

## 80. ತಲ್ಬಿಯಃ

ತಲ್ಬಿಯಃ ಹೇಳಬೇಕಾದ ರೀತಿ:

«لَبَّيْكَ اللَّهُمَّ لَبَّيْكَ، لَبَّيْكَ لَا شَرِيكَ لَكَ لَبَّيْكَ، إِنَّ الْحَمْدَ وَالنِّعْمَةَ لَكَ وَالْمُلْكَ، لَا شَرِيكَ لَكَ»

**(ಲಬ್ಬೈಕಲ್ಲಾಹುಮ್ಮ ಲಬ್ಬೈಕ್, ಲಬ್ಬೈಕ ಲಾ ಶರೀಕ ಲಕ ಲಬ್ಬೈಕ್, ಇನ್ನಲ್ ಹಮ್ದ**

**437** ಇದನ್ನು ಅಬೂದಾವೂದ್ (1/719; ಹದೀಸ್ ನಂ. 2357) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**438** ಕುರ್‌ಆನ್ 97/3

**439** ಇದನ್ನು ಬುಖಾರಿ (1/21; ಹದೀಸ್ ನಂ. 35), ಮುಸ್ಲಿಮ್ (1/523; ಹದೀಸ್ ನಂ. 760) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**440** ಇದನ್ನು ತಿರ್ಮಿದಿ (5/534; ಹದೀಸ್ ನಂ. 3513), ಇಬ್ನ್ ಮಾಜ (2/1265; ಹದೀಸ್ ನಂ. 3850) ಆಯಿಶಾರಿಂದ ವರದಿ ಮಾಡಿದ್ದಾರೆ.

**ವನ್ನಿಅ್‌ಮತ ಲಕ ವಲ್‌ಮುಲ್ಕ್, ಲಾ ಶರೀಕ ಲಕ್)**

"ನಾನು ಓಗೊಡುತ್ತಿದ್ದೇನೆ, ಓ ಅಲ್ಲಾಹ್! ನಾನು ಓಗೊಡುತ್ತಿದ್ದೇನೆ. ನಾನು ಓಗೊಡುತ್ತಿದ್ದೇನೆ, ನಿನಗೆ ಯಾವ ಸಹಭಾಗಿಗಳೂ ಇಲ್ಲ, ನಾನು ಓಗೊಡುತ್ತಿದ್ದೇನೆ. ಸ್ತುತಿ, ಅನುಗ್ರಹ ಮತ್ತು ಆಧಿಪತ್ಯಗಳು ನಿನ್ನದಾಗಿವೆ. ನಿನಗೆ ಯಾವ ಸಹಭಾಗಿಗಳೂ ಇಲ್ಲ."(441)

## 81. ರುಕ್ನುಲ್ ಯಮಾನೀ ಮತ್ತು ಹಜರುಲ್ ಅಸ್ವದ್‌ನ ಮಧ್ಯೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«رَبَّنَا آتِنَا فِي الدُّنْيَا حَسَنَةً وَفِي الْآخِرَةِ حَسَنَةً وَقِنَا عَذَابَ النَّارِ»

**(ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅದಾಬನ್ನಾರ್)**

"ನಮ್ಮ ಪ್ರಭೂ! ನಮಗೆ ಇಹಲೋಕದಲ್ಲಿ ಒಳಿತನ್ನು ಮತ್ತು ಪರಲೋಕದಲ್ಲಿ ಒಳಿತನ್ನು ನೀಡು. ಮತ್ತು ನಮ್ಮನ್ನು ನರಕ ಶಿಕ್ಷೆಯಿಂದ ಪಾರು ಮಾಡು."(442)

## 82. ಸಫಾ ಮತ್ತು ಮರ್ವಾಗಳ ಮೇಲೆ

ಅಲ್ಲಾಹು ಹೇಳಿದ್ದಾನೆ:

﴿ ۞ إِنَّ ٱلصَّفَا وَٱلْمَرْوَةَ مِن شَعَآئِرِ ٱللَّهِ ﴾

**"ನಿಶ್ಚಯವಾಗಿಯೂ ಸಫಾ ಮತ್ತು ಮರ್ವಾ ಅಲ್ಲಾಹನ ಚಿಹ್ನೆಗಳಲ್ಲಿ ಸೇರಿದ್ದಾಗಿವೆ."**(443)

ಈ ವಿಷಯದಲ್ಲಿ ವರದಿಯಾದ ದಿಕ್ರ್:

«لَا إِلَهَ إِلَّا اللَّهُ وَحْدَهُ لَا شَرِيكَ لَهُ لَهُ الْمُلْكُ وَلَهُ الْحَمْدُ وَهُوَ عَلَى كُلِّ شَيْءٍ قَدِيرٌ لَا إِلَهَ إِلَّا اللَّهُ وَحْدَهُ أَنْجَزَ وَعْدَهُ وَنَصَرَ عَبْدَهُ وَهَزَمَ الْأَحْزَابَ وَحْدَهُ»

**(ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು**

---

**441** ಇದನ್ನು ಬುಖಾರಿ (2/561; ಹದೀಸ್ ನಂ. 1474), ಮುಸ್ಲಿಮ್ (2/841; ಹದೀಸ್ ನಂ. 1184) ಉಮರ್ ಇಬ್ನುಲ್ ಖತ್ತಾಬ್‌ರಿಂದ ವರದಿ ಮಾಡಿದ್ದಾರೆ.

**442** ಇದನ್ನು ಬುಖಾರಿ (2/561; ಹದೀಸ್ ನಂ. 1474), ಮುಸ್ಲಿಮ್ (2/841; ಹದೀಸ್ ನಂ. 1184) ಉಮರ್ ಇಬ್ನುಲ್ ಖತ್ತಾಬ್‌ರಿಂದ ವರದಿ ಮಾಡಿದ್ದಾರೆ.

**443** ಕುರ್‌ಆನ್ 2/158

**ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್, ಲಾ ಇಲಾಹ ಇಲ್ಲಲ್ಲಾಹು ವಹ್ದಹೂ, ಅನ್ಜಝ ವಅ್‌ದಹೂ, ವನಸರ ಅಬ್ದಹೂ, ವಹಝಮಲ್ ಅಹ್‌ಝಾಬ ವಹ್ದಹೂ)**

"ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ. ಅವನು ಏಕೈಕನಾಗಿದ್ದಾನೆ. ಅವನಿಗೆ ಸಹಭಾಗಿಗಳಿಲ್ಲ. ಆಧಿಪತ್ಯವು ಅವನದಾಗಿದೆ ಮತ್ತು ಸ್ತುತಿಯು ಅವನಿಗಾಗಿದೆ. ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವಿರುವವನಾಗಿದ್ದಾನೆ. ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ. ಅವನು ಏಕೈಕನಾಗಿದ್ದಾನೆ. ಅವನು ತನ್ನ ವಾಗ್ದಾನವನ್ನು ಈಡೇರಿಸಿದ್ದಾನೆ ಮತ್ತು ತನ್ನ ದಾಸನಿಗೆ ಸಹಾಯವಿತ್ತಿದ್ದಾನೆ. ಮತ್ತು ಅವನು (ಅವಿಶ್ವಾಸಿಗಳ) ಪಕ್ಷಗಳನ್ನು ಒಬ್ಬಂಟಿಯಾಗಿ ಸೋಲಿಸಿದ್ದಾನೆ."(444)

## 83. ಜಮರಾತ್‌ಗೆ ಕಲ್ಲೆಸೆಯುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُ أَكْبَرُ»

**(ಅಲ್ಲಾಹು ಅಕ್ಬರ್)**

"ಅಲ್ಲಾಹು ಮಹಾನನಾಗಿದ್ದಾನೆ."(445)

## 84. ಪ್ರಾಣಿಯನ್ನು ಕೊಯ್ಯುವಾಗ

ಅಲ್ಲಾಹು ಹೇಳಿದ್ದಾನೆ:

﴿ وَلَا تَأْكُلُوا۟ مِمَّا لَمْ يُذْكَرِ ٱسْمُ ٱللَّهِ عَلَيْهِ وَإِنَّهُۥ لَفِسْقٌ ۗ وَإِنَّ ٱلشَّيَـٰطِينَ لَيُوحُونَ إِلَىٰٓ أَوْلِيَآئِهِمْ لِيُجَـٰدِلُوكُمْ ۖ وَإِنْ أَطَعْتُمُوهُمْ إِنَّكُمْ لَمُشْرِكُونَ ﴿١٢١﴾ ﴾

**"ಯಾವುದರ ಮೇಲೆ ಅಲ್ಲಾಹನ ಹೆಸರನ್ನು ಉಚ್ಛರಿಸಲ್ಪಟ್ಟಿಲ್ಲವೋ ಅದನ್ನು ತಿನ್ನಬೇಡಿರಿ. ಅದೊಂದು ಧರ್ಮಭ್ರಷ್ಟತೆಯಾಗಿದೆ. ನಿಮ್ಮೊಂದಿಗೆ ತರ್ಕಿಸಬೇಕೆಂದು ಶೈತಾನನು ತನ್ನ ಮಿತ್ರರಿಗೆ ಪಿಸುಗುಟ್ಟುತ್ತಿದ್ದಾನೆ. ನೀವೇನಾದರೂ ಅವರನ್ನು ಅನುಸರಿಸಿದರೆ ಖಂಡಿತವಾಗಿಯೂ ನೀವು ಮುಶ್ರಿಕ್‌ಗಳಾಗುವಿರಿ."(446)**

**444** ಇದನ್ನು ಮುಸ್ಲಿಮ್ (2/886; ಹದೀಸ್ ನಂ. 1218) ಜಾಬಿರ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

**445** ಇದನ್ನು ಬುಖಾರಿ (2/622; ಹದೀಸ್ ನಂ. 1663) ಅಬ್ದುಲ್ಲಾಹ್ ಇಬ್ನ್ ಮಸ್‌ಊದ್‌ರಿಂದ ವರದಿ ಮಾಡಿದ್ದಾರೆ.

**446** ಕುರ್‌ಆನ್ 6/121

ಈ ವಿಷಯದಲ್ಲಿ ವರದಿಯಾದ ದಿಕ್ರ್:

«بِسْمِ اللَّهِ وَاللَّهُ أَكْبَرُ»

**(ಬಿಸ್ಮಿಲ್ಲಾಹಿ ವಲ್ಲಾಹು ಅಕ್ಬರ್)**

"ಅಲ್ಲಾಹನ ನಾಮದಿಂದ, ಅಲ್ಲಾಹು ಮಹಾನನಾಗಿದ್ದಾನೆ."[447]

## 85. ಯುದ್ಧಕ್ಕೆ ಹೊರಡುವಾಗ

ಪ್ರವಾದಿ(ﷺ)ರವರು ಹೇಳಿದರು:

«يَا أَيُّهَا النَّاسُ لَا تَتَمَنَّوْا لِقَاءَ الْعَدُوِّ وَاسْأَلُوا اللَّهَ الْعَافِيَةَ فَإِذَا لَقِيتُمُوهُمْ فَاصْبِرُوا وَاعْلَمُوا أَنَّ الْجَنَّةَ تَحْتَ ظِلَالِ السُّيُوفِ»

**"ಓ ಜನರೇ! ಶತ್ರುವನ್ನು ಎದುರುಗೊಳ್ಳುವುದನ್ನು ನೀವು ಆಸೆಪಡಬೇಡಿರಿ. ಅಲ್ಲಾಹನೊಂದಿಗೆ ಸೌಖ್ಯವನ್ನು ಬೇಡಿರಿ. ನೀವೇನಾದರೂ ಅವರನ್ನು ಎದುರುಗೊಂಡರೆ, ಸಹನೆವಹಿಸಿರಿ. ಮತ್ತು ತಿಳಿದುಕೊಳ್ಳಿರಿ, ಸ್ವರ್ಗವು ಖಡ್ಗಗಳ ನೆರಳಿನ ಅಡಿಯಲ್ಲಿದೆಯೆಂದು."**[448]

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ مُنْزِلَ الْكِتَابِ سَرِيعَ الْحِسَابِ اللَّهُمَّ اهْزِمِ الْأَحْزَابَ اللَّهُمَّ اهْزِمْهُمْ وَزَلْزِلْهُمْ»

**(ಅಲ್ಲಾಹುಮ್ಮ ಮುನ್ಝಿಲಲ್ ಕಿತಾಬಿ, ಸರೀಅಲ್ ಹಿಸಾಬಿ, ಅಲ್ಲಾಹುಮ್ಮಹ್‌ಝಿಮಿಲ್ ಅಹ್‌ಝಾಬ, ಅಲ್ಲಾಹುಮ್ಮಹ್‌ಝಿಮ್‌ಹುಮ್, ವಝುಲ್‌ಝಿಲ್‌ಹುಮ್)**

"ಓ ಅಲ್ಲಾಹ್! ಗ್ರಂಥವನ್ನು ಇಳಿಸಿದವನೇ! ಅತಿಶೀಘ್ರವಾಗಿ ವಿಚಾರಣೆ ನಡೆಸುವವನೇ! ಓ ಅಲ್ಲಾಹ್! ಶತ್ರು ಪಕ್ಷಗಳನ್ನು ಪರಾಭವಗೊಳಿಸು. ಓ ಅಲ್ಲಾಹ್! ಅವರನ್ನು ಪರಾಭವಗೊಳಿಸು, ಅವರನ್ನು ನಡುಗಿಸು."[449]

---

**447** ಇದನ್ನು ಮುಸ್ಲಿಮ್ (3/1556; ಹದೀಸ್ ನಂ. 1966) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**448** ಇದನ್ನು ಮುಸ್ಲಿಮ್ (3/1362; ಹದೀಸ್ ನಂ. 1742) ಅಬ್ದುಲ್ಲಾಹ್ ಇಬ್ನ್ ಅಬೀ ಔಫಾರಿಂದ ವರದಿ ಮಾಡಿದ್ದಾರೆ.

**449** ಇದನ್ನು ಬುಖಾರಿ (3/1072; ಹದೀಸ್ ನಂ. 2775), ಮುಸ್ಲಿಮ್ (3/1362; ಹದೀಸ್ ನಂ. 1742) ಅಬ್ದುಲ್ಲಾಹ್ ಇಬ್ನ್ ಅಬೀ ಔಫಾರಿಂದ ವರದಿ ಮಾಡಿದ್ದಾರೆ.

## 86. ಯುದ್ಧ ಮಾಡುತ್ತಿರುವಾಗ

ಪ್ರವಾದಿ(ﷺ)ರವರು ಹೇಳಿದರು:

«ثِنْتَانِ لَا تُرَدَّانِ أَوْ قَلَّمَا تُرَدَّانِ الدُّعَاءُ عِنْدَ النِّدَاءِ وَعِنْدَ الْبَأْسِ حِينَ يُلْجِمُ بَعْضُهُمْ بَعْضًا»

**"ಎರಡು (ಪ್ರಾರ್ಥನೆಗಳು) ತಿರಸ್ಕರಿಸಲ್ಪಡಲಾರವು. ಅಥವಾ ಅಪರೂಪವಾಗಿ ಮಾತ್ರ ತಿರಸ್ಕರಿಸಲ್ಪಡುವುವು. ಅದಾನ್‌ನ ವೇಳೆಯ ಪ್ರಾರ್ಥನೆ ಮತ್ತು ಯುದ್ಧ ವೇಳೆಯಲ್ಲಿ ಅವರಲ್ಲಿ ಕೆಲವರು ಕೆಲವರನ್ನು ಆಕ್ರಮಿಸುತ್ತಿರುವಾಗ ಮಾಡುವ ಪ್ರಾರ್ಥನೆ."**[450]

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ أَنْتَ عَضُدِي وَنَصِيرِي بِكَ أَحُولُ وَبِكَ أَصُولُ وَبِكَ أُقَاتِلُ»

**(ಅಲ್ಲಾಹುಮ್ಮ ಅನ್ತ ಅದುದೀ, ವನಸೀರೀ, ಬಿಕ ಅಹೂಲು ವಬಿಕ ಅಸೂಲು ವಬಿಕ ಉಕಾತಿಲು)**

"ಓ ಅಲ್ಲಾಹ್! ನೀನು ನನ್ನ ಬೆಂಬಲವಾಗಿರುವೆ ಮತ್ತು ನನ್ನ ಸಹಾಯಕನಾಗಿರುವೆ. ನಿನ್ನಿಂದಾಗಿ ನಾನು ಮುನ್ನುಗ್ಗುತ್ತಿದ್ದೇನೆ, ನಿನ್ನಿಂದಾಗಿ ನಾನು ನೆಗೆಯುತ್ತಿದ್ದೇನೆ ಮತ್ತು ನಿನ್ನಿಂದಾಗಿ ನಾನು ಹೋರಾಡುತ್ತಿದ್ದೇನೆ."[451]

## 87. ಯಾತ್ರೆಗೆ ಹೊರಡುವಾಗ ತಾನು ಅಗಲಿ ಹೋಗುವವರಿಗಾಗಿ

ಪ್ರವಾದಿ(ﷺ)ರವರು ಹೇಳಿದರು:

«إِنَّ لُقْمَانَ الْحَكِيمَ كَانَ يَقُولُ إِنَّ اللَّهَ عَزَّ وَجَلَّ إِذَا اسْتُودِعَ شَيْئًا حَفِظَهُ»

**"ಲುಕ್ಮಾನುಲ್ ಹಕೀಮ್ ಹೇಳುತ್ತಿದ್ದರು: ಖಂಡಿತವಾಗಿಯೂ ಅಲ್ಲಾಹು ತನ್ನ ಸಂರಕ್ಷಣೆಯಲ್ಲಿ ಅರ್ಪಿಸಿದ್ದನ್ನು ಸಂರಕ್ಷಿಸುತ್ತಾನೆ."**[452]

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اسْتَوْدَعْتُكَ اللَّهَ الَّذِي لَا يُضَيِّعُ وَدَائِعَهُ»

---

**450** ಇದನ್ನು ಅಬೂ ದಾವೂದ್ (2/25; ಹದೀಸ್ ನಂ. 2540) ಸಹ್ಲ್ ಇಬ್ನ್ ಸಅ್‌ದ್‌ರಿಂದ ವರದಿ ಮಾಡಿದ್ದಾರೆ.

**451** ಇದನ್ನು ಅಬೂ ದಾವೂದ್ (2/48; ಹದೀಸ್ ನಂ. 2632), ತಿರ್ಮಿದಿ (5/572; ಹದೀಸ್ ನಂ. 3584) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**452** ಇದನ್ನು ಅಹ್ಮದ್ (2/87; ಹದೀಸ್ ನಂ. 5605) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**(ಇಸ್ತೌದಉ್‌ತುಕಲ್ಲಾಹಲ್ಲದೀ ಲಾ ಯುದಯ್ಯಿಉ ವದಾಇಅಹೂ)**

**"**ನಾನು ನಿನ್ನನ್ನು ಅಲ್ಲಾಹನ ಸಂರಕ್ಷಣೆಯಲ್ಲಿ ಅರ್ಪಿಸಿದ್ದೇನೆ. ತನ್ನ ಸಂರಕ್ಷಣೆಯಲ್ಲಿ ಅರ್ಪಿಸಲ್ಪಟ್ಟದ್ದನ್ನು ಅವನೆಂದೂ ಕಳೆದುಕೊಳ್ಳಲಾರನು.**"**(453)

## 88. ಯಾತ್ರೆಗಾಗಿ ಬೀಳ್ಕೊಡುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«أَسْتَوْدِعُ اللَّهَ دِينَكَ وَأَمَانَتَكَ وَخَوَاتِيمَ عَمَلِكَ»

**(ಅಸ್ತೌದಿಉಲ್ಲಾಹ ದೀನಕ ವಅಮಾನತಕ ವಖವಾತೀಮ ಅಮಲಿಕ್)**

**"**ನಾನು ನಿನ್ನ ಧರ್ಮವನ್ನು, ಪ್ರಾಮಾಣಿಕತೆಯನ್ನು ಮತ್ತು ನಿನ್ನ ಕರ್ಮದ ಅಂತ್ಯಗಳನ್ನು ಅಲ್ಲಾಹನ ಸಂರಕ್ಷಣೆಯಲ್ಲಿಡುತ್ತೇನೆ.**"**(454)

«اللَّهُمَّ اطْوِ لَهُ الْأَرْضَ وَهَوِّنْ عَلَيْهِ السَّفَرَ»

**(ಅಲ್ಲಾಹುಮ್ಮತ್ವಿ ಲಹುಲ್ ಅರ್ದ, ವಹವ್ವಿನ್ ಅಲೈಹಿ ಸ್ಸಫರ್)**

**"**ಓ ಅಲ್ಲಾಹ್! ಇವನಿಗೆ ಭೂಮಿಯನ್ನು ಕಿರಿದಾಗಿಸಿಕೊಡು ಮತ್ತು ಯಾತ್ರೆಯನ್ನು ಸುಲಭೀಕರಿಸಿಕೊಡು.**"**(455)

«زَوَّدَكَ اللَّهُ التَّقْوَى وَغَفَرَ ذَنْبَكَ وَيَسَّرَ لَكَ الْخَيْرَ حَيْثُمَا كُنْتَ»

**(ಝುವ್ವದಕಲ್ಲಾಹು ತ್ತಕ್ವಾ ವಗಫರ ದಮ್ಬಕ ವಯಸ್ಸರಲ್ ಖೈರ ಹೈಸು ಮಾ ಕುನ್ತ)**

**"**ಅಲ್ಲಾಹು ನಿನಗೆ ತಕ್ವಾವನ್ನು ಅಧಿಕಗೊಳಿಸಲಿ, ನಿನ್ನ ಪಾಪಗಳನ್ನು ಕ್ಷಮಿಸಲಿ ಮತ್ತು ನೀನೆಲ್ಲೇ ಇದ್ದರೂ ನಿನಗೆ ಒಳಿತನ್ನು ಸುಲಭೀಕರಿಸಲಿ.**"**(456)

## 89. ವಾಹನವು ಮೇಲೇರುತ್ತಾ ಸಾಗುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُ أَكْبَرُ»

---

**453** ಇದನ್ನು ಅಹ್ಮದ್ (2/403; ಹದೀಸ್ ನಂ. 9219), ಇಬ್ನ್ ಮಾಜ (2/943; ಹದೀಸ್ ನಂ. 2825) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**454** ಇದನ್ನು ಅಬೂ ದಾವೂದ್ (2/39; ಹದೀಸ್ ನಂ. 2600) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**455** ಇದನ್ನು ತಿರ್ಮಿದಿ (5/500; ಹದೀಸ್ ನಂ. 3445) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**456** ಇದನ್ನು ತಿರ್ಮಿದಿ (5/500; ಹದೀಸ್ ನಂ. 3444) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**(ಅಲ್ಲಾಹು ಅಕ್ಬರ್)**
"ಅಲ್ಲಾಹು ಮಹಾನನಾಗಿದ್ದಾನೆ."(457)

## 90. ವಾಹನದಲ್ಲಿ ಆಸೀನನಾದ ನಂತರ

ಅಲ್ಲಾಹು ಹೇಳಿದ್ದಾನೆ:

﴿ وَٱلَّذِى خَلَقَ ٱلْأَزْوَٰجَ كُلَّهَا وَجَعَلَ لَكُم مِّنَ ٱلْفُلْكِ وَٱلْأَنْعَـٰمِ مَا تَرْكَبُونَ ﴿١٢﴾ لِتَسْتَوُۥا۟ عَلَىٰ ظُهُورِهِۦ ثُمَّ تَذْكُرُوا۟ نِعْمَةَ رَبِّكُمْ إِذَا ٱسْتَوَيْتُمْ عَلَيْهِ وَتَقُولُوا۟ سُبْحَـٰنَ ٱلَّذِى سَخَّرَ لَنَا هَـٰذَا وَمَا كُنَّا لَهُۥ مُقْرِنِينَ ﴿١٣﴾ وَإِنَّآ إِلَىٰ رَبِّنَا لَمُنقَلِبُونَ ﴿١٤﴾ ﴾

**"ಮತ್ತು ಅವನು ನಿಮಗೆ ಹಡಗುಗಳಿಂದಲೂ ಜಾನುವಾರುಗಳಿಂದಲೂ ನೀವು ಸವಾರಿ ಮಾಡುವುದನ್ನು ನಿಮಗೆ ಮಾಡಿಕೊಟ್ಟಿದ್ದಾನೆ. ನೀವು ಅದರ ಬೆನ್ನ ಮೇಲೆ ಕೂರುವುದಕ್ಕಾಗಿ, ನಂತರ ನೀವು ಅದರ ಮೇಲೆ ಕುಳಿತಾಗ ನಿಮ್ಮ ಪ್ರಭುವಿನ ಅನುಗ್ರಹವನ್ನು ಸ್ಮರಿಸುವುದಕ್ಕಾಗಿ. ಮತ್ತು ಇದನ್ನು ನಮಗೆ ಆಧೀನಗೊಳಿಸಿಕೊಟ್ಟವನು ಪರಿಪಾವನನಾಗಿದ್ದಾನೆ, ನಾವು ಇದರ ನಿಯಂತ್ರಕರಾಗಿರಲಿಲ್ಲ. ಮತ್ತು ನಾವು ನಮ್ಮ ಪ್ರಭುವಿನೆಡೆಗೆ ಮರಳುವವರಾಗಿದ್ದೇವೆ ಎಂದು ನೀವು ಹೇಳುವುದಕ್ಕಾಗಿ."**(458)

عَنْ عَلِيِّ بْنِ رَبِيعَةَ رَضِيَ اللَّهُ عَنْهُ قَالَ شَهِدْتُ عَلِيًّا أُتِيَ بِدَابَّةٍ لِيَرْكَبَهَا فَلَمَّا وَضَعَ رِجْلَهُ فِي الرِّكَابِ قَالَ بِسْمِ اللَّهِ ثَلَاثًا فَلَمَّا اسْتَوَى عَلَى ظَهْرِهَا قَالَ: الْحَمْدُ لِلَّهِ ثُمَّ قَالَ: ﴿ سُبْحَـٰنَ ٱلَّذِى سَخَّرَ لَنَا هَـٰذَا وَمَا كُنَّا لَهُۥ مُقْرِنِينَ ﴿١٣﴾ وَإِنَّآ إِلَىٰ رَبِّنَا لَمُنقَلِبُونَ ﴿١٤﴾ ﴾ ثُمَّ قَالَ الْحَمْدُ لِلَّهِ ثَلَاثًا وَاللَّهُ أَكْبَرُ ثَلَاثًا سُبْحَانَكَ إِنِّي قَدْ ظَلَمْتُ نَفْسِي فَاغْفِرْ لِي فَإِنَّهُ لَا يَغْفِرُ الذُّنُوبَ إِلَّا أَنْتَ ثُمَّ ضَحِكَ قُلْتُ مِنْ أَيِّ شَيْءٍ ضَحِكْتَ يَا أَمِيرَ الْمُؤْمِنِينَ قَالَ رَأَيْتُ رَسُولَ اللَّهِ صَلَّى اللَّهُ عَلَيْهِ وَسَلَّمَ صَنَعَ كَمَا صَنَعْتُ ثُمَّ ضَحِكَ فَقُلْتُ مِنْ أَيِّ شَيْءٍ ضَحِكْتَ يَا رَسُولَ اللَّهِ قَالَ: «إِنَّ رَبَّكَ لَيَعْجَبُ مِنْ عَبْدِهِ إِذَا قَالَ رَبِّ اغْفِرْ لِي ذُنُوبِي إِنَّهُ لَا يَغْفِرُ الذُّنُوبَ غَيْرُكَ»

---

**457** ಇದನ್ನು ಬುಖಾರಿ (3/1091; ಹದೀಸ್ ನಂ. 2831) ಜಾಬಿರ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

**458** ಕುರ್‌ಆನ್ 43/12–14

“ಅಲೀ ಇಬ್ನ್ ರಬೀಅಃ(ﷺ)ರಿಂದ: ಅಲೀ(ﷺ)ರವರ ಬಳಿ ಅವರು ಸವಾರಿ ಮಾಡುವುದಕ್ಕಾಗಿ ಒಂದು ಜಾನುವಾರನ್ನು ತರಲ್ಪಟ್ಟಿದ್ದನ್ನು ನಾನು ಕಂಡಿದ್ದೇನೆ. ಅವರು ವಾಹನದ ಮೇಲೆ ತನ್ನ ಕಾಲನ್ನಿಟ್ಟಾಗ ಮೂರು ಬಾರಿ ಬಿಸ್ಮಿಲ್ಲಾಹ್ (ಅಲ್ಲಾಹನ ನಾಮದಿಂದ) ಎಂದು ಹೇಳಿದರು. ಅದರ ಬೆನ್ನ ಮೇಲೆ ಕುಳಿತ ನಂತರ ಅಲ್‌ಹಮ್ದುಲಿಲ್ಲಾಹ್ (ಅಲ್ಲಾಹನಿಗೆ ಸ್ತುತಿ) ಎಂದು ಹೇಳಿದರು. ನಂತರ ಹೇಳಿದರು: ಸುಬ್‌ಹಾನಲ್ಲದೀ ಸಖ್ಖರ ಲನಾ ಹಾದಾ ವಮಾ ಕುನ್ನಾ ಲಹೂ ಮುಕ್ರಿನೀನ್, ವಇನ್ನಾ ಇಲಾ ರಬ್ಬಿನಾ ಲಮುನ್ಕಲಿಬೂನ್ (ಇದನ್ನು ನಮಗೆ ಅಧೀನಗೊಳಿಸಿಕೊಟ್ಟವನು ಪರಿಪಾವನನಾಗಿದ್ದಾನೆ, ನಾವು ಇದರ ನಿಯಂತ್ರಕರಾಗಿರಲಿಲ್ಲ. ಮತ್ತು ನಾವು ನಮ್ಮ ಪ್ರಭುವಿನೆಡೆಗೆ ಮರಳುವವರಾಗಿದ್ದೇವೆ). ನಂತರ ಮೂರು ಬಾರಿ ಅಲ್‌ಹಮ್ದುಲಿಲ್ಲಾಹ್ (ಅಲ್ಲಾಹನಿಗೆ ಸ್ತುತಿ) ಎಂದು ಮತ್ತು ಮೂರು ಬಾರಿ ಅಲ್ಲಾಹು ಅಕ್ಬರ್ (ಅಲ್ಲಾಹು ಮಹಾನನಾಗಿದ್ದಾನೆ) ಎಂದು ಹೇಳಿದರು. (ನಂತರ) ಸುಬ್‌ಹಾನಕ ಇನ್ನೀ ಕದ್ ದಲಮ್ತು ನಫ್ಸೀ, ಫಗ್ಫಿರ್ ಲೀ ಫಇನ್ನಹೂ ಲಾ ಯಗ್ಫಿರು ದ್ದುನೂಬ ಇಲ್ಲಾ ಅನ್ತ (ನಿನ್ನ ಪರಿಪಾವನತೆಯನ್ನು ನಾನು ಕೊಂಡಾಡುತ್ತೇನೆ. ಖಂಡಿತವಾಗಿಯೂ ನಾನು ನನ್ನ ಶರೀರವನ್ನು ಅಕ್ರಮಿಸಿದ್ದೇನೆ. ಆದ್ದರಿಂದ ನನಗೆ ಕ್ಷಮೆ ನೀಡು. ಖಂಡಿತವಾಗಿಯೂ ನಿನ್ನ ಹೊರತು ಪಾಪಗಳನ್ನು ಕ್ಷಮಿಸುವವರು ಯಾರೂ ಇಲ್ಲ) ಎಂದು ಹೇಳಿದರು. ನಂತರ ನಕ್ಕರು. ಆಗ ನಾನು ಕೇಳಿದೆ: ಓ ಅಮೀರುಲ್ ಮುಅ್‌ಮಿನೀನ್! ನೀವು ನಕ್ಕಿದ್ದು ಯಾಕೆ? ಅವರು ಹೇಳಿದರು: ನಾನು ಮಾಡಿದಂತೆ ಅಲ್ಲಾಹನ ಸಂದೇಶವಾಹಕ(ﷺ)ರವರು ಮಾಡಿದರು ಮತ್ತು ನಕ್ಕರು. ಆಗ ನಾನು ಕೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ! ನೀವು ನಕ್ಕಿದ್ದು ಯಾಕೆ? ಅವರು ಹೇಳಿದರು: ತನ್ನ ದಾಸನು ಓ ಪ್ರಭೂ! ನನಗೆ ನನ್ನ ಪಾಪಗಳನ್ನು ಕ್ಷಮಿಸಿಕೊಡು, ಖಂಡಿತವಾಗಿಯೂ ನಿನ್ನ ಹೊರತು ಪಾಪಗಳನ್ನು ಕ್ಷಮಿಸುವವರಿಲ್ಲ ಎಂದು ಹೇಳುವಾಗ ನಿನ್ನ ಪ್ರಭು ಅಚ್ಚರಿಗೊಳ್ಳುತ್ತಾನೆ.”(459)

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُ أَكْبَرُ (ثلاثًا) سُبْحَانَ الَّذِي سَخَّرَ لَنَا هَذَا وَمَا كُنَّا لَهُ مُقْرِنِينَ وَإِنَّا إِلَى رَبِّنَا لَمُنْقَلِبُونَ اللَّهُمَّ إِنَّا نَسْأَلُكَ فِي سَفَرِنَا هَذَا الْبِرَّ وَالتَّقْوَى وَمِنْ الْعَمَلِ مَا تَرْضَى اللَّهُمَّ هَوِّنْ عَلَيْنَا سَفَرَنَا هَذَا وَاطْوِ عَنَّا بُعْدَهُ اللَّهُمَّ أَنْتَ الصَّاحِبُ فِي السَّفَرِ وَالْخَلِيفَةُ فِي الْأَهْلِ اللَّهُمَّ إِنِّي أَعُوذُ بِكَ مِنْ وَعْثَاءِ السَّفَرِ وَكَآبَةِ الْمَنْظَرِ وَسُوءِ الْمُنْقَلَبِ فِي الْمَالِ وَالْأَهْلِ»

(ಅಲ್ಲಾಹು ಅಕ್ಬರ್ (ಮೂರು ಬಾರಿ), ಸುಬ್‌ಹಾನಲ್ಲದೀ ಸಖ್ಖರ ಲನಾ ಹಾದಾ ವಮಾ ಕುನ್ನಾ ಲಹೂ ಮುಕ್ರಿನೀನ್, ವಇನ್ನಾ ಇಲಾ ರಬ್ಬಿನಾ ಲಮುನ್ಕಲಿಬೂನ್, ಅಲ್ಲಾಹುಮ್ಮ ಇನ್ನಾ ನಸ್‌ಅಲುಕ ಫೀ ಸಫರಿನಾ ಹಾದಲ್ ಬಿರ್‍ರ ವತ್ತಕ್ವಾ ವಮಿನಲ್ ಅಮಲಿ ಮಾ

459 ಇದನ್ನು ತಿರ್ಮಿದಿ (5/501; ಹದೀಸ್ ನಂ. 3446) ವರದಿ ಮಾಡಿದ್ದಾರೆ.

**ತರ್ದಾ, ಅಲ್ಲಾಹುಮ್ಮ ಹವ್ವಿನ್ ಅಲೈನಾ ಸಫರನಾ ವತ್ವಿ ಅನ್ನಾ ಬುಅ್‌ದಹೂ, ಅಲ್ಲಾಹುಮ್ಮ ಅನ್ತ ಸ್ಸಾಹಿಬು ಫಿ ಸ್ಸಫರಿ ವಲ್‌ಖಲೀಫತು ಫಿಲ್ ಅಹ್ಲಿ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ವಅ್‌ಸಾಇ ಸ್ಸಫರಿ ವಕಆಬತಿಲ್ ಮನ್ದರಿ ವಸೂಇಲ್ ಮುನ್ಕಲಬಿ ಫಿಲ್ ಮಾಲಿ ವಲ್‌ಅಹ್ಲ್)**

“ಅಲ್ಲಾಹು ಮಹಾನನಾಗಿದ್ದಾನೆ. ಇದನ್ನು ನಮಗೆ ಆಧೀನಗೊಳಿಸಿಕೊಟ್ಟವನು ಪರಿಪಾವನನಾಗಿದ್ದಾನೆ, ನಾವು ಇದರ ನಿಯಂತ್ರಕರಾಗಿರಲಿಲ್ಲ. ಮತ್ತು ನಾವು ನಮ್ಮ ಪ್ರಭುವಿನೆಡೆಗೆ ಮರಳುವವರಾಗಿದ್ದೇವೆ. ಓ ಅಲ್ಲಾಹ್! ನಮ್ಮ ಈ ಯಾತ್ರೆಯಲ್ಲಿ ಒಳಿತನ್ನು, ಭಯಭಕ್ತಿಯನ್ನು ಮತ್ತು ಕರ್ಮಗಳಲ್ಲಿ ನೀನು ತೃಪ್ತಿಪಡುವುದನ್ನು ನಾವು ನಿನ್ನೊಂದಿಗೆ ಬೇಡುತ್ತಿದ್ದೇವೆ. ಓ ಅಲ್ಲಾಹ್! ನಮಗೆ ಈ ಯಾತ್ರೆಯನ್ನು ಸುಲಭೀಕರಿಸು ಮತ್ತು ಇದರ ದೂರವನ್ನು ನಮಗೆ ಕಿರಿದಾಗಿಸು. ಓ ಅಲ್ಲಾಹ್! ಯಾತ್ರೆಯಲ್ಲಿ ನೀನು ಜೊತೆಗಾರನಾಗಿರುವೆ ಮತ್ತು (ನಾನು ಬಿಟ್ಟು ಬಂದ) ಕುಟುಂಬದ ಉತ್ತರಾಧಿಕಾರಿಯಾಗಿರುವೆ. ಓ ಅಲ್ಲಾಹ್! ಯಾತ್ರೆಯ ಸಂಕಷ್ಟಗಳಿಂದ, ದೃಷ್ಟಿಯ ವ್ಯಾಕುಲತೆಯಿಂದ ಮತ್ತು ಸಂಪತ್ತು ಹಾಗೂ ಕುಟುಂಬದಲ್ಲಿ ಕೆಟ್ಟ ಪರಿಣಾಮಗಳಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ.”[460]

## 91. ವಾಹನವು ಇಳಿಮುಖವಾಗಿ ಸಾಗುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«سُبْحَانَ اللَّهِ»

**(ಸುಬ್‌ಹಾನಲ್ಲಾಹ್)**

“ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ.”[461]

## 92. ಯಾತ್ರೆಯಲ್ಲಿ ಹಳ್ಳಿಯನ್ನು ಅಥವಾ ಪಟ್ಟಣವನ್ನು ಪ್ರವೇಶಿಸುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ رَبَّ السَّمَاوَاتِ السَّبْعِ وَمَا أَظْلَلْنَ وَرَبَّ الْأَرْضِينَ السَّبْعِ وَمَا أَقْلَلْنَ وَرَبَّ الشَّيَاطِينِ وَمَا أَضْلَلْنَ وَرَبَّ الرِّيَاحِ وَمَا ذَرَيْنَ فَإِنَّا نَسْأَلُكَ بِخَيْرِ

---

**460** ಇದನ್ನು ಮುಸ್ಲಿಮ್ (2/978; ಹದೀಸ್ ನಂ. 1342) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**461** ಇದನ್ನು ಬುಖಾರಿ (3/1091; ಹದೀಸ್ ನಂ. 2831) ಜಾಬಿರ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

هَذِهِ الْقَرْيَةِ وَخَيْرِ أَهْلِهَا وَنَعُوذُ بِكَ مِنْ شَرِّهَا وَشَرِّ أَهْلِهَا وَشَرِّ مَا فِيهَا»

**(ಅಲ್ಲಾಹುಮ್ಮ ರಬ್ಬ ಸ್ಸಮಾವಾತಿ ಸ್ಸಬ್‌ಇ ವಮಾ ಅದ್‌ಲಲ್‌ನ, ವರಬ್ಬಲ್ ಅರ್ದೀನ ವಮಾ ಅಕ್ಲಲ್‌ನ, ವರಬ್ಬ ಶ್ಶಯಾತೀನಿ ವಮಾ ಅದ್‌ಲಲ್‌ನ, ವರಬ್ಬ ರ್‍ರಿಯಾಹಿ ವಮಾ ದರೈನ, ಫಇನ್ನಾ ನಸ್‌ಅಲುಕ ಬಿಖೈರಿ ಹಾದಿಹಿಲ್ ಕರ್ಯತಿ ವಖೈರಿ ಅಹ್ಲಿಹಾ, ವನಊದು ಬಿಕ ಮಿನ್ ಶರ್‍ರಿಹಾ ವಶರ್‍ರಿ ಅಹ್ಲಿಹಾ ವಶ್ಶರ್‍ರಿ ಮಾ ಫೀಹಾ)**

"ಓ ಅಲ್ಲಾಹ್! ಏಳಾಕಾಶಗಳ ಮತ್ತು ಅವು ನೆರಳಿತ್ತವುಗಳ ಒಡೆಯನೇ! ಭೂಮಿಗಳ ಮತ್ತು ಅವು ಹೊತ್ತಿರುವವುಗಳ ಒಡೆಯನೇ! ಶೈತಾನರ ಮತ್ತು ಅವರು ದಾರಿಗೆಡಿಸಿದವರ ಒಡೆಯನೇ! ಗಾಳಿಯ ಮತ್ತು ಅದು ಝಾಡಿಸಿದವುಗಳ ಒಡೆಯನೇ! ಈ ಗ್ರಾಮದ ಒಳಿತನ್ನು ಮತ್ತು ಇದರ ನಿವಾಸಿಗಳ ಒಳಿತನ್ನು ನಾವು ನಿನ್ನೊಂದಿಗೆ ಬೇಡುತ್ತಿದ್ದೇವೆ. ಇದರ ಕೆಡುಕಿನಿಂದ, ಇದರ ನಿವಾಸಿಗಳ ಕೆಡುಕಿನಿಂದ ಮತ್ತು ಇದರಲ್ಲಿರುವ ಕೆಡುಕಿನಿಂದ ನಾವು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇವೆ."[462]

## 93. ಯಾತ್ರೆ ಮಧ್ಯೆ ಮನೆಯೊಂದನ್ನು ಅಥವಾ ವಸತಿಗೃಹವನ್ನು ಪ್ರವೇಶಿಸುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«أَعُوذُ بِكَلِمَاتِ اللَّهِ التَّامَّاتِ مِنْ شَرِّ مَا خَلَقَ»

**(ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮಾತಿ ಮಿನ್ ಶರ್‍ರಿ ಮಾ ಖಲಕ್)**

"ಅಲ್ಲಾಹನ ಪರಿಪೂರ್ಣವಾದ ವಚನಗಳೊಂದಿಗೆ ಅವನು ಸೃಷ್ಟಿಸಿದ ಕೆಡುಕಿನಿಂದ ನಾನು ಅಭಯ ಯಾಚಿಸುತ್ತಿದ್ದೇನೆ."[463]

## 94. ಯಾತ್ರೆಯಿಂದ ಹಿಂದಿರುಗುವಾಗ

عَنْ كَعْبٍ رَضِيَ اللَّهُ عَنْهُ أَنَّ النَّبِيَّ صَلَّى اللَّهُ عَلَيْهِ وَسَلَّمَ كَانَ إِذَا قَدِمَ مِنْ سَفَرٍ ضُحًى دَخَلَ الْمَسْجِدَ فَصَلَّى رَكْعَتَيْنِ قَبْلَ أَنْ يَجْلِسَ

**"ಕಅ್‌ಬ್(رضي الله عنه)ರಿಂದ: ಪ್ರವಾದಿ(ﷺ)ರವರು ಪೂರ್ವಾಹ್ನ ಯಾತ್ರೆಯಿಂದ ಹಿಂದಿರು ಗಿದರೆ ಮಸೀದಿಯನ್ನು ಪ್ರವೇಶಿಸುತ್ತಿದ್ದರು ಮತ್ತು ಕೂರುವುದಕ್ಕೆ ಮುಂಚಿತವಾಗಿ ಎರಡು**

---

**462** ಇದನ್ನು ನಸಾಈ ತನ್ನ 'ಸುನನುಲ್ ಕುಬ್ರಾ'ದಲ್ಲಿ (6/140; ಹದೀಸ್ ನಂ. 10378) ಸುಹೈಬ್‌ರಿಂದ ವರದಿ ಮಾಡಿದ್ದಾರೆ.

**463** ಇದನ್ನು ಮುಸ್ಲಿಮ್ (4/2080; ಹದೀಸ್ ನಂ. 2708) ಖೌಲಃ ಬಿನ್ತ್ ಹಕೀಮ್‌ರಿಂದ ವರದಿ ಮಾಡಿದ್ದಾರೆ.

**ರಕ್‌ಅತ್ ನಮಾಝ್ ಮಾಡುತ್ತಿದ್ದರು.”[464]**

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُ أَكْبَرُ (ثلاثًا) سُبْحَانَ الَّذِي سَخَّرَ لَنَا هَذَا وَمَا كُنَّا لَهُ مُقْرِنِينَ وَإِنَّا إِلَى رَبِّنَا لَمُنْقَلِبُونَ اللَّهُمَّ إِنَّا نَسْأَلُكَ فِي سَفَرِنَا هَذَا الْبِرَّ وَالتَّقْوَى وَمِنْ الْعَمَلِ مَا تَرْضَى اللَّهُمَّ هَوِّنْ عَلَيْنَا سَفَرَنَا هَذَا وَاطْوِ عَنَّا بُعْدَهُ اللَّهُمَّ أَنْتَ الصَّاحِبُ فِي السَّفَرِ وَالْخَلِيفَةُ فِي الْأَهْلِ اللَّهُمَّ إِنِّي أَعُوذُ بِكَ مِنْ وَعْثَاءِ السَّفَرِ وَكَآبَةِ الْمَنْظَرِ وَسُوءِ الْمُنْقَلَبِ فِي الْمَالِ وَالْأَهْلِ آيِبُونَ تَائِبُونَ عَابِدُونَ لِرَبِّنَا حَامِدُونَ»

**(ಅಲ್ಲಾಹು ಅಕ್ಬರ್ (ಮೂರು ಬಾರಿ), ಸುಬ್‌ಹಾನಲ್ಲದೀ ಸಖ್ಖರ ಲನಾ ಹಾದಾ ವಮಾ ಕುನ್ನಾ ಲಹೂ ಮುಕ್ರಿನೀನ್, ವಇನ್ನಾ ಇಲಾ ರಬ್ಬಿನಾ ಲಮುನ್ಕಲಿಬೂನ್, ಅಲ್ಲಾಹುಮ್ಮ ಇನ್ನಾ ನಸ್‌ಅಲುಕ ಫೀ ಸಫರಿನಾ ಹಾದಲ್ ಬಿರ್ರ ವತ್ತಕ್ವಾ ವಮಿನಲ್ ಅಮಲಿ ಮಾ ತರ್ದಾ, ಅಲ್ಲಾಹುಮ್ಮ ಹವ್ವಿನ್ ಅಲೈನಾ ಸಫರನಾ ವತ್ವಿ ಅನ್ನಾ ಬುಅ್‌ದಹೂ, ಅಲ್ಲಾಹುಮ್ಮ ಅನ್ತ ಸ್ಸಾಹಿಬು ಫಿ ಸ್ಸಫರಿ ವಲ್‌ಖಲೀಫತು ಫಿಲ್ ಅಹ್ಲಿ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ವಅ್‌ಸಾಇ ಸ್ಸಫರಿ ವಕಆಬತಿಲ್ ಮನ್ದರಿ ವಸೂಇಲ್ ಮುನ್ಕಲಬಿ ಫಿಲ್ ಮಾಲಿ ವಲ್‌ಅಹ್ಲಿ, ಆಯಿಬೂನ ತಾಇಬೂನ ಆಬಿದೂನ ಲಿರಬ್ಬಿನಾ ಹಾಮಿದೂನ್)**

“ಅಲ್ಲಾಹು ಮಹಾನನಾಗಿದ್ದಾನೆ. ಇದನ್ನು ನಮಗೆ ಅಧೀನಗೊಳಿಸಿಕೊಟ್ಟವನು ಪರಿಪಾವನನಾಗಿದ್ದಾನೆ, ನಾವು ಇದರ ನಿಯಂತ್ರಕರಾಗಿರಲಿಲ್ಲ. ಮತ್ತು ನಾವು ನಮ್ಮ ಪ್ರಭುವಿನೆಡೆಗೆ ಮರಳುವವರಾಗಿದ್ದೇವೆ. ಓ ಅಲ್ಲಾಹ್! ನಮ್ಮ ಈ ಯಾತ್ರೆಯಲ್ಲಿ ಒಳಿತನ್ನು, ಭಯಭಕ್ತಿಯನ್ನು ಮತ್ತು ಕರ್ಮಗಳಲ್ಲಿ ನೀನು ತೃಪ್ತಿಪಡುವುದನ್ನು ನಾವು ನಿನ್ನೊಂದಿಗೆ ಬೇಡುತ್ತಿದ್ದೇವೆ. ಓ ಅಲ್ಲಾಹ್! ನಮಗೆ ಈ ಯಾತ್ರೆಯನ್ನು ಸುಲಭೀಕರಿಸು ಮತ್ತು ಇದರ ದೂರವನ್ನು ನಮಗೆ ಕಿರಿದಾಗಿಸು. ಓ ಅಲ್ಲಾಹ್! ಯಾತ್ರೆಯಲ್ಲಿ ನೀನು ಜೊತೆಗಾರನಾಗಿರುವೆ ಮತ್ತು (ನಾನು ಬಿಟ್ಟು ಬಂದ) ಕುಟುಂಬದ ಉತ್ತರಾಧಿಕಾರಿಯಾಗಿರುವೆ. ಓ ಅಲ್ಲಾಹ್! ಯಾತ್ರೆಯ ಸಂಕಷ್ಟಗಳಿಂದ, ದೃಷ್ಟಿಯ ವ್ಯಾಕುಲತೆಯಿಂದ ಮತ್ತು ಸಂಪತ್ತು ಹಾಗೂ ಕುಟುಂಬದಲ್ಲಿ ಕೆಟ್ಟ ಪರಿಣಾಮಗಳಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ. ನಾವು ಮರಳುತ್ತಿದ್ದೇವೆ, ಪಶ್ಚಾತ್ತಾಪ ಪಡುತ್ತಿದ್ದೇವೆ, ಆರಾಧಿಸುತ್ತಿದ್ದೇವೆ ಮತ್ತು ನಮ್ಮ ಪ್ರಭುವಿಗೆ ನಾವು ಸ್ತುತಿ ಅರ್ಪಿಸುತ್ತಿದ್ದೇವೆ.”[465]

**464** ಇದನ್ನು ಬುಖಾರಿ (3/1123; ಹದೀಸ್ ನಂ. 2922) ಮತ್ತು ಮುಸ್ಲಿಮ್ (1/496; ಹದೀಸ್ ನಂ. 716) ವರದಿ ಮಾಡಿದ್ದಾರೆ.

**465** ಇದನ್ನು ಮುಸ್ಲಿಮ್ (2/978; ಹದೀಸ್ ನಂ. 1342) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

## 95. ಪೇಟೆಯನ್ನು ಪ್ರವೇಶಿಸುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«لَا إِلَهَ إِلَّا اللَّهُ وَحْدَهُ لَا شَرِيكَ لَهُ لَهُ الْمُلْكُ وَلَهُ الْحَمْدُ يُحْيِي وَيُمِيتُ وَهُوَ حَيٌّ لَا يَمُوتُ بِيَدِهِ الْخَيْرُ وَهُوَ عَلَى كُلِّ شَيْءٍ قَدِيرٌ»

**(ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ ಲಹುಲ್ ಮುಲ್ಕು ವಲಹುಲ್ ಹಮ್ದು ಯುಹ್ಯೀ ವಯುಮೀತು ವಹುವ ಹಯ್ಯುನ್ ಲಾ ಯಮೂತು ಬಿಯದಿಹಿಲ್ ಖೈರು ವಹುವ ಅಲಾ ಕುಲ್ಲಿ ಶೈಇನ್ ಕದೀರ್)**

"ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ, ಅವನು ಏಕೈಕನಾಗಿದ್ದಾನೆ, ಅವನಿಗೆ ಸಹಭಾಗಿಗಳಾಗಿ ಯಾರೂ ಇಲ್ಲ, ಆಧಿಪತ್ಯವು ಅವನದಾಗಿದೆ ಮತ್ತು ಸ್ತುತಿಯು ಅವನಿಗಾಗಿದೆ, ಅವನು ಬದುಕನ್ನು ನೀಡುವವನಾಗಿದ್ದಾನೆ ಮತ್ತು ಮೃತಪಡಿಸುವವನಾಗಿದ್ದಾನೆ, ಅವನು ಎಂದೂ ಮರಣಹೊಂದದವನೂ ನಿರಂತರವಾಗಿ ಜೀವಿಸುವವನೂ ಆಗಿದ್ದಾನೆ, ಒಳಿತು ಅವನ ಕೈಯಲ್ಲಿದೆ ಮತ್ತು ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ."[466]

## 96. ಅನ್ನ ಪಾನೀಯಗಳನ್ನು ಸೇವಿಸುವಾಗ

ಪ್ರವಾದಿ(ﷺ)ರವರು ಹೇಳಿದರು:

«يَا غُلَامُ سَمِّ اللَّهَ وَكُلْ بِيَمِينِكَ وَكُلْ مِمَّا يَلِيكَ»

**"ಓ ಬಾಲಕನೇ! ಅಲ್ಲಾಹನ ಹೆಸರನ್ನು ಉಚ್ಚರಿಸು ಮತ್ತು ಬಲಗೈಯಿಂದ ತಿನ್ನು ಹಾಗೂ ನಿನ್ನ ಸಮೀಪವಿರುವುದರಿಂದ ತಿನ್ನು."**[467]

عَنْ حُذَيْفَةَ رَضِيَ اللَّهُ عَنْهُ قَالَ كُنَّا إِذَا حَضَرْنَا مَعَ النَّبِيِّ صَلَّى اللَّهُ عَلَيْهِ وَسَلَّمَ طَعَامًا لَمْ نَضَعْ أَيْدِيَنَا حَتَّى يَبْدَأَ رَسُولُ اللَّهِ صَلَّى اللَّهُ عَلَيْهِ وَسَلَّمَ فَيَضَعَ يَدَهُ وَإِنَّا حَضَرْنَا مَعَهُ مَرَّةً طَعَامًا فَجَاءَتْ جَارِيَةٌ كَأَنَّهَا تُدْفَعُ فَذَهَبَتْ لِتَضَعَ يَدَهَا فِي الطَّعَامِ فَأَخَذَ رَسُولُ اللَّهِ صَلَّى اللَّهُ عَلَيْهِ وَسَلَّمَ بِيَدِهَا ثُمَّ جَاءَ

**466** ಇದನ್ನು ತಿರ್ಮಿದಿ (5/491; ಹದೀಸ್ ನಂ. 3428) ಉಮರ್ ಇಬ್ನುಲ್ ಖತ್ತಾಬ್‌ರಿಂದ ವರದಿ ಮಾಡಿದ್ದಾರೆ.

**467** ಇದನ್ನು ಬುಖಾರಿ (5/2056; ಹದೀಸ್ ನಂ. 5061), ಮುಸ್ಲಿಮ್ (3/1599; ಹದೀಸ್ ನಂ. 2022) ಉಮರ್ ಇಬ್ನ್ ಅಬೀ ಸಲಮಾರಿಂದ ವರದಿ ಮಾಡಿದ್ದಾರೆ.

أَعْرَابِيٌّ كَأَنَّمَا يُدْفَعُ فَأَخَذَ بِيَدِهِ فَقَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «إِنَّ الشَّيْطَانَ يَسْتَحِلُّ الطَّعَامَ أَنْ لَا يُذْكَرَ اسْمُ اللَّهِ عَلَيْهِ وَإِنَّهُ جَاءَ بِهَذِهِ الْجَارِيَةِ لِيَسْتَحِلَّ بِهَا فَأَخَذْتُ بِيَدِهَا فَجَاءَ بِهَذَا الْأَعْرَابِيِّ لِيَسْتَحِلَّ بِهِ فَأَخَذْتُ بِيَدِهِ وَالَّذِي نَفْسِي بِيَدِهِ إِنَّ يَدَهُ فِي يَدِي مَعَ يَدِهَا»

**"ಹುದೈಫಾ(﵁)ರಿಂದ: ನಾವು ಪ್ರವಾದಿ(ﷺ)ರವರೊಂದಿಗೆ ಆಹಾರದ ಸಾನಿಧ್ಯದಲ್ಲಿರುತ್ತಿದ್ದೆವು. ಪ್ರವಾದಿ(ﷺ)ರವರು ಕೈ ಹಾಕಿ ಆರಂಭಿಸುವವರೆಗೆ ನಾವು ನಮ್ಮ ಕೈಯನ್ನು (ಆಹಾರದಲ್ಲಿ) ಹಾಕುತ್ತಿರಲಿಲ್ಲ. ಹಾಗೆ ಒಂದು ಬಾರಿ ನಾವು ಪ್ರವಾದಿ(ﷺ) ರವರೊಂದಿಗೆ ಆಹಾರದ ಸಾನಿಧ್ಯದಲ್ಲಿದ್ದೆವು. ಆಗ ಹುಡುಗಿಯೊಬ್ಬಳು ಧಾವಿಸಿ ಬಂದು ಆಹಾರದಲ್ಲಿ ಕೈ ಹಾಕಲು ಹೊರಟಳು. ಆಗ ಪ್ರವಾದಿ(ﷺ)ರವರು ಆಕೆಯ ಕೈಯನ್ನು ಹಿಡಿದರು. ನಂತರ ಗ್ರಾಮೀಣನೊಬ್ಬನು ಧಾವಿಸಿ ಬಂದನು. ಅವರು ಅವನ ಕೈಯನ್ನು ಹಿಡಿದರು ಮತ್ತು ಹೇಳಿದರು: ಅಲ್ಲಾಹನ ಹೆಸರನ್ನು ಉಚ್ಚರಿಸದ ರೀತಿಯಲ್ಲಿ ಶೈತಾನನು ಆಹಾರವನ್ನು ಧರ್ಮಸಮ್ಮತಗೊಳಿಸಲು ಬಯಸುತ್ತಾನೆ. ಅವನು ಈ ಹುಡುಗಿಯೊಂದಿಗೆ ಅವಳಿಂದ ಇದನ್ನು ಧರ್ಮಸಮ್ಮತಗೊಳಿಸಲು ಬಂದನು. ಆಗ ನಾನು ಆಕೆಯ ಕೈಯನ್ನು ಹಿಡಿದೆನು. ನಂತರ ಈ ಗ್ರಾಮೀಣನೊಂದಿಗೆ ಅವನಿಂದ ಇದನ್ನು ಧರ್ಮಸಮ್ಮತಗೊಳಿಸಲು ಬಂದನು. ಆಗ ನಾನು ಅವನ ಕೈಯನ್ನು ಹಿಡಿದೆನು. ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲಾಣೆ! ಅವನ ಕೈ ಆಕೆಯ ಕೈಯೊಂದಿಗೆ ನನ್ನ ಕೈಯಲ್ಲಿತ್ತು."[468]**

أَنَّ أَصْحَابَ النَّبِيِّ صَلَّى اللَّهُ عَلَيْهِ وَسَلَّمَ قَالُوا يَا رَسُولَ اللَّهِ إِنَّا نَأْكُلُ وَلَا نَشْبَعُ قَالَ: «فَلَعَلَّكُمْ تَفْتَرِقُونَ» قَالُوا نَعَمْ قَالَ: «فَاجْتَمِعُوا عَلَى طَعَامِكُمْ وَاذْكُرُوا اسْمَ اللَّهِ عَلَيْهِ يُبَارَكْ لَكُمْ فِيهِ»

**"ಪ್ರವಾದಿ(ﷺ)ರವರ ಸಂಗಾತಿಗಳು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ! ನಾವು ತಿನ್ನುತ್ತಿದ್ದೇವೆ ಆದರೆ ನಮಗೆ ಹೊಟ್ಟೆ ತುಂಬುವುದಿಲ್ಲ. ಅವರು (ಪ್ರವಾದಿ(ﷺ) ರವರು) ಹೇಳಿದರು: ನೀವು ಬೇರೆ ಬೇರೆಯಾಗಿ ತಿನ್ನುತ್ತಿರಬಹುದು. ಅವರು (ಸಂಗಾತಿಗಳು) ಹೇಳಿದರು: ಹೌದು. ಅವರು (ಪ್ರವಾದಿ(ﷺ)ರವರು) ಹೇಳಿದರು: ನೀವು ನಿಮ್ಮ ಆಹಾರದಲ್ಲಿ ಒಟ್ಟುಗೂಡಿರಿ (ಒಟ್ಟುಗೂಡಿ ತಿನ್ನಿರಿ) ಮತ್ತು ಅದರಲ್ಲಿ ಅಲ್ಲಾಹನ ಹೆಸರನ್ನು ಉಚ್ಚರಿಸಿರಿ. ನಿಮಗೆ ಅದರಲ್ಲಿ ಬರ್ಕತ್ ಲಭಿಸುತ್ತದೆ."[469]**

ಪ್ರವಾದಿ(ﷺ)ರವರು ಹೇಳಿದರು:

«مَا أَكَلَ أَحَدٌ طَعَامًا قَطُّ خَيْرًا مِنْ أَنْ يَأْكُلَ مِنْ عَمَلِ يَدِهِ وَإِنَّ نَبِيَّ اللَّهِ

**468** ಇದನ್ನು ಮುಸ್ಲಿಮ್ (3/1597; ಹದೀಸ್ ನಂ. 2017) ವರದಿ ಮಾಡಿದ್ದಾರೆ.
**469** ಇದನ್ನು ಅಬೂ ದಾವೂದ್ (2/373; ಹದೀಸ್ ನಂ. 3764) ವಹ್ಶೀರಿಂದ ವರದಿ ಮಾಡಿದ್ದಾರೆ.

دَاوُدَ كَانَ يَأْكُلُ مِنْ عَمَلِ يَدِهِ»

**"ಯಾವೊಬ್ಬನೂ ಉತ್ತಮವಾದ ಆಹಾರವನ್ನು ತಿನ್ನುವುದೇ ಇಲ್ಲ ಅವನು ತನ್ನ ಕೈಯ ಶ್ರಮದಿಂದ ತಿನ್ನುವವರೆಗೆ. ಅಲ್ಲಾಹನ ಪ್ರವಾದಿಯಾದ ದಾವೂದ್(عليه السلام) ತನ್ನ ಕೈಯ ಶ್ರಮದಿಂದ ತಿನ್ನುತ್ತಿದ್ದರು."(470)**

## 97. ಆರಂಭದಲ್ಲಿ ಬಿಸ್ಮಿಲ್ಲಾಹ್ ಹೇಳಲು ಮರೆತರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«بِسْمِ اللَّهِ أَوَّلَهُ وَآخِرَهُ»

**(ಬಿಸ್ಮಿಲ್ಲಾಹಿ ಅವ್ವಲಹೂ ವಆಖಿರಹೂ)**

"ಇದರ ಆದಿಯೂ ಅಂತ್ಯವೂ ಅಲ್ಲಾಹನ ನಾಮದಿಂದಾಗಿದೆ."(471)

## 98. ಆಹಾರವು ಇಷ್ಟಪಡದಿದ್ದರೆ

عَنْ أَبِي هُرَيْرَةَ رَضِيَ اللَّهُ عَنْهُ قَالَ مَا عَابَ النَّبِيُّ صَلَّى اللَّهُ عَلَيْهِ وَسَلَّمَ طَعَامًا قَطُّ إِنْ اشْتَهَاهُ أَكَلَهُ وَإِلَّا تَرَكَهُ

**"ಅಬೂ ಹುರೈರಾ(رضي الله عنه)ರಿಂದ: ಪ್ರವಾದಿ(ﷺ)ರವರು ಎಂದೂ ಆಹಾರವನ್ನು ತೆಗಳುತ್ತಿರಲಿಲ್ಲ. ಅವರಿಗೆ ರುಚಿಸಿದರೆ ತಿನ್ನುತ್ತಿದ್ದರು ಇಲ್ಲದಿದ್ದರೆ ಬಿಟ್ಟುಬಿಡುತ್ತಿದ್ದರು."(472)**

## 99. ಅನ್ನ ಪಾನೀಯಗಳನ್ನು ಸೇವಿಸಿದ ನಂತರ

ಅಲ್ಲಾಹು ಹೇಳಿದ್ದಾನೆ:

﴿ يَٰٓأَيُّهَا ٱلَّذِينَ ءَامَنُواْ كُلُواْ مِن طَيِّبَٰتِ مَا رَزَقۡنَٰكُمۡ وَٱشۡكُرُواْ لِلَّهِ إِن كُنتُمۡ إِيَّاهُ تَعۡبُدُونَ ١٧٢ ﴾

**"ಓ ವಿಶ್ವಾಸಿಗಳೇ! ನಾವು ನಿಮಗೆ ಅನ್ನಾಧಾರವಾಗಿ ನೀಡಿದ ಉತ್ತಮ ವಸ್ತುಗಳಿಂದ ತಿನ್ನಿರಿ**

---

**470** ಇದನ್ನು ಬುಖಾರಿ (2/730; ಹದೀಸ್ ನಂ. 1966) ಮಿಕ್ದಾಮ್‌ರಿಂದ ವರದಿ ಮಾಡಿದ್ದಾರೆ.

**471** ಇದನ್ನು ಅಬೂ ದಾವೂದ್ (2/374; ಹದೀಸ್ ನಂ. 3767) ಆಯಿಶಾರಿಂದ ವರದಿ ಮಾಡಿದ್ದಾರೆ.

**472** ಇದನ್ನು ಬುಖಾರಿ (3/1306; ಹದೀಸ್ ನಂ. 3370), ಮುಸ್ಲಿಮ್ (3/1632; ಹದೀಸ್ ನಂ. 2064) ವರದಿ ಮಾಡಿದ್ದಾರೆ.

**ಮತ್ತು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿರಿ. ನೀವು ಅವನನ್ನು ಆರಾಧಿಸುವವರಾಗಿದ್ದರೆ."**(473)

ಅಲ್ಲಾಹು ಹೇಳಿದ್ದಾನೆ:

﴿ فَكُلُوا۟ مِمَّا رَزَقَكُمُ ٱللَّهُ حَلَـٰلًا طَيِّبًا وَٱشْكُرُوا۟ نِعْمَتَ ٱللَّهِ إِن كُنتُمْ إِيَّاهُ تَعْبُدُونَ ﴿١١٤﴾ ﴾

**"ನಾವು ನಿಮಗೆ ಅನ್ನಾಧಾರವಾಗಿ ನೀಡಿದ ಧರ್ಮಸಮ್ಮತ ಮತ್ತು ಉತ್ತಮವಾದವುಗಳನ್ನು ತಿನ್ನಿರಿ ಮತ್ತು ಅಲ್ಲಾಹನ ಅನುಗ್ರಹಕ್ಕಾಗಿ ಕೃತಜ್ಞತೆ ಸಲ್ಲಿಸಿರಿ. ನೀವು ಅವನನ್ನು ಆರಾಧಿಸುವವರಾಗಿದ್ದರೆ."**(474)

ಪ್ರವಾದಿ(ﷺ)ರವರು ಹೇಳಿದರು:

«إِنَّ اللَّهَ لَيَرْضَى عَنِ الْعَبْدِ أَنْ يَأْكُلَ الْأَكْلَةَ فَيَحْمَدَهُ عَلَيْهَا أَوْ يَشْرَبَ الشَّرْبَةَ فَيَحْمَدَهُ عَلَيْهَا»

**"ಆಹಾರವನ್ನು ಸೇವಿಸಿ ನಂತರ ಅದಕ್ಕಾಗಿ ಅವನನ್ನು ಸ್ತುತಿಸುವ ಮತ್ತು ಪಾನೀಯವನ್ನು ಸೇವಿಸಿ ಅದಕ್ಕಾಗಿ ಅವನನ್ನು ಸ್ತುತಿಸುವ ದಾಸನನ್ನು ಅಲ್ಲಾಹು ತೃಪ್ತಿಪಡುತ್ತಾನೆ."**(475)

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«الْحَمْدُ لِلَّهِ كَثِيرًا طَيِّبًا مُبَارَكًا فِيهِ غَيْرَ مَكْفِيٍّ وَلَا مُوَدَّعٍ وَلَا مُسْتَغْنًى عَنْهُ رَبَّنَا»

**(ಅಲ್‌ಹಮ್ದು ಲಿಲ್ಲಾಹಿ ಕಸೀರನ್, ತಯ್ಯಿಬನ್, ಮುಬಾರಕನ್ ಫೀಹಿ, ಗೈರ ಮಕ್ಫಿಯ್ಯಿನ್ ವಲಾ ಮುವದ್ದಇನ್, ವಲಾ ಮುಸ್ತಗ್ನನ್ ಅನ್‌ಹು ರಬ್ಬನಾ)**

"ಅಲ್ಲಾಹನಿಗೆ ಅತ್ಯಧಿಕವಾದ, ಉತ್ತಮವಾದ ಮತ್ತು ಬರ್ಕತ್ ತುಂಬಿದ, ಕೊನೆಯಿಲ್ಲದ, ವಿದಾಯವಿರದ, ಹಂಚಿಕೊಳ್ಳಲಾಗದ ಸ್ತುತಿ, ಅವನು ನಮ್ಮ ಪ್ರಭುವಾಗಿದ್ದಾನೆ."(476)

«الْحَمْدُ لِلَّهِ الَّذِي أَطْعَمَنِي هَذَا الطَّعَامَ وَرَزَقَنِيهِ مِنْ غَيْرِ حَوْلٍ مِنِّي وَلَا قُوَّةٍ»

**(ಅಲ್‌ಹಮ್ದು ಲಿಲ್ಲಾಹಿಲ್ಲದೀ ಅತ್‌ಅಮನೀ ಹಾದ ತ್ತಆಮ ವರಝುಕನೀಹಿ ಮಿನ್ ಗೈರಿ ಹೌಲಿನ್ ಮಿನ್ನೀ ವಲಾ ಕುವ್ವಃ)**

**473** ಕುರ್‌ಆನ್ 2/172

**474** ಕುರ್‌ಆನ್ 16/114

**475** ಇದನ್ನು ಮುಸ್ಲಿಮ್ (4/2095; ಹದೀಸ್ ನಂ. 2734) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**476** ಇದನ್ನು ಬುಖಾರಿ (2/2078; ಹದೀಸ್ ನಂ. 5142) ಅಬೂ ಉಮಾಮಃರಿಂದ ವರದಿ ಮಾಡಿದ್ದಾರೆ.

"ನನ್ನಲ್ಲಿ ಯಾವುದೇ ಶಕ್ತಿಯಾಗಲಿ ಸಾಮರ್ಥ್ಯವಾಗಲಿ ಇಲ್ಲದೆ ಈ ಆಹಾರವನ್ನು ನನಗೆ ತಿನ್ನಿಸಿದ ಮತ್ತು ಇದನ್ನು ನನಗೆ ಅನ್ನಾಧಾರವಾಗಿ ನೀಡಿದ ಅಲ್ಲಾಹನಿಗೆ ಸ್ತುತಿ."(477)

## 100. ತನಗೆ ಆಹಾರ ಅಥವಾ ಪಾನೀಯವನ್ನು ನೀಡಿದವರಿಗಾಗಿ

ಈ ವಿಷಯದಲ್ಲಿ ವರದಿಯಾದ ದಿಕ್ರ್‌ಗಳು:

«اللَّهُمَّ أَطْعِمْ مَنْ أَطْعَمَنِي وَأَسْقِ مَنْ أَسْقَانِي»

**(ಅಲ್ಲಾಹುಮ್ಮ ಅತ್‌ಇಮ್ ಮನ್ ಅತ್‌ಅಮನೀ ವಅಸ್ಕಿ ಮನ್ ಅಸ್ಕಾನೀ)**

"ಓ ಅಲ್ಲಾಹ್! ನನಗೆ ಆಹಾರ ನೀಡಿದವನಿಗೆ ನೀನು ಆಹಾರವನ್ನು ನೀಡು ಮತ್ತು ನನಗೆ ಪಾನೀಯ ನೀಡಿದವನಿಗೆ ನೀನು ಪಾನೀಯ ನೀಡು."(478)

«أَفْطَرَ عِنْدَكُمُ الصَّائِمُونَ وَأَكَلَ طَعَامَكُمُ الْأَبْرَارُ وَصَلَّتْ عَلَيْكُمُ الْمَلَائِكَةُ»

**(ಅಫ್ತರ ಇನ್ದಕುಮು ಸ್ಸಾಇಮೂನ ವಅಕಲ ತಆಮಕುಮುಲ್ ಅಬ್ರಾರು ವಸಲ್ಲತ್ ಅಲೈಕುಮುಲ್ ಮಲಾಇಕಃ)**

"ಉಪವಾಸವಿರುವವರು ನಿಮ್ಮ ಬಳಿ (ಉಪವಾಸವನ್ನು) ತೊರೆದರು, ಸಜ್ಜನರು ನಿಮ್ಮ ಆಹಾರವನ್ನು ಸೇವಿಸಿದರು ಮತ್ತು ಮಲಕ್‌ಗಳು ನಿಮ್ಮ ಮೇಲೆ ಸಲಾತ್ ಹೇಳಿದರು."(479)

## 101. ಆಥಿತೇಯನಿಗಾಗಿ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ بَارِكْ لَهُمْ فِي مَا رَزَقْتَهُمْ وَاغْفِرْ لَهُمْ وَارْحَمْهُمْ»

**(ಅಲ್ಲಾಹುಮ್ಮ ಬಾರಿಕ್ ಲಹುಮ್ ಫೀಮಾ ರಝಕ್ತಹುಮ್ ವಗ್ಫಿರ್ ಲಹುಮ್ ವರ್‌ಹಮ್‌ಹುಮ್)**

"ಓ ಅಲ್ಲಾಹ್! ನೀವು ಅವರಿಗೆ ನೀಡಿದ ಅನ್ನಾಧಾರಗಳಲ್ಲಿ ಅವರಿಗೆ ಬರ್ಕತ್

---

**477** ಇದನ್ನು ಅಬೂ ದಾವೂದ್ (2/440; ಹದೀಸ್ ನಂ. 4023) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**478** ಇದನ್ನು ಮುಸ್ಲಿಮ್ (3/1625; ಹದೀಸ್ ನಂ. 2055) ಮಿಕ್ದಾದ್‌ರಿಂದ ವರದಿ ಮಾಡಿದ್ದಾರೆ.

**479** ಇದನ್ನು ಅಬೂ ದಾವೂದ್ (2/395; ಹದೀಸ್ ನಂ. 3854) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

ನೀಡು, ಅವರಿಗೆ ಕ್ಷಮೆ ನೀಡು ಮತ್ತು ಅವರಿಗೆ ಕರುಣೆ ತೋರು."[480]

## 102. ಸಲಾಮ್ ಹೇಳುವುದು

عَنْ عَبْدِ اللَّهِ بْنِ عَمْرٍو رَضِيَ اللَّهُ عَنْهُ أَنَّ رَجُلًا سَأَلَ النَّبِيَّ صَلَّى اللَّهُ عَلَيْهِ وَسَلَّمَ أَيُّ الْإِسْلَامِ خَيْرٌ قَالَ: «تُطْعِمُ الطَّعَامَ وَتَقْرَأُ السَّلَامَ عَلَى مَنْ عَرَفْتَ وَمَنْ لَمْ تَعْرِفْ»

**"ಅಬ್ದುಲ್ಲಾಹ್ ಇಬ್ನ್ ಅಮ್ರ್(ರ)ರಿಂದ: ಓರ್ವ ವ್ಯಕ್ತಿಯು ಪ್ರವಾದಿ(ﷺ)ರವರೊಂದಿಗೆ ಕೇಳಿದನು: ಇಸ್ಲಾಮಿನಲ್ಲಿ ಯಾವುದು ಉತ್ತಮವಾಗಿದೆ? ಅವರು ಹೇಳಿದರು: ನೀವು ಆಹಾರವನ್ನು ತಿನ್ನಿಸುವುದು ಮತ್ತು ನಿನಗೆ ಪರಿಚಯವಿರುವ ಹಾಗೂ ಪರಿಚಯವಿಲ್ಲದವರಿಗೆ ಸಲಾಮ್ ಹೇಳುವುದು."[481]**

ಪ್ರವಾದಿ(ﷺ)ರವರು ಹೇಳಿದರು:

«لَا تَدْخُلُوا الْجَنَّةَ حَتَّى تُؤْمِنُوا وَلَا تُؤْمِنُوا حَتَّى تَحَابُّوا أَوَلَا أَدُلُّكُمْ عَلَى شَيْءٍ إِذَا فَعَلْتُمُوهُ تَحَابَبْتُمْ أَفْشُوا السَّلَامَ بَيْنَكُمْ»

**"ನೀವು ವಿಶ್ವಾಸವಿಡುವವರೆಗೆ ಸ್ವರ್ಗವನ್ನು ಪ್ರವೇಶಿಸಲಾರಿರಿ. ನೀವು ಪರಸ್ಪರ ಪ್ರೀತಿಸುವ ವರೆಗೆ ವಿಶ್ವಾಸವಿಡಲಾರಿರಿ. ನೀವು ಅದನ್ನು ಮಾಡಿದರೆ ನೀವು ಪರಸ್ಪರ ಪ್ರೀತಿಸುವಂತಹ ಒಂದು ಕಾರ್ಯದೆಡೆಗೆ ನಾನು ಸೂಚನೆ ನೀಡಲೇ? ನಿಮ್ಮ ನಡುವೆ ಸಲಾಮನ್ನು ಹರಡಿಸಿರಿ."[482]**

ಸಲಾಮ್ ಹೇಳಬೇಕಾದ ರೀತಿ:

«السَّلَامُ عَلَيْكُمْ»

**(ಅಸ್ಸಲಾಮು ಅಲೈಕುಮ್)**

"ನಿಮ್ಮ ಮೇಲೆ ಶಾಂತಿಯಿರಲಿ."[483]

---

**480** ಇದನ್ನು ಮುಸ್ಲಿಮ್ (3/1615; ಹದೀಸ್ ನಂ. 2042) ಅಬ್ದುಲ್ಲಾಹ್ ಇಬ್ನ್ ಬುಸ್ರ್‌ರಿಂದ ವರದಿ ಮಾಡಿದ್ದಾರೆ.

**481** ಇದನ್ನು ಬುಖಾರಿ (1/13; ಹದೀಸ್ ನಂ. 12), ಮುಸ್ಲಿಮ್ (1/65; ಹದೀಸ್ ನಂ. 39) ವರದಿ ಮಾಡಿದ್ದಾರೆ.

**482** ಇದನ್ನು ಮುಸ್ಲಿಮ್ (1/74; ಹದೀಸ್ ನಂ. 54) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**483** ಇದನ್ನು ಅಬೂ ದಾವೂದ್ (2/771; ಹದೀಸ್ ನಂ. 5195) ಇಮ್ರಾನ್ ಇಬ್ನ್ ಹುಸೈನ್‌ರಿಂದ ವರದಿ ಮಾಡಿದ್ದಾರೆ.

# 103. ಸಲಾಮ್‌ಗೆ ಪ್ರತಿಯಾಗಿ ಸಲಾಮ್ ಹೇಳುವುದು

ಅಲ್ಲಾಹು ಹೇಳಿದ್ದಾನೆ:

﴿ وَإِذَا حُيِّيتُم بِتَحِيَّةٍ فَحَيُّوا۟ بِأَحْسَنَ مِنْهَآ أَوْ رُدُّوهَآ ۗ إِنَّ ٱللَّهَ كَانَ عَلَىٰ كُلِّ شَىْءٍ حَسِيبًا ﴿٨٦﴾ ﴾

**"ನಿಮಗೆ ಅಭಿವಂದನೆಯನ್ನು ಸಲ್ಲಿಸಲ್ಪಟ್ಟರೆ ನೀವು ಅದಕ್ಕಿಂತಲೂ ಉತ್ತಮವಾದ ರೀತಿಯಲ್ಲಿ ಅಭಿವಂದನೆ ಸಲ್ಲಿಸಿರಿ. ಅಥವಾ ಅದನ್ನು ಮರಳಿಸಿರಿ. ಅಲ್ಲಾಹು ಪ್ರತಿಯೊಂದು ಕಾರ್ಯಗಳ ಕುರಿತೂ ವಿಚಾರಣೆ ನಡೆಸುವವನಾಗಿದ್ದಾನೆ."**[484]

ಪ್ರವಾದಿ(ﷺ)ರವರು ಹೇಳಿದರು:

«خَلَقَ اللَّهُ آدَمَ عَلَى صُورَتِهِ طُولُهُ سِتُّونَ ذِرَاعًا فَلَمَّا خَلَقَهُ قَالَ اذْهَبْ فَسَلِّمْ عَلَى أُولَئِكَ النَّفَرِ مِنَ الْمَلَائِكَةِ جُلُوسٌ فَاسْتَمِعْ مَا يُحَيُّونَكَ فَإِنَّهَا تَحِيَّتُكَ وَتَحِيَّةُ ذُرِّيَّتِكَ فَقَالَ السَّلَامُ عَلَيْكُمْ فَقَالُوا السَّلَامُ عَلَيْكَ وَرَحْمَةُ اللَّهِ فَزَادُوهُ وَرَحْمَةُ اللَّهِ»

**"ಅಲ್ಲಾಹು ಆದಮ್(عليه السلام)ರನ್ನು ಅವರ ರೂಪದಲ್ಲಿ ಸೃಷ್ಟಿಸಿದನು. ಅವರ ಎತ್ತರವು ಅರುವತ್ತು ಮೊಳಗಳಾಗಿದ್ದವು. ಹಾಗೆ ಅವರನ್ನು ಸೃಷ್ಟಿಸಿದಾಗ ಅವರೊಂದಿಗೆ ಹೇಳಿದನು: ಹೋಗು, ಅಲ್ಲಿ ಕುಳಿತಿರುವ ಮಲಕ್‌ಗಳ ಗುಂಪಿಗೆ ಸಲಾಮ್ ಹೇಳು. ಅವರು ನಿನಗೆ ಏನನ್ನು (ಪ್ರತಿಯಾಗಿ) ಅಭಿನಂದನೆ ಸಲ್ಲಿಸುತ್ತಾರೆಂದು ಆಲಿಸು. ಅದು ನಿನ್ನ ಮತ್ತು ನಿನ್ನ ಸಂತಾನದ ಅಭಿನಂದನೆಯಾಗಿರುತ್ತದೆ. ಅವರು ಹೇಳಿದರು: ಅಸ್ಸಲಾಮು ಅಲೈಕುಮ್. ಅವರು (ಮಲಕ್‌ಗಳು) ಹೇಳಿದರು: ಅಸ್ಸಲಾಮು ಅಲೈಕ ವರಹ್ಮತುಲ್ಲಾಹ್. ಹಾಗೆ ಅವರು ಅದಕ್ಕೆ ವರಹ್ಮತುಲ್ಲಾಹ್‌ವನ್ನು ಹೆಚ್ಚುವರಿಗೊಳಿಸಿದರು."**[485]

ಈ ವಿಷಯದಲ್ಲಿ ವರದಿಯಾದ ದಿಕ್ರ್:

«وَعَلَيْكُمُ السَّلَامُ وَرَحْمَةُ اللَّهِ وَبَرَكَاتُهُ»

**(ವಅಲೈಕುಮು ಸ್ಸಲಾಮು ವರಹ್ಮತುಲ್ಲಾಹಿ ವಬರಕಾತುಹ್)**

"ನಿಮ್ಮ ಮೇಲೆ ಅಲ್ಲಾಹನ ಶಾಂತಿ, ಕರುಣೆ ಮತ್ತು ಸಮೃದ್ಧಿಗಳಿರಲಿ."[486]

---

**484** ಕುರ್‌ಆನ್ 4/86

**485** ಇದನ್ನು ಬುಖಾರಿ (5/2299; ಹದೀಸ್ ನಂ. 5873), ಮುಸ್ಲಿಮ್ (4/2183; ಹದೀಸ್ ನಂ. 2841) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**486** ಇದನ್ನು ಬುಖಾರಿ (3/1374; ಹದೀಸ್ ನಂ. 3557), ಮುಸ್ಲಿಮ್ (4/1895; ಹದೀಸ್ ನಂ.

## 104. ಮುಸ್ಲಿಮೇತರರು ಸಲಾಮ್ ಹೇಳಿದರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«وَعَلَيْكُمْ»

**(ವಅಲೈಕುಮ್)**
**"**ಮತ್ತು ನಿಮ್ಮ ಮೇಲೆ**"**(487)

## 105. ಸೀನಿದರೆ

ಪ್ರವಾದಿ(ﷺ)ರವರು ಹೇಳಿದರು:

«إِنَّ اللَّهَ يُحِبُّ الْعُطَاسَ وَيَكْرَهُ التَّثَاؤُبَ»

**"ಅಲ್ಲಾಹು ಸೀನನ್ನು ಇಷ್ಟಪಡುತ್ತಾನೆ ಮತ್ತು ಆಕಲಿಕೆಯನ್ನು ಅಸಹ್ಯಪಡುತ್ತಾನೆ."**(488)

ಈ ವಿಷಯದಲ್ಲಿ ವರದಿಯಾದ ದಿಕ್ರ್:

«الْحَمْدُ لِلَّهِ»

**(ಅಲ್‌ಹಮ್ದು ಲಿಲ್ಲಾಹ್)**
**"**ಸ್ತುತಿ ಅಲ್ಲಾಹನಿಗೆ.**"**(489)

## 106. ಯಾರಾದರೂ ಸೀನಿದ ನಂತರ ಅಲ್ಲಾಹನನ್ನು ಸ್ತುತಿಸಿದರೆ

ಪ್ರವಾದಿ(ﷺ)ರವರು ಹೇಳಿದರು:

«فَإِذَا عَطَسَ فَحَمِدَ اللَّهَ فَحَقٌّ عَلَى كُلِّ مُسْلِمٍ سَمِعَهُ أَنْ يُشَمِّتَهُ»

**"ಯಾರಾದರೂ ಸೀನಿದ ನಂತರ ಅಲ್ಲಾಹನನ್ನು ಸ್ತುತಿಸಿದರೆ ಅವನಿಗೆ ತಶ್ಮೀತ್**(490)

---

2447) ಆಯಿಶಾರಿಂದ ವರದಿ ಮಾಡಿದ್ದಾರೆ.

**487** ಇದನ್ನು ಬುಖಾರಿ (3/1073; ಹದೀಸ್ ನಂ. 2777), ಮುಸ್ಲಿಮ್ (4/1706; ಹದೀಸ್ ನಂ. 2165) ಆಯಿಶಾರಿಂದ ವರದಿ ಮಾಡಿದ್ದಾರೆ.

**488** ಇದನ್ನು ಬುಖಾರಿ (5/2297; ಹದೀಸ್ ನಂ. 5869) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**489** ಇದನ್ನು ಬುಖಾರಿ (5/2298; ಹದೀಸ್ ನಂ. 5870) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**490** ಅರ್ಥಾತ್ ಸೀನಿದವನ ಸ್ತುತಿಗೆ ಉತ್ತರಿಸುವುದು.

**ಮಾಡುವುದು ಅದನ್ನು ಆಲಿಸಿದ ಎಲ್ಲ ಮುಸ್ಲಿಮರ ಮೇಲೂ ಹಕ್ಕಾಗಿದೆ.”(491)**

ಈ ವಿಷಯದಲ್ಲಿ ವರದಿಯಾದ ದಿಕ್ರ್:

«يَرْحَمُكَ اللَّهُ»

**(ಯರ್ಹಮುಕಲ್ಲಾಹ್)**

“ಅಲ್ಲಾಹು ನಿನಗೆ ದಯೆ ತೋರಲಿ.”(492)

## 107. ಸೀನಿದವನು ಇದನ್ನು ಆಲಿಸಿದರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«يَهْدِيكُمُ اللَّهُ وَيُصْلِحُ بَالَكُمْ»

**(ಯಹ್ದೀಕುಮುಲ್ಲಾಹು ವಯುಸ್ಲಿಹು ಬಾಲಕುಮ್)**

“ಅಲ್ಲಾಹು ನಿನ್ನನ್ನು (ನೇರಮಾರ್ಗದೆಡೆಗೆ) ಮುನ್ನಡೆಸಲಿ ಮತ್ತು ನಿನ್ನ ಅವಸ್ಥೆಯನ್ನು ಸುಧಾರಿಸಲಿ.”(493)

## 108. ಆಕಳಿಸಿದರೆ

ಪ್ರವಾದಿ(ﷺ)ರವರು ಹೇಳಿದರು:

«وَأَمَّا التَّثَاؤُبُ فَإِنَّمَا هُوَ مِنَ الشَّيْطَانِ فَلْيَرُدَّهُ مَا اسْتَطَاعَ فَإِذَا قَالَ هَا ضَحِكَ مِنْهُ الشَّيْطَانُ»

**“ಆಕಳಿಕೆಯ ಕುರಿತು ಹೇಳುವುದಾದರೆ ಅದು ಕೇವಲ ಶೈತಾನನಿಂದಾಗಿದೆ. ಆದ್ದರಿಂದ ಅವನು ಸಾಧ್ಯವಾದಷ್ಟು ಅದನ್ನು ತಡೆಯಲು ಪ್ರಯತ್ನಿಸಲಿ. ಅವನು ‘ಹಾ’ ಎನ್ನುವಾಗ ಅದನ್ನು ಕಂಡು ಶೈತಾನನು ನಗುವನು.”(494)**

**491** ಇದನ್ನು ಬುಖಾರಿ (5/2297; ಹದೀಸ್ ನಂ. 5869) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**492** ಇದನ್ನು ಬುಖಾರಿ (5/2298; ಹದೀಸ್ ನಂ. 5870) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**493** ಇದನ್ನು ಬುಖಾರಿ (5/2298; ಹದೀಸ್ ನಂ. 5870) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**494** ಇದನ್ನು ಬುಖಾರಿ (5/2297; ಹದೀಸ್ ನಂ. 5869) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

## 109. ನೂತನ ವಧುವರರಿಗಾಗಿ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«بَارَكَ اللَّهُ لَكَ»

**(ಬಾರಕಲ್ಲಾಹು ಲಕ್)**

**“**ಅಲ್ಲಾಹು ನಿನಗೆ ಬರ್ಕತ್ ನೀಡಲಿ.**”**[495]

«بَارَكَ اللَّهُ لَكَ وَبَارَكَ عَلَيْكَ وَجَمَعَ بَيْنَكُمَا فِي خَيْرٍ»

**(ಬಾರಕಲ್ಲಾಹು ಲಕ ವಬಾರಕ ಅಲೈಕ ವಜಮಅ ಬೈನಕುಮಾ ಫೀ ಖೈರ್)**

**“**ಅಲ್ಲಾಹು ನಿನಗೆ ಬರ್ಕತ್ ನೀಡಲಿ, ನಿನ್ನ ಮೇಲೆ ಬರ್ಕತ್ ನೀಡಲಿ ಮತ್ತು ನಿಮ್ಮಿಬ್ಬರನ್ನು ಒಳಿತಿನಲ್ಲಿ ಒಂದುಗೂಡಿಸಲಿ.**”**[496]

## 110. ಮೊದಲ ರಾತ್ರಿಯಲ್ಲಿ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ إِنِّي أَسْأَلُكَ خَيْرَهَا وَخَيْرَ مَا جَبَلْتَهَا عَلَيْهِ وَأَعُوذُ بِكَ مِنْ شَرِّهَا وَمِنْ شَرِّ مَا جَبَلْتَهَا عَلَيْهِ»

**(ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಖೈರಹಾ ವಖೈರ ಮಾ ಜಬಲ್ತಹಾ ಅಲೈಹಿ, ವಅಊದು ಬಿಕ ಮಿನ್ ಶರ್ರಿಹಾ ವಶರ್ರಿ ಮಾ ಜಬಲ್ತಹಾ ಅಲೈಹಿ)**

**“**ಓ ಅಲ್ಲಾಹ್! ನಾನು ಈಕೆಯ ಒಳಿತನ್ನು ಮತ್ತು ಈಕೆಯನ್ನು ನೀನು ಯಾವುದಕ್ಕಾಗಿ ಸೃಷ್ಟಿಸಿದ್ದೀಯೋ ಅದರ ಒಳಿತನ್ನು ಬೇಡುತ್ತಿದ್ದೇನೆ. ಮತ್ತು ಈಕೆಯ ಕೆಡುಕಿನಿಂದ ಮತ್ತು ಈಕೆಯನ್ನು ಯಾವುದಕ್ಕಾಗಿ ಸೃಷ್ಟಿಸಿದ್ದೀಯೋ ಅದರ ಕೆಡುಕಿನಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ.**”**[497]

---

**495** ಇದನ್ನು ಬುಖಾರಿ (5/2346; ಹದೀಸ್ ನಂ. 6023), ಮುಸ್ಲಿಮ್ (2/1042; ಹದೀಸ್ ನಂ. 1427) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**496** ಇದನ್ನು ಅಬೂ ದಾವೂದ್ (1/647; ಹದೀಸ್ ನಂ. 2130), ತಿರ್ಮಿದಿ (3/400; ಹದೀಸ್ ನಂ. 1091) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**497** ಇದನ್ನು ಅಬೂ ದಾವೂದ್ (1/655; ಹದೀಸ್ ನಂ. 2160) ಅಬ್ದುಲ್ಲಾಹ್ ಇಬ್ನ್ ಅಮ್ರ್‌ರಿಂದ ವರದಿ ಮಾಡಿದ್ದಾರೆ.

## 111. ಸಂಭೋಗಿಸುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«بِسْمِ اللَّهِ اللَّهُمَّ جَنِّبْنَا الشَّيْطَانَ وَجَنِّبِ الشَّيْطَانَ مَا رَزَقْتَنَا»

**(ಬಿಸ್ಮಿಲ್ಲಾಹಿ ಅಲ್ಲಾಹುಮ್ಮ ಜನ್ನಿಬ್‌ನ ಶ್ಶೈತಾನ ವಜನ್ನಿಬಿ ಶ್ಶೈತಾನ ಮಾ ರಝಖ್ತನಾ)**

"ಅಲ್ಲಾಹನ ನಾಮದೊಂದಿಗೆ, ಓ ಅಲ್ಲಾಹ್! ನಮ್ಮಿಂದ ಶೈತಾನನನ್ನು ದೂರೀಕರಿಸು ಮತ್ತು ನಮಗೆ ನೀನು ನೀಡಿರುವುದರಿಂದ ಶೈತಾನನನ್ನು ದೂರೀಕರಿಸು."[498]

## 112. ಕತ್ತೆ ಅರಚುವುದನ್ನು ಆಲಿಸಿದರೆ

ಪ್ರವಾದಿ(ﷺ)ರವರು ಹೇಳಿದರು:

«وَإِذَا سَمِعْتُمْ نَهِيقَ الْحِمَارِ فَتَعَوَّذُوا بِاللَّهِ مِنَ الشَّيْطَانِ فَإِنَّهُ رَأَى شَيْطَانًا»

**"ನೀವು ಕತ್ತೆ ಅರಚುವುದನ್ನು ಆಲಿಸಿದರೆ ಶೈತಾನನಿಂದ ಅಲ್ಲಾಹನೊಂದಿಗೆ ಅಭಯ ಯಾಚಿಸಿರಿ. ಯಾಕೆಂದರೆ ಅದು ಶೈತಾನನನ್ನು ಕಂಡಿದೆ."[499]**

## 113. ನಾಯಿ ಬೊಗಳುವುದನ್ನು ಆಲಿಸಿದರೆ

ಪ್ರವಾದಿ(ﷺ)ರವರು ಹೇಳಿದರು:

«إِذَا سَمِعْتُمْ نُبَاحَ الْكِلَابِ وَنَهِيقَ الْحُمُرِ بِاللَّيْلِ فَتَعَوَّذُوا بِاللَّهِ فَإِنَّهُنَّ يَرَيْنَ مَا تَرَوْنَ»

**"ನೀವು ರಾತ್ರಿ ವೇಳೆಯಲ್ಲಿ ನಾಯಿ ಬೊಗಳುವುದನ್ನು ಮತ್ತು ಕತ್ತೆಗಳು ಅರಚುವುದನ್ನು ಆಲಿಸಿದರೆ ಅಲ್ಲಾಹನೊಂದಿಗೆ ಅಭಯ ಯಾಚಿಸಿರಿ. ಯಾಕೆಂದರೆ ನೀವು ಕಾಣದುದನ್ನು ಅವು ಕಾಣುತ್ತಿವೆ."[500]**

---

**498** ಇದನ್ನು ಬುಖಾರಿ (1/65; ಹದೀಸ್ ನಂ. 141), ಮುಸ್ಲಿಮ್ (2/1058; ಹದೀಸ್ ನಂ. 1434) ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.

**499** ಇದನ್ನು ಬುಖಾರಿ (3/1202; ಹದೀಸ್ ನಂ. 3127), ಮುಸ್ಲಿಮ್ (4/2092; ಹದೀಸ್ ನಂ. 2729) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**500** ಇದನ್ನು ಅಬೂ ದಾವೂದ್ (2/748; ಹದೀಸ್ ನಂ. 5103) ಜಾಬಿರ್ ಇಬ್ನ್ ಅಬ್ದಿಲ್ಲಾಹ್‌ರಿಂದ ವರದಿ ಮಾಡಿದ್ದಾರೆ.

## 114. ಕೋಳಿ ಕೂಗುವುದನ್ನು ಆಲಿಸಿದರೆ

ಪ್ರವಾದಿ(ﷺ)ರವರು ಹೇಳಿದರು:

«إِذَا سَمِعْتُمْ صِيَاحَ الدِّيكَةِ فَاسْأَلُوا اللَّهَ مِنْ فَضْلِهِ فَإِنَّهَا رَأَتْ مَلَكًا»

**“ನೀವು ಕೋಳಿ ಕೂಗುವುದನ್ನು ಆಲಿಸಿದರೆ ಅಲ್ಲಾಹನೊಂದಿಗೆ ಅವರ ಔದಾರ್ಯದಿಂದ ಬೇಡಿಕೊಳ್ಳಿರಿ. ಯಾಕೆಂದರೆ ಅದು (ಕೋಳಿ) ಮಲಕ್‌ನ್ನು ಕಂಡಿದೆ.”**[501]

## 115. ಕೋಪಗೊಂಡಾಗ

ಅಲ್ಲಾಹು ಹೇಳಿದ್ದಾನೆ:

﴿ ٱلَّذِينَ يُنفِقُونَ فِى ٱلسَّرَّآءِ وَٱلضَّرَّآءِ وَٱلْكَـٰظِمِينَ ٱلْغَيْظَ وَٱلْعَافِينَ عَنِ ٱلنَّاسِ ۗ وَٱللَّهُ يُحِبُّ ٱلْمُحْسِنِينَ ﴿١٣٤﴾ ﴾

**“ಆಹ್ಲಾದಘಟ್ಟಗಳಲ್ಲಿ ಮತ್ತು ದುರಂತಘಟ್ಟಗಳಲ್ಲಿ ವ್ಯಯಿಸುವವರು, ಕೋಪವನ್ನು ಅದುವಿಡುವವರು ಮತ್ತು ಜನರಿಗೆ ಕ್ಷಮೆ ನೀಡುವವರು. ಅಲ್ಲಾಹು ಸತ್ಕರ್ಮಿಗಳನ್ನು ಇಷ್ಟಪಡುತ್ತಾನೆ.”**[502]

ಪ್ರವಾದಿ(ﷺ)ರವರು ಹೇಳಿದರು:

«لَيْسَ الشَّدِيدُ بِالصُّرَعَةِ إِنَّمَا الشَّدِيدُ الَّذِي يَمْلِكُ نَفْسَهُ عِنْدَ الْغَضَبِ»

**“ಮಲ್ಲಯುದ್ಧದಲ್ಲಿ ಜಯಿಸುವವನು ಬಲಶಾಲಿಯಲ್ಲ. ಕೋಪಗೊಂಡಾಗ ತನ್ನ ಮನಸ್ಸನ್ನು ನಿಯಂತ್ರಿಸುವವನು ಬಲಶಾಲಿಯಾಗಿದ್ದಾನೆ.”**[503]

ಈ ವಿಷಯದಲ್ಲಿ ವರದಿಯಾದ ದಿಕ್ರ್:

«أَعُوذُ بِاللَّهِ مِنَ الشَّيْطَانِ الرَّجِيمِ»

**(ಅಊದು ಬಿಲ್ಲಾಹಿ ಮಿನ ಶ್ಶೈತಾನಿ ರ್ರಜೀಮ್)**

**“ಶಪಿಸಲ್ಪಟ್ಟ ಶೈತಾನನಿಂದ ನಾನು ಅಲ್ಲಾಹನೊಂದಿಗೆ ಅಭಯ ಯಾಚಿಸುತ್ತಿದ್ದೇನೆ.”**[504]

---

**501** ಇದನ್ನು ಬುಖಾರಿ (3/1202; ಹದೀಸ್ ನಂ. 3127), ಮುಸ್ಲಿಮ್ (4/2092; ಹದೀಸ್ ನಂ. 2729) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**502** ಕುರ್‌ಆನ್ 3/134

**503** ಇದನ್ನು ಬುಖಾರಿ (5/2267; ಹದೀಸ್ ನಂ. 5763), ಮುಸ್ಲಿಮ್ (4/2014; ಹದೀಸ್ ನಂ. 2609) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**504** ಇದನ್ನು ಬುಖಾರಿ (5/2267; ಹದೀಸ್ ನಂ. 5764), ಮುಸ್ಲಿಮ್ (4/2015; ಹದೀಸ್ ನಂ.

## 116. ಪರೀಕ್ಷಿಸಲ್ಪಟ್ಟವನನ್ನು ಕಂಡರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«الْحَمْدُ لِلَّهِ الَّذِي عَافَانِي مِمَّا ابْتَلَاكَ بِهِ وَفَضَّلَنِي عَلَى كَثِيرٍ مِمَّنْ خَلَقَ تَفْضِيلًا»

**(ಅಲ್‌ಹಮ್ದು ಲಿಲ್ಲಾಹಿಲ್ಲದೀ ಆಫಾನೀ ಮಿಮ್ಮಬ್ತಲಾಕ ಬಿಹೀ ವಫದ್ದಲನೀ ಅಲಾ ಕಸೀರಿನ್ ಮಿಮ್ಮನ್ ಖಲಕ ತಫ್ದೀಲಾ)**

"ಅಲ್ಲಾಹನಿಗೆ ಸ್ತುತಿ, ನಿನ್ನನ್ನು ಯಾವುದರಿಂದ ಅವನು ಪರೀಕ್ಷಿಸಿದನೋ ಅದರಿಂದ ಅವನು ನನ್ನನ್ನು ಕ್ಷಮಿಸಿದ್ದಾನೆ. ಮತ್ತು ತಾನು ಸೃಷ್ಟಿಸಿದ ಅನೇಕ ಸೃಷ್ಟಿಗಳ ಮೇಲೆ ಅವನ ನನ್ನನ್ನು ಶ್ರೇಷ್ಠಗೊಳಿಸಿದ್ದಾನೆ."(505)

## 117. ದನ್ಯವಾದ ಸಲ್ಲಿಸುವುದು

ಈ ವಿಷಯದಲ್ಲಿ ವರದಿಯಾದ ದಿಕ್ರ್:

«جَزَاكَ اللَّهُ خَيْرًا»

**(ಜಝಾಕಲ್ಲಾಹು ಖೈರನ್)**

"ಅಲ್ಲಾಹು ನಿನಗೆ ಉತ್ತಮವಾದುದನ್ನು ಪ್ರತಿಫಲವಾಗಿ ನೀಡಲಿ."(506)

## 118. ಓರ್ವ ವ್ಯಕ್ತಿಯ ಮುಖಸ್ತುತಿ ಮಾಡಬಯಸಿದರೆ

عَنْ أَبِي بَكْرَةَ رَضِيَ اللَّهُ عَنْهُ قَالَ مَدَحَ رَجُلٌ رَجُلًا عِنْدَ النَّبِيِّ صَلَّى اللَّهُ عَلَيْهِ وَسَلَّمَ قَالَ فَقَالَ: «وَيْحَكَ قَطَعْتَ عُنُقَ صَاحِبِكَ قَطَعْتَ عُنُقَ صَاحِبِكَ» مِرَارًا «إِذَا كَانَ أَحَدُكُمْ مَادِحًا صَاحِبَهُ مَحَالَةَ فَلْيَقُلْ أَحْسِبُ فُلَانًا وَاللَّهُ حَسِيبُهُ وَلَا أُزَكِّي عَلَى اللَّهِ أَحَدًا أَحْسِبُهُ إِنْ كَانَ يَعْلَمُ ذَاكَ كَذَا وَكَذَا»

---

2610) ಸುಲೈಮಾನ್ ಇಬ್ನ್ ಸುರ್ದ್‌ರಿಂದ ವರದಿ ಮಾಡಿದ್ದಾರೆ.

**505** ಇದನ್ನು ತಿರ್ಮಿದಿ (5/493; ಹದೀಸ್ ನಂ. 3431) ಉಮರ್ ಇಬ್ನುಲ್ ಖತ್ತಾಬ್‌ರಿಂದ ವರದಿ ಮಾಡಿದ್ದಾರೆ.

**506** ಇದನ್ನು ತಿರ್ಮಿದಿ (4/380; ಹದೀಸ್ ನಂ. 2035) ಉಸಾಮಃ ಇಬ್ನ್ ಝೈದ್‌ರಿಂದ ವರದಿ ಮಾಡಿದ್ದಾರೆ.

**“ಅಬೂ ಬಕ್ರ್(﵁)ರಿಂದ: ಓರ್ವ ವ್ಯಕ್ತಿ ಪ್ರವಾದಿ(ﷺ)ರವರ ಬಳಿ ಓರ್ವ ವ್ಯಕ್ತಿಯನ್ನು ಪ್ರಶಂಸಿಸಿದರು. ಆಗ ಪ್ರವಾದಿ(ﷺ)ರವರು ಹೇಳಿದರು: ನಿನಗೆ ನಾಶ, ನೀನು ನಿನ್ನ ಗೆಳೆಯನ ಕತ್ತನ್ನು ಕತ್ತರಿಸಿರುವೆ, ನೀನು ನಿನ್ನ ಗೆಳೆಯನ ಕತ್ತನ್ನು ಕತ್ತರಿಸಿರುವೆ. ಪ್ರವಾದಿ(ﷺ)(ﷺ) ರವರು ಹೀಗೆ ಅನೇಕ ಬಾರಿ ಹೇಳಿದರು. ನಂತರ ಹೇಳಿದರು: ನಿಮ್ಮಲ್ಲೋರ್ವನು ತನ್ನ ಗೆಳೆಯನನ್ನು ಅನಿವಾರ್ಯವಾಗಿ ಪ್ರಶಂಸಿಸಬೇಕಾಗಿ ಬಂದರೆ ಅವನು ಹೇಳಲಿ: ನಾನು ಅವನನ್ನು ಈ ರೀತಿ ಭಾವಿಸುತ್ತೇನೆ. ಅವನ ಕುರಿತು ಚೆನ್ನಾಗಿ ಅರಿತಿರುವವನು ಅಲ್ಲಾಹನಾಗಿದ್ದಾನೆ. ಅಲ್ಲಾಹನಿಗೆ ವಿರುದ್ಧವಾಗಿ ನಾನು ಯಾರನ್ನೂ ಸಂಸ್ಕರಿಸುವುದಿಲ್ಲ. –ಅವನು ಆತನ ಕುರಿತು ಏನನ್ನಾದರೂ ತಿಳಿದಿದ್ದರೆ– ನಾನು ಅವನನ್ನು ಹೀಗೆ ಹೀಗೆ ಭಾವಿಸುತ್ತೇನೆ (ಎಂದು ಹೇಳಲಿ).”(507)**

## 119. ತನ್ನ ಮುಖಸ್ತುತಿ ಮಾಡಲ್ಪಟ್ಟರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ لَا تُؤَاخِذْنِي بِمَا يَقُولُونَ وَاغْفِرْ لِي مَا لَا يَعْلَمُونَ»

**(ಅಲ್ಲಾಹುಮ್ಮ ಲಾ ತುಆಖಿದ್‌ನೀ ಬಿಮಾ ಯಕೂಲೂನ ವಗ್ಫಿರ್ ಲೀ ಮಾ ಲಾ ಯಅ್‌ಲಮೂನ್)**

“ಓ ಅಲ್ಲಾಹ್! ಅವರು ಹೇಳುತ್ತಿರುವುದರಿಂದಾಗಿ ನೀನು ನನ್ನನ್ನು ಶಿಕ್ಷಿಸದಿರು ಮತ್ತು ಅವರು ಅರಿತಿಲ್ಲದಿರುವುದರ ಬಗ್ಗೆ ನನಗೆ ಕ್ಷಮೆ ನೀಡು.”(508)

## 120. ಅಲ್ಲಾಹನಿಗೋಸ್ಕರ ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಯಾರಾದರೂ ಹೇಳಿದರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«أَحَبَّكَ الَّذِي أَحْبَبْتَنِي لَهُ»

**(ಅಹಬ್ಬಕಲ್ಲದೀ ಅಹ್ಬಬ್ತನೀ ಲಹ್)**

“ನೀನು ಯಾರಿಗೋಸ್ಕರ ನನ್ನನ್ನು ಪ್ರೀತಿಸಿದ್ದೀಯೋ ಅವನೂ ನಿನ್ನನ್ನು ಪ್ರೀತಿಸಲಿ.”(509)

**507** ಇದನ್ನು ಮುಸ್ಲಿಮ್ (4/2296; ಹದೀಸ್ ನಂ. 3000) ವರದಿ ಮಾಡಿದ್ದಾರೆ.

**508** ಇದನ್ನು ಬುಖಾರಿ ತನ್ನ ‘ಅದಬುಲ್ ಮುಫ್ರದ್’ನಲ್ಲಿ (1/267; ಹದೀಸ್ ನಂ. 761) ಅದೀ ಇಬ್ನ್ ಅರ್ತಾತ್‌ರಿಂದ ವರದಿ ಮಾಡಿದ್ದಾರೆ.

**509** ಇದನ್ನು ಅಬೂ ದಾವೂದ್ (2/754; ಹದೀಸ್ ನಂ. 5125) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

## 121. ಸಾಲವನ್ನು ಹಿಂದಿರುಗಿಸುವಾಗ

ಪ್ರವಾದಿ(ﷺ)ರವರು ಹೇಳಿದರು:

«إِنَّ خِيَارَكُمْ أَحْسَنُكُمْ قَضَاءً»

**"ಸಾಲವನ್ನು ಉತ್ತಮವಾದ ರೀತಿಯಲ್ಲಿ ಸಂದಾಯ ಮಾಡುವವನು ನಿಮ್ಮ ಪೈಕಿ ಉತ್ತಮನಾಗಿದ್ದಾನೆ."(510)**

ಈ ವಿಷಯದಲ್ಲಿ ವರದಿಯಾದ ದಿಕ್ರ್:

«بَارَكَ اللَّهُ لَكَ فِي أَهْلِكَ وَمَالِكَ إِنَّمَا جَزَاءُ السَّلَفِ الْوَفَاءُ وَالْحَمْدُ»

**(ಬಾರಕಲ್ಲಾಹು ಲಕ ಫೀ ಅಹ್ಲಿಕ ವಮಾಲಿಕ ಇನ್ನಮಾ ಜಝಾಉ ಸ್ಸಲಫಿ ಅಲ್‌ವಫಾಉ ವಲ್‌ಹಮ್ದ್)**

"ನಿನ್ನ ಕುಟುಂಬದಲ್ಲಿ ಮತ್ತು ನಿನ್ನ ಸಂಪತ್ತಿನಲ್ಲಿ ಅಲ್ಲಾಹು ನಿನಗೆ ಅನುಗ್ರಹಿಸಲಿ. ಸಲಫ್‌ಗಳ ಪ್ರತಿಫಲವು ಕೇವಲ ನೆರವೇರಿಸುವುದು ಮತ್ತು ಸ್ತುತಿಯಾಗಿದೆ."(511)

## 122. ಅವಧಿಪೂರ್ವ ಫಲವನ್ನು ದರ್ಶಿಸಿದಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ بَارِكْ لَنَا فِي ثَمَرِنَا وَبَارِكْ لَنَا فِي مَدِينَتِنَا وَبَارِكْ لَنَا فِي صَاعِنَا وَبَارِكْ لَنَا فِي مُدِّنَا»

**(ಅಲ್ಲಾಹುಮ್ಮ ಬಾರಿಕ್ ಲನಾ ಫೀ ಸಮರಿನಾ ವಬಾರಿಕ್ ಲನಾ ಫೀ ಮದೀನತಿನಾ ವಬಾರಿಕ್ ಲನಾ ಫೀ ಸಾಇನಾ ವಬಾರಿಕ್ ಲನಾ ಫೀ ಮುದ್ದಿನಾ)**

"ಓ ಅಲ್ಲಾಹ್! ನಮ್ಮ ಫಲಗಳಲ್ಲಿ ನೀನು ನಮಗೆ ಬರ್ಕತ್ತನ್ನು ನೀಡು, ನಮ್ಮ ಮದೀನದಲ್ಲಿ ನೀನು ನಮಗೆ ಬರ್ಕತ್ತನ್ನು ನೀಡು, ನಮ್ಮ ಸಾಅ್‌ನಲ್ಲಿ ನೀನು ನಮಗೆ ಬರ್ಕತ್ತನ್ನು ನೀಡು ಮತ್ತು ನಮ್ಮ ಮುದ್ದ್‌ನಲ್ಲಿ ನೀನು ನಮಗೆ ಬರ್ಕತ್ತನ್ನು ನೀಡು."(512)

---

**510** ಇದನ್ನು ಬುಖಾರಿ (2/809; ಹದೀಸ್ ನಂ. 2182), ಮುಸ್ಲಿಮ್ (3/1225; ಹದೀಸ್ ನಂ. 1601) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**511** ಇದನ್ನು ಇಬ್ನ್ ಮಾಜ (2/809; ಹದೀಸ್ ನಂ. 2424) ಅಬ್ದುಲ್ಲಾಹ್ ಇಬ್ನ್ ಅಬೀ ರಬೀಅಃರಿಂದ ವರದಿ ಮಾಡಿದ್ದಾರೆ.

**512** ಇದನ್ನು ಮುಸ್ಲಿಮ್ (2/1000; ಹದೀಸ್ ನಂ. 1373) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

## 123. ಸಭೆಯಲ್ಲಿ ಕುಳಿತಿರುವಾಗ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«رَبِّ اغْفِرْ لِي وَتُبْ عَلَيَّ إِنَّكَ أَنْتَ التَّوَّابُ الْغَفُورُ»

**(ರಬ್ಬಿಗ್‌ಫಿರ್ ಲೀ ವತುಬ್ ಅಲಯ್ಯ ಇನ್ನಕ ಅನ್ತ ತ್ತವ್ವಾಬುಲ್ ಗಫೂರ್)**

**“**ಪ್ರಭೂ! ನನಗೆ ಕ್ಷಮೆ ನೀಡು ಮತ್ತು ನನ್ನ ಪಶ್ಚಾತ್ತಾಪವನ್ನು ಸ್ವೀಕರಿಸು. ನೀನು ಅತ್ಯಂತ ತೌಬಾ ಸ್ವೀಕರಿಸುವವನೂ ಕ್ಷಮಿಸುವವನೂ ಆಗಿರುವೆ.**”**[513]

## 124. ಸಭೆಯಿಂದ ಎದ್ದೇಳುವಾಗ[514]

ಈ ವಿಷಯದಲ್ಲಿ ವರದಿಯಾದ ದಿಕ್ರ್:

«سُبْحَانَكَ اللَّهُمَّ وَبِحَمْدِكَ أَشْهَدُ أَنْ لَا إِلَهَ إِلَّا أَنْتَ أَسْتَغْفِرُكَ وَأَتُوبُ إِلَيْكَ»

**(ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ ಅಶ್‌ಹದು ಅನ್ ಲಾ ಇಲಾಹ ಇಲ್ಲಾ ಅನ್ತ ಅಸ್ತಗ್ಫಿರುಕ ವಅತೂಬು ಇಲೈಕ್)**

**“**ನಿನ್ನ ಪರಿಪಾವನತೆಯನ್ನು ನಾನು ಕೊಂಡಾಡುತ್ತೇನೆ. ಓ ಅಲ್ಲಾಹ್! ನಿನ್ನ ಸ್ತುತಿಯೊಂದಿಗೆ. ನಿನ್ನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ. ನಿನ್ನೊಂದಿಗೆ ಕ್ಷಮೆಯನ್ನು ಬೇಡುತ್ತಿದ್ದೇನೆ ಮತ್ತು ನಿನ್ನೆಡೆಗೆ ಪಶ್ಚಾತ್ತಾಪದೊಂದಿಗೆ ಮರಳುತ್ತಿದ್ದೇನೆ.**”**[515]

## 125. ತನಗೆ ಇಷ್ಟವಾಗಿರುವುದನ್ನು ಕಂಡರೆ ಅಥವಾ ಆಲಿಸಿದರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«الْحَمْدُ لِلَّهِ الَّذِي بِنِعْمَتِهِ تَتِمُّ الصَّالِحَاتُ»

**(ಅಲ್‌ಹಮ್ದು ಲಿಲ್ಲಾಹಿಲ್ಲದೀ ಬಿನಿಅ್‌ಮತಿಹೀ ತತಿಮ್ಮು ಸ್ಸಾಲಿಹಾತ್)**

**“**ಅಲ್ಲಾಹನಿಗೆ ಸ್ತುತಿ, ಅವನ ಅನುಗ್ರಹದೊಂದಿಗೆ ಸತ್ಕರ್ಮಗಳು ಪೂರ್ಣವಾಗುತ್ತವೆ.**”**[516]

**513** ಇದನ್ನು ತಿರ್ಮಿದಿ (5/494; ಹದೀಸ್ ನಂ. 3434) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

**514** ಇದನ್ನು ‘ಕಫ್ಫಾರತುಲ್ ಮಜ್ಲಿಸ್’ (ಸಭೆಯ ಪ್ರಾಯಶ್ಚಿತ್ತ) ಎಂದು ಹೇಳಲಾಗುತ್ತದೆ.

**515** ಇದನ್ನು ತಿರ್ಮಿದಿ (5/494; ಹದೀಸ್ ನಂ. 3433) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**516** ಇದನ್ನು ಇಬ್ನ್ ಮಾಜ (2/1250; ಹದೀಸ್ ನಂ. 3803) ಆಯಿಶಾರಿಂದ ವರದಿ ಮಾಡಿದ್ದಾರೆ.

## 126. ತನಗೆ ಇಷ್ಟವಿಲ್ಲದ್ದನ್ನು ಕಂಡರೆ ಅಥವಾ ಆಲಿಸಿದರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«الْحَمْدُ لِلَّهِ عَلَى كُلِّ حَالٍ»

**(ಅಲ್‌ಹಮ್ದು ಲಿಲ್ಲಾಹಿ ಅಲಾ ಕುಲ್ಲಿ ಹಾಲ್)**

"ಎಲ್ಲಾ ಅವಸ್ಥೆಗಳಲ್ಲಿಯೂ ಅಲ್ಲಾಹನಿಗೆ ಸ್ತುತಿ."(517)

## 127. ಅದ್ಭುತವಾದುದನ್ನು ಕಂಡರೆ ಅಥವಾ ಆಲಿಸಿದರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«سُبْحَانَ اللَّهِ»

**(ಸುಬ್‌ಹಾನಲ್ಲಾಹ್)**

"ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ."(518)

## 128. ಶಿರ್ಕ್‌ನ್ನು ಭಯಪಟ್ಟರೆ

ಈ ವಿಷಯದಲ್ಲಿ ವರದಿಯಾದ ದಿಕ್ರ್:

«اللَّهُمَّ إِنِّي أَعُوذُ بِكَ أَنْ أُشْرِكَ بِكَ وَأَنَا أَعْلَمُ وَأَسْتَغْفِرُكَ لِمَا لَا أَعْلَمُ»

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಅನ್ ಉಶ್ರಿಕ ಬಿಕ ವಅನ ಅಅ್‌ಲಮು ವಅಸ್ತಗ್ಫಿರುಕ ಲಿಮಾ ಲಾ ಅಅ್‌ಲಮ್)**

"ಓ ಅಲ್ಲಾಹ್! ನಾನು ಅರಿತುಕೊಂಡು ನಿನ್ನೊಂದಿಗೆ ಶಿರ್ಕ್ ಮಾಡುವುದರ ಬಗ್ಗೆ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ ಮತ್ತು ನಾನು ಅರಿತಿಲ್ಲದಿರುವುದರ ಬಗ್ಗೆ ನಾನು ನಿನ್ನೊಂದಿಗೆ ಕ್ಷಮೆ ಬೇಡುತ್ತಿದ್ದೇನೆ."(519)

---

**517** ಇದನ್ನು ಇಬ್ನ್ ಮಾಜ (2/1250; ಹದೀಸ್ ನಂ. 3803) ಆಯಿಶಾರಿಂದ ವರದಿ ಮಾಡಿದ್ದಾರೆ.
**518** ಇದನ್ನು ಬುಖಾರಿ (1/54; ಹದೀಸ್ ನಂ. 115) ಉಮ್ಮು ಸಲಮಾರಿಂದ ವರದಿ ಮಾಡಿದ್ದಾರೆ.
**519** ಇದನ್ನು ಬುಖಾರಿ ತನ್ನ 'ಅದಬುಲ್ ಮುಫ್ರದ್'ನಲ್ಲಿ (1/250; ಹದೀಸ್ ನಂ. 716) ಮಅ್‌ಕಿಲ್ ಇಬ್ನ್ ಯಸಾರ್‌ರಿಂದ ವರದಿ ಮಾಡಿದ್ದಾರೆ.

## 129. ಎಲ್ಲಾ ವೇಳೆಗಳಲ್ಲೂ ಹೇಳಬಹುದಾದ ಪ್ರಾರ್ಥನೆಗಳು

«اللَّهُمَّ رَبَّنَا آتِنَا فِي الدُّنْيَا حَسَنَةً وَفِي الْآخِرَةِ حَسَنَةً وَقِنَا عَذَابَ النَّارِ»

**(ಅಲ್ಲಾಹುಮ್ಮ ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಕಿನಾ ಅದಾಬನ್ನಾರ್)**

"ಓ ಅಲ್ಲಾಹ್! ನಮ್ಮ ಪ್ರಭೂ! ನಮಗೆ ಇಹಲೋಕದಲ್ಲಿ ಒಳಿತನ್ನು ನೀಡು, ಪರಲೋಕದಲ್ಲಿ ಒಳಿತನ್ನು ನೀಡು ಮತ್ತು ನಮ್ಮನ್ನು ನರಕ ಶಿಕ್ಷೆಯಿಂದ ಪಾರುಗೊಳಿಸು."(520)

«اللَّهُمَّ إِنِّي أَسْأَلُكَ الْهُدَى وَالتُّقَى وَالْعَفَافَ وَالْغِنَى»

**(ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಹುದಾ ವತ್ತುಕಾ ವಲ್ ಅಫಾಫ ವಲ್ ಗಿನಾ)**

"ಓ ಅಲ್ಲಾಹ್! ನಾನು ನಿನ್ನೊಂದಿಗೆ ಮಾರ್ಗದರ್ಶನವನ್ನು, ಭಯಭಕ್ತಿಯನ್ನು, ಚಾರಿತ್ರ್ಯತೆಯನ್ನು ಮತ್ತು ಸಂಪನ್ನತೆಯನ್ನು ಬೇಡುತ್ತಿದ್ದೇನೆ."(521)

«اللَّهُمَّ اغْفِرْ لِي وَارْحَمْنِي وَاهْدِنِي وَعَافِنِي وَارْزُقْنِي»

**(ಅಲ್ಲಾಹುಮ್ಮಗ್ಫಿರ್ ಲೀ ವರ್ಹಮ್‌ನೀ ವಹ್ದಿನೀ ವಆಫಿನೀ ವರ್ಝುಕ್‌ನೀ)**

"ಓ ಅಲ್ಲಾಹ್! ನನಗೆ ಕ್ಷಮೆ ನೀಡು, ನನಗೆ ದಯೆತೋರು, ನನ್ನನ್ನು ಮುನ್ನಡೆಸು, ನನಗೆ ಸೌಖ್ಯ ನೀಡು ಮತ್ತು ನನಗೆ ಅನ್ನಾಧಾರಗಳನ್ನು ನೀಡು."(522)

«اللَّهُمَّ مُصَرِّفَ الْقُلُوبِ صَرِّفْ قُلُوبَنَا عَلَى طَاعَتِكَ»

**(ಅಲ್ಲಾಹುಮ್ಮ ಮುಸರ್ರಿಫಲ್ ಕುಲೂಬ್ ಸರ್ರಿಫ್ ಕುಲೂಬನಾ ಅಲಾ ತಾಅತಿಕ್)**

"ಓ ಅಲ್ಲಾಹ್! ಹೃದಯಗಳನ್ನು ಪರಿವರ್ತಿಸುವವನೇ! ನಮ್ಮ ಹೃದಯಗಳನ್ನು ನಿನ್ನ ಅನುಸರಣೆಯೆಡೆಗೆ ಪರಿವರ್ತಿಸು."(523)

«اللَّهُمَّ إِنِّي أَعُوذُ بِكَ مِنْ جَهْدِ الْبَلَاءِ وَدَرَكِ الشَّقَاءِ وَسُوءِ الْقَضَاءِ وَشَمَاتَةِ الْأَعْدَاءِ»

---

**520** ಇದನ್ನು ಬುಖಾರಿ (5/2347; ಹದೀಸ್ ನಂ. 6026), ಮುಸ್ಲಿಮ್ (4/2070; ಹದೀಸ್ ನಂ. 2690) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**521** ಇದನ್ನು ಮುಸ್ಲಿಮ್ (4/2087; ಹದೀಸ್ ನಂ. 2721) ಅಬ್ದುಲ್ಲಾಹ್ ಇಬ್ನ್ ಮಸ್‌ಊದ್‌ರಿಂದ ವರದಿ ಮಾಡಿದ್ದಾರೆ.

**522** ಇದನ್ನು ಮುಸ್ಲಿಮ್ (4/2073; ಹದೀಸ್ ನಂ. 2697) ತಾರಿಕ್ ಇಬ್ನ್ ಅಶ್ಯಮ್‌ರಿಂದ ವರದಿ ಮಾಡಿದ್ದಾರೆ.

**523** ಇದನ್ನು ಮುಸ್ಲಿಮ್ (4/2045; ಹದೀಸ್ ನಂ. 2654) ಅಬ್ದುಲ್ಲಾಹ್ ಇಬ್ನ್ ಅಮ್ರ್‌ರಿಂದ ವರದಿ ಮಾಡಿದ್ದಾರೆ.

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಜಹ್ದಿಲ್ ಬಲಾಇ ವದರಕಿ ಶ್ಶಕಾಇ ವಸೂಇಲ್ ಕದಾಇ ವಶಮಾತತಿಲ್ ಅಅ್‌ದಾಅ್)**

"ಓ ಅಲ್ಲಾಹ್! ವಿಪತ್ತುಗಳ ಪ್ರಯಾಸ, ಹತಭಾಗ್ಯತನ, ದುರ್ವಿಧಿ ಮತ್ತು ಶತ್ರುಗಳ ಅವಹೇಳನಗಳಿಂದ ಅಭಯ ಯಾಚಿಸುತ್ತಿದ್ದೇನೆ."(524)

«اللَّهُمَّ إِنِّي أَعُوذُ بِكَ مِنَ الْعَجْزِ وَالْكَسَلِ وَالْجُبْنِ وَالْهَرَمِ وَالْبُخْلِ وَأَعُوذُ بِكَ مِنْ عَذَابِ الْقَبْرِ وَمِنْ فِتْنَةِ الْمَحْيَا وَالْمَمَاتِ»

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಅಜ್ಝಿ ವಲ್ ಕಸಲಿ ವಲ್ ಜುಬ್ನಿ ವಲ್ ಹರಮಿ ವಲ್ ಬುಖ್ಲಿ ವಅಊದು ಬಿಕ ಮಿನ್ ಅದಾಬಿಲ್ ಕಬ್ರಿ ವಮಿನ್ ಫಿತ್ನತಿಲ್ ಮಹ್ಯಾ ವಲ್ ಮಮಾತ್)**

"ಓ ಅಲ್ಲಾಹ್! ದೌರ್ಬಲ್ಯ, ಸೋಮಾರಿತನ, ಹೇಡಿತನ, ವೃದ್ಧಾಪ್ಯ ಮತ್ತು ಜಿಪುಣತೆಯಿಂದ ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ, ಗೋರಿಯ ಶಿಕ್ಷೆಯಿಂದ ಮತ್ತು ಜೀವನದ ಹಾಗೂ ಮರಣದ ಪರೀಕ್ಷೆಯಿಂದ ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ."(525)

«اللَّهُمَّ إِنِّي أَعُوذُ بِكَ مِنْ شَرِّ مَا عَمِلْتُ وَمِنْ شَرِّ مَا لَمْ أَعْمَلْ»

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಶರ್ರಿ ಮಾ ಅಮಿಲ್ತು ವಮಿನ್ ಶರ್ರಿ ಮಾ ಲಮ್ ಅಅ್‌ಮಲ್)**

"ಓ ಅಲ್ಲಾಹ್! ನಾನು ಮಾಡಿರುವ ಕೆಡುಕಿನಿಂದ ಮತ್ತು ನಾನು ಮಾಡದಿರುವ ಕೆಡುಕಿನಿಂದ ನಾನು ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ."(526)

«اللَّهُمَّ إِنِّي أَعُوذُ بِكَ مِنْ زَوَالِ نِعْمَتِكَ وَتَحَوُّلِ عَافِيَتِكَ وَفُجَاءَةِ نِقْمَتِكَ وَجَمِيعِ سَخَطِكَ»

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಝವಾಲಿ ನಿಅ್‌ಮತಿಕ ವತಹವ್ವುಲಿ ಆಫಿಯತಿಕ ವಫುಜಾಅತಿ ನಿಕ್ಮತಿಕ ವಜಮೀಇ ಸಖತಿಕ್)**

"ಓ ಅಲ್ಲಾಹ್! (ನನ್ನ ಮೇಲಿರುವ) ನಿನ್ನ ಅನುಗ್ರಹಗಳ ನಿವಾರಣೆಯಿಂದ, ನಿನ್ನ ಸಂರಕ್ಷಣೆಯ ಬದಲಾವಣೆಯಿಂದ, ನಿನ್ನ ಹಠಾತ್ ಶಿಕ್ಷೆಯಿಂದ ಮತ್ತು ನಿನ್ನ ಸರ್ವ ಕ್ರೋಧಗಳಿಂದ ನಾನು ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ."(527)

**524** ಇದನ್ನು ಬುಖಾರಿ (5/2336; ಹದೀಸ್ ನಂ. 5987), ಮುಸ್ಲಿಮ್ (4/2080; ಹದೀಸ್ ನಂ. 2707) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**525** ಇದನ್ನು ಮುಸ್ಲಿಮ್ (4/2079; ಹದೀಸ್ ನಂ. 2706) ಅನಸ್ ಇಬ್ನ್ ಮಾಲಿಕ್‌ರಿಂದ ವರದಿ ಮಾಡಿದ್ದಾರೆ.

**526** ಇದನ್ನು ಮುಸ್ಲಿಮ್ (4/2085; ಹದೀಸ್ ನಂ. 2716) ಆಯಿಶಾರಿಂದ ವರದಿ ಮಾಡಿದ್ದಾರೆ.

**527** ಇದನ್ನು ಮುಸ್ಲಿಮ್ (4/2097; ಹದೀಸ್ ನಂ. 2739) ಅಬ್ದುಲ್ಲಾಹ್ ಇಬ್ನ್ ಉಮರ್‌ರಿಂದ ವರದಿ ಮಾಡಿದ್ದಾರೆ.

«اللَّهُمَّ إِنِّي أَعُوذُ بِكَ مِنَ الْعَجْزِ وَالْكَسَلِ وَالْجُبْنِ وَالْبُخْلِ وَالْهَرَمِ وَعَذَابِ الْقَبْرِ اللَّهُمَّ آتِ نَفْسِي تَقْوَاهَا وَزَكِّهَا أَنْتَ خَيْرُ مَنْ زَكَّاهَا أَنْتَ وَلِيُّهَا وَمَوْلَاهَا اللَّهُمَّ إِنِّي أَعُوذُ بِكَ مِنْ عِلْمٍ لَا يَنْفَعُ وَمِنْ قَلْبٍ لَا يَخْشَعُ وَمِنْ نَفْسٍ لَا تَشْبَعُ وَمِنْ دَعْوَةٍ لَا يُسْتَجَابُ لَهَا»

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಅಜ್ಝಿ ವಲ್ ಕಸಲಿ ವಲ್ ಜುಬ್ನಿ ವಲ್ ಬುಖ್ಲಿ ವಲ್ ಹರಮಿ ವಅದಾಬಿಲ್ ಕಬ್ರ್, ಅಲ್ಲಾಹುಮ್ಮ ಆತಿ ನಫ್ಸೀ ತಕ್ವಾಹಾ ವಝುಕ್ಕಿಹಾ ಅನ್ತ ಖೈರು ಮನ್ ಝಕ್ಕಾಹಾ ಅನ್ತ ವಲಿಯ್ಯುಹಾ ವಮೌಲಾಹಾ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಇಲ್ಮಿನ್ ಲಾ ಯನ್ಫಉ ವಮಿನ್ ಕಲ್ಬಿನ್ ಲಾ ಅಖ್ಶಉ ವಮಿನ್ ನಫ್ಸಿನ್ ಲಾ ತಶ್ಬಉ ವಮಿನ್ ದಅ್ವತಿನ್ ಲಾ ಯುಸ್ತಜಾಬು ಲಹಾ)**

**“**ಓ ಅಲ್ಲಾಹ್! ದೌರ್ಬಲ್ಯ, ಸೋಮಾರಿತನ, ಹೇಡಿತನ, ಜಿಪುಣತೆ, ವೃದ್ಧಾಪ್ಯ ಮತ್ತು ಗೋರಿ ಶಿಕ್ಷೆಯಿಂದ ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ. ಓ ಅಲ್ಲಾಹ್! ನನ್ನ ದೇಹಕ್ಕೆ ಭಯಭಕ್ತಿಯನ್ನು ನೀಡು, ಅದನ್ನು ಶುದ್ಧೀಕರಿಸು, ಅದನ್ನು ಶುದ್ಧೀಕರಿಸಲು ನೀನೇ ಉತ್ತಮನಾಗಿರುವೆ. ನೀನು ಅದರ ಒಡೆಯನೂ, ರಕ್ಷಕನೂ ಆಗಿರುವೆ. ಓ ಅಲ್ಲಾಹ್! ಉಪಯೋಗವಿಲ್ಲದ ವಿದ್ಯೆ, ಭಕ್ತಿಯಿಲ್ಲದ ಹೃದಯ, ಸಂತೃಪ್ತವಾಗದ ಆತ್ಮ ಮತ್ತು ಉತ್ತರಿಸಲ್ಪಡದ ಪ್ರಾರ್ಥನೆಯಿಂದ ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ.**”**(528)

«اللَّهُمَّ أَصْلِحْ لِي دِينِي الَّذِي هُوَ عِصْمَةُ أَمْرِي وَأَصْلِحْ لِي دُنْيَايَ الَّتِي فِيهَا مَعَاشِي وَأَصْلِحْ لِي آخِرَتِي الَّتِي فِيهَا مَعَادِي وَاجْعَلِ الْحَيَاةَ زِيَادَةً لِي فِي كُلِّ خَيْرٍ وَاجْعَلِ الْمَوْتَ رَاحَةً لِي مِنْ كُلِّ شَرٍّ»

**(ಅಲ್ಲಾಹುಮ್ಮ ಅಸ್ಲಿಹ್ ಲೀ ದೀನಿಲ್ಲದೀ ಹುವ ಇಸ್ಮತು ಅಮ್ರೀ ವಅಸ್ಲಿಹ್ ಲೀ ದುನ್ಯಾಯಲ್ಲತೀ ಫೀಹಾ ಮಆಶೀ ವಅಸ್ಲಿಹ್ ಲೀ ಆಖಿರತಿಲ್ಲತೀ ಫೀಹಾ ಮಆದೀ ವಜ್‌ಅಲಿಲ್ ಹಯಾತ ಝಿಯಾದತನ್ ಲೀ ಫೀ ಕುಲ್ಲಿ ಖೈರಿನ್ ವಜ್‌ಅಲಿಲ್ ಮೌತ ರಾಹತನ್ ಲೀ ಮಿನ್ ಕುಲ್ಲಿ ಶರ್ರ್)**

**“**ಓ ಅಲ್ಲಾಹ್! ನನ್ನ ಕಾರ್ಯಗಳ ಕೇಂದ್ರವಾಗಿರುವ ನನ್ನ ಧರ್ಮವನ್ನು ನನಗೆ ಉತ್ತಮ ಗೊಳಿಸು, ನಾನು ಬದುಕಬೇಕಾಗಿರುವ ನನ್ನ ಇಹಲೋಕವನ್ನು ನನಗೆ ಉತ್ತಮ ಗೊಳಿಸು, ನಾನು ಮರಳಬೇಕಾಗಿರುವ ನನ್ನ ಪರಲೋಕವನ್ನು ನನಗೆ ಉತ್ತಮಗೊಳಿಸು. ಬದುಕನ್ನು ಪ್ರತಿಯೊಂದು ಒಳಿತಿನಲ್ಲೂ ನನಗೆ ವರ್ಧಿಸು ಮತ್ತು ಮರಣವನ್ನು ಪ್ರತಿಯೊಂದು ಕೆಡುಕಿನಿಂದಲೂ ನನಗೆ ಮುಕ್ತವಾಗಿಸು.**”**(529)

---

**528** ಇದನ್ನು ಮುಸ್ಲಿಮ್ (4/2088; ಹದೀಸ್ ನಂ. 2722) ಝ್ಯೆದ್ ಇಬ್ನ್ ಅರ್ಕಮ್‌ರಿಂದ ವರದಿ ಮಾಡಿದ್ದಾರೆ.

**529** ಇದನ್ನು ಮುಸ್ಲಿಮ್ (4/2087; ಹದೀಸ್ ನಂ. 2720) ಅಬೂ ಹುರೈರಾರಿಂದ ವರದಿ

«اللَّهُمَّ اغْفِرْ لِي خَطِيئَتِي وَجَهْلِي وَإِسْرَافِي فِي أَمْرِي وَمَا أَنْتَ أَعْلَمُ بِهِ مِنِّي اللَّهُمَّ اغْفِرْ لِي جِدِّي وَهَزْلِي وَخَطَئِي وَعَمْدِي وَكُلُّ ذَلِكَ عِنْدِي اللَّهُمَّ اغْفِرْ لِي مَا قَدَّمْتُ وَمَا أَخَّرْتُ وَمَا أَسْرَرْتُ وَمَا أَعْلَنْتُ وَمَا أَنْتَ أَعْلَمُ بِهِ مِنِّي أَنْتَ الْمُقَدِّمُ وَأَنْتَ الْمُؤَخِّرُ وَأَنْتَ عَلَى كُلِّ شَيْءٍ قَدِيرٌ»

**(ಅಲ್ಲಾಹುಮ್ಮಗ್ಫಿರ್ ಲೀ ಖತೀಅತೀ ವಜಹ್ಲೀ ವಇಸ್ರಾಫೀ ಫೀ ಅಮ್ರೀ ವಮಾ ಅನ್ತ ಅಅ್‌ಲಮು ಬಿಹೀ ಮಿನ್ನೀ, ಅಲ್ಲಾಹುಮ್ಮಗ್ಫಿರ್ ಲೀ ಜಿದ್ದೀ ವಹಝ್ಲೀ ವಖತಈ ವಅಮ್ದೀ ವಕುಲ್ಲು ದಾಲಿಕ ಇನ್ದೀ, ಅಲ್ಲಾಹುಮ್ಮಗ್ಫಿರ್ ಲೀ ಮಾ ಕದ್ದಮ್ತು ವಮಾ ಅಖ್ಖರ್ತು ವಮಾ ಅಸ್ರರ್ತು ವಮಾ ಅಅ್‌ಲನ್ತು ವಮಾ ಅನ್ತ ಅಅ್‌ಲಮು ಬಿಹೀ ಮಿನ್ನೀ ಅನ್ತಲ್ ಮುಕದ್ದಿಮು ವಅನ್ತಲ್ ಮುಅಖ್ಖಿರು ವಅನ್ತ ಅಲಾ ಕುಲ್ಲಿ ಶೈಇನ್ ಕದೀರ್)**

**“**ಓ ಅಲ್ಲಾಹ್! ನನ್ನ ಪಾಪಗಳನ್ನು, ನನ್ನ ಮೂರ್ಖತನವನ್ನು, ನನ್ನ ಕಾರ್ಯಗಳಲ್ಲಿ ನಾನು ಮಾಡಿದ ನನ್ನ ದುರ್ವ್ಯಯಗಳನ್ನು ಮತ್ತು ನಾನು ಮಾಡಿರುವೆನೆಂದು ನೀನು ನನ್ನಿಂದ ತಿಳಿದುಕೊಂಡಿರುವುದೆಲ್ಲವನ್ನೂ ನನಗೆ ಕ್ಷಮಿಸು. ಓ ಅಲ್ಲಾಹ್! ನಾನು ಖಾತ್ರಿಯಾಗಿ ಮಾಡಿದ, ನಾನು ನಗಿಸುವುದಕ್ಕಾಗಿ ಮಾಡಿದ, ನಾನು ಪ್ರಮಾದ ಪೂರ್ವಕವಾಗಿ ಮಾಡಿದ, ನಾನು ಉದ್ದೇಶ ಪೂರ್ವಕವಾಗಿ ಮಾಡಿದ ಮತ್ತು ನನ್ನಲ್ಲಿರುವ ಇಂತಹ ಪ್ರವೃತ್ತಿಗಳೆಲ್ಲವನ್ನೂ ನನಗೆ ಕ್ಷಮಿಸು. ಓ ಅಲ್ಲಾಹ್! ನಾನು ಈಗಾಗಲೇ ಮಾಡಿರುವ, ನಾನು ಮುಂದೆ ಮಾಡಲಿರುವ, ನಾನು ಗೋಪ್ಯವಾಗಿ ಮಾಡಿರುವ, ನಾನು ಬಹಿರಂಗವಾಗಿ ಮಾಡಿರುವ ಮತ್ತು ನಾನು ಮಾಡಿರುವೆನೆಂದು ನೀನು ನನ್ನಿಂದ ತಿಳಿದುಕೊಂಡಿರುವುದೆಲ್ಲವನ್ನೂ ನನಗೆ ಕ್ಷಮಿಸು. ನೀನು (ಜನರನ್ನು) ಮುಂದೂಡುವವನಾಗಿರುವೆ ಮತ್ತು ಹಿಂದಕ್ಕೆ ತಳ್ಳುವವನಾಗಿರುವೆ. ನೀನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವಿರುವವನಾಗಿರುವೆ.**”**(530)

«اللَّهُمَّ لَكَ أَسْلَمْتُ وَبِكَ آمَنْتُ وَعَلَيْكَ تَوَكَّلْتُ وَإِلَيْكَ أَنَبْتُ وَبِكَ خَاصَمْتُ اللَّهُمَّ إِنِّي أَعُوذُ بِعِزَّتِكَ لَا إِلَهَ إِلَّا أَنْتَ أَنْ تُضِلَّنِي أَنْتَ الْحَيُّ الَّذِي لَا يَمُوتُ وَالْجِنُّ وَالْإِنْسُ يَمُوتُونَ»

**(ಅಲ್ಲಾಹುಮ್ಮ ಲಕ ಅಸ್ಲಮ್ತು ವಬಿಕ ಆಮನ್ತು ವಅಲೈಕ ತವಕ್ಕಲ್ತು ವಇಲೈಕ ಅನಬ್ತು ವಬಿಕ ಖಾಸಮ್ತು, ಅಲ್ಲಾಹುಮ್ಮ ಇನ್ನೀ ಅಊದು ಬಿಇಝ್ಝತಿಕ ಲಾ ಇಲಾಹ ಇಲ್ಲಾ ಅನ್ತ ಅನ್ ತುದಿಲ್ಲನೀ ಅನ್ತಲ್ ಹಯ್ಯುಲ್ಲದೀ ಲಾ ಯಮೂತು ವಲ್ ಜಿನ್ನು ವಲ್ ಇನ್ಸು ಯಮೂತೂನ್)**

---

ಮಾಡಿದ್ದಾರೆ.

**530** ಇದನ್ನು ಬುಖಾರಿ (5/2350; ಹದೀಸ್ ನಂ. 6035), ಮುಸ್ಲಿಮ್ (4/2087; ಹದೀಸ್ ನಂ. 2719) ಅಬೂ ಮೂಸಾ ಅಲ್‌ಅಶ್‌ಅರೀರಿಂದ ವರದಿ ಮಾಡಿದ್ದಾರೆ.

"ಓ ಅಲ್ಲಾಹ್! ನಾನು ನಿನಗೆ ಶರಣಾಗಿದ್ದೇನೆ, ನಾನು ನಿನ್ನಲ್ಲಿ ವಿಶ್ವಾಸವಿಟ್ಟಿದ್ದೇನೆ, ನಾನು ನಿನ್ನ ಮೇಲೆ ಭರವಸೆಯಿಟ್ಟಿದ್ದೇನೆ, ನಾನು ನಿನ್ನೆಡೆಗೆ (ಪಶ್ಚಾತ್ತಾಪದಿಂದ) ಮರಳಿದ್ದೇನೆ, ನಾನು ನಿನಗಾಗಿ ತರ್ಕಿಸಿದ್ದೇನೆ. ಓ ಅಲ್ಲಾಹ್! ನೀನಲ್ಲದೆ ಆರಾಧಿಸಲರ್ಹರಾದವರು ಯಾರೂ ಇಲ್ಲ, ನನ್ನನ್ನು ದಾರಿಗೆಡಿಸಬಾರದೆಂದು ನಿನ್ನ ಪ್ರತಾಪದೊಂದಿಗೆ ನಾನು ಅಭಯ ಬೇಡುತ್ತಿದ್ದೇನೆ. ನೀನು ಎಂದೆಂದಿಗೂ ಮೃತಪಡದ ಅನಶ್ವರನಾಗಿರುವೆ. ಜಿನ್ನ್ ಮತ್ತು ಮನುಷ್ಯರು ಮೃತಪಡುವವರಾಗಿದ್ದಾರೆ."[531]

«اللَّهُمَّ إِنِّي أَعُوذُ بِكَ مِنْ فِتْنَةِ النَّارِ وَعَذَابِ النَّارِ وَمِنْ شَرِّ الْغِنَى وَالْفَقْرِ»

**(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಫಿತ್ನತಿ ನ್ನಾರಿ ವಅದಾಬಿ ನ್ನಾರಿ ವಮಿನ್ ಶರ್‍ರಿಲ್ ಗಿನಾ ವಲ್ ಫಕ್ರ್)**

"ಓ ಅಲ್ಲಾಹ್! ನರಕದ ಪರೀಕ್ಷೆಯಿಂದ, ನರಕದ ಶಿಕ್ಷೆಯಿಂದ, ಶ್ರೀಮಂತಿಕೆಯ ಮತ್ತು ದಾರಿದ್ರ್ಯದ ಕೆಡುಕಿನಿಂದ ನಾನು ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ."[532]

«رَبِّ أَعِنِّي وَلَا تُعِنْ عَلَيَّ وَانْصُرْنِي وَلَا تَنْصُرْ عَلَيَّ وَامْكُرْ لِي وَلَا تَمْكُرْ عَلَيَّ وَاهْدِنِي وَيَسِّرْ هُدَايَ إِلَيَّ وَانْصُرْنِي عَلَى مَنْ بَغَى عَلَيَّ اللَّهُمَّ اجْعَلْنِي لَكَ شَاكِرًا لَكَ ذَاكِرًا لَكَ رَاهِبًا لَكَ مِطْوَاعًا إِلَيْكَ مُخْبِتًا أَوْ مُنِيبًا رَبِّ تَقَبَّلْ تَوْبَتِي وَاغْسِلْ حَوْبَتِي وَأَجِبْ دَعْوَتِي وَثَبِّتْ حُجَّتِي وَاهْدِ قَلْبِي وَسَدِّدْ لِسَانِي وَاسْلُلْ سَخِيمَةَ قَلْبِي»

**(ರಬ್ಬಿ ಅಇನ್ನೀ ವಲಾ ತುಇನ್ ಅಲಯ್ಯ ವನ್ಸುರ್‌ನೀ ವಲಾ ತನ್ಸುರ್ ಅಲಯ್ಯ ವಮ್ಕುರ್‌ನೀ ವಲಾ ತಮ್ಕುರ್ ಅಲಯ್ಯ ವಹ್ದಿನೀ ವಯಸ್ಸಿರ್ ಹುದಾಯ ಇಲಯ್ಯ ವನ್ಸುರ್‌ನೀ ಅಲಾ ಮನ್ ಬಗಾ ಅಲಯ್ಯ, ಅಲ್ಲಾಹುಮ್ಮಜ್‌ಅಲ್‌ನೀ ಲಕ ಶಾಕಿರನ್ ಲಕ ದಾಕಿರನ್ ಲಕ ರಾಹಿಬನ್ ಮಿತ್ವಾಅನ್ ಇಲೈಕ ಮುಖ್ಬಿತನ್ ಅವ್ ಮುನೀಬನ್, ರಬ್ಬಿ ತಕಬ್ಬಲ್ ತೌಬತೀ ವಗ್ಸಿಲ್ ಹೌಬತೀ ವಅಜಿಬ್ ದಅ್‌ವತೀ ವಸಬ್ಬಿತ್ ಹುಜ್ಜತೀ ವಹ್ದಿ ಕಲ್ಬೀ ವಸದ್ದಿದ್ ಲಿಸಾನೀ ವಸ್ಲುಲ್ ಸಖೀಮತ ಕಲ್ಬೀ)**

"ನನ್ನ ಪ್ರಭೂ! ನನಗೆ ಸಹಾಯ ಮಾಡು, ನನ್ನ ವಿರುದ್ಧ ಸಹಾಯ ಮಾಡದಿರು. ನನಗೆ ನೆರವು ನೀಡು, ನನ್ನ ವಿರುದ್ಧ ನೆರವು ನೀಡದಿರು. ನನಗೋಸ್ಕರ ತಂತ್ರ ಹೂಡು, ನನ್ನ ವಿರುದ್ಧ ತಂತ್ರ ಹೂಡದಿರು. ನನ್ನನ್ನು ಮುನ್ನಡೆಸು ಮತ್ತು ನನಗೆ ನನ್ನ ಮಾರ್ಗದರ್ಶನವನ್ನು ಸುಲಭೀಕರಿಸು. ನನ್ನ ವಿರುದ್ಧ ಬಂಡೇಳುವವರಿಗೆದುರಾಗಿ ನನಗೆ ನೆರವು ನೀಡು. ಓ ಅಲ್ಲಾಹ್! ನಿನಗೆ ಕೃತಜ್ಞತೆ ಸಲ್ಲಿಸುವಂತೆ, ನಿನ್ನನ್ನು ಸ್ಮರಿಸುವಂತೆ, ನಿನ್ನನ್ನು ಪೂಜಿಸುವಂತೆ, ನಿನಗೆ ವಿಧೇಯವಾಗಿರುವಂತೆ ಮತ್ತು ನಿನ್ನೆಡೆಗೆ ಪಶ್ಚಾತ್ತಾಪದೊಂದಿಗೆ

**531** ಇದನ್ನು ಮುಸ್ಲಿಮ್ (4/2086; ಹದೀಸ್ ನಂ. 2717) ಇಬ್ನ್ ಅಬ್ಬಾಸ್‌ರಿಂದ ವರದಿ ಮಾಡಿದ್ದಾರೆ.
**532** ಇದನ್ನು ಅಬೂ ದಾವೂದ್ (1/482; ಹದೀಸ್ ನಂ. 1543) ಆಯಿಶಾರಿಂದ ವರದಿ ಮಾಡಿದ್ದಾರೆ.

ಮರಳುವಂತೆ ನನ್ನನ್ನು ಮಾಡು. ನನ್ನ ಪ್ರಭೂ! ನನ್ನ ಪಶ್ಚಾತ್ತಾಪವನ್ನು ಸ್ವೀಕರಿಸು, ನನ್ನ ಪಾಪವನ್ನು ತೊಳೆದುಬಿಡು, ನನ್ನ ಪ್ರಾರ್ಥನೆಗೆ ಉತ್ತರಿಸು, ನನ್ನ ಆಧಾರವನ್ನು ದೃಢಗೊಳಿಸು, ನನ್ನ ಹೃದಯವನ್ನು ಮುನ್ನಡೆಸು, ನನ್ನ ನಾಲಗೆಯನ್ನು ನೇರವಾಗಿಸು ಮತ್ತು ನನ್ನ ಹೃದಯದ ಮಾಲಿನ್ಯವನ್ನು ನಿವಾರಿಸು."(533)

«اللَّهُمَّ إِنِّي أَسْأَلُكَ مِنَ الْخَيْرِ كُلِّهِ عَاجِلِهِ وَآجِلِهِ مَا عَلِمْتُ مِنْهُ وَمَا لَمْ أَعْلَمْ وَأَعُوذُ بِكَ مِنَ الشَّرِّ كُلِّهِ عَاجِلِهِ وَآجِلِهِ مَا عَلِمْتُ مِنْهُ وَمَا لَمْ أَعْلَمْ وَأَسْأَلُكَ الْجَنَّةَ وَمَا قَرَّبَ إِلَيْهَا مِنْ قَوْلٍ أَوْ عَمَلٍ وَأَعُوذُ بِكَ مِنَ النَّارِ وَمَا قَرَّبَ إِلَيْهَا مِنْ قَوْلٍ أَوْ عَمَلٍ وَأَسْأَلُكَ مِنَ الْخَيْرِ مَا سَأَلَكَ عَبْدُكَ وَرَسُولُكَ مُحَمَّدٌ صَلَّى اللَّهُ عَلَيْهِ وَسَلَّمَ وَأَسْتَعِيذُكَ مِمَّا اسْتَعَاذَكَ مِنْهُ عَبْدُكَ وَرَسُولُكَ مُحَمَّدٌ صَلَّى اللَّهُ عَلَيْهِ وَسَلَّمَ وَأَسْأَلُكَ مَا قَضَيْتَ لِي مِنْ أَمْرٍ أَنْ تَجْعَلَ عَاقِبَتَهُ رَشَدًا»

**(ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಮಿನಲ್ ಖೈರಿ ಕುಲ್ಲಿಹೀ ಆಜಿಲಿಹೀ ವಆಜಿಲಿಹೀ ಮಾ ಅಲಿಮ್ತು ಮಿನ್‌ಹು ವಮಾ ಲಮ್ ಅಅ್‌ಲಮ್, ವಅಊದು ಬಿಕ ಮಿನಶ್ಶರ್ರಿ ಕುಲ್ಲಿಹೀ ಆಜಿಲಿಹೀ ವಆಜಿಲಿಹೀ ಮಾ ಅಲಿಮ್ತು ಮಿನ್‌ಹು ವಮಾ ಲಮ್ ಅಅ್‌ಲಮ್, ವಅಸ್‌ಅಲುಕಲ್ ಜನ್ನತ ವಮಾ ಕರ್‍ರಬ ಇಲೈಹಾ ಮಿನ್ ಕೌಲಿನ್ ಅವ್ ಅಮಲ್, ವಅಊದು ಬಿಕ ಮಿನನ್ನಾರಿ ವಮಾ ಕರ್‍ರಬ ಇಲೈಹಾ ಮಿನ್ ಕೌಲಿನ್ ಅವ್ ಅಮಲ್, ವಅಸ್‌ಅಲುಕ ಮಿನಲ್ ಖೈರಿ ಮಾ ಸಅಲಕ ಅಬ್ದುಕ ವರಸೂಲುಕ ಮುಹಮ್ಮದುನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ವಅಸ್ತಈದುಕ ಮಿಮ್ಮಸ್ತಆದಕ ಮಿನ್‌ಹು ಅಬ್ದುಕ ವರಸೂಲುಕ ಮುಹಮ್ಮದುನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ವಅಸ್‌ಅಲುಕ ಮಾ ಕದೈತ ಲೀ ಮಿನ್ ಅಮ್ರಿನ್ ಅನ್ ತಜ್‌ಅಲ ಆಕಿಬತಹೂ ರಶದಾ)**

"ಓ ಅಲ್ಲಾಹ್! ನಾನು ತಿಳಿದಿರುವ ಮತ್ತು ತಿಳಿಯದಿರುವ ಪ್ರತಿಯೊಂದು ಒಳಿತುಗಳಿಂದಲೂ ಅವುಗಳಲ್ಲಿ ಸನಿಹವಾಗಿರುವುದನ್ನೂ, ವಿದೂರವಾಗಿರುವುದನ್ನೂ ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ. ನಾನು ತಿಳಿದಿರುವ ಮತ್ತು ತಿಳಿಯದಿರುವ ಪ್ರತಿಯೊಂದು ಕೆಡುಕುಗಳಿಂದಲೂ ಅವುಗಳಲ್ಲಿ ಸನಿಹವಾಗಿರುವುದರಿಂದಲೂ, ವಿದೂರ ವಾಗಿರುವುದರಿಂದಲೂ ನಾನು ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ. ಸ್ವರ್ಗವನ್ನು ಮತ್ತು ಅದರೆಡೆಗೆ ಹತ್ತಿರವಾಗಿರುವ ಮಾತು ಮತ್ತು ಪ್ರವೃತ್ತಿಯನ್ನು ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ. ನರಕದಿಂದ ಮತ್ತು ಅದರೆಡೆಗೆ ಹತ್ತಿರವಾಗಿರುವ ಮಾತು ಮತ್ತು ಪ್ರವೃತ್ತಿಯಿಂದ ನಾನು ನಿನ್ನೊಂದಿಗೆ ಅಭಯ ಬೇಡುತ್ತಿದ್ದೇನೆ. ನಿನ್ನ ದಾಸ ಮತ್ತು ಸಂದೇಶವಾಹಕರಾದ ಮುಹಮ್ಮದ್(ﷺ)ರವರು ನಿನ್ನೊಂದಿಗೆ ಬೇಡಿದ ಒಳಿತುಗಳನ್ನು

**533** ಇದನ್ನು ಅಬೂ ದಾವೂದ್ (1/474; ಹದೀಸ್ ನಂ. 1510) ಆಯಿಶಾರಿಂದ ವರದಿ ಮಾಡಿದ್ದಾರೆ.

ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ. ನಿನ್ನ ದಾಸ ಮತ್ತು ಸಂದೇಶವಾಹಕರಾದ ಮುಹಮ್ಮದ್(ﷺ)ರವರು ನಿನ್ನೊಂದಿಗೆ ಯಾವುದರಿಂದ ಅಭಯ ಯಾಚಿಸಿದ್ದರೋ ಅದರಿಂದ ನಾನು ನಿನ್ನೊಂದಿಗೆ ಅಭಯ ಯಾಚಿಸುತ್ತಿದ್ದೇನೆ. ನೀನು ನನ್ನ ಮೇಲೆ ವಿಧಿಸಿದ ಯಾವುದೇ ಕಾರ್ಯವನ್ನೂ ಅದರ ಕೊನೆಯನ್ನು ಉತ್ತಮಗೊಳಿಸಬೇಕೆಂದು ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ.”(534)

«سُبْحَانَ اللَّهِ وَبِحَمْدِهِ سُبْحَانَ اللَّهِ الْعَظِيمِ»

**(ಸುಬ್‌ಹಾನಲ್ಲಾಹಿ ವಬಿಹಮ್ದಿಹೀ ಸುಬ್‌ಹಾನಲ್ಲಾಹಿಲ್ ಅದೀಮ್)**

“ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ ಮತ್ತು ಅವನ ಸ್ತುತಿಯೊಂದಿಗೆ, ಅತ್ಯುನ್ನತನಾದ ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ.”(535)

«لَا إِلَهَ إِلَّا اللَّهُ وَحْدَهُ لَا شَرِيكَ لَهُ لَهُ الْمُلْكُ وَلَهُ الْحَمْدُ وَهُوَ عَلَى كُلِّ شَيْءٍ قَدِيرٌ»

**(ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್)**

“ಅಲ್ಲಾಹನ ಹೊರತು ಆರಾಧಿಸಲರ್ಹರಾದವರು ಯಾರೂ ಇಲ್ಲ, ಅವನು ಏಕೈಕನಾಗಿದ್ದಾನೆ, ಅವನಿಗೆ ಸಹಭಾಗಿಗಳು ಯಾರೂ ಇಲ್ಲ, ಆಧಿಪತ್ಯವು ಅವನದಾಗಿದೆ, ಸ್ತುತಿಯು ಅವನಿಗಾಗಿದೆ ಮತ್ತು ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ.”(536)

«سُبْحَانَ اللَّهِ وَبِحَمْدِهِ أَسْتَغْفِرُ اللَّهَ وَأَتُوبُ إِلَيْهِ»

**(ಸುಬ್‌ಹಾನಲ್ಲಾಹಿ ವಬಿಹಮ್ದಿಹೀ ಅಸ್ತಗ್ಫಿರುಲ್ಲಾಹ ವಅತೂಬು ಇಲೈಹ್)**

“ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ ಮತ್ತು ಅವನ ಸ್ತುತಿಯೊಂದಿಗೆ, ನಾನು ಅಲ್ಲಾಹನೊಂದಿಗೆ ಕ್ಷಮೆಯನ್ನು ಬೇಡುತ್ತಿದ್ದೇನೆ ಮತ್ತು ಅವನೆಡೆಗೆ ಪಶ್ಚಾತ್ತಾಪದಿಂದ ಮರಳುತ್ತಿದ್ದೇನೆ.”(537)

«سُبْحَانَ اللَّهِ وَالْحَمْدُ لِلَّهِ وَلَا إِلَهَ إِلَّا اللَّهُ وَاللَّهُ أَكْبَرُ»

**(ಸುಬ್‌ಹಾನಲ್ಲಾಹಿ ವಲ್ ಹಮ್ದುಲಿಲ್ಲಾಹಿ ವಲಾ ಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್ಬರ್)**

---

**534** ಇದನ್ನು ಅಹ್ಮದ್ (6/146; ಹದೀಸ್ ನಂ. 25180) ಆಯಿಶಾರಿಂದ ವರದಿ ಮಾಡಿದ್ದಾರೆ.

**535** ಇದನ್ನು ಬುಖಾರಿ (6/2459; ಹದೀಸ್ ನಂ. 6304), ಮುಸ್ಲಿಮ್ (4/2072; ಹದೀಸ್ ನಂ. 2694) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**536** ಇದನ್ನು ಬುಖಾರಿ (3/1198; ಹದೀಸ್ ನಂ. 3119), ಮುಸ್ಲಿಮ್ (4/2071; ಹದೀಸ್ ನಂ. 2691) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**537** ಇದನ್ನು ಮುಸ್ಲಿಮ್ (1/350; ಹದೀಸ್ ನಂ. 484) ಆಯಿಶಾರಿಂದ ವರದಿ ಮಾಡಿದ್ದಾರೆ.

"ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ, ಸ್ತುತಿಯು ಅಲ್ಲಾಹನಿಗೆ, ಅಲ್ಲಾಹನ ಹೊರತು ಆರಾಧಿಸಲರ್ಹರಾಗಿ ಯಾರೂ ಇಲ್ಲ, ಅಲ್ಲಾಹು ಮಹಾನನಾಗಿದ್ದಾನೆ."(538)

«لَا حَوْلَ وَلَا قُوَّةَ إِلَّا بِاللَّهِ»

**(ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್)**

"ಅಲ್ಲಾಹನ ಹೊರತು ಶಕ್ತಿಯಾಗಲಿ ಸಾಮರ್ಥ್ಯವಾಗಲಿ ಇಲ್ಲ."(539)

## ಈ ಪುಸ್ತಕವನ್ನು ರಚಿಸಲು ಅವಲಂಬಿಸಿದ ಹದೀಸ್ ಗ್ರಂಥಗಳು

**1. ಮುವತ್ತ ಮಾಲಿಕ್ (ರಿವಾಯಃ ಯಹ್ಯಾ ಅಲ್ಲೈಸೀ)**

ಗ್ರಂಥಕರ್ತರು: ಅಬೂ ಅಬ್ದಿಲ್ಲಾಹ್ ಮಾಲಿಕ್ ಇಬ್ನ್ ಅನಸ್
ಪರಿಶೀಲನೆ: ಮುಹಮ್ಮದ್ ಫುಆದ್ ಅಬ್ದುಲ್ ಬಾಕೀ
ಪ್ರಕಾಶಕರು: ದಾರು ಇಹ್ಯಾಇ ತ್ತುರಾಸಿಲ್ ಅರಬೀ, ಈಜಿಪ್ಟ್

**2. ಸಹೀಹುಲ್ ಬುಖಾರಿ**

ಗ್ರಂಥಕರ್ತರು: ಅಬೂ ಅಬ್ದಿಲ್ಲಾಹ್ ಮುಹಮ್ಮದ್ ಇಬ್ನ್ ಇಸ್ಮಾಈಲ್ ಅಲ್‌ಬುಖಾರಿ
ಪರಿಶೀಲನೆ: ಡಾ। ಮುಸ್ತಫಾ ದೀಬ್ ಅಲ್‌ಬಿಗಾ
ಪ್ರಕಾಶಕರು: ದಾರು ಇಬ್ನ್ ಕಸೀರ್, ಯಮಾಮ, ಬೈರೂತ್

**3. ಸಹೀಹ್ ಮುಸ್ಲಿಮ್**

ಗ್ರಂಥಕರ್ತರು: ಅಬುಲ್ ಹುಸೈನ್ ಮುಸ್ಲಿಮ್ ಇಬ್ನ್ ಹಜ್ಜಾಜ್
ಪರಿಶೀಲನೆ: ಮುಹಮ್ಮದ್ ಫುಆದ್ ಅಬ್ದುಲ್ ಬಾಕೀ
ಪ್ರಕಾಶಕರು: ದಾರು ಇಹ್ಯಾಇ ತ್ತುರಾಸಿಲ್ ಅರಬೀ, ಬೈರೂತ್

**4. ಸುನನ್ ಅಬೀ ದಾವೂದ್**

ಗ್ರಂಥಕರ್ತರು: ಅಬೂ ದಾವೂದ್ ಸುಲೈಮಾನ್ ಇಬ್ನುಲ್ ಅಶ್‌ಅಸ್
ಪರಿಶೀಲನೆ: ಮುಹಮ್ಮದ್ ಮುಹ್ಯುದ್ದೀನ್ ಅಬ್ದುಲ್ ಹಮೀದ್
ಪ್ರಕಾಶಕರು: ದಾರುಲ್ ಫಿಕ್ರ್
(ಶೈಖ್ ನಾಸಿರುದ್ದೀನ್ ಅಲ್ಬಾನಿಯವರ ವಿಧಿಗಳೊಂದಿಗೆ)

**5. ಸುನನು ತ್ತಿರ್ಮಿದೀ**

ಗ್ರಂಥಕರ್ತರು: ಅಬೂ ಈಸಾ ಮುಹಮ್ಮದ್ ಇಬ್ನ್ ಈಸಾ ಅತ್ತಿರ್ಮಿದೀ
ಪರಿಶೀಲನೆ: ಅಹ್ಮದ್ ಮುಹಮ್ಮದ್ ಶಾಕಿರ್
ಪ್ರಕಾಶಕರು: ದಾರು ಇಹ್ಯಾಇ ತ್ತುರಾಸಿಲ್ ಅರಬೀ, ಬೈರೂತ್
(ಶೈಖ್ ನಾಸಿರುದ್ದೀನ್ ಅಲ್ಬಾನಿಯವರ ವಿಧಿಗಳೊಂದಿಗೆ)

**538** ಇದನ್ನು ಮುಸ್ಲಿಮ್ (4/2072; ಹದೀಸ್ ನಂ. 2695) ಅಬೂ ಹುರೈರಾರಿಂದ ವರದಿ ಮಾಡಿದ್ದಾರೆ.

**539** ಇದನ್ನು ಬುಖಾರಿ (4/1541; ಹದೀಸ್ ನಂ. 3968), ಮುಸ್ಲಿಮ್ (4/2076; ಹದೀಸ್ ನಂ. 2704) ಅಬೂ ಮೂಸಾ ಅಲ್ ಅಶ್‌ಅರೀರಿಂದ ವರದಿ ಮಾಡಿದ್ದಾರೆ.

### 6. ಸುನನು ನ್ನಸಾಈ

ಗ್ರಂಥಕರ್ತರು: ಅಬೂ ಅಬ್ದಿರ್ರಹ್ಮಾನ್ ಅಹ್ಮದ್ ಇಬ್ನ್ ಶುಐಬ್ ಅನ್ನಸಾಈ
ಪರಿಶೀಲನೆ: ಅಬ್ದುಲ್ ಫತ್ತಾಹ್
ಪ್ರಕಾಶಕರು: ಮಕ್ತಬ್ ಮತ್ಬೂಆತಿಲ್ ಇಸ್ಲಾಮಿಯ್ಯ, ಹಲ್ಬ್
(ಶೈಖ್ ನಾಸಿರುದ್ದೀನ್ ಅಲ್ಬಾನಿಯವರ ವಿಧಿಗಳೊಂದಿಗೆ)

### 7. ಸುನನ್ ಇಬ್ನಿ ಮಾಜ

ಗ್ರಂಥಕರ್ತರು: ಅಬೂ ಅಬ್ದಿಲ್ಲಾಹ್ ಮುಹಮ್ಮದ್ ಇಬ್ನ್ ಯಝೀದ್ ಅಲ್‌ಕಝ್ವೀನೀ
ಪರಿಶೀಲನೆ: ಮುಹಮ್ಮದ್ ಫುಆದ್ ಅಬ್ದುಲ್ ಬಾಕೀ
ಪ್ರಕಾಶಕರು: ದಾರುಲ್ ಫಿಕ್ರ್, ಬೈರೂತ್
(ಶೈಖ್ ನಾಸಿರುದ್ದೀನ್ ಅಲ್ಬಾನಿಯವರ ವಿಧಿಗಳೊಂದಿಗೆ)

### 8. ಮುಸ್ನದ್ ಅಹ್ಮದ್ ಇಬ್ನ್ ಹಂಬಲ್

ಗ್ರಂಥಕರ್ತರು: ಇಮಾಮ್ ಅಬೂ ಅಬ್ದಿಲ್ಲಾಹ್ ಅಹ್ಮದ್ ಇಬ್ನ್ ಹಂಬಲ್ ಅಶ್ಶೈಬಾನೀ
ಪ್ರಕಾಶಕರು: ಮುಅಸ್ಸಸಃ ಕುರ್ತುಬಃ, ಕೈರೋ
(ಶೈಖ್ ಶುಐಬ್ ಅಲ್‌ಅರ್ನಾಊತ್‌ರವರ ವಿಧಿಗಳೊಂದಿಗೆ)

### 9. ಸುನನು ದ್ದಾರಿಮೀ

ಗ್ರಂಥಕರ್ತರು: ಅಬೂ ಮುಹಮ್ಮದ್ ಅಬ್ದುಲ್ಲಾಹ್ ಇಬ್ನ್ ಅಬ್ದಿರ್ರಹ್ಮಾನ್ ಅದ್ದಾರಿಮೀ
ಪರಿಶೀಲನೆ: ಫವಾಝ್ ಅಹ್ಮದ್ ಝುಮರ್ಲೀ, ಖಾಲಿದ್ ಅಸ್ಸಬ್‌ಅ್ ಅಲ್‌ಅಲಮೀ
ಪ್ರಕಾಶಕರು: ದಾರುಲ್ ಕಿತಾಬಿಲ್ ಅರಬೀ, ಬೈರೂತ್
(ಶೈಖ್ ಹುಸೈನ್ ಸಲೀಮ್ ಅಸದ್‌ರವರ ವಿಧಿಗಳೊಂದಿಗೆ)

### 10. ಸಹೀಹ್ ಇಬ್ನ್ ಖುಝೈಮಃ

ಗ್ರಂಥಕರ್ತರು: ಅಬೂ ಬಕ್ರ್ ಮುಹಮ್ಮದ್ ಇಬ್ನ್ ಇಸ್‌ಹಾಕ್ ಇಬ್ನ್ ಖುಝೈಮಃ
ಪರಿಶೀಲನೆ: ಡಾ| ಮುಹಮ್ಮದ್ ಮುಸ್ತಫಾ ಅಲ್‌ಅಅ್‌ದಮೀ
ಪ್ರಕಾಶಕರು: ಅಲ್‌ಮಕ್ತಬುಲ್ ಇಸ್ಲಾಮೀ, ಬೈರೂತ್
(ಶೈಖ್ ನಾಸಿರುದ್ದೀನ್ ಅಲ್ಬಾನಿ ಮತ್ತು ಡಾ| ಅಅ್‌ದಮೀಯವರ ವಿಧಿಗಳೊಂದಿಗೆ)

### 11. ಸಹೀಹ್ ಇಬ್ನ್ ಹಿಬ್ಬಾನ್

ಗ್ರಂಥಕರ್ತರು: ಅಬೂ ಹಾತಿಮ್ ಮುಹಮ್ಮದ್ ಇಬ್ನ್ ಹಿಬ್ಬಾನ್
ಪರಿಶೀಲನೆ: ಶುಐಬ್ ಅಲ್‌ಅರ್ನಾಊತ್
ಪ್ರಕಾಶಕರು: ಮುಅಸ್ಸಸಃ ಅರ್ರಿಸಾಲಃ, ಬೈರೂತ್
(ಶೈಖ್ ಶುಐಬ್ ಅಲ್‌ಅರ್ನಾಊತ್‌ರವರ ವಿಧಿಗಳೊಂದಿಗೆ)

### 12. ಅಲ್‌ಮುಸ್ತದ್ರಕ್ ಅಲಸ್ಸಹೀಹೈನ್

ಗ್ರಂಥಕರ್ತರು: ಅಬೂ ಅಬ್ದಿಲ್ಲಾಹ್ ಮುಹಮ್ಮದ್ ಇಬ್ನ್ ಅಬ್ದಿಲ್ಲಾಹ್ ಅಲ್‌ಹಾಕಿಮ್
ಪರಿಶೀಲನೆ: ಮುಸ್ತಫಾ ಅಬ್ದುಲ್ ಕಾದಿರ್ ಅತಾ
ಪ್ರಕಾಶಕರು: ದಾರುಲ್ ಕುತುಬಿಲ್ ಇಲ್ಮಿಯ್ಯಃ, ಬೈರೂತ್
(ಹಾಫಿದ್ ದಹಬೀಯವರ ತಲ್ಕೀಸ್‌ನಲ್ಲಿರುವ ಟಿಪ್ಪಣಿಗಳೊಂದಿಗೆ)

## 13. ಅಲ್‌ಅದಬುಲ್ ಮುಫ್ರದ್

ಗ್ರಂಥಕರ್ತರು: ಅಬೂ ಅಬ್ದಿಲ್ಲಾಹ್ ಮುಹಮ್ಮದ್ ಇಬ್ನ್ ಇಸ್ಮಾಈಲ್ ಅಲ್‌ಬುಖಾರಿ
ಪರಿಶೀಲನೆ: ಮುಹಮ್ಮದ್ ಫುಆದ್ ಅಬ್ದುಲ್ ಬಾಕೀ
ಪ್ರಕಾಶಕರು: ದಾರುಲ್ ಬಶಾಇರಿಲ್ ಇಸ್ಲಾಮಿಯ್ಯಃ, ಬೈರೂತ್
(ಶೈಖ್ ನಾಸಿರುದ್ದೀನ್ ಅಲ್ಬಾನಿಯವರ ವಿಧಿಗಳೊಂದಿಗೆ)

## 14. ಸುನನ್ ಅದ್ದಾರಕುತ್ನೀ

ಗ್ರಂಥಕರ್ತರು: ಅಬುಲ್ ಹಸನ್ ಅಲೀ ಇಬ್ನ್ ಉಮರ್ ಅದ್ದಾರಕುತ್ನೀ
ಪರಿಶೀಲನೆ: ಅಸ್ಸಯ್ಯಿದ್ ಅಬ್ದುಲ್ಲಾಹ್ ಹಾಶಿಮ್ ಯಮಾನೀ ಅಲ್‌ಮದನೀ
ಪ್ರಕಾಶಕರು: ದಾರುಲ್ ದಾರುಲ್ ಮಅ್‌ರಿಫಃ ಬೈರೂತ್

## 15. ಮುಸ್ನದ್ ಅತ್ತಯಾಲಿಸೀ

ಗ್ರಂಥಕರ್ತರು: ಅಬೂ ದಾವೂದ್ ಸುಲೈಮಾನ್ ಇಬ್ನ್ ದಾವೂದ್ ಅತ್ತಯಾಲಿಸೀ
ಪ್ರಕಾಶಕರು: ದಾರುಲ್ ಮಅ್‌ರಿಫಃ ಬೈರೂತ್

## 16. ಮುಅ್‌ಜಮುಲ್ ಕಬೀರ್

ಗ್ರಂಥಕರ್ತರು: ಅಬುಲ್ ಕಾಸಿಮ್ ಸುಲೈಮಾನ್ ಇಬ್ನ್ ಅಹ್ಮದ್ ಅತ್ತಬರಾನೀ
ಪರಿಶೀಲನೆ: ಹಮ್ದೀ ಇಬ್ನ್ ಅಬ್ದಿಲ್ ಮಜೀದ್ ಅಸ್ಸಲಫೀ
ಪ್ರಕಾಶಕರು: ಮಕ್ತಬತುಲ್ ಉಲೂಮಿ ವಲ್‌ಹಿಕಮ್, ಮೂಸುಲ್

## 17. ಮುಅ್‌ಜಮುಲ್ ಅವ್ಸತ್

ಗ್ರಂಥಕರ್ತರು: ಅಬುಲ್ ಕಾಸಿಮ್ ಸುಲೈಮಾನ್ ಇಬ್ನ್ ಅಹ್ಮದ್ ಅತ್ತಬರಾನೀ
ಪರಿಶೀಲನೆ: ತಾರಿಕ್ ಇಬ್ನ್ ಇವದುಲ್ಲಾಹ್, ಅಬ್ದುಲ್ ಮುಹ್ಸಿನ್ ಇಬ್ನ್ ಇಬ್ರಾಹೀಮ್
ಪ್ರಕಾಶಕರು: ದಾರುಲ್ ಹರಮೈನ್, ಕೈರೋ

## 18. ಮುಅ್‌ಜಮು ಸ್ಸಗೀರ್

ಗ್ರಂಥಕರ್ತರು: ಅಬುಲ್ ಕಾಸಿಮ್ ಸುಲೈಮಾನ್ ಇಬ್ನ್ ಅಹ್ಮದ್ ಅತ್ತಬರಾನೀ
ಪರಿಶೀಲನೆ: ಮುಹಮ್ಮದ್ ಶಕೂರ್ ಮಹ್ಮೂದ್
ಪ್ರಕಾಶಕರು: ಅಲ್‌ಮಕ್ತಬುಲ್ ಇಸ್ಲಾಮೀ, ಬೈರೂತ್

## 19. ಮುಸ್ನದ್ ಅಬೀ ಯಅ್‌ಲಾ

ಗ್ರಂಥಕರ್ತರು: ಅಬೂ ಯಅ್‌ಲಾ ಅಹ್ಮದ್ ಇಬ್ನ್ ಅಲೀ ಇಬ್ನ್ ಮುಸನ್ನಾ ಅಲ್‌ಮೂಸುಲೀ
ಪರಿಶೀಲನೆ: ಹುಸೈನ್ ಸಲೀಮ್ ಅಸದ್
ಪ್ರಕಾಶಕರು: ದಾರುಲ್ ಮಅ್‌ಮೂನ್ ಲಿತ್ತುರಾಸ್, ದಿಮಶ್ಕ್
(ಹುಸೈನ್ ಸಲೀಮ್ ಅಸದ್‌ರವರ ವಿಧಿಗಳೊಂದಿಗೆ)

## 20. ಮುಸನ್ನಫ್ ಇಬ್ನ್ ಅಬೀ ಶೈಬಾ

ಗ್ರಂಥಕರ್ತರು: ಅಬೂ ಬಕ್ರ್ ಅಬ್ದಿಲ್ಲಾಹ್ ಇಬ್ನ್ ಮುಹಮ್ಮದ್ ಇಬ್ನ್ ಅಬೀ ಶೈಬಾ
ಪರಿಶೀಲನೆ: ಕಮಾಲ್ ಯೂಸುಫ್ ಅಲ್‌ಹೂತ್
ಪ್ರಕಾಶಕರು: ಮಕ್ತಬತುರ್ರುಶ್ದ್, ರಿಯಾದ್

## 21. ಶುಅಬುಲ್ ಈಮಾನ್

ಗ್ರಂಥಕರ್ತರು: ಅಬೂ ಬಕ್ರ್ ಅಹ್ಮದ್ ಇಬ್ನುಲ್ ಹುಸೈನ್ ಅಲ್‌ಬೈಹಕೀ
ಪರಿಶೀಲನೆ: ಮುಹಮ್ಮದ್ ಸಈದ್
ಪ್ರಕಾಶಕರು: ದಾರುಲ್ ಕುತುಬಿಲ್ ಇಲ್ಮಿಯ್ಯಃ, ಬೈರೂತ್

## 22. ಸುನನುಲ್ ಕುಬ್ರಾ

ಗ್ರಂಥಕರ್ತರು: ಅಬೂ ಬಕ್ರ್ ಅಹ್ಮದ್ ಇಬ್ನುಲ್ ಹುಸೈನ್ ಅಲ್‌ಬೈಹಕೀ
ಪರಿಶೀಲನೆ: ಮುಹಮ್ಮದ್ ಅಬ್ದುಲ್ ಕಾದಿರ್ ಅತಾ
ಪ್ರಕಾಶಕರು: ಮಕ್ತಬಃ ದಾರುಲ್ ಬಾಝ್, ಮಕ್ಕಾ ಅಲ್‌ಮುಕರ್ರಮಃ

## 23 ಸುನನುಲ್ ಕುಬ್ರಾ

ಗ್ರಂಥಕರ್ತರು: ಅಬೂ ಅಬ್ದಿರ್ರಹ್ಮಾನ್ ಅಹ್ಮದ್ ಇಬ್ನ್ ಶುಐಬ್ ಅನ್ನಸಾಈ
ಪರಿಶೀಲನೆ: ಅಬ್ದುಲ್ ಗಫ್ಫಾರ್ ಸುಲೈಮಾನ್ ಮತ್ತು ಸಯ್ಯಿದ್ ಕಿಸ್ರವೀ ಹಸನ್
ಪ್ರಕಾಶಕರು: ದಾರುಲ್ ಕುತುಬಿಲ್ ಇಲ್ಮಿಯ್ಯಃ, ಬೈರೂತ್

## 24. ಮುಸ್ನದು ಶ್ಶಾಮಿಯ್ಯೀನ್

ಗ್ರಂಥಕರ್ತರು: ಅಬುಲ್ ಕಾಸಿಮ್ ಸುಲೈಮಾನ್ ಇಬ್ನ್ ಅಹ್ಮದ್ ಅತ್ತಬರಾನೀ
ಪರಿಶೀಲನೆ: ಹಮ್ದೀ ಇಬ್ನ್ ಅಬ್ದಿಲ್ ಮಜೀದ್ ಅಸ್ಸಲಫೀ
ಪ್ರಕಾಶಕರು: ಮುಅಸ್ಸಸಃ ಅರ್ರಿಸಾಲಃ, ಬೈರೂತ್

**ಕನ್ನಡ ಭಾಷೆಯಲ್ಲಿ ಕುರ್‌ಆನ್ ಮತ್ತು ಸುನ್ನತ್ ಆಧಾರಿತ ಪುಸ್ತಕಗಳು, ಕನ್ನಡ, ಬ್ಯಾರಿ, ಮಲಯಾಳಂ, ಉರ್ದು, ಇಂಗ್ಲೀಷ್ ಭಾಷೆಯಲ್ಲಿ ಪ್ರಖ್ಯಾತ ವಿದ್ವಾಂಸರ ಮತ್ತು ದಾಈಗಳ ಸಿಡಿ\ಡಿವಿಡಿಗಳಿಗೆ ಸಂಪರ್ಕಿಸಿರಿ:**

# ಕರ್ನಾಟಕ ಸಲಫೀ ಅಸೋಸಿಯೇಶನ್


| | |
|---|---|
| ದಮ್ಮಾಮ್ | : 966–546584741 |
| ಅಲ್–ಕೋಬರ್ | : 966–567388901 |
| ಅಲ್–ಜುಬೈಲ್ | : 966–558234095 |
| ರಿಯಾದ್ | : 966–561626953 |
| ಜೆದ್ದಾ | : 966–503681457 |
| ಕುವೈತ್ | : 975–97921968 |

**ಕತರ್ ಕನ್ನಡ ಇಸ್ಲಾಮಿಕ್ ಸೆಂಟರ್, ಕತರ್**

**974–33989045**

**ಇಂಡಿಯನ್ ಇಸ್ಲಾಹೀ ಸೆಂಟರ್ ಕರ್ನಾಟಕ, ದುಬೈ**

**971–508600859**

**ಕುರ್‌ಆನ್ ಮತ್ತು ಸುನ್ನತ್ ಆಧಾರಿತ ಇಸ್ಲಾಮೀ ಸಾಹಿತ್ಯ ಪುಸ್ತಕಗಳಿಗೆ ಮತ್ತು ಸಿಡಿ/ಡಿವಿಡಿಗಳಿಗೆ**

# Manhaj-Al-Ambiya

*Call & Guidance Centre*

Mangalore

*ಇದರ ಈ ಕೆಳಗಿನ ಶಾಖೆಗಳಿಗೆ ಭೇಟಿ ನೀಡಿರಿ:*

## Islamic Studies Centre

Markaz Ibn Taymiyya,
University Road, Deralakatte,
Mangalore
Email : *sksmlibrary@gmail.com*

## CD/DVD & Book Store

Near Ibrahim Khaleel Masjid
Nellikai Road, Mangalore – 575001
Telephone: 824 426 3068
Email : *salafibookstore@gmail.com*

## International Islamic Centre

Basement, Islamic Trust Complex
Hampankatta, Mangalore – 575001
Telephone: 824 425 1606
Email : *iicmanglore@gmail.com*

ಕುರ್‌ಆನ್ ಮತ್ತು ಸುನ್ನತ್ತನ್ನು ಸಲಫು ಸ್ವಾಲಿಹೀನ್‌ಗಳು ಗ್ರಹಿಸಿದಂತೆ
ಕಲಿಸಿಕೊಡುವ ಸಲಫಿ ಮನ್‌ಹಜ್‌ನಲ್ಲಿರುವ ಕನ್ನಡದ ಏಕೈಕ ಪಾಕ್ಷಿಕ

جريدة إسلامية نصف شهرية
تصدرها جمعية السلفيين بانغلور - كرناتكا - الهند

# ಪವಿತ್ರ ಸಂದೇಶ

*ಓದಿರಿ..... ಪ್ರೋತ್ಸಾಹಿಸಿರಿ...... ಚಂದಾದಾರಾಗಿರಿ.........*

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ.***

***ಅಂಚೆ ವಿಳಾಸ:***

**ಪವಿತ್ರ ಸಂದೇಶ ಪಾಕ್ಷಿಕ, ನಂ. ಎ1, 2ನೇ ಮಹಡಿ,**
**ಪಾಲಿಮಾರ್ ಹೌಸ್, ನೆಲ್ಲಿಕಾಯಿ ರಸ್ತೆ, ಮಂಗಳೂರು – 575 001**

*mailto : pavithrasandesha@yahoo.co.in*

ಇಸ್ಲಾಮಿನ ಕುರಿತು ಮುಸ್ಲಿಮ್ ಮತ್ತು ಮುಸ್ಲಿಮೇತರರಲ್ಲಿರುವ ತಪ್ಪುಕಲ್ಪನೆಗಳ
ನಿವಾರಣೆಗಾಗಿ ಕನ್ನಡದ ಏಕೈಕ ಮಾಸಿಕ

# ಸತ್ಯ ಸಾರಥಿ

*ಓದಿರಿ..... ಚಂದಾದಾರಾಗಿರಿ.....*

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ:***

**ಪಿ. ಬಿ. ಮುಹಮ್ಮದ್ ಸಾದಿಕ್: 94494 49182**
**ವಿ. ಕೆ. ಹಿದಾಯತುಲ್ಲಾಹ್ : 96328 97299**

***ಅಂಚೆ ವಿಳಾಸ:***

**ಸತ್ಯ ಸಾರಥಿ ಮಾಸಿಕ,**
**ಸಲಫೀ ಕಾಂಪ್ಲೆಕ್ಸ್, ಎ.ಪಿ.ಎಂ.ಸಿ. ರಸ್ತೆ, ಪುತ್ತೂರು – 574 201**

*mailto : satyasarathi2011@gmail.com*

# ಇಮೇಜ್ ಪಬ್ಲಿಕೇಶನ್ಸ್ ಮತ್ತು ಇಮೇಜ್ ಎಜುಕೇಶನಲ್ ಟ್ರಸ್ಟ್

## ಪುತ್ತೂರು

*ವತಿಯಿಂದ ಪ್ರಕಟಿಸಲ್ಪಟ್ಟ ಕೃತಿಗಳು*

1. ಹದೀಸ್ ಸಾಂಕೇಂತಿಕ ಶಾಸ್ತ್ರ
2. ಬುಲೂಗುಲ್ ಮರಾಮ್ ಮಿನ್ ಅದಿಲ್ಲತಿಲ್ ಅಹ್ಕಾಮ್
3. ಕುರ್‌ಆನ್ ಮತ್ತು ಇತರ ವೇದಗ್ರಂಥಗಳು
4. ಹಜ್ ಉಮ್ರಾ ಮತ್ತು ಪ್ರವಾದಿ(ﷺ)ರವರ ಮಸೀದಿ ಸಂದರ್ಶನದ ಮಾರ್ಗದರ್ಶಿ
5. ದಿಕ್ರ್‌ಗಳು – ಪ್ರವಾದಿ(ﷺ)ರವರ ವಚನಗಳಿಂದ
6. ತಮ್ಮ ಮದ್‌ಹಬ್‌ಗಳ ಕುರಿತು ಇಮಾಮ್‌ಗಳು ಏನೆನ್ನುತ್ತಾರೆ?
7. ಅಜ್ಞಾನವಾದಿಗಳು ಯಾರು? ಸಯ್ಯದ್ ಯೂಸುಫ್‌ರೇ ಉತ್ತರಿಸಿ!
8. ಎತ್ತರಿಸಲ್ಪಟ್ಟ ಗೋರಿಗಳ ಸುತ್ತಮುತ್ತ
9. ಕುತುಬಿಯತ್ ಮತ್ತು ಮೌಲಿದ್‌ಗಳು – ಕುರ್‌ಆನ್ ಮತ್ತು ಸುನ್ನತ್ತಿನ ಬೆಳಕಿನಲ್ಲಿ
10. ಹಿಸ್ನುಲ್ ಮುಸ್ಲಿಮ್ ಮಿನ್ ಅದ್ಕಾರಿಲ್ ಕಿತಾಬಿ ವಸ್ಸುನ್ನಃ
11. ದೇವ ಪರಿಕಲ್ಪನೆ ಪ್ರಮುಖ ಧರ್ಮಗಳಲ್ಲಿ
12. ಯೇಸುವಿನ ನೈಜ ಸಂದೇಶ
13. ಮೋಕ್ಷದ ಮಾರ್ಗ
14. ನಾನು ಅರಿತುಕೊಂಡ ಇಸ್ಲಾಮ್
15. ಅಲ್ಲಾಹು
16. ಕುರ್‌ಆನ್ ದೈವಿಕ ಗ್ರಂಥವೇ?

*ಪ್ರತಿಗಳಿಗಾಗಿ ಸಂಪರ್ಕಿಸಿರಿ:*

**ಇಮೇಜ್ ಪಬ್ಲಿಕೇಶನ್ಸ್**

**ಸಲಫೀ ಕಾಂಪ್ಲೆಕ್ಸ್, ಎ.ಪಿ.ಎಂ.ಸಿ. ರಸ್ತೆ, ಪುತ್ತೂರು –1**

**ಮೊಬೈಲ್: 9632 897 299**

imageputtur@hotmail.com